# KARNATAKA GRANTHAMALA

SERIES No. 47.

---

ಕರ್ಣಾಟಕ ಕಾವ್ಯಕಲಾನಿಧಿ

ಪ್ರವರ್ತಕರಾದ

ಮಂ. ಅ. ರಾಮಾನುಜಯ್ಯಂಗಾರ್

ಇವರಿಂದ ರಚಿತವಾದ

# ಕವಿಸಮಯಂ

## ಪ್ರಥಮ ಭಾಗ

(ಕವಿಸಮಯ ಸಾಮಾನ್ಯ ನಿರೂಪಣ)

" ಅಮಲೀಮಸಮಚ್ಛಿದ್ರಮಕ್ರೌರ್ಯಮತಿಸುಂದರಂ ।
ಅದೇಯಮಪ್ರತಿಗ್ರಾಹ್ಯಮಹೋಜ್ಞಾನಂ ಮಹಾಧನಂ ॥ "

" ಗುಣದೋಷಾನಶಾಸ್ತ್ರಜ್ಞಃ ಕಥಂ ವಿಭಜತೇ ಜನಃ ।
ಕಿಮನಸ್ಯಾಧಿಕಾರೋಸ್ತಿ ರೂಪಭೇದೋಪಲಬ್ಧಿಷು ॥ "

" ತಏವ ಪದವಿನ್ಯಾಸಾಸ್ತಾ ಏವಾರ್ಥವಿಭೂತಯಃ ।
ತಥಾಪಿ ನವ್ಯಂ ಭವತಿ ಕಾವ್ಯಂ ಗ್ರಥನಕೌಶಲಾತ್ ॥ "

ಮೈಸೂರು :
ಜಿ. ಟಿ. ಎ. ಪ್ರೆಸ್ಸಿನಲ್ಲಿ ಮುದ್ರಿತವಾಯಿತು.
1908

UNIVERSAL LIBRARY
OU_200517
UNIVERSAL LIBRARY

OUP—391—29-4-72—10,000.

**OSMANIA UNIVERSITY LIBRARY**

Call No. Accession No.

Author

Title

This book should be returned on or before the date last marked below.

Registered according to Act XXV of 1867.

# PREFACE.

The *Kavya Manjari* and the *Kavya Kalanidhi* publications represent an attempt to preserve and popularize the rare and ancient works of Kannada Literature which have intrinsic poetic worth of their own to recommend them over and above their rarity and antiquity. It is keenly felt that without a guide to the *Poetic Art*, the beauties of these works will go unrecognized or but scantily noticed. To supply such a long-felt want, this book is an attempt, and I hope I need not offer any apology to the cultured reader for its appearance. The need, if satisfied even to a small extent, will itself be my apology.

I hope I shall, with the encouragement of the literary public, be able to continue the work as intended and explore to the utmost of my ability, a field hitherto untrodden.

I have preferred impressiveness even at the cost of repetition which may here and there strike the reader of Part I of this book. I owe it to myself to state that it could not be helped when the book is a piecemeal contribution to a journal.

I must express my gratitude to the late lamented Mr. G. Kasthuriranga Ayangar, M.A., for his *Introduction* to Part I of this work. The subject was enlarged upon in various ways after the introduction was written, as the reader will see for himself.

My thanks are due to Mr. B. Subba Rao, B.A., for the kindness with which he permitted this work to appear in his valuable monthly, the Karnataka Granthamala.

The late Mr. S. G. Narasimhachariar, Pandit K. Ramanuja Iyengar of the Wesleyan High School, Mysore, and several other friends have helped me with various suggestions. My thanks are due to one and all of them.

Any corrections and suggestions for improvement will be thankfully received.

MYSORE,
*21th April 1908.*

M. A. RAMANUJA IYENGAR.

# INTRODUCTION.

Under the title of "Kavi Samayam" Mr. M. A. Ramanuja Iyengar has given to the Kannada reader an introduction to *Poetic Art* in general and to Kannada Poetic Literature in particular. Poetry itself is well-known to be of two kinds: (1) Natural poetry or poetry that is born from the heart when it is strung to holy passion by "feelings too deep for tears," (2) Conventional or metaphysical poetry or poetry of the head where rare and apt fancies are culled together from various objects in the world of art and nature The former class of poetry is a product of the age and can be had only when deep and great truths stir the depths of peoples' hearts under a more or less democratic constitution of society; whereas the latter is the product of culture and calm reflection and is plentifully found in aristocratic and oligarchic times and countries. It is of the latter kind that Sanskrit Literature and for the matter of that, every literature that has had its birth under the influence of Sanskrit Literature is full. Nor is this class of poetry confined only to the East: French literature of the classical period, English literature during the Common-Wealth and after the Restoration,all belong to this class. The so-called metaphysical school of poetry in England is nothing but conventional poetry: it is merely want of taste to deride the exquisite gems of this class of poetry by dubbing them metaphysical or conventional. Mr. Iyengar has tried to show how far even the so-called conventional poetry is subject to reasons psychological or other. Therefore, though apparently the book is intended to be an introduction to Kannada Literature, it will, I am sure, help even the general reader in better understanding the why and wherefore of many matters connected with such æsthetic ideas as *good taste, beauty* etc.

This book only purports to be an introduction and no more. I hope it will meet with the reception it deserves and

induce the author to fill in the details in many things that are merely touched upon in this and will present a more systomatic treatise on the subject. It must not be supposed however, that the author has in any way stinted his explanations, short as the book is but has given as exhaustive a treatment of the subject as can interest the general reader and whet his appetite for reading some of the less common standard authors of Kannada, such as Nemichandra, Nagachendra, Pampa, Ranna, Aggala, Harihara and others.

The scheme of the treatment is roughly as follows :—The term *Kavi Samayam* is first explained at some length, with numerous examples to show that there is such a thing called *Kavi Samayam* or *Convention* in poetry. Next the auther proceeds to classify the leading *conventions* under the well-known categories *viz.*, *Genus, Substance, Action, Quality, Figure, Sentiment*, and *Suggestion* and so forth.

It is obvious that there must be some definiteness in such conventions : for without it there can be no translation of ideas from the author to the reader. One noteworthy feature of this book is the author strives to give purely psychological reasons for such conventions and shows at length the need for them. Even the architectonic part of a composition, such as the construction or adaptation of the plot becomes clear under the light thrown on the subject : for even they are to a certain extent conventional. Though art is "holding the mirror up to nature," the mirror itself does not reflect accurately every fault and every defect that is in nature: it idealizes and transfigures everything, giving, in the words of Shakespeare, to "airy nothings a local habitation and a name." Well has the nature of Poetic Art been summerised by Mammata in his Kavya Prakasa.

"ನಿಯತಿಕೃತನಿಯಮರಹಿತಾಂ ಹ್ಲಾದೈಕಮಯೀಮನನ್ಯಪರತನ್ತ್ರಾಮ್ ॥
ನವರಸರುಚಿರಾಂ ನಿರ್ಮಿತಿಮಾದಧತೀ ಭಾರತೀ ಕವೇರ್ಜಯತಿ ॥

G. K.

# ವಿಷಯಸೂಚಿಕೆ.


| | | | | |
|---|---|---|---|---|
| | | | | ಪುಟಸಂಖ್ಯೆ. |
| ಕಾವ್ಯಪಠನಾಪೇಕ್ಷೆ | ... | ... | ... | ೧ |
| ಕಾವ್ಯ ಶಬ್ದನಿರ್ವಚನ | ..: | ... | ... | ೨ |
| ಗ್ರಂಥೋದ್ದೇಶ | ... | ... | ... | ೨ |
| ಕವಿಸಮಯ ಲಕ್ಷಣ | ... | ... | ... | ೩ |
| ಕವಿಸಮಯ ತಿಳಿದ ಹೊರತು ಕವಿಚಮತ್ಕಾರ ಹೃದ್ಯವಾಗದು | | | | ೪ |
| ಉದಾಹರಣ ಪದ್ಯಗಳು ಪದಾರ್ಥ ವ್ಯಾಖ್ಯಾನ ವಿವರಣ ಸಹ | | | | ೪ |

| | ಉದಾಹೃತಪದ್ಯಾದಿ | | ಗ್ರಂಥನಾಮ. | |
|---|---|---|---|---|
| (1) | ತಿಂಗಳು, ಪೆರ್ಜೆಯುಂಚೆ | — | ಚಿಕದೇವರಾಯ ವಿಜಯ. | ೪ |
| (2) | ಇದು ಮತ್ತೇನೆಂಬೆ | — | ಲೀಲಾವತಿ | ೫ |
| (3) | ದುಗುಲಮನುಟ್ಟು | — | ,, | ೬ |
| (4) | ಅಱಿಯೆಂ ಪಿರಿದಂ, ಉಗುರಿಂದಂಬೆ, ಇದು ಮಧುಕರ, ಮನದೊಳಗಂ | — | ಗಿರಿಜಾಕಲ್ಯಾಣ | ೮ |
| (5) | ಕುಲಭೂಭೃತ್ | — | ಪಂಪರಾಮಾಯಣ | ೯ |
| (6) | ಬಕುಳಂಗಂಡೂಷ | — | ಮಿತ್ರವಿಂದಾಗೋವಿಂದ | ೧೦ |
| (7) | ನಂದನನೊಸಗೆ | — | ಲೀಲಾವತಿ | ೧೨ |
| (8) | ನೀರಂಗಡ | — | ದಮಯಂತೀಸ್ವಯಂವರ | ,, |
| (9) | ಗಿರಿಜೆ ಶಶಿವದನೆ | — | ಗಿರಿಜಾಕಲ್ಯಾಣ | ೧೩ |
| (10) | ನೆರೆದ ತಿಮಿರಂ | — | ಚಂದ್ರಪ್ರಭಪುರಾಣ | ೧೪ |
| (11) | ಇದಿಗೊಳ್ ನಿಂದಿರ್ದೊಡೆ | — | ಚಂದ್ರನಾಥಾಷ್ಟಕ | ೧೬ |
| (12) | ಹರಿಣನುಮಂ ಪುತ್ರಂ | — | ರಾಜಶೇಖರ ವಿಲಾಸ | ೧೭ |
| (13) | ಕಲಹಂಸಾಲಸಯಾನೆ, ಕಳರುತಿ ಮತ್ತಕೋಕಿಳ | — | ಪಂಪರಾಮಾಯಣ | ೨೦ |
| (14) | ನಾಗೇಂದ್ರನಂ | — | ಜೈಮಿನಿಭಾರತ | ೨೨ |

(15) ಮೃದುತಳಕಾಂತಿಯಿಂ — ಚಂದ್ರಪ್ರಭಪುರಾಣ ೧೪
(16) ಕಮಲದಳಂ, ಇಡೆ ಶಶಿಮುಖಿಯರ್ ಗಿರಿಜಾಕಲ್ಯಾಣ ೧೬
(17) ಅಜನಜಡನೆಂದು — ಶಬರಶಂಕರವಿಲಾಸ ೧೭
(18) ಸಾಗರಿಕೆಯ ಆಜ್ಞಾಪ್ರಕಾರವರ್ಣನೆ ವತ್ಸರಾಜಕಥೆ ೧೭-೩೧
ನಿಗಮನ ... ... ... ೨೦

ಕವಿಸಮಯವು ಪರಂಪರಾಪ್ರಾಪ್ತವಾಗಿಯೇ ಇರಬೇಕು. ೩೩

ಕಾವ್ಯಾಭಿವೃದ್ಧಿಪ್ರಕಾರ ನಿರೂಪಣಕ್ಕೆ ಉದಾಹರಣಪದ್ಯಗಳು :—

(1) ಮಾಕಂದಂ ಬೀತಿರೆ (ಜಗನ್ನಾಥವಿಜಯ) ... ೩೪
ಮಾಕಂದಂ ಫಲಹೀನ (ಪಂಪರಾಮಾಯಣ)
ವ್ಯಾಖ್ಯಾನ ವಿವರಣ ಸಹ.

(2) ಈಂಗಡಲೊಳಗೆ (ಮಲ್ಲಿನಾಥಪುರಾಣ) ... ೩೬
ನೆರೆದು ಚಕೋರಪ್ರಕರಂ (ಲೀಲಾವತಿ)
ವ್ಯಾಖ್ಯಾನ ವಿವರಣ ಸಹ—

(3) ನಡೆಯಂ ವನ್ಯಗಜ (ಪಂಪರಾಮಾಯಣ) ... ೩೭
ಅಂಚೆಗೆ ಮಂದಯಾನ (ಚಂದ್ರಪ್ರಭಪುರಾಣ)
ವ್ಯಾಖ್ಯಾನ ವಿವರಣ ಸಹ—

(4) ತೀಡುವ ಪಶ್ಚಿಮಾನಿಳ (ಪಂಪರಾಮಾಯಣ) ... ೩೮
ನೆಗೆದುದು ಸಾರ್ದು (ಗಿರಿಜಾಕಲ್ಯಾಣ)
ವ್ಯಾಖ್ಯಾನ ವಿವರಣ ಸಹ—

(5) ಇದಿರೊಳ್ ನಿಂದಿರ್ದೊಡೆ (ಚಂದ್ರನಾಥಾಷ್ಟಕ) ... ೪೦
ಪಡೆದವತಂಸಮಂ (ಚಂದ್ರಪ್ರಭಪುರಾಣ)
ವ್ಯಾಖ್ಯಾನ ವಿವರಣ ಸಹ—

(6) ೧. ನೆಲಸುತ್ತುಂ ಕೊಳದೊಳ್ (ಮಲ್ಲಿನಾಥಪುರಾಣ) ... ೪೩
೨. ತಳಿರಂ ಮೆಲ್ಲನೆ ಸೂಂಕಿ (ಕಬ್ಬಿಗರಕಾವ)
೩. ಸೊಗವಟ್ಟು ಸೊರಗಿ, ಅಳಿವಗೆಯೋಪರ್
ಮಡಿಗಂಪಂ (ಚಿಕದೇವರಾಜ ವಿಜಯ)
ವ್ಯಾಖ್ಯಾನ ಸಹ—
೪. ಅನುಸಿಂಚತ್ಸಲ್ಲಕೀ, ತಳರಂ ತೂಗಿ, ವನಜಮನೊಕ್ಕಲಿಕ್ಕಿ, ೪೪
(ಅರ್ಧನೇಮಿ ಪುರಾಣ)
ವ್ಯಾಖ್ಯಾನ ವಿವರಣ ಸಹ—

ಕವಿಸಮಯವು ಬರಿಯ ಸಂಕೇತವೆ ? ಕಾರಣಸದ್ಭಾವವುಂಟೆ ? ೪೫

ಕವಿಸಮಯವನ್ನು ಅಂಗೀಕರಿಸದಿದ್ದರೆ ಏನು ನಷ್ಟ ? ... ೫೦

ವ್ಯತಿರೇಕರೀತ್ಯಾ ಅಲಂಕಾರ ವಿಚಾರದಲ್ಲಿ.— ... ... ೫೦

ಘೋರಾರಣ್ಯದಲ್ಲಿ ಬೇಟೆಯಾಡಿ ಬಳಲಿ ರಾಜನು ನೀರನ್ನು ಅರಸಿಕೊಂಡು ಹೋಗುವ ವರ್ಣನೆ (ಲೀಲಾವತಿ) ...೫೧—೫೮

ಘನಸಮಯ ಪ್ರವೇಶವರ್ಣನೆ (ಪಂಪರಾಮಾಯಣ) ... ೫೯—೬೧

ಶಿಶಿರಋತುವರ್ಣನೆ (ಗಿರಿಜಾಕಲ್ಯಾಣ) ... ೬೧—೬೩

ಕಡಲೊಳಗಿರ್ಪ (ಪುಷ್ಪದಂತಪುರಾಣ) ... ೬೩

ಕಳಿಕೆಗಳೆಂಬ (ಜಗನ್ನಾಥವಿಜಯ) ... ೬೩

ಪೊಸಮುಕರಂದಮೆಂಬ (ಚಂದ್ರಪ್ರಭಪುರಾಣ) ... ೬೪

ವಿಕಸತ್ಪುಷ್ಪಾಟ್ಟಹಾಸಂ (ಲೀಲಾವತಿ) ... ೬೪

ಹರಿದಶ್ವಂ ಬಂದಪಂ (ಕಾದಂಬರಿ) ... ೬೪

ಭವಬದ್ಧಕ್ರೋಧ (ಪಂಪರಾಮಾಯಣ) ... ೬೪

ಸೂಸಿದ ಸೇಸೆಯಕ್ಕಿ (ದಮಯಂತೀಸ್ವಯಂವರ) ... ೬೫

ಬಗೆಯೊಳಪೊಕ್ಕ (ಲೀಲಾವತಿ) ... ೬೫

ನಗೆಗಣ್ಣಿಂ ಪೋಲ್ತುದು (ಲೀಲಾವತಿ) ... ೬೫

ಚಾಮರಾಜೇಂದ್ರ ಮರಣವಾರ್ತೆ (ಎಸ್. ಜಿ. ನರಸಿಂಹಾಚಾರ್ಯಕೃತ) ೬೬-೭

ರಸಸಂಕೇತವಿಚಾರದಲ್ಲಿ.—

ಸೋಂಕಿದ ಗಾಳಿ (ಜಗನ್ನಾಥವಿಜಯ) ... ೬೯

ತರುಣಿಯ ಮೆಯ್ಯ (ಅರ್ಧನೇಮಿಪುರಾಣ) .. ೬೯

ಒತ್ತುವ ಪದ್ಮ (ಗಿರಿಜಾಕಲ್ಯಾಣ) ... ೭೦

ಭೀಮಸೇನಪ್ರತಿಜ್ಞೆ (ಗದಾಯುದ್ಧ) .. ೭೦—೭೧

ವ್ಯಂಗ್ಯವಿಚಾರದಲ್ಲಿ :— ... ... ೭೪

ಆಹ್ಲಾದಕತ್ವ ವಿಚಾರದಲ್ಲಿ :— ... ... ೭೫

ಮುಡುಗಳೊಳೆ, ಕಾಲ್ಪಿಡಿದು ಕೆಳಗೆ, ಬಲ್ಗಿಳಿಗಳ್ ಬಳಲ್ದು,

ತುಂಬಿಯ ಬಣ್ಣಮುಂ, ಸ್ಮಿತನೀಲೋತ್ಪಲ (ಲೀಲಾವತಿ) ... ೭೫

ನೆಲಸುಳ್ಳಂತೆವೊಲಾಗೆ (ಪಂಪರಾಮಾಯಣ) .. ೭೬

ತಿರಿಕಲ್ಲಾಡುವಳ್ (ಶೂದ್ರಕ) .. ... ೭೬

ಪಕ್ಕಿಗಳ ಅನುರಾಗ ಪ್ರಕಾರವರ್ಣನೆ (ಲೀಲಾವತಿ) ೭೭—೮೦

ಉಕ್ತಿಭಂಗಿಯಲ್ಲಿ: -

ವರವಿದ್ಯಾ ರಾಜವಿದ್ಯಾ (ಲೀಲಾವತಿ) ಟಿಪ್ಪಣಿ. .. ೮೧

ಸ್ತ್ರೀವ್ಯಾಮೋಹವರ್ಣನೆ (ಲೀಲಾವತಿ) ಟಿಪ್ಪಣಿ ೮೨

ಪರ್ವತೋನ್ನತಿವರ್ಣನೆ (ಚಂದ್ರಪ್ರಭಪುರಾಣ) ,, ೮೩

ನಗರೋಪವನ ವರ್ಣನೆ (ಮಲ್ಲಿನಾಥಪುರಾಣ) ,, ೮೩

ಕನ್ನರಾನ್ವೇಷಣ (ಕಾದಂಬರಿ) .. ... ೮೪

ನಾಯಿಕಾಸೌಂದರ್ಯ (ಮಿತ್ರವಿಂದಾಗೋವಿಂದ) ,, ...

,, (ಪಂಪರಾಮಾಯಣ) ...

ಅರಮನೆಯ ವರ್ಣನೆ (ಮಲ್ಲಿನಾಥಪುರಾಣ) ,, ೮೫

ಬಾಲಕೇಳೀವರ್ಣನೆ (ಜಗನ್ನಾಥವಿಜಯ) ,, ... ೮೫

ಶಿಶಿರಋತು ವರ್ಣನೆ (ಲೀಲಾವತಿ) ವ್ಯಾಖ್ಯಾನ ೮೬

ವಾರವಿಲಾಸನೀಜನ (ಮಲ್ಲಿನಾಥಪುರಾಣ) ,, ... ೮೭

ಉಕ್ತಿಚಮತ್ಕಾರವನ್ನು ಆಶ್ರಯಿಸುವಲ್ಲಿ:—

ಕ್ರಿಯಾಗೋಪನ, ಕರ್ತೃಗೋಪನ, ವಕ್ರೋಕ್ತಿ, ಬಂಧಗಳು— ಇತ್ಯಾದಿ ೮೮

ಕಾವ್ಯಕ್ಕೆ ಕಲಾತ್ವನಿರೂಪಣ:—

I. ಲೋಕದ ವಸ್ತುಗಳ ಸಹಜಸ್ಥಿತಿಗೂ, ಕವಿ ವರ್ಣಿತಸ್ಥಿತಿಗೂ ಭೇದ-೮೯

(1) ಸ್ವತಸ್ಸರಸವಾದುದು ಸರಸತರವಾಗುತ್ತದೆ. ಉದಾಹರಣೆ—

೧ ಅನಿಮಿತ್ತಂ ಪನೆಗಳ್ (ಚಂದ್ರಪ್ರಭಪುರಾಣ) ವ್ಯಾಖ್ಯಾನ ೯೧

೨ ಪಸುರ್ವಲ್ಲಂ ಪೋದು (ಪಂಪರಾಮಾಯಣ) ,, .. ೯೨

೩ ಅವುದು ನೋಡೆ, ಕೊರಲಂ ತಾಂ, .. ೯೩
ನಡೆಮಿಡುಕದ (ಶಾಕುಂತಳನಾಟಕ) ವ್ಯಾಖ್ಯಾನ

೪ ಚಿತ್ರಪಟ ವರ್ಣನೆ (ಮಲ್ಲಿನಾಥಪುರಾಣ), ವ್ಯಾಖ್ಯಾನ ...೯೪—೯೭

೫ ದುರ್ಯೋಧನಪ್ರಲಾಪ (ಗದಾಯುದ್ಧ), ,, ೯೯—೧೦೨

೬ ಚಂದ್ರೋದಯವರ್ಣನೆ (ಲೀಲಾವತಿ) ,, ... ೧೦೩

ಚಂದ್ರಾಸ್ತಮಯವರ್ಣನೆ (ಲೀಲಾವತಿ) ,, ... ೧೦೩

೭ ಹರಿದಶ್ವಂ, ಭವಬದ್ಧ ವಿವರಣೆ ... ೧೦೪

೮ ಹೂವಿನ ಅಂಗಡಿ (ಲೀಲಾವತಿ) ... ೧೦೪

೯ ನಾಯಕವಿರಹ (ಲೀಲಾವತಿ) ಟಿಪ್ಪಣಿ ... ೧೦೫

ನಾಯಿಕಾವಿರಹ (ಗೀತಗೋಪಾಲ) ೧೦೫—೬

(2) ಘೋರವಸ್ತುವು ಸೌಮ್ಯವಾಗುತ್ತದೆ. ... ೧೦೭

(3) ಜುಗುಪ್ಸಿತವಾದುದು ಪ್ರಿಯವಾಗುತ್ತದೆ. ... ೧೦೮

ಮಾಂಸಾಶಿಗಳ ಅಂಗಳಗಳ ವರ್ಣನೆ (ಚಿಕ್ಕದೇವರಾಜವಂಶಾವಳಿ) ೧೦೮

ಸ್ಮಶಾನವರ್ಣನೆ (ಅರ್ಧನೇಮಿ ಪುರಾಣ) ... ೧೦೮

(4) ನೀರಸವಾದುದು ಸರಸವಾಗುತ್ತದೆ.

ತುರುಹಟ್ಟಿಯ ವರ್ಣನೆ (ಲೀಲಾವತಿ) ... ೧೦೯

ಹಸು ಮಂದೆಯ ವರ್ಣನೆ (ಲೀಲಾವತಿ) ... ೧೧೦

(5) ಸರಸ ನೀರಸ ಜುಗುಪ್ಸಿತ ವಸ್ತುಗಳ ಯುಕ್ತಸಮ್ಮೇಳನದಲ್ಲಿ ಸರಸತ್ವ ... ೧೧೧

(6) ಅನುಕರಣದಲ್ಲಿ ಹೃದ್ಯತ್ವ ... ೧೧೨

(7) ನಿರೂಪಣ ಪ್ರಕಾರದಲ್ಲಿಯೂ ಸರಸತ್ವ. ...

ಮಾವಿನಮರದ ವರ್ಣನೆ (ಮಲ್ಲಿನಾಥಪುರಾಣ), ಟಿಪ್ಪಣಿ. ೧೧೩

ಸೂರ್ಯಾಸ್ತಮಯ ವರ್ಣನೆ (ಲೀಲಾವತಿ) ... ೧೧೪

ಗರ್ಭವರ್ಣನೆ (ಲೀಲಾವತಿ) ... ೧೧೪

ಸುಲೋಚನಾದೇವಿಯ ಅವಯವಸೌಂದರ್ಯ (ಜಯನೃಪಕಾವ್ಯ) ೧೧೫

II ಕಥಾವಿಷಯದಲ್ಲಿ ಲೋಕಸ್ಥಿತಿಗೂ ಕವಿನಿಬಂಧನಕ್ಕೂ ವ್ಯತ್ಯಾಸ.

ಕಥಾಭೇದ--ಐತಿಹಾಸಿಕ, ಕಲ್ಪಿತ,(ಮಿಶ್ರ) ಮಿಶ್ರ . ... ೧೦೨

ಕವಿಕೃತಿಯ ಉದ್ದೇಶಗಳು; ತದನುಗುಣವಾಗಿ ಕಥಾಸ್ವೀಕಾರ ೧೨೧—೨

೧ ಐತಿಹಾಸಿಕ ಕಥೋದ್ದೇಶ ... ೧೨೨

೨ ಮಿಶ್ರಕಥೋದ್ದೇಶ ... ೧೨೨

ಶಾಕುಂತಳನಾಟಕ ಕಥಾವಿಮರ್ಶೆ:—ಮಹಾಭಾರತದ ಕಥೆಗೂ, ನಾಟಕದ ಕಥೆಗೂ ಭೇದ; ರಸವಿಚಾರದಲ್ಲಿ ಆ ವ್ಯತ್ಯಾಸಗಳಿಗೆ ಕಾರಣನಿರೂಪಣ;

ತದ್ವಾರಾ ಕಾಳಿದಾಸನ ಶ್ರೇಷ್ಠತ್ವನಿರೂಪಣ. ೧೨೩—೩

ಪಾತ್ರಗುಣೋತ್ಕರ್ಷ ನಿರೂಪಣ. ... ೧೩೧

ಉತ್ತರರಾಮಚರಿತ್ರ ಕಥಾವಿಮರ್ಶೆ. ... ೧೩೨

೨ ಕಲ್ಪಿತ ಕಥೋದ್ದೇಶ— ... ೧೩೩

ಲೋಕಸ್ಥಿತ್ಯನುಗುಣ ಕಥೋದ್ದೇಶ. ... ೧೩೩

ಲೋಕಸ್ಥಿತಿ ವಿರುದ್ಧ ಕಥೋದ್ದೇಶ. ... ೧೩೩

ಋಷ್ಯಾಶ್ರಮವರ್ಣನೆ (ದುರ್ಗಸಿಂಹ ಪಂಚತಂತ್ರ) .. ೧೩೪—೬

ಭೋಗಭೂಮಿವರ್ಣನೆ (ಪಂಪಭಾರತ) ... ೧೩೬—೮

ಈ ವಿಷಯಗಳಲ್ಲಿ ವಿಚಾರ ... ೧೩೯

III. ವರ್ಣ್ಯವಸ್ತುಗಳ (ಎಂದರೆ ಅಲಂಕಾರ, ರಸ, ಭಾವ, ಕಥೆ, ಮೊದಲಾದುವುಗಳ) ಸಮ್ಮೇಳನದಲ್ಲಿ ಸಂಕೇತ ನಿರೂಪಣ ೧೪೦

೧ ಭೀಮಸೇನನ ಆಟೋಪ, (ಗದಾಯುದ್ಧ) ... ೧೪೩

೨ ಧರ್ಮರಾಜನ ಗುಣಸ್ತುತಿಯನ್ನು ಕೇಳಿ ಕುಪಿತನಾದ ದುರ್ಯೋಧನನ ಉಕ್ತಿ (ಗದಾಯುದ್ಧ) ... ೧೪೪

೩ ದ್ರೋಣಾಶ್ವತ್ಥಾಮರ ವಿಷಯವಾಗಿ ದುರ್ಯೋಧನನು ಹೇಳಿದ ಕಠಿನೋಕ್ತಿಯಲ್ಲಿ ಸಂಜಯನ ಚಿಂತಾಪ್ರಕಾಶ (ಗದಾಯುದ್ಧ) ೧೪೫

೪ ಮೂರ್ಛಿತನಾದ ದುರ್ಯೋಧನನ ದರ್ಶನದಲ್ಲಿ ಗಾಂಧಾರಿಯ ಪ್ರಲಾಪ (ಗದಾಯುದ್ಧ) ... ೧೪೫—೪೬

ಆ ಸಮ್ಮೇಳನದಲ್ಲಿ ಸೂತ್ರನಿರೂಪಣದ ಅಸಾಧ್ಯತೆ. ... ೧೪೭-೮

ಲೋಕಸಹಜಸ್ಥಿತಿಗೂ ಕಾವ್ಯನಿರೂಪಿತಸ್ಥಿತಿಗೂ ತಾರತಮ್ಯಕ್ಕೆ ನಿಗಮನ ಸೂತ್ರ, ... ೧೪೯

ಕವಿಸಮಯವಿಂಥದೆಂದು ಕ್ರೋಡೀಕರಿಸುವಿಕೆ ೧೪೯-೧೫೦

ಶ್ರೀ.

# ಕವಿ ಸಮಯಂ.

ಶ್ರೀಯುತನೊಳುದಾರತೆ ವಾ।
ಕ್ಶ್ರೀಯುತನೊಳಮತ್ಸರತ್ವಮಾಗದುದಾರಂ ॥
ಶ್ರೀಯುತಸಮತ್ಸರಂ ವಾ।
ಕ್ಶ್ರೀಯುತನಾದೊಡೆ ಕೃತಾರ್ಥರಾಗರೆ ಕವಿಗಳ್ ॥
(ಕವಿರತ್ನಂ)

## ॥ಪೀಠಿಕಾ ಪ್ರಕರಣಂ॥

ಕಾವ್ಯಜ್ಞಾನವು ಸುಖಸಾಧನಗಳಲ್ಲಿ ಪ್ರಬಲವಾದುದಾಗಿ, ಮನುಷ್ಯನ ಪ್ರವೃತ್ತಿಯೆಲ್ಲವೂ ಸುಖವನ್ನೇ ಉದ್ದೇಶಿಸಿ ಹುಟ್ಟುವುದರಿಂದಲೂ; ಸುಖವು ಪ್ರಾಯಶಃ ಇಂದ್ರಿಯದ್ವಾರಾ ಉಂಟಾಗಿ, ಆ ಇಂದ್ರಿಯ ಸುಖಗಳೆಲ್ಲವೂ ಕೇಶಿರಾಜನು "ಶಬ್ದದಿನಾವಾವಿಂದ್ರಿಯದ ವಿಷಯಮಂ ಶ್ರೋತ್ರದೊಳುದ್ಭಾವಿಪ" ಎಂದೂ, ನೇಮಿಚಂದ್ರನು "ಕಿವಿಯಿಂದೀಂಟಿಸುವರ್ ಸಮಸ್ತರಸಮಂ" ಎಂದೂ ಹೇಳಿರುವಂತೆ ಕಾವ್ಯಮೂಲಕವಾಗಿ ಶ್ರೋತ್ರೇಂದ್ರಿಯದಲ್ಲಿಯೇ ಉಂಟಾಗುವುದರಿಂದಲೂ; ತಿರುಮಲಾರ್ಯನು—

"ಕಡುಪಿಂ ಕೂರಾನೆ ಕಾಳ್ಕಿರ್ಚಡವಿ ಬರಸಿಡಿಲ್ ಬಳ್ಳಿಮಿಂಚೆಂಬಿವೆಲ್ಲಂ।
ಪಡೆಗುಂ ನೋಳ್ಪರ್ಗೆ ಮೇಣುಬ್ಬೆಗದೊದವನವೇ ಮತ್ತಮೊಳ್ಗಬ್ಬದೊಳ್ ಬಂ ॥
ದೊಡಸೊಳ್ಪಂ ಪೆತ್ತು ಮಾಳ್ಕುಂ ಸಹೃದಯಹೃದಯಾಹ್ಲಾದಮಂ ..."

ಎಂದು ಸೂಚಿಸಿರುವಂತೆ ಲೋಕ ಪರಿಚಯವನ್ನು ಸಾಕ್ಷಾತ್ತಾಗಿ ಮಾಡುವುದಕ್ಕಿಂತ ಕಾವ್ಯಮೂಲಕ ಮಾಡುವುದರಲ್ಲಿ ಸೌಕರ್ಯವೂ ಆನಂದಾತಿಶಯವೂ ಇರುವುದರಿಂದಲೂ; "ಕಾಂತಾಸಮ್ಮಿತತಯೋಪದೇಶಯುಜೇ" ಎಂಬಂತೆ ವಿಷಯಗಳನ್ನು ಸರಸವಾಗಿಯೂ, ಮನೋಹರವಾಗಿಯೂ ಕಾವ್ಯಗಳಲ್ಲಿ ಮಾತ್ರವೇ ಹೇಳುವುದರಿಂದಲೂ; ಇವಲ್ಲದೆ ಕಾವ್ಯಪಠನದಲ್ಲಿ ಉಂಟಾಗುವಷ್ಟು ಸೌಖ್ಯವು ಶಾಸ್ತ್ರಾದಿಗಳ ಪಠನದಲ್ಲಿ ಉಂಟಾಗದಿರುವುದರಿಂದಲೂ; ಈ ಸುಖವನ್ನು ಅಜ್ಞಪ್ರಾಜ್ಞ, ಧನಿಕದರಿದ್ರಾದಿ ತಾರತಮ್ಯವಿಲ್ಲದೆ ಸಕಲರೂ ಅನುಭವಿಸಬಹುದಾದರಿಂದಲೂ; ಆ ಕಾವ್ಯ

ಜ್ಞಾನವೊಂದುಂಟಾದರೆ ಮಿಕ್ಕ ಜ್ಞಾನವು ಬಲುಮಟ್ಟಿಗೆ ಕರತಲಾಮಲಕದಂತಾಗುವುದರಿಂದಲೂ ಕಾವ್ಯಜ್ಞಾನವು ಮನುಷ್ಯನಿಗೆ ಆದರಣೀಯತಮವು.

ಆ ಕಾವ್ಯವು ನಾನಾ ವಿಧವಾಗಿರುವುದು. "ಕವೇಃ ಕರ್ಮ ಕಾವ್ಯಂ" ಎಂಬ ವ್ಯುತ್ಪತ್ತಿಯಿಂದ ಪುರಾಣೇತಿಹಾಸ ನಾಟಕ ಚಂಪೂ ಗದ್ಯಾದಿಗಳು ಕಾವ್ಯ ಶಬ್ದದಿಂದ ವಾಚ್ಯಗಳಾಗುವುವು. ಹಾಗಾದರೆ ಪುರಾಣೇತಿಹಾಸಗಳನ್ನು ಕಾವ್ಯವಾಗಿ ಗಣಿಸುವರೇ, ಎಂದರೆ–ಪುರಾಣಕರ್ತರನ್ನು ಅನೇಕಕಡೆ "ಕವಿ" ಗಳೆಂದು ನಿರ್ದೇಶಿಸಿ ಹೇಳುವುದರಿಂದಲೂ, ಪುರಾಣೇತಿಹಾಸಗಳಲ್ಲಿ ಕಾವ್ಯಲಕ್ಷಣಗಳು ಅನೇಕವಾಗಿ ಕಂಗೊಳಿಸುವುದರಿಂದಲೂ, ಇತಿಹಾಸಶ್ರೇಷ್ಠವಾದ ಶ್ರೀ ರಾಮಾಯಣವನ್ನು "ಆದಿಕಾವ್ಯ" ವೆಂದು ಕರೆವುದರಿಂದಲೂ, ಅವುಗಳನ್ನು ಕಾವ್ಯಗೋಷ್ಠಿಯಲ್ಲಿ ಗಣನೆಯ ಮಾಡಬಹುದು. ಶಾಸ್ತ್ರಗಳು ದುರವಗಾಹವಾಗಿ ನೀರಸವಾಗಿರುವುದರಿಂದಲೇ ಪುರಾಣೇತಿಹಾಸಗಳು ಹುಟ್ಟಿದುವೆಂದು ಅನೇಕರು ಅಭಿಪ್ರಾಯಪಡುವರು. ಇದರಿಂದ ಕಾವ್ಯಾದಿಗಳಲ್ಲಿ ಸರಸತ್ವವೂ ಸುಕರತ್ವವೂ ಉಂಟೆಂದು ವ್ಯಕ್ತವಾಗುವುದು. ಹೀಗಿರುವುದರಿಂದಲೇ ಲೋಕದಲ್ಲಿ ಎಲ್ಲಾ ಕಡೆಯಲ್ಲಿಯೂ ನಾಟಕಾದಿ ಗ್ರಂಥಗಳೇ ವಿಶೇಷವಾಗಿರುವುವು; ಅವುಗಳನ್ನು ಪಠಿಸುವವರೇ ಬಹಳ. ಆದುದರಿಂದ ಕಾವ್ಯಗಳನ್ನು ಓದುವುದು ಆವಶ್ಯಕವೆಂದು ಹೇಳಬೇಕಾದುದೇ ಇಲ್ಲ.

ಆ ಕಾವ್ಯವನ್ನು ತಿಳಿವುದಕ್ಕೆ ಅನೇಕ ಸಾಧನಗಳುಂಟು. ಆ ಸಾಧನಗಳಲ್ಲಿ ಕವಿಸಮಯವೂ ಒಂದು. ರಸಾಲಂಕಾರಾದಿಗಳು ತಿಳಿದರೂ ಕವಿಸಮಯಜ್ಞಾನವಿಲ್ಲದಿದ್ದರೆ ಕಾವ್ಯರಸವನ್ನು ಸಂಪೂರ್ಣವಾಗಿ ಆಸ್ವಾದಿಸುವುದಕ್ಕಾಗುವುದಿಲ್ಲವಾಗಿ, ಕವಿಸಮಯವನ್ನು ತಿಳಿವುದು ಅತ್ಯವಶ್ಯಕ. ಹೀಗಿದ್ದರೂ ರಸಾಲಂಕಾರಾದಿಗಳ ವಿಷಯವಾಗಿ ಅನೇಕ ಗ್ರಂಥಗಳು ಹುಟ್ಟಿ, ಈ ವಿಷಯವಾಗಿ ಒಂದು ಪ್ರಬಲಗ್ರಂಥವೂ ಕೂಡ ಹುಟ್ಟದೇ ಇರುವುದು ಆಶ್ಚರ್ಯವೇ ಸರಿ. § ಕನ್ನಡದಲ್ಲಿ ಕಾವ್ಯಾವಲೋಕನದಲ್ಲಿಯಲ್ಲದೆ ಮತ್ತಾವ ಗ್ರಂಥಗಳಲ್ಲಿಯೂ ಕೂಡ ಈ ವಿಷಯವನ್ನು ದಿಕ್ಪ್ರದರ್ಶನ ಮಾಡಿಯೂ ಇಲ್ಲ. ಕಾವ್ಯಾವಲೋಕನದಲ್ಲಿ ಹೇಳಿರುವುದೂ ಸಾಲದಾದುದ

---

§ ಕಾವ್ಯಜ್ಞಾನಕ್ಕೆ ಪ್ರಬಲಾಂಗಗಳಾದ ರಸಾಲಂಕಾರಾದಿಗಳು ತಿಳಿದುಬಂದರೆ ತತ್ಪ್ರಾಯಸ್ಥಾನವಾದ ಕವಿಸಮಯಜ್ಞಾನವು ತಾನಾಗಿಯೇ ಚರಿತಾರ್ಥವಾಗುವುದರಿಂದ, ಈ ವಿಷಯದಲ್ಲಿ ಗ್ರಂಥಗಳು ಹುಟ್ಟಲಿಲ್ಲವೆಂದು ತೋರುತ್ತದೆ.

ರಿಂದ ಕವಿಸಮಯವನ್ನು ವಿಸ್ತರಿಸಿ ಬರೆವುದರಲ್ಲಿ ಪ್ರಯೋಜನವುಂಟೆಂಬ ನಂಬಿಕೆಯಿಂದ ಈ ಪ್ರಯತ್ನವನ್ನು ಕೈಕೊಂಡಿರುವೆನು.

ಕವಿಸಮಯವೆಂದರೇನು?—ಎಂಬುದನ್ನು ಕುರಿತು ಈ ಪೀಠಿಕಾ ಪ್ರಕರಣದಲ್ಲಿ ಸಾಮಾನ್ಯವಾಗಿ ವಿಚಾರಮಾಡುತ್ತೇನೆ.

ಕವಿಸಮಯವೆಂದರೆ,—ಕಾವ್ಯಗಳಲ್ಲಿ ಕವಿಗಳು ಅನೇಕವಿಧವಾದ ವರ್ಣನಾವೈಖರಿಯಿಂದ ಲೋಕವೃತ್ತವನ್ನು ತಿಳಿಸುತ್ತಾರೆ. ಈ ಕಾರ್ಯದಲ್ಲಿ ಆಹ್ಲಾದಾತಿಶಯಕ್ಕಾಗಿ ಕೆಲಕೆಲವು ಸಂಕೇತಗಳನ್ನು ಇಟ್ಟುಕೊಳ್ಳುತ್ತಾರೆ; ಅವುಗಳಿಗೆ ಕವಿಸಮಯವೆಂದು ಹೆಸರು. ವಸ್ತುಸ್ಥಿತಿಯನ್ನು ನೋಡಿದರೆ ಯಾವುದು ಲೋಕದಲ್ಲಿ ಸಹಜವಾಗಿಲ್ಲವೋ ಅದು ಉಂಟೆಂದೂ, ಪಾರಮಾರ್ಥಿಕವಾಗಿ ಯಾವುದು ಇರುವುದೋ ಅದು ಇಲ್ಲವೆಂದೂ, ಭಿನ್ನವಸ್ತುಗಳನ್ನು ಅಭಿನ್ನವಸ್ತುಗಳೆಂದೂ, ಕಾರ್ಯಕ್ಕೆ ಸಿದ್ಧವಾದ ಕಾರಣವನ್ನು ಇಲ್ಲವೆಂದೂ, ಅದಕ್ಕೆ ಬೇರೊಂದು ಕಾರಣ ಉಂಟೆಂದೂ—ಇತ್ಯಾದನೇಕ ಸಂಕೇತಗಳನ್ನು (= ಏರ್ಪಾಡು) ಕಾವ್ಯದಲ್ಲಿ ಮಾಡಿಕೊಳ್ಳುವುದರಿಂದ ಅವುಗಳಿಗೆ "ಕವಿಸಂಕೇತ" ಅಥವಾ "ಕವಿಸಮಯ" ವೆಂದು ಹೆಸರು. ಕವಿಪರಂಪರಾಪ್ರಾಪ್ತವಾಗಿ ಬಂದಿರುವುದರಿಂದ ಅವು "ಕವಿಸಂಪ್ರದಾಯ" ವೆಂದೂ ಕರೆಯಲ್ಪಡುವುವು.

ಈ ವಿಚಾರದಲ್ಲಿ ನಾಗವರ್ಮನು ಹೀಗೆ ಹೇಳುತ್ತಾನೆ:—

"ಅವುದಶೇಷಲೋಕವಿಷಯಸ್ಥಿತಿಯಲ್ತಖಿಲಾಗಮಾರ್ಥಮುಂ।
ಭಾವಿಪೊಡಲ್ತು ಸತ್ಕವಿಪರಂಪರೆಯಿಂ ಪರಿಗೀತಮಾಗಿ ನಿ॥
ಷ್ಕೇವಳಮಾದ ರೂಢಿವಶದಿಂ ಸಲೆ ಸಲ್ವುದಿದಲ್ತೆ ಶಿಷ್ಟಸಂ।
ಭಾವಿತಮಪ್ಪ ಕಾವ್ಯಸಮಯಂ ಭುವನತ್ರಯವಸ್ತುಗೋಚರಂ॥"

ಇದರಿಂದ ಕವಿಸಮಯವು ಲೋಕಾನುಭವದಿಂದ ನಿರೂಪಿತವಾಗತಕ್ಕುದೂ ಅಲ್ಲ; ಆಗಮ ಪುರಾಣೇತಿಹಾಸಗಳಿಂದ ಸಿದ್ಧವಾದ ವಿಷಯವೂ ಅಲ್ಲ; ಆದರೂ "ನಿಷ್ಕೇವಳಮಾದ ರೂಢಿವಶದಿಂದ" ಕವಿಜನ ಪರಿಗೃಹೀತವಾಗಿ ಮಾತ್ರ ಬಂದಿರುವುದಾಗಿರಬೇಕು. ಈತನ ಅಭಿಪ್ರಾಯವು ಕವಿಸಮಯವಿಷಯವಾಗಿ ಸಹೃದಯರ ಅಭಿಪ್ರಾಯವನ್ನೆಲ್ಲಾ ಒಳಕೊಂಡಿದೆ ಎಂಬುದಕ್ಕೆ ಸಂದೇಹವೇ ಇಲ್ಲ. ಉದಾಹರಣೆಗಳಿಂದ ಸಹಿತವಾಗದಿದ್ದರೆ, ಯಾವುದೂ ಸ್ಪಷ್ಟವಾಗುವುದು ಕಷ್ಟವಾಗಲಾಗಿ ಉದಾಹರಣೆಗಳೊಡನೆ ನಿರೂಪಿಸುತ್ತೇನೆ.

ಕವಿಸಮಯದ ಸ್ವರೂಪವು ತಿಳಿದಹೊರತು ಕವಿಗಳು ತಮ್ಮ ತಮ್ಮ ಗ್ರಂಥಗಳಲ್ಲಿ ತೋರಿಸುವ ಕೆಲಕೆಲವು ಚಮತ್ಕಾರವು ಹೃದಯಂಗಮವಾಗುವುದಿಲ್ಲ; ಅವರ ಉದ್ದೇಶಕ್ಕೂ ಭಂಗ ಬರುವುದು. ಅನೇಕ ಕಡೆ ರಸವತ್ತಾದ ಕವಿವಾಕ್ಯಗಳಲ್ಲಿಯೂ ಉನ್ಮತ್ತಪ್ರಲಾಪವೋ ಎಂಬ ಶಂಕೆಯು ಹುಟ್ಟುವುದು. ಹೇಗೆಂದರೆ?

(1) " ತಿಂಗಳುವೊಡನುರ್ಕುವ ಬೆ।
ಳ್ದಿಂಗಳುಮಕ್ಕುಂ ನಿರೂಪಕಾಂತಃಕರಣ॥
ಕ್ಕಿಂಗಡಲ ಕುವರಿ ತಾಂ ಪಡೆ।
ದಂಗಜಶಿಶುಗೆರೆಯಲಿಟ್ಟ ಪಾಲ್ಬೆಣ್ಣೆಯವೋಲ್" ॥
ಪೆರೆಯಂಚೆಯ ತುಪ್ಪುಳ್ಗಳೊ।
ಕರೆಯೆರಲೆಯ ಮೆಲ್ಕಿನುಗುವ ನೊರೆಗಳ ಸರಿಯೋ ॥
ನೆರೆ ಬಿರಯಿಯ ಕೂರ್ನೋಟದೆ।
ಪರಿದಿಂದುವಿನುಗುವ ಸೊದೆಯೊ ಜೊನ್ನದ ಪೊನಲೋ॥

(ಚಿಕದೇವರಾಜ ವಿಜಯಂ)

ಇಲ್ಲಿ ಕವಿಯು ಬೆಳದಿಂಗಳನ್ನು ವರ್ಣಿಸುತ್ತಾನೆ.

ಪ್ರಥಮ ಪದ್ಯಾರ್ಥ—ಇಂಗಡಲ ಕುವರಿಯಾದ ಲಕ್ಷ್ಮಿಯು, ತಾನು ಹಡೆದ, ಅಂಗಜ ಶಿಶುವಿಗೆ—ಮನಸಿಜನಾದ (ಅನಂಗನಾದ) ಮನ್ಮಥನಿಗೆ, ಎರೆಯಲು ಇಟ್ಟ, ಪಾಲ್ಬೆಣ್ಣೆಯ ಹಾಗೆ, ತಿಂಗಳುಂ—ಎಂದರೆ ಚಂದ್ರನೂ, ಒಡನೆ ಉಕ್ಕುವ, ಬೆಳ್ದಿಂಗಳೂ, ನಿರೂಪಕಾಂತಃಕರಣಕ್ಕೆ—ಸಹೃದಯರ ಅಂತಃಕರಣಕ್ಕೆ--ಮನಸ್ಸಿಗೆ, ಅಕ್ಕುಂ—ತೋರುತ್ತದೆ.

ಇಲ್ಲಿ ಚಂದ್ರನನ್ನು ಬೆಣ್ಣೆಗೂ ಚಂದ್ರಿಕೆಯನ್ನು ಜತೆಯಲ್ಲಿ ಉಕ್ಕುವ ಹಾಲಿಗೂ ಹೋಲಿಸಿ ಇದೆ. ಆಕಾಶವೇ ಒಳಲೆಯಾಯಿತು, ಜ್ಯೋತ್ಸ್ನೆಯೇ ಹಾಲಾಯಿತು, ಅಲ್ಲಿ ಚಂದ್ರನೇ ಹಾಲಿನ ಮೇಲೆ ತೇಲುವ ಬೆಣ್ಣೆಯಾಯಿತು. ಹಾಲೆರೆದು ಸಾಕಿದ ಮಗುವೆಲ್ಲಿ?–ಎಂದರೆ, ಅದು ಅನಂಗ. ಹಾಲೆರೆದರೆ ಮಗುವಿಗೆ ಸಂತೋಷ ಹೆಚ್ಚುತ್ತದೆ; ಅದು ನಲಿದಾಡುತ್ತದೆ. ಇಲ್ಲಿ ಅನಂಗನೆಂಬ ಮಗುವಿಗೆ ವಿಕಾಸವು ರಾತ್ರಿಯಲ್ಲಿ, ಅದೂ ಚಂದ್ರೋದಯದಲ್ಲಿಯೇ ಎಂಬುದು ತಿಳಿದೇ ಇದೆ. ಆದುದರಿಂದ ಇಲ್ಲಿ ಕವಿಯ ಉತ್ಪ್ರೇಕ್ಷೆಯು ಎಷ್ಟರ ಮಟ್ಟಿಗೆ ಚಮತ್ಕಾರವಾಗಿಯೂ

ಹೃದ್ಯವಾಗಿಯೂ ಇದೆ ಎಂಬುದನ್ನು ಪಾಠಕರೇ ಯೋಜಿಸಿಕೊಳ್ಳಬಹುದು. ಈ ಉತ್ಪ್ರೇಕ್ಷೆಯು ಯಾವ ಆಧಾರದಮೇಲೆ ಹುಟ್ಟಿದೆ?—ಎಂದರೆ, ಅಮೂರ್ತದ್ರವ್ಯವಾದ ಚಂದ್ರಿಕೆಗೆ ಹಾಲಿನ ಭಾವವನ್ನು ಎಂದರೆ, ಮೂರ್ತತ್ವವನ್ನು ಆರೋಪ ಮಾಡಿದೆ. ಇದೇ ಕವಿಸಮಯವೆಂಬುದು.

ಕವಿಯು ಆ ಚಂದ್ರಿಕೆಯನ್ನೇ ಪ್ರಕಾರಾಂತರವಾಗಿ ದ್ವಿತೀಯ ಶ್ಲೋಕದಲ್ಲಿ ಉತ್ಪ್ರೇಕ್ಷಿಸುತ್ತಾನೆ. ಆ ಉತ್ಪ್ರೇಕ್ಷೆಗೂ ಅಮೂರ್ತದ್ರವ್ಯಗಳಿಗೆ ಮೂರ್ತತ್ವಾರೋಪಣವೆಂಬ ಕವಿಸಮಯವೇ ಆಧಾರವಾಗಿದೆ. ಕವಿಯು ಚಂದ್ರಿಕೆಯನ್ನು ಪೆರೆ=ಚಂದ್ರನೆಂಬ ಹಂಸದ, ತುಪ್ಪುಳ್ಗಳು=ಗರಿಗಳು ಎಂದೂ, ಆ ಚಂದ್ರಬಿಂಬದಲ್ಲಿರುವ, ಕರೆ=ಕಳಂಕವೆಂಬ, ಎರಲೆಯು, ಮೆಲುಕಿನಿಂದ, ಉಗುವ=ಬಾಯಿಂದ ಈಚೆಗೆ ಬೆಳ್ಳಗೆ ಸ್ರವಿಸುವ, ನೊರೆಗಳ ಸರಿಗಳೆಂದೂ, ವಿರಹಿಗಳ ಕೂನೋರ್ಟವೆಂಬ ಹರಿತವಾದ ಸಲಾಕೆಯಿಂದ ಕೀರಿದ, ಚಂದ್ರನಿಂ, ಉಗುವ=ಶರೀರದಿಂದ ಪ್ರವಹಿಸುವ, ಅಮೃತವೆಂದೂ ಇಲ್ಲಿ ಹೇಳುತ್ತಾನೆ. ಚಂದ್ರನಲ್ಲಿರುವ ಕಳಂಕವನ್ನು ಜಿಂಕೆಯೆಂದು ಉತ್ಪ್ರೇಕ್ಷಿಸುವುದೂ, ಚಂದ್ರಬಿಂಬವನ್ನು ಅಮೃತಭಾಜನವೆಂದು ವರ್ಣಿಸುವುದೂ, ವಿರಹಿಗಳ ನೋಟದಲ್ಲಿ ತೈಕ್ಷ್ಣ್ಯವು ಕಾಣಬರುವುದರಿಂದ ಅದನ್ನು ಸಲಾಕೆಯಂತೆ ವರ್ಣಿಸುವುದೂ ಕವಿಗಳಲ್ಲಿ ವಾಡಿಕೆಯಾದ ಸಂಕೇತವು.

(2) " ಇದು ಮತ್ತೇನೆಂಬೆ ಬೆಳ್ದಿಂಗಳ ಬೆಳತಿಗೆಯುಂ ಪಂಸೆ ಪಾಲ್ಗೆತ್ತು ನಾರ್ದ।
ಪುದೊ ಮಲ್ಲೀಮಾಲೆಗೆತ್ತೇನೆರಗಿದಪುದೊ ಭೃಂಗಂ ಬಿಸಭ್ರಾಂತಿಯಿಂದಂ॥
ಕರ್ದುಕಲ್ ಕೈಗೆಯ್ಯೊಳಾರಯ್ದಪುದಿಭಕಳಭಂ ಸಾಂದ್ರಚಂದ್ರಾಂಶುವಂ ಜಾ।
ರೆ ದುಕೂಲಂ ಲೀಲೆಯಿಂದಂ ತೆಗೆದಪುದೊ ಕುಚಾಗ್ರಕ್ಕೆ ಕಾಂತಾಕದಂಬಂ॥

(ಕುಂಜರಲೀಲಾವತಿ.)

ಹಂಸವು, ಬೆಳ್ದಿಂಗಳ, ಬೆಳತಿಗೆಯುಂ—ಧಾವಳ್ಯವನ್ನು, ಪಾಲ್ಗೆತ್ತು—ಹಾಲೆಂದು ಭ್ರಮಿಸಿ, ನಾರ್ದಪ್ಪುದೊ; ಭೃಂಗವು, ಮಲ್ಲೀಮಾಲೆಗೆತ್ತು, ಏನೆರಗಿದಪುದೊ; ಇಭಕಳಭಂ, ಬಿಸಭ್ರಾಂತಿಯಿಂದಂ, ಕರ್ದುಕುವುದಕ್ಕೋಸ್ಕರ, ಕೈಗೆಯ್ಯೊಳ್—ಅಡಿಗಡಿಗೆ ತೆಗೆದುಕೊಳ್ಳಲು, ಆರಯ್ದಪುದೊ—ಯತ್ನಿಸುತ್ತದೊ; ಕಾಂತಾಕದಂಬವು, ದುಕೂಲಂ ಜಾರಿ ಪೋಗಲು, ಸಾಂದ್ರಚಂದ್ರಾಂಶುವನ್ನು, ಕುಚಾಗ್ರಕ್ಕೆ, ಲೀಲೆಯಿಂದಂ ತೆಗೆದಪುದೊ, ಎಂದು ವರ್ಣಿಸುವೆನಲ್ಲದೆ, ಮತ್ತೇನೆಂಬೆಂ?—ಎಂದು ಪದ್ಯಾರ್ಥ.

ಇಲ್ಲಿಯೂ ಅಮೂರ್ತದ್ರವ್ಯವಾದ ಜ್ಯೋತ್ಸ್ನೆಯನ್ನು ಕುಡಿಯಲೂ, ತಿನ್ನಲೂ, ಕೈಯಲ್ಲಿ ಹಿಡಿಯಲೂ, ಹೊದೆದುಕೊಳ್ಳಲೂ ಬಹುದಾದ ವಸ್ತುವೆಂದು ಕವಿಯು ವರ್ಣಿಸುತ್ತಾನೆ. ಜ್ಯೋತ್ಸ್ನೆಯಲ್ಲಿ ಈ ಗುಣವು ಇರುವಂತೆ ಲೋಕದಲ್ಲಿ ಕಾಣಪಡುವುದಿಲ್ಲ ; ಶಾಸ್ತ್ರದಲ್ಲಿಯೂ ಕೇಳಿ ಬರುವುದಿಲ್ಲ. ಇದೇ ಅಸದಾಖ್ಯಾತಿ–ಇಲ್ಲದುದನ್ನು ಇರುವ ಹಾಗೆ ವರ್ಣಿಸುವುದೆಂಬ ಕವಿಸಮಯವು.

(3) ದುಗುಲಮನುಟ್ಟು ತೊಟ್ಟು ಪೊಸಮುತ್ತನೆ ಚಂದನದಣ್ಪನಿಕ್ಕಿ ಮ ।
ಲ್ಲಿಗೆಯ ಸರಂಗಳಂ ಮುಡಿದು ಚಂಪಕಮಾಲೆಯನೆತ್ತಿ ಮೇಲೆ ತುಂ ॥
ಬಿಗಳೊಲೆದಾಡದಂತರಿಯಲಾಗದವೋಲ್ ನವಚಂದ್ರಿಕಾಚ್ಛವೀ ।
ಚಿಗಳೊಡಗೂಡಿ ಪೋದಳಭಿಸಾರಿಕೆ ಮುತ್ತಿನ ಬೊಂಬೆಯೆಂಬಿನಂ ॥

(ಕುಂಜರಲೀಲಾವತಿ)

ಇಲ್ಲಿ ಕವಿಯು ಅಭಿಸಾರಿಕಾಸ್ತ್ರೀಯ ಗಮನನ್ನು ವರ್ಣಿಸುತ್ತಾನೆ.

ಆಕೆಯು ದುಗುಲಮನುಟ್ಟು, ಪೊಸಮುತ್ತನೆ ತೊಟ್ಟು, ಚಂದನದ ಅಣ್ಪಂ–ಅನುಲೇಪನವನ್ನು ಇಕ್ಕಿ, ಮಲ್ಲಿಗೆಯ ಸರಂಗಳಂ ಮುಡಿದು, ಮೇಲೆ ತುಂಬಿಗಳೊಲೆದಾಡದಂತು, ಚಂಪಕಮಾಲೆಯನೆತ್ತಿ–ಧರಿಸಿಕೊಂಡು, ಅರಿಯಲಾಗದವೋಲ್–ಯಾರಿಂದಲೂ ಗುರುತು ಹಿಡಿಯಲ್ಪಡದ ಹಾಗೆ, ನವಚಂದ್ರಿಕಾಚ್ಛವೀಚಿಗಳೊಡಗೂಡಿ, ಮುತ್ತಿನ ಬೊಂಬೆಯ ಹಾಗೆ ಹೊರಟಳು—ಎಂದು ಪದ್ಯಾರ್ಥ.

ಇಲ್ಲಿ ಅಭಿಸಾರಿಕೆಯ ಆಶಯವು ತನ್ನ ಸಂಚಾರ ಯಾರಿಗೂ ಊಹಿಸಲು ಶಕ್ಯವಾಗಿರಕೂಡದೆಂಬುದು. ತದನುಗುಣವಾಗಿ ತಾನು ತನ್ನ ರೂಪವನ್ನೂ ಗಮನವನ್ನೂ ಮರೆಯಿಸಲು ಸಾಮರ್ಥ್ಯವುಳ್ಳ ದುಕೂಲ, ಪೊಸಮುತ್ತು, ಚಂದನಲೇಪನ, ಮಲ್ಲಿಕಾಮಾಲೆ ಮೊದಲಾದುವುಗಳನ್ನು ಧರಿಸಿಕೊಂಡು, ಬೆಳ್ಳಗೆ ನದಿಯ ಅಲೆಗಳಂತೆ ಕವಿದುಬರುವ ಚಂದ್ರಿಕೆಯಲ್ಲಿ ಹೊರಟಿರುವಳು. ಏಕೆ? ಬಿಳುಪಾದ ಪದಾರ್ಥಗಳ ನಡುವೆ ಬಿಳುಪಾದ ತನ್ನ ದೇಹವು ಕಾಣದೆಂಬ ಭಾವದಿಂದ. ಹೀಗಿರಲು, ನಸುಗೆಂಪಾದ ಚಂಪಕದ ಧಾರಣವನ್ನು ಕವಿಯು ವರ್ಣಿಸಿರುವುದು ಔಚಿತ್ಯಹಾನಿಯೆಂದು ತೋರಿಬರುತ್ತದೆ. ಆಲೋಚಿಸಿ ನೋಡಿದರೆ ಅದು ರಸವನ್ನು ಪುಷ್ಟೀಕರಿಸುವುದಾಗಿಯೇ ಇದೆ. ಹೇಗೆಂದರೆ? ದುಂಬಿಗಳು ಮಲ್ಲಿಕಾದಿ ಪುಷ್ಪಗಳಲ್ಲಿ ಮಕರಂದಪಾನ ಮಾಡುವುದಕ್ಕೆ ಅವುಗಳನ್ನು ಮುತ್ತುವುವೆಂದೂ, ಚಂಪಕಪುಷ್ಪಗಳ ಹತ್ತಿರವನ್ನು ಮಕರಂದವಿದ್ದರೂ ಮರೆತೂ ಸೇರವೆಂದೂ ಕವಿಗಳು ವರ್ಣಿಸುವರು. ಭ್ರಮ

ರಗಳಿಗೆ ಮಲ್ಲಿಕಾದಿಗಳಲ್ಲಿ ಆಹ್ಲಾದಕತ್ವವೂ, ಚಂಪಕದಲ್ಲಿ ಮಾರಕತ್ವವೂ ಲೋಕಾನುಭವಕ್ಕೆ ವಿರೋಧವಾಗಿದ್ದರೂ ಕವಿಸಂಪ್ರದಾಯಸಿದ್ಧಗಳು. ಈ ಕವಿಸಂಕೇತವನ್ನು ಲಕ್ಷ್ಯದಲ್ಲಿ ಇಟ್ಟುಕೊಂಡು, ಪದ್ಯಾರ್ಥವನ್ನು ನೋಡೋಣ. ಮಲ್ಲಿಕಾಮಾಲೆಗಳ ಮೇಲೆ ಚಂಪಕಮಾಲಿಕೆಯನ್ನು ಎತ್ತಿಕೊಳ್ಳದಿದ್ದರೆ, ಅವಳ ಶ್ವಾಸಪರಿಮಳಕ್ಕೂ, ಚಂದನ ಚರ್ಚೆಗೂ, ಮಲ್ಲಿಗೆಯ ಮಕರಂದಕ್ಕೂ ದುಂಬಿಗಳು ನಾಲ್ಕುಕಡೆಯಿಂದ ಕವ್ವರಿಗೊಂಡು ಬಂದು ಮುತ್ತುವುವು; ಆಗ ಅವುಗಳ ಕಾರ್ಷ್ಣ್ಯದಿಂದ "ನವನೀಲಪಟಮಂ ಮುಸುಕಿದವೋಲ್" ಆಗಿ, ಚಂದ್ರಿಕಾದಿ ಶ್ವೇತದ್ರವ್ಯಗಳಿಂದ ಮರೆಸಯಿಲ್ಪಟ್ಟ ಅವಳ ಗಮನವೂ ರೂಪೂ ಸೂಚಿಸಲ್ಪಡುವುವು. ಹೀಗಿರಲು, ಭ್ರಮರದ ನಿವಾರಣಕ್ಕಾಗಿ ಚಂಪಕಮಾಲಾಧಾರಣವು, ಈ ಅವಸರದಲ್ಲಿ ರಸೋತ್ತೇಜಕವೇ ಹೊರತು ರಸಕುಂದಕವಲ್ಲ. ಅದಂತಿರಲಿ. ಚಂಪಕಮಾಲೆಯಿಂದ ಅವಳ ಗಮನವು ಸೂಚಿಸಲ್ಪಡುತ್ತದಲ್ಲ; ಅವಳ ಉದ್ಯೋಗಕ್ಕೆ ಭಂಗ ಬರುವುದಿಲ್ಲವೆ? ಎಂದರೆ—ದೀಪದ ಬೆಳಕಿನಲ್ಲಿಯೂ, ತಿಂಗಳ ಬೆಳಕಿನಲ್ಲಿಯೂ ಚಂಪಕದ ಹೊಂಬಣ್ಣವು ಅಷ್ಟು ಚೆನ್ನಾಗಿ ಕಾಣಬರುವುದಿಲ್ಲ, ಸುಮಾರಾಗಿ ಕಾಣಬರಬಹುದು. ಹಾಗಿದ್ದರೂ ಇಲ್ಲಿ ಚಂದ್ರಿಕೆಯ ಸಾಂದ್ರತ್ವದಿಂದ ಮರೆಯಿಸಲ್ಪಡುವುದೇ ನಿಶ್ಚಯ.

ಚಂಪಕದಲ್ಲಿ ಭ್ರಮರಗಳಿಗೆ ಮಾರಕತ್ವವೆಂಬ ಕವಿಸಂಕೇತವನ್ನು ಇಟ್ಟುಕೊಂಡು, ಜಯನೃಪಕಾವ್ಯದಲ್ಲಿ ಕವಿಯು ಸುಲೋಚನಾದೇವಿಯ ಮೂಗುತಿಯ ಧಾರಣವನ್ನು ಎಷ್ಟು ಹೃದ್ಯವಾಗಿ ವರ್ಣಿಸಿರುವನು! ಅದೇನೆಂದರೆ:—

ಅರಲುರಿಣಿಯೀಬಂಡುಂಡೊಡೆ ।
ಮರಣಮವಕೆ ನಿಶ್ಚಯಮದರಿಂದಾ ।
ಗರಳಮನಿದರಿಂ ಕಿಡಿಪೆನೆನುತ ಬನಸಿರಿಯಾಚಂಪಕದ ॥
ಬಿರಿಮೊಗ್ಗೆಯ ತುದಿಗಮೃತದ ಘುಟಿಕೆಯ ।
ನಿರಿಸಿದವೊಲು ಮುತ್ತಿನ ಮೂಗುತಿಯಂ ।
ವಿರಚನೆಗೆಯ್ದುಳದೊರ್ವಳ್ ತರುಣಿಯ ನಾಸಾಮುಕುಳದೊಳು ॥

ಇವೆರಡೂ ಸ್ವದಕೀರ್ತನ—ಇರುವುದನ್ನು ಇಲ್ಲವೆಂದು ವರ್ಣಿಸುವುದೆಂಬ ಕವಿಸಮಯಕ್ಕೆ ಉದಾಹರಣವಾಗಿವೆ.

(4) ಅರಿಯೆಂ ಪಿರಿದಂ ಪೊಗಳಲ್ ।
ಪೆರತೇಂ ಮುಚ್ಚಿದೊಡೆ ಮುಚ್ಚಿರಲ್ಕಲ್ಲದೆ ಕ ॥
ಸ್ತೂರಿದೊಡೆ ತೆರೆದಂತಲ್ಲದೆ ।
ಮೆರೆದಂತೆನೆಯಿಕ್ಕಲೀಯದಿಡಿಡ ತನುಂಧಂ ॥

ಉಗುರಿಂದಂಟಿ ಬೆರಂಟೆಯುಂಜನಮದಕ್ಕುಂ ಚೌಕಮಂ ಕೀರುತುಂ।
ತೆಗೆದಾಚ್ಛಾದಿಸೆ ಕೇಳ ನೀಲಪಟಮಕ್ಕುಂ ಬಟ್ಟಿತಂ ಮಾಡಿ ಸು॥
ತ್ತುಗಳೆತ್ತಲ್ಕಸಿತಾತಪತ್ರಮೆ ಅದಕ್ಕುಂ ತಾನಿದೆಂಬಂದದಿಂ।
ಜಗದೊಳ್ ಕಗ್ಗೆ ವಿಚಿತ್ರಮಾಗೆ ನೆರೆ ದಟ್ಟೈಸಿತ್ತನಿತ್ತುಂ ತಮಂ॥

ಇದು ಮಧುಕರಮಿದು ಮಲ್ಲಿಗೆ।
ಯಿದು ಕೋಕಿಳನಿದು ಮರಾಳಮಿದು ಮದಗಜಮಿಂ॥
ತಿದು ಕಂಠೀರವಮಿದು ಕರಿ।
ದಿದು ಬಿಳಿದೆಂದರಿಯಬಾರದುರ್ವಿದ ತಮದೊಳ್॥

ಮನದೊಳಗಂ ಪೊರಗಂ ತೆ।
ಕ್ಕನೆ ತೀವಿದ ಮರ್ಬಿನೊಳಗೆ ನೆನಸುಂ ಕನಸುಂ॥
ಮನಸುಂ ತಾನುಂ ಕತ್ತಲ।
ಯೆನಿಸಿರ್ದುದು ತಮದ ಘನವನದನೇನೆಂಬೆಂ॥

(ಗಿರಿಜಾಕಲ್ಯಾಣಂ.)

ಇಲ್ಲಿ ಕವಿಯು ಕಗ್ಗತ್ತಲೆಯನ್ನು ವರ್ಣಿಸುತ್ತಾನೆ.

ಅಭಾವ ಪದಾರ್ಥವಾದ ಅಂಧಕಾರವನ್ನು ಕಪ್ಪಾದ ಘನತೆಯುಳ್ಳ ಮುಟ್ಟ ಬಹುದಾದ ಪದಾರ್ಥವೆಂದು ವರ್ಣಿಸುವುದು ಕವಿಸಮಯ. ಈ ಕವಿಸಮಯವನ್ನಿಟ್ಟುಕೊಂಡು ಆಹ್ಲಾದಾತಿಶಯವನ್ನುಂಟುಮಾಡುವುದಕ್ಕೆ ಈ ರೀತಿಯಲ್ಲಿ ಕವಿಯು ಉತ್ಪ್ರೇಕ್ಷಿಸಿರುತ್ತಾನೆ. ಮೊದಲನೆಯ ಪದ್ಯದಲ್ಲಿ ಅಂಧಕಾರವು ಅಂಜನದಂತೆ ಕಣ್ಣುಗಳಿಗೆ ಮೆರೆದುಕೊಂಡು ಮುಚ್ಚಿದ ಕಣ್ಣನ್ನು ಬಿಡುವುದಕ್ಕೂ ಬಿಟ್ಟ ಕಣ್ಣನ್ನು ಮುಚ್ಚುವುದಕ್ಕೂ ಆಗದಂತೆ ಮಾಡುತ್ತದೆ, ಎಂದು ವರ್ಣಿಸುತ್ತಾನೆ. ಎರಡನೆಯ ಪದ್ಯದಲ್ಲಿ ಅಂಧಕಾರವನ್ನು ವಸ್ತ್ರದಂತೆ ನಿರೂಪಿಸುವುದು ಯಾರ ಮನಸ್ಸನ್ನು ತಾನೆ ಸೆಳೆಯದು? ಮೂರನೆಯ ಪದ್ಯದಲ್ಲಿ ಅಷ್ಟುಮಟ್ಟಿಗೆ ಸಾಂದ್ರವಾಗಿದ್ದಿತೆಂದು ಹೇಳುತ್ತಾನೆ. ಎಷ್ಟುಮಟ್ಟಿಗೆ ಎಂದರೆ, ಬಿಳುಪು ಕಪ್ಪು, ದೊಡ್ಡದು ಚಿಕ್ಕದು, ಎಂಬ ತಾರತಮ್ಯವನ್ನೂ ಹೋಗಲಾಡಿಸಿ, ಇದು ಬಿಳುಪಾದ ಮಲ್ಲಿಗೆ, ಇದು ಅದರಲ್ಲಿ ಮಧುವನ್ನು ಪಾನಮಾಡುವ ಕಪ್ಪಗಿರುವ ದುಂಬಿ, ಇದು ಕೋಕಿಲ, ಇದು ಹಂಸ, ಇದು ಪರ್ವತಾಕಾರವಾದ ಗಜ, ಇದು ಅದರ ಕುಂಭಸ್ಥಳದಲ್ಲಿ ಕುಳಿತಿರುವ ಕಂಠೀರವ, ಎಂದು ತಿಳಿದುಕೊಳ್ಳುವುದಕ್ಕಾಗುವುದಿಲ್ಲವೆನ್ನುವಷ್ಟು. ನಾಲ್ಕನೆಯ ಪದ್ಯದಲ್ಲಿ ಕತ್ತಲೆಯು

ತನ್ನ ಹೊರಗೂ ವ್ಯಾಪಿಸಿದುದಲ್ಲದೆ ಒಳಗೂ ವ್ಯಾಪಿಸಿ, ನೆನಸು, ಕನಸು, ಮನಸು, ತಾನು ಕತ್ತಲೆಯಾಗಿ ಹೋದೆವೆಂಬ ಭಾವವನ್ನು ಹುಟ್ಟಿಸುವಷ್ಟು ಸಾಂದ್ರವ್ಯಾಪಕತೆಯನ್ನು ವರ್ಣಿಸುತ್ತಾನೆ.

ಕತ್ತಲೆಯಲ್ಲಿ ತನ್ನ ಮೈ ತನಗೆ ಕಾಣದಿರುವುದೊಂದು ವಿಶೇಷವಲ್ಲ. ಅಂಧಕಾರವನ್ನು ಮುಟ್ಟಿ ಹೊಡೆದುಕೊಳ್ಳಬಹುದೆಂದು ಹೇಳುವುದೂ ವಿಶೇಷವಲ್ಲ. ಅದು ತನ್ನ ಸ್ಥಿತಿಯನ್ನೇ ಮರೆಯಿಸಿ, ಇದು ಕನಸೋ, ಇದು ನೆನಸೋ ಅಥವಾ ಇದು ಮನಸೋ ಎಂದು ಭ್ರಾಂತಿಪಡುವಂತೆ ಮಾಡಿತೆಂದು ವರ್ಣಿಸುವುದೀಗ ಕವಿಶಕ್ತಿ ಪ್ರಕರ್ಷಕ್ಕೆ ನಿದರ್ಶನವಾಗಿರುವುದು.

ಇದೂ ಅಸದಾಖ್ಯಾತಿಯೆಂಬ ಕವಿಸಮಯಕ್ಕೆ ಉದಾಹರಣೆ.

(5) ಕುಲಭೂಭೃತ್ಕೂಟದೊಳ್ ಮಾಣಿಕದೆಳವಿಸಿಲಂತಂತೆ ದಿಕ್ಕುಂಭಿಕುಂಭ ।
ಸ್ಥಲದೊಳ್ ಸಿಂದೂರಮೆಂತಂತಮರನದಿಯೊಳಾರಕ್ತನೀರೇಜಪತ್ರಾ॥
ವಲಿಯೆಂತಂತಬ್ಧಿಯೊಳ್ ವಿದ್ರುಮಸಮುದಯಮೆಂತಂತೆ ಪರ್ವಿತ್ತು ರಾಗಾ।
ನಿಲಮಪ್ಪಂತುರ್ವಿಯೆಲ್ಲಂ ದಶರಥವಸುಧಾಧೀಶತೇಜೋವಿತಾನಂ ॥
(ಪಂಪರಾಮಾಯಣಂ)

ಇಲ್ಲಿ ಕವಿಯು ದಶರಥನ ಪರಾಕ್ರಮವನ್ನು ವರ್ಣಿಸುತ್ತಾನೆ. ಆತನ ಪರಾಕ್ರಮವು ದಶದಿಕ್ಕುಗಳಲ್ಲಿಯೂ ವ್ಯಾಪಿಸಿ ಅಲ್ಲಲ್ಲಿರುವ ಜನಗಳಿಂದ ಕೊಂಡಾಡಲ್ಪಟ್ಟಿತೆಂಬುದನ್ನು ಈ ರೀತಿ ತಿಳಿಸುತ್ತಾನೆ. ಈ ಉತ್ಪ್ರೇಕ್ಷೆಗೆ ಕವಿಗಳು ತೇಜಸ್ಸನ್ನು ಕೆಂಪಗಿರುವ ವಸ್ತುವಿನಂತೆ ವರ್ಣಿಸುವ ಕವಿಸಮಯವೇ ಆಧಾರವಾಗಿದೆ.

ದಶರಥನ ಪ್ರತಾಪ ವಿತಾನವು ಅತ್ಯುನ್ನತವಾದ ಕುಲಪರ್ವತಗಳ ಶಿಖರಗಳಲ್ಲಿ ಸ್ವಭಾವಸಿದ್ಧವಾಗಿರುವ ಮಾಣಿಕ್ಯಗಳಿಂದ ಹೊರಟ ಬಿಸಿಲಂತೆಯೂ, ದಿಗಂತಗಳಲ್ಲಿ ಮಹಾಭೂಮಿಯನ್ನು ಹೊತ್ತುಕೊಂಡಿರುವ ದಿಗ್ಗಜಗಳ ಕುಂಭಸ್ಥಳದಲ್ಲಿ ಮೆರೆವ ಸಿಂದೂರದಂತೆಯೂ, ಮೇಲುಗಡೆ ದೇವಲೋಕದಲ್ಲಿ ಬೆಳ್ಳಗೆ ಪ್ರವಹಿಸುವ ದೇವಗಂಗೆಯಲ್ಲಿ ಹುಟ್ಟಿದ ಕೆಂದಾವರೆಗಳ ದಳಗಳಂತೆಯೂ, ಕೆಳಗಡೆ ಸಮುದ್ರತೀರದಲ್ಲಿ ಹರಡಿಕೊಂಡಿರುವ ಹವಳಗಳಂತೆಯೂ ಕಾಣಿಸಿಕೊಂಡು ಪ್ರಪಂಚದಲ್ಲಿ ಎಲ್ಲೆಲ್ಲಿಯೂ ಪ್ರಸರಿಸಿತು, ಎಂದು ಪದ್ಯಾರ್ಥ.

ಇಲ್ಲಿ ತೇಜಸ್ಸಿಗೆ ಆರುಣ್ಯ, ನದಿಗಳಲ್ಲಿ ಕಮಲೋತ್ಪತ್ತಿ, ಇತ್ಯಾದಿ ಕವಿಸಮಯಗಳನ್ನು ಅಂಗೀಕರಿಸದಿದ್ದರೆ, ಇಷ್ಟು ಆಹ್ಲಾದಕರವಾಗಿ ದಿಗಂತವ್ಯಾಪಿಯಾದ

ದಶರಥನ ಪರಾಕ್ರಮವನ್ನು ವರ್ಣಿಸುವುದು ಅಸಾಧ್ಯ; ಭಾವಾರ್ಥದಲ್ಲಿ ಔಚಿತ್ಯ ಕಾಣಬರುತ್ತಿರಲಿಲ್ಲ.

ಇದೂ ಅಸದಾಖ್ಯಾತಿಯೆಂಬ ಕವಿಸಮಯೋದಾಹರಣ.

(6) ಬಕುಳಂ ಗಂಡೂಷಸೇಕಾಸವಕೆ ಪರಿಮಳಂಗೆಯ್ವವೊಲ್ ಪೂಗಳಂ ಬೀ ।
ಳಿಕುಮಿಾಚಾಂಪೇಯಮುಂ ಕೆಂಪಿಡಿಯೆ ಯುವತಿವಕ್ತ್ರೇಂದು ಚೆಂಬೂಗಳಂ ಪೊ॥
ಣ್ಮಿಕುಮಿಂತೀಭೃಂಗಸಂಘಂ ಮುದದೊದೆವಬಲಾನೂಪುರಧ್ವಾನಮಂ ಕೇ ।
ಳ್ದು ಕರಂ ತಾಂ ಕಲ್ತಶೋಕಂಗಳೊಳನುಕರಿಪಂತಿಂಪಿನಿಂ ಪಾಡುತಿರ್ಕುಂ ॥

(ಮಿತ್ರವಿಂದಾಗೋವಿಂದಂ)

ಇದು ವನಕೇಳೀ ವರ್ಣನೆಯಲ್ಲಿ ಪ್ರವೃತ್ತವಾದ ಪದ್ಯ.

ವಕುಳವೃಕ್ಷವು ಅಬಲೆಯರು ತನ್ನಮೇಲೆ ಮುಕ್ಕಳಿಸುವ ಮದ್ಯದ ಪರಿಮಳ ವನ್ನು ಹೆಚ್ಚಿಸುವುದಕ್ಕೋ ಎಂಬಂತೆ ಅವರ ಗಂಡೂಷ ಸಂಪರ್ಕದಿಂದ ಹೂವುಗ ಳನ್ನು ಬೀಳಿಸುವುದು; ಅವರ ಮುಖವು ಮದ್ಯಪಾನದಿಂದ ಕೆಂಪೇರಲು, ಅದನ್ನು ಕಂಡ ಮಾತ್ರದಲ್ಲಿಯೇ ಸಂಪಗೆಯು ಹೂವುಗಳನ್ನು ಹೊಮ್ಮಿಸುವುದು; ಅವರ ಪಾದತಾಡನದಿಂದ ಅಶೋಕವು ಚಿಗುರಿ ಪುಷ್ಪ ಬಿಡುವುದು; ಆ ಪುಷ್ಪಗಳಲ್ಲಿರುವ ಮಕರಂದವನ್ನು ಪಾನಮಾಡುತ್ತ ದುಂಬಿಯು ಗಾನಮಾಡುವುದು; ಆ ಗಾನವು ಅಶೋಕವನ್ನು ಒದೆವುದರಲ್ಲಿ ಉಂಟಾದ ನೂಪುರಧ್ವಾನಮಂ ಕಲಿತುಕೊಳ್ಳಲು ಅವುಗಳು ಮಾಡುವ ಅಭ್ಯಾಸವೋ ಎಂಬಂತೆ ತೋರುವುದು—ಎಂದು ಪದ್ಯಾರ್ಥ.

ಸ್ತ್ರೀಯರ ಪಾದತಾಡನದಿಂದ ಅಶೋಕದಲ್ಲಿ, ಅವರ ದೃಷ್ಟಿಪಾತದಿಂದ ಸಂಪ ಗೆಯಲ್ಲಿ, ಅವರ ಗಂಡೂಷಸಂಪರ್ಕದಿಂದ ವಕುಳದಲ್ಲಿ ಪಲ್ಲವಕುಸುಮೋತ್ಪತ್ತಿಯು ಅಕಾಲದಲ್ಲಿಯೂ ಉಂಟಾಗುವುದೆಂದು ವರ್ಣಿಸುವುದು ಕವಿಸಮಯ. ಈ ಕವಿ ಸಮಯವನ್ನು ತಿಳಿದುಕೊಂಡಲ್ಲದೆ ಈವರ್ಣನೆಯು ಹೃದಯಂಗಮವಾಗದು; ಇದ ರಲ್ಲಿ ಔಚಿತ್ಯವು ತೋರದು.

ಈ ಸಂದರ್ಭದಲ್ಲಿ ಮಲ್ಲಿನಾಥಪುರಾಣದ ವನಕೇಳೀವರ್ಣನೆಯನ್ನು ಅನು ವಾದ ಮಾಡುವುದರಲ್ಲಿ ಪ್ರಯೋಜನವುಂಟು. ಅದೇನಂದರೆ—

ವ॥ ಅವನಿಪತಿ ಮಂಗಳವೃತ್ತವನೋದಿದ ಮಂಗಳಪಾಠಕಂಗೆ ತದುತ್ಸವಮಹಾ ದಾನಮಂ ಮಾಡಿ ಪಲ್ಲವಿತಲತಾದ್ರುಮಂಗಳಂ ನೋಡುವಲ್ಲಿ,

ಮೃದುಪದಪಾತದಿಂದಸುಕೆಯುಂ ತಳಿರ್ವೇರಿಸಿ ಕೇಕರಾಂಶುಪಾ ।
ತದಿನಲರ್ಗೊಂಚಲಂ ತಿಳಕಮುಂ ತಳೆವಂತಿರೆ ಮಾಡಿ ಪರ್ಬಿ ಕೊ ॥
ರ್ಬಿದ ಕುಚದೊತ್ತಿನಿಂ ಕುರವಕಕ್ಕೆ ನವಾಂಕುರಮಂ ನಿಮಿರ್ಚೆ ಬೀ ।
ರಿದುದಬಳಾಜನಂ ನೃಪವರಂಗೆ ಮನೋಜಮಹೇಂದ್ರಜಾಲಮಂ ॥೧॥ ‡

ವ॥ ಆಗಳದಂ ನೋಡಿ ವಿಸ್ಮಯಸ್ಮೇರಮುಖಾರವಿಂದನಾಗಿ,

ಒದೆದೆಳದಳಿರಂ ನೀಂ ಮಾ ।
ಡಿದೆ ತನಗೆಂದಸುಕೆ ನಿನಗೆ ಸೋಲ್ತಿತ್ತುದು ಕೊಳ್ ॥
ಇದನೆಂದು ನೃಪಂ ಕೋಮಳ ।
ಪದಪಲ್ಲವೆಗಿತ್ತನರುಣಮಣಿನೂಪುರಮಂ ॥೨॥

ನನೆಯುಂ ಪೂಗಳನಾಲೋ ।
ಕನಮಾತ್ರದೆ ಪಡೆದಳೆಂದು ಮೆಚ್ಚಂ ತಿಳಕಂ ॥
ನಿನಗಿತ್ತುದೆಂದು ಭೂಪಂ ।
ವನಿತಾತಿಳಕಕ್ಕೆ ಹಂಸತಿಳಕಮನಿತ್ತಂ ॥೩॥

ಅಂಕುರಮಂ ಕುಚಕಳಶದ ।
ಸೋಂಕಿಂ ಪುಟ್ಟಿಸಿದ ನಿನಗೆ ದಯೆಗೆಯ್ವುದು ಮೆ ॥
ಚ್ಚಂ ಕುರವಕತರುವೆಂದರ ।
ಸಂ ಕೊಟ್ಟಂ ವೃತ್ತಕುಚೆಗೆ ಮುತ್ತಿನ ಸರಮಂ ॥೪॥

ವ॥ ಅಂತು ನೆವಂ ಬಡೆದು,

ಮರನುಂ ಬಳ್ಳಿಗಳುಂ ತೊವಲ್ತೊಡೆ ವಸಂತೋತ್ಸಾಹಮೆಂದಗ್ಗದೆ ।
ಗ್ಗರೆನುತ್ತಿರ್ಕೆಮ! ಪೊಂಗಳಂ ತುಡುಗೆಯುಂ ವಸ್ತ್ರಂಗಳಂ ಪೂಣ್ದು ಸಿ ॥
ದ್ಧರಸಂ ಸಿದ್ಧಿಸಿದಂತೆ ಕಲ್ಪತರು ಕೈವಂದಂತೆ ಭೂವಲ್ಲಭಂ ।
ಧರೆಗೆಲ್ಲಂ ಪಿರಿದೀವ ದಾನಗುಣದಿಂ ನಿಚ್ಚಂ ವಸಂತೋತ್ಸವಂ ॥೫॥

(ಮಲ್ಲಿನಾಥಪುರಾಣಂ.)

---

‡ ಟೀಕು—೧. ಮಹೇಂದ್ರಜಾಲ—ಹೇಗೆ?

೫. ತೊವಲ್ತೊಡೆ—ಚಿಗುರು, ಹೂವು, ಕಾಯಿ ಬಿಟ್ಟರೆ. ಎಗ್ಗರ—ಹೆಡ್ಡರು. ಪೂಣ್ದು—ಪ್ರತಿಜ್ಞೆಮಾಡಿ; ಇದು ಈವ ಎಂಬ ಕ್ರಿಯೆಯಲ್ಲಿ ಅನ್ವಯಿಸುತ್ತದೆ.

(7) ನಂದನನೊಸಗೆಯುಮಾಮಕ ।
ರಂದಕನೆಳಸಿರದೆ ಬಿಟ್ಟು ಪೋದೊಂದಳಲುಂ ॥
ಕುಂದದೊಡನಲೆಯೆ ಸತಿ ಕಾ ।
ಳಿಂದಿಯು ಸುರನದಿಯು ಕೂಡಲಂ ಪೋಲ್ತಿರ್ದಳ್ ॥

(ಕವಿಕುಂಜರಲೀಲಾವತಿ)

ಪದ್ಯಾರ್ಥವು ಸ್ಪಷ್ಟ.

ಸಂತೋಷಕ್ಕೆ ಶುಕ್ಲತ್ವವನ್ನೂ, ದುಃಖಕ್ಕೆ ಕಾರ್ಷ್ಣ್ಯವನ್ನೂ ಕೊಟ್ಟು ವರ್ಣಿಸುವರೆಂಬ ಕವಿಸಮಯ ಜ್ಞಾನವಿಲ್ಲದಿದ್ದರೆ, ಇಲ್ಲಿ ಕವಿಯ ಆಶಯವು ಗೊತ್ತಾಗುವುದಿಲ್ಲ; ಉಪಮಾನದಲ್ಲಿ ಔಚಿತ್ಯವು ಸ್ಫುರಿಸುವುದಿಲ್ಲ; ಕವಿವಾಕ್ಯವು ಉನ್ಮತ್ತಪ್ರಲಾಪವೋ ಎಂಬ ಶಂಕೆಯೂ ಹುಟ್ಟುವುದರಲ್ಲಿ ಸಂದೇಹವಿಲ್ಲ. ಏಕಕಾಲದಲ್ಲಿ ಒಂದು ಕಡೆ ದುಃಖವೂ, ಒಂದುಕಡೆ ಸಂತೋಷವೂ ಕೂಡಿದ್ದರೂ ಅವು ಬೇರೆಬೇರೆಯೇ ಕಾಣಿಸಿಕೊಳ್ಳುತ್ತಿದ್ದುವೆಂಬ ಅಭಿಪ್ರಾಯವನ್ನು ತಿಳಿಸಲು ಗಂಗಾಯಮುನಾ ಸಂಗಮದ ದೃಷ್ಟಾಂತವನ್ನು ಬಿಟ್ಟರೆ ಬೇರೆ ದೃಷ್ಟಾಂತವೇ ಇಲ್ಲವೆಂದು ನಿಸ್ಸಂದೇಹವಾಗಿ ಹೇಳಬಹುದು. ಹೇಗೆ? ಗಂಗಾಜಲವು ಬಿಳುಪು, ಯಮುನಾಜಲವು ಕಪ್ಪು, ಈ ಯೆರಡು ನದಿಗಳು ಸಂಗಮವಾದ ಮೇಲೆಯೂ ಬಹುದೂರದ ವರೆಗೆ ಒಂದುಕಡೆ ಕಪ್ಪಗೂ ಒಂದುಕಡೆ ಬೆಳ್ಳಗೂ ಪ್ರವಾಹದಲ್ಲಿ ಕಾಣುತ್ತವೆಯಂತೆ. ಹೀಗಿರಲು ಕವಿವಾಕ್ಯದಲ್ಲಿ ಲೋಕಪರಿಚಯವು ಹೇಗೆ ಪರಿಮಳಿಸಿದೆ ನೋಡಿರಿ !

(8) ನೀರಂ ಗಡ ನೀಂ ನಳಧಾ ।
ತ್ರೀರಮಣನೆ ನಿನ್ನ ಪಾಲ್ಗಡಾ ಭೈಮಿ ವಲಂ ॥
ನೀರಕ್ಷೀರವಿಭೇದಕ ।
ನೀರಾಜಮರಾಳನೊಂದಿಸಿತ್ತಿದು ಚಿತ್ರಂ ॥

(ದಮಯಂತೀಸ್ವಯಂವರಂ).

ಈ ಪದ್ಯದಲ್ಲಿ, ಎಲೈ ನಳಧಾತ್ರೀರಮಣನೆ, ನೀಂ, ನೀರಂ ಗಡ-ನೀರನಲ್ಲವೆ ಪ್ರಿಯನಲ್ಲವೆ? ಭೈಮಿಯು—ಭೀಮಪುತ್ರಿಯಾದ ದಮಯಂತಿಯು, ನಿನ್ನ ಪಾಲ್ಗಡಾ— "ಅರ್ಧಂ ಭಾರ್ಯಾ ಮನುಷ್ಯಸ್ಯ" ಎಂಬಂತೆ ನಿನ್ನ ಭಾಗವಲ್ಲವೆ? ಹೀಗಿರಲು ನೀನೆಂಬ ನೀರನ್ನೂ, ಪಾಲ್ ಆದ ಎಂದರೆ ಹಾಲಾದ ದಮಯಂತಿಯನ್ನೂ, ನೀರಕ್ಷೀರವಿಭೇದಕನಾದ-ಎಂದರೆ, ಹಾಲೂ ನೀರೂ ಸೇರಿದ್ದರೆ ಅವುಗಳನ್ನು ಬೇರೆಬೇರೆ

ಮಾಡುವ ಅಥವಾ ಹಾಲನ್ನೂ ನೀರನ್ನೂ ಸೇರಗೊಡಿಸದ, ಈ ರಾಜಹಂಸವು ನಿಮ್ಮಿಬ್ಬರನ್ನು, ಒಂದಿಸಿತ್ತು-ಸೇರಿಸಿತೆಂಬುದು ಆಶ್ಚರ್ಯವೇ ಸರಿ. ಹಂಸದ ಸ್ವಭಾವವು ಹಾಲನ್ನೂ ನೀರನ್ನೂ ಬೇರೆ ಮಾಡುವುದೇ, ಆದರೂ ಅದು ಈಗ ನೀರನ್ನೂ ಹಾಲನ್ನೂ ಸೇರಿಸಿತೆಂದರೆ ಆಶ್ಚರ್ಯವಿಲ್ಲವೆ?-ಎಂದು ಕವಿ ನಿರೂಪಿಸುತ್ತಾನೆ.

ಏಕನಾಳಾವಲಂಬಿಫಲದ್ವಯ ನ್ಯಾಯದಿಂದ, 'ನೀರ' ಶಬ್ದವಾಚ್ಯಗಳಾದ ನೀರಿಗೂ ಪ್ರಿಯನಿಗೂ, 'ಪಾಲ' ಶಬ್ದವಾಚ್ಯಗಳಾದ ದಮಯಂತಿಗೂ ಹಾಲಿಗೂ, ಅಭೇದವನ್ನು ಕಲ್ಪಿಸಿ, ಹಂಸವು ಜಲಮಿಶ್ರಿತವಾದ ಹಾಲಿನಲ್ಲಿ ಹಾಲನ್ನು ಮಾತ್ರವೇ ಸ್ವೀಕರಿಸಿ ನೀರನ್ನು ಬಿಡುತ್ತದೆಯೆಂಬ ಕವಿಸಮಯವನ್ನು "ಇದು ಚಿತ್ರಂ" ಎಂದು ಹೇಳುವಷ್ಟು ಆಹ್ಲಾದಕರವಾಗಿ ತಿರಿಗಿಸಿರುವುದು ಸಹೃದಯರ ಹೃದಯಕ್ಕೆ ತೃಪ್ತಿಕರವಾಗದೆ ಇರದು.

(9) ಗಿರಿಜೆ ಶಶಿವದನೆ ಕೊಳನಂ।
ಭರದಿಂ ಪುಗೆ ನೆಯ್ದಿಲೆಯ್ದಿದುವು ವಿಕಸನಮಂ ॥
ವಿರಹಮನಾಂತುವು ಕೋಕಂ।
ಸರಸಿರುಹಂ ಮುಗಿದುವರರೆ ಪಗಲೊಳ್ ಚಿತ್ರಂ ॥

(ಗಿರಿಜಾಕಲ್ಯಾಣಂ.)

ಪದ್ಯಾರ್ಥವು ಸ್ಪಷ್ಟ.

ಚಂದ್ರೋದಯವಾದರೆ ನೆಯ್ದಿಲು ವಿಕಾಸವನ್ನು ಹೊಂದುತ್ತದೆ, ಕಮಲವು ಮುಕುಳಿತವಾಗುತ್ತದೆ, ಚಕ್ರವಾಕ ದಂಪತಿಗಳಿಗೆ ವಿರಹವುಂಟಾಗುತ್ತದೆ ಎಂದು ಕವಿಗಳಲ್ಲಿ ಸಂಪ್ರದಾಯಸಿದ್ಧವಾಗಿ ಬಂದಿರುವ ಸಂಕೇತವು. ಈ ಸಂಪ್ರದಾಯವನ್ನು ಅವಲಂಬಿಸಿ, ಕವಿಯು ಒಂದು ಕಾರಣದಿಂದ ಕಾರ್ಯದ್ವಯೋತ್ಪತ್ತಿಯನ್ನು ಹೇಳುತ್ತಾನೆ. ಇಲ್ಲಿ ಕವಿಯು ಗಿರಿಜೆಯ ಸೌಂದರ್ಯಾತಿಶಯವನ್ನೂ, ಆಕೆಯ ಸರಃಪ್ರವೇಶವನ್ನೂ ಏಕದಾ ವರ್ಣಿಸುತ್ತಾನೆ. ಈಕೆಯ ಮುಖವು ನಿಶಾಕರನಾದ ಚಂದ್ರನಿಗಿಂತಲೂ ಹೆಚ್ಚಾದ ಸೌಂದರ್ಯವುಳ್ಳದು ಎಂಬ ತನ್ನ ಅಂತರಂಗದ ವ್ಯಂಗ್ಯಾಭಿಪ್ರಾಯವನ್ನು, ಆ ಚಂದ್ರನಿಂದ ಹಗಲಲ್ಲಿ ಸಾಧ್ಯವಾಗದ ಕಾರ್ಯಗಳನ್ನು ಈಕೆಯ ಮುಖಚಂದ್ರನು ಮಾಡಿತು ಎಂದು ವರ್ಣಿಸಿ ತೋರಿಸುತ್ತಾನೆ. ಈ ವ್ಯಂಗ್ಯಾಭಿಪ್ರಾಯವು ವ್ಯಂಜಿತವಾಗುವುದಕ್ಕಾಗಿ "ಶಶಿವದನೆ" "ಪಗಲೊಳ್ ಚಿತ್ರಂ" ಎಂಬ ಪದಗಳನ್ನು ಪ್ರಯೋಗಿಸುತ್ತಾನೆ. ಅಲ್ಲದೆ ಸರಃಪ್ರವೇಶವು ಮನಸ್ಸಿಗೆ

ಇಂಪು ಕೊಡಲಿ ಎಂದು ನೆಯ್ದಿಲೆಯ ವಿಕಾಸವನ್ನೂ, ಕಮಲದ ಮುಕುಳನವನ್ನೂ, ಕೋಕವಿರಹವನ್ನೂ ಸರಃಪ್ರವೇಶ ಕಾಲದಲ್ಲಿ ವರ್ಣಿಸಿರುವುದು.

(10) ನೆರೆದ ತಿಮಿರಂ ನಿಶಾಕರ।
ಕರಕುಂತಾಹತಿಗೆ ಬೆರ್ಚಿ ಮೂರ್ಛೆಯ ನೆವದಿಂ॥
ಪರೆದೋಡಿ ಪೊಕ್ಕು ಸಲೆ ಮೈ।
ಗರೆದುದು ಬಿರಯಿಸುವ ಜಕ್ಕವಕ್ಕಿಗಳೆರ್ದೆಯೊಳ್॥
(ಚಂದ್ರಪ್ರಭಪುರಾಣಂ.)

ಇಲ್ಲಿ ಕವಿಯು ಚಂದ್ರೋದಯವನ್ನು ವರ್ಣಿಸುತ್ತಾನೆ.

ಈ ವರ್ಣನೆಯು, ಚಂದ್ರಿಕೆಯಲ್ಲಿ ಚಕ್ರವಾಕದಂಪತಿಗಳಿಗೆ ವಿರಹವುಂಟಾಗುವುದು, ದುಃಖಕ್ಕೆ ಕಪ್ಪುಬಣ್ಣ ಹೇಳುವುದು ಎಂಬ ಕವಿಸಮಯದ ಆಧಾರದ ಮೇಲೆ ಹುಟ್ಟಿಇದೆ. ಈ ಕವಿಸಮಯದಿಂದ ಓದಿದವರ ಮನಸ್ಸಿನಲ್ಲಿ ಆಹ್ಲಾದವೂ ವಿಸ್ಮಯವೂ ತಲೆದೋರುವಂತೆ ಚಂದ್ರೋದಯವನ್ನು ವರ್ಣಿಸಿ ಕವಿಯು ತನ್ನ ಪ್ರತಿಭೆಯನ್ನು ತೋರಿಸಿಕೊಳ್ಳುತ್ತಾನೆ.

ಹೇಗೆಂದರೆ :—

ಕವಿಯು ಅಂಧಕಾರವನ್ನು ಒಬ್ಬ ಪುರುಷನಂತೆ ನಿರೂಪಿಸಿ; ಆ ಪುರುಷನು ನಿಶಾಕರನಾದ ಚಂದ್ರನ ಕರಕುಂತಾಯುಧಾಹತಿಗೆ, ಮೂರ್ಛೆಯ ನೆವದಿಂಬೆರ್ಚಿ—ಎಲ್ಲಿ ತಾನು ಮೂರ್ಛೆಬೀಳುವನೋ ಎಂದು ಹೆದರಿಕೊಂಡು ಅಥವಾ ಭಯಾಶಂಕೆ ಮಾಡಿ; ಭೀತನಾದವನು ಅಪಾಯ ಬಾರದ ಸ್ಥಲದಲ್ಲಿ ಓಡಿಹೋಗಿ ಮರೆಯಿಸಿಕೊಳ್ಳುವಂತೆ, ಕರಕುಂತವು ಹೊಗಲಾರದ, ಬಿರಯಿಸುವ—ವಿರಹದುಃಖವು ಮೂಡಿದ, ಜಕ್ಕವಕ್ಕಿಗಳ ಎದೆಯಲ್ಲಿ; ಪರೆದು, ಓಡಿ, ಪೊಕ್ಕು, ಸಲೆ, ಮೈಗರೆದುದು—ಮರೆಯಿಸಿಕೊಂಡನು, ಎಂದು ಉತ್ಪ್ರೇಕ್ಷಿಸಿರುವನು. ಈ ಉತ್ಪ್ರೇಕ್ಷೆಯಲ್ಲಿ ಔಚಿತ್ಯವು ಚೆನ್ನಾಗಿ ಕಂಡುಬರುವುದು. ಹೇಗೆಂದರೆ? ದುಃಖವುಂಟಾದಾಗ ಹೃದಯವು ಅಂಧಕಾರಾವೃತವಾಗುವುದಷ್ಟೆ. ಚಕ್ರವಾಕಕ್ಕೆ ಚಂದ್ರೋದಯದಲ್ಲಿ ದುಃಖ ಉಂಟಾಗುವುದರಿಂದ, ಅದರ ಹೃದಯವು ಅಂಧಕಾರಾವೃತವಾಗುವುದು ಸಹಜ. ಚಂದ್ರೋದಯ ಕಾಲದಲ್ಲಿಯಾದರೊ—

ಪಾರದದಿಂದೆ ಲೇಪಿಸಿದುದೋ ದೆಸೆ ನೀರದಮಾರ್ಗಮೆಯ್ದೆ ಕ ।
ರ್ಪೂರಪರಾಗದಿಂದಿಡಿಯೆ ತುಂಬಿದುದೋ ಸ್ಫಟಿಕೋಪಲಂಗಳಿಂ ॥
ಧಾರಿಣಿ ಕೂಡೆ ಹಪ್ಪಳಿಗೆಯೊತ್ತಿದುದೋ ಸಲಿಲಾಶಯಂ ಪಯಃ ।
ಪೂರಮನಾಂತುದೋ ದಿಟಕೆ ತಾನೆನಿಸಿತ್ತಮೃತಾಂಶುರಶ್ಮಿಯಿಂ ॥
(ಚಂದ್ರಪ್ರಭಾಪುರಾಣಂ.)

ಜಗಮಿದು ಮೌಕ್ತಿಕದಿಂದಂ ।
ತೆಗೆದುದೊ ದಂತದೊಳೆ ಸಮೆದುದೋ ಪಾಲ್ಗಡಲಿಂ ॥
ದೊಗೆದುದೊ ಪೇಳೆಂಬಿನೆಗಂ ।
ಸೊಗಯಿಸಿದುದು ಸಾಂದ್ರಚಂದ್ರಿಕಾವಿಸ್ತಾರಂ ॥
(ದಮಯಂತೀ ಸ್ವಯಂವರಂ.)

ಇಂಗಡಲೆ ಕಡಲ್ಗಳ್ ಸೌ ।
ಧಂಗಳೆ ಸದನಂಗಳಿಂದುಕಾಂತವೆ ಕಲ್ಗಳ್ ॥
ಗಂಗೆಯೆ ತೊರೆಗಳೆನಲ್ ಬೆ ।
ಳ್ಗಂಗೆಡೆದುದು ಕುಮುದವನದ ಸಿರಿ ಬೆಳ್ದಿಂಗಳ್ ॥
(ಪಂಪರಾಮಾಯಣಂ.)

ಕುಸುಮಂ ಗಂಧಾನುಮೇಯಂ ಗಮನಕಮನಹಂಸಾಳಿ ಶಬ್ದಾನುಮೇಯಂ ।
ರಸನಾಸ್ವಾದಾನುಮೇಯಂ ಮಧು ಮಳಯರುಹಕ್ಷೌಮಕರ್ಪೂರಮುಕ್ತಾ ॥
ವಿಸರಂ ಸ್ಪರ್ಶಾನುಮೇಯಂ ದಿಟಮೆನೆ ಘಟಿತಂಚಿತ್ತ ಬೆಳ್ದಿಂಗಳಿಂ ತು ।
ಳ್ದಿಸೆ ಲೋಕಂ ಚಂದ್ರಕಾಂತೋಪಳದ ಮಯಣದಿಂ ಮಾಡಿದಂತಿರ್ದುದಾಗಳ್ ॥
(ಅನಂತನಾಥಪುರಾಣಂ.)

ಈ ಪ್ರಕಾರ ಜಗತ್ತಿನಲ್ಲಿ ಎಲ್ಲಿಯೂ ಅಂಧಕಾರಕ್ಕೆ ನಿಲ್ಲುವುದಕ್ಕೆ ಸ್ವಲ್ಪವೂ ಸ್ಥಲ ಸಿಕ್ಕುವುದಕ್ಕಿಲ್ಲವೆಂದು ಕವಿಗಳು ವರ್ಣಿಸುವರು. ಅಂಥ ಬೆಳದಿಂಗಳಲ್ಲಿ ಚಕ್ರವಾಕಗಳ ವಿರಹತಪ್ತವಾದ ಹೃದಯದ ಕೋಣೆಯನ್ನು ಬಿಟ್ಟರೆ ಅಂಧಕಾರಕ್ಕೆ ಮರೆಯಿಸಿಕೊಳ್ಳಲು ಬೇರೆ ಸ್ಥಲವೆಲ್ಲಿ ಸಿಕ್ಕುವುದು? ಆದುದರಿಂದಲೇ ಅಲ್ಲಿ ಮರೆಯಿಸಿಕೊಂಡಿತೆಂದು ವರ್ಣಿಸುವನು. ಹೀಗಿರಲು "ಬಿರಯಿಸುವ" "ಮೈಗರೆದುದು" ಎಂಬ ಪದಗಳ ಪ್ರಯೋಗದ ಔಚಿತ್ಯವು ಎಷ್ಟರಮಟ್ಟಿಗಿರುವುದು. ಮತ್ತು "ಮೂರ್ಛೆಯ ನೆವದಿಂ ಪರೆದು ಓಡಿ ಪೊಕ್ಕು ಸಲೆ ಮೈಗರೆದುದು" ಎಂಬುದರಲ್ಲಿ ಭೀತನಾದವನ ವ್ಯಾಪಾರವನ್ನು ಕವಿಯು ಚೆನ್ನಾಗಿ ಸೂಚಿಸುವನು. ಮತ್ತು,

"ನೊಂದ ಜನಂಗಳಂ ಕುಲಜನಂಗಳೆ ಸಂತೈಸಲ್ಕೆ ವೇಳ್ಕುಂ" ಎಂಬಂತೆ ಸಜಾತಿಯನಾದವನಲ್ಲಿ ಆಶ್ರಯವು ನಿರಪಾಯವಾದುದೆಂದು ಆಲೋಚಿಸಿ ತಿಮಿರನು ತನ್ನಂತೆ ಕಪ್ಪಾದ ದುಃಖಿಸುವ ಜಕ್ಕವಕ್ಕಿಗಳ ಹೃದಯವನ್ನು ಸೇರಿದನು, ಅಥವಾ ಕುಂತಾಹತಿಯು ಬೀಳುವುದಕ್ಕೆ ಮುಂಚೆ ತಾನು ಓಡಿಹೋಗಿ ಮರೆಯಿಸಿಕೊಳ್ಳದಿದ್ದರೆ ಇದ್ದಸ್ಥಲದಲ್ಲಿಯೇ ಮೂರ್ಛೆಹೋಗುವೆನು, ಆದರಿಂದ ಶತ್ರುವಾದ ಚಂದ್ರನಿಗೆ ಕೊಲ್ಲುವುದರಲ್ಲಿ ಸೌಕರ್ಯವನ್ನು ಹೆಚ್ಚಿಸಿದಂತಾಗುವುದು; ಆದುದರಿಂದ ಪಲಾಯನವು ಹೀನಾಯವಾದರೂ ಈ ಸಂದರ್ಭದಲ್ಲಿ ಯುಕ್ತವು, ಎಂದು ತಿಳಿದು ತಿಮಿರನು ಓಡಿಹೋಗಿ ಮರೆಯಿಸಿಕೊಂಡನು—ಎಂಬ ತನ್ನ ಅಂತರಂಗಾಶಯವನ್ನು ಕವಿಯು ವ್ಯಂಗ್ಯಮರ್ಯಾದೆಯಲ್ಲಿ ತೋರಿಸಿರುವನು.

(11) ಇದಿರೊಳ್ ನಿಂದಿರ್ದೊಡಂಗಕ್ಕಡರೆ ತೊಡೆದ ಬಾವನ್ನದಂತಾವಗಂ ನೋ।
ಡಿದ ಕಣ್ಗಳ್ಗಿಟ್ಟ ತೆಳ್ಗಪ್ಪುರದ ಸಲಗೆಯಂತಳ್ಕರಿಂ ಕೂಡಿ ಕೊಂಡಾ ॥
ಡಿದ ಬಾಯ್ಗೋರಂದದಿಂ ತೀವಿದ ತನಿಗೆನೆವಾಲಂತೆ ನೇರ್ಪಟ್ಟ ನಿನ್ನ ।
ಗ್ಗದ ದೇಹಚ್ಛಾಯೆಯಿಂ ತಣ್ಣನೆ ತಣಿಯದೆ ಲೋಕತ್ರಯಂ ಚಂದ್ರನಾಥಾ ॥

(ಗುಣವರ್ಮನ ಚಂದ್ರನಾಥಾಷ್ಟಕ.)

ಇಲ್ಲಿ, ಕವಿಯು ಚಂದ್ರನಾಥನಿಗೆ ಚಂದ್ರತ್ವವನ್ನು ಆರೋಪಿಸಿ, ಆತನ ದೇಹಚ್ಛಾಯೆಗೆ ಜ್ಯೋತ್ಸ್ನಾತ್ವವನ್ನಂಗೀಕರಿಸಿ, ಆ ಜ್ಯೋತ್ಸ್ನೆಗೆ ಮೂರ್ತದ್ರವ್ಯತ್ವವರ್ಣನಾರೂಪವಾದ ಕವಿಸಮಯವನ್ನು ಅವಲಂಬಿಸಿ, ಚಂದ್ರನಾಥನನ್ನು ವರ್ಣಿಸುತ್ತಾನೆ. ಚಂದ್ರನಾಥನ ದರ್ಶನದಿಂದ ಸರ್ವೇಂದ್ರಿಯಗಳಿಗೆ ತೃಪ್ತಿಯುಂಟಾಗುವುದೆಂಬ ವಿಷಯವನ್ನು ಭಂಗ್ಯಂತರದಿಂದ ಈರೀತಿ ತಿಳಿಸಿರುವುದು ಯಾರ ಹೃದಯವನ್ನು ತಾನೆ ಸೆಳೆಯದೆ ಇರದು?

ಪದ್ಯಾರ್ಥ—ಎಲೈ, ಚಂದ್ರನಾಥನೆ, ನಿನ್ನ ದೇಹಚ್ಛಾಯೆಯು, ಇದಿರಲ್ಲಿ ನಿಂತವರ ಎದೆಯಮೇಲೆ ಚಂದನವನ್ನು ಲೇಪಿಸಿದಹಾಗೆ ಹೃದಯತಾಪವನ್ನು ಆರಿಸುವುದು; ನಿಂತು ದರ್ಶನ ಮಾಡಿದವರ ಕಣ್ಣುಗಳಲ್ಲಿ ಇಟ್ಟ ಕರ್ಪೂರಾಂಜನದಂತೆ ತಂಪನ್ನು ಕೊಡುವುದು; ಅಕ್ಕರೆಯಿಂದ ಕೊಂಡಾಡಿದವರ ಬಾಯಲ್ಲಿ ಧಾರಾಕಾರವಾಗಿ ಸುರಿದ ತನಿಗೆನೆವಾಲಂತೆ ತೃಪ್ತಿಯನ್ನು ಈವುದು; ಹೀಗಿರಲು, ನಿನ್ನ ಅಗ್ಗದ ದೇಹಚ್ಛಾಯೆಯಿಂದ ಲೋಕತ್ರಯವು ತಣ್ಣನೆ ತಣಿವುದೆಂಬುದರಲ್ಲಿ ಏನತಿಶಯ? ಎಂದು ಪದ್ಯಾಭಿಪ್ರಾಯ.

ಇಲ್ಲಿ ಪದಸಮುಭಿಹಾರದಿಂದ, ಬೇಸಗೆಯ ಬಿಸಲಿನಲ್ಲಿ ಬಳಲಿದವನಿಗೆ ಚಂದನ, ಕರ್ಪೂರಾಂಜನ, ತನಿಗೆನೆವಾಲು ಹೇಗೆ ತಾಪನಿವಾರಕವೋ, ಹಾಗೆ ಸಂಸಾರ ತಾಪ ತಪ್ತನಿಗೆ ಚಂದ್ರನಾಥಸೇವೆಯಲ್ಲದೆ ಮತ್ತಾವ ನಿವಾರಣವೂ ಇಲ್ಲವೆಂಬ ಕವಿ ಹೃದಯವೂ, ದ್ರವ್ಯವೆಂದು ಕವಿಸಂಕೇತ ನಿರ್ಣೀತವಾದ ಜ್ಯೋತ್ಸ್ನೆಗೆ ಸಂದರ್ಭಕ್ಕೆ ಉತ್ತೇಜಕವಾಗುವಂತೆ ಚೆಂವನ್ನ, ತಿಳ್ಗಪ್ಪುರ, ತನಿಗೆನೆವಾಲು ಎಂಬ ಪರಿಣಾಮ ವನ್ನು ಹೇಳಿರುವುದರಲ್ಲಿ ಪದೌಚಿತ್ಯವೂ ತಿಳಿದು ಬರುವುವು. ಕವಿಯು ಅತಿಪ್ರಸಿದ್ಧ ವಾದ ಜ್ಯೋತ್ಸ್ನೆಗೆ ದ್ರವ್ಯತ್ವಾರೋಪರೂಪವಾದ ಕವಿಸಮಯುವನ್ನೂ, ಸತ್ವ ಗುಣವೇ ಮೂರ್ತಿಗೊಂಡಂತಿರುವ ಚಂದ್ರನಾಥನ ಚಂದ್ರನಾಥನೆಂಬ ಹೆಸರಿನಲ್ಲಿ ರುವ ಚಂದ್ರಶಬ್ದವನ್ನೂ ಮನಸ್ಸಿಗೆ ತಂದುಕೊಂಡು, ಸಂಸಾರತಾಪತಪ್ತನಾದವ ನಿಗೆ ಚಂದ್ರನಾಥನ ಸೇವೆಯಲ್ಲದೆ ಸಂತಾಪನಿವಾರಕವಾದ ಗತ್ಯಂತರವಿಲ್ಲವೆಂಬ ತನ್ನ ಗೂಢಾಭಿಪ್ರಾಯವನ್ನು ಪಾಠಕರ ಮನಸ್ಸಿನಲ್ಲಿ ಸ್ಫುರಿಸಿ, ಅದು ಅಲ್ಲಿ ಊರು ವಂತೆ ಎಷ್ಟು ಚೆನ್ನಾಗಿ ಹೇಳಿರುವನು, ನೋಡಿದಿರಾ!

(12) ಹರಿಣನುಮಂ ಪುತ್ತಂ ವಟ।
ತರುವಂ ತೊರೆದಕ್ಷಿಫಣಿಫಲಂಗಳನಾಂತಂ ॥
ತಿರೆ ನೇತ್ರಭ್ರೂಬಿಂಬಾ।
ಧರಂಗಳಿಂದವಳ ವದನವಿಧು ಕರಮೆಸೆಗುಂ ॥

(ರಾಜಶೇಖರವಿಲಾಸಂ)

ಈ ಪದ್ಯದಲ್ಲಿ ಕವಿಯು ಒಬ್ಬ ನಾಯಿಕೆಯ ಮುಖವನ್ನು ಚಂದ್ರದೃಷ್ಟಾಂತ ದಿಂದ ವರ್ಣಿಸುತ್ತಾನೆ.

ಚಂದ್ರಕಳಂಕವರ್ಣನಾವಿಷಯಕವಾದ ಕವಿಸಂಪ್ರದಾಯವು ತಿಳಿಯದಿದ್ದರೆ, ಪದ್ಯಾಭಿಪ್ರಾಯವು ಸ್ಪಷ್ಟವಾಗುವುದಿಲ್ಲ. ಕವಿಗಳು ಚಂದ್ರನಲ್ಲಿರುವ ಕಳಂಕ ವನ್ನು ಜಿಂಕೆ, ಹುತ್ತು, ಆಲದಮರ, ಶಶ, ಇತ್ಯಾದಿಗಳಿಗೆ ಹೋಲಿಸಿ ಹೇಳುವರು. ಈ ಸಮಯವು—

ಮೃಗಲಕ್ಷ್ಮಂ ಸಂಜೆಗೆಂಪಿಂ ಪುದಿದುದಯಿಸಿ ಸರ್ವೋರ್ವಿಗಾನಂದಮಂ ವಾ।
ರ್ಧಿಗೆ ಪೆರ್ಚಂ ಮಾಡಿ ಮುನ್ನಂ ಬಳಿಕೆರ್ದೆಗೆರೆಯಂ ತೋರೆಯುಂ ಕಂಡು ಲೋಕಂ॥
ಬಗೆಗೊಂಡಾಲಂ ಮೊಲಂ ಪುತ್ತೆರಲೆಯೆನುತದಂ ಕೂರ್ತು ಕೈಗೆಯ್ಯೊಳಿನ್ನುಂ।
ಪೊಗಳ್ದಪ್ಪರ್ ಭಾಪು ಲೋಕಕ್ಕುಪಕರಿಸುವನೊಳ್ ಗೋಷಮುಂ ಸ್ತುತ್ಯಮಲ್ತೇ॥

(ಕವಿಕುಂಜರಲೀಲಾವತಿ)

ಎಂಬ ಪದ್ಯದಿಂದ ವ್ಯಕ್ತವಾಗುವುದು. ಈ ಸಮಯಕ್ಕೆ "ಲೋಕವಿಷಯ ಸ್ಥಿತಿ" ಯಾದ, "ಆಗಮಾರ್ಥ" ನಿರೂಪಿತವಾದ ಯಾವ ಗಮಕವನ್ನೂ ಹೇಳುವು ದಕ್ಕಾಗುವುದಿಲ್ಲ. ಆದರೂ ಕವಿಗಳು ಇದನ್ನು ಒಪ್ಪಿಕೊಂಡಿರುವರು. ಇನ್ನು ಮೇಲೆ ಪದ್ಯಾರ್ಥವನ್ನು ನೋಡೋಣ.

ನಾಯಿಕೆಯ ವದನವಿಧು = ಮುಖವೆಂಬ ಚಂದ್ರನು, ಪ್ರಸಿದ್ಧನಾದ ಲೋಕಾ ಹ್ಲಾದಕನಾಗಿ ಗಗನದಲ್ಲಿ ಪ್ರಕಾಶಿಸುವ ಆ ಚಂದ್ರನಲ್ಲಿರುವ ಹರಿಣನುಮಂ = ಜಿಂಕೆಯನ್ನೂ, ಹತ್ತನ್ನೂ, ವಟತರುವನ್ನೂ ತೊರೆದು = ನಿಸ್ಸಾರವೆಂದೋ, ಬಹು ದೊಡ್ಡದೆಂದೋ, ಅಥವಾ ತನ್ನ ಸೌಂದರ್ಯಕ್ಕೆ ಕುಂದಕವನ್ನು ಉಂಟುಮಾವುದೆಂ ದೋ ನಿರಾಕರಿಸಿ, ಅವಕ್ಕೆ ಪ್ರತಿಯಾಗಿ ಅವುಗಳಲ್ಲಿರುವ ಅಕ್ಷಿ = ಜಿಂಕೆಯ ಅವಯ ವಗಳಲ್ಲಿ ಅತ್ಯಂತ ಮನೋಹರವಾದ ಅಂಗವಾಗಿಯೂ ಲೋಕದಲ್ಲಿ ವಿಸ್ತಾರಕ್ಕೂ ಚಾಂಚಲ್ಯಕ್ಕೂ ಸದೃಶೋಪಮಾನತ್ವೇನ ಗಣಿಸಲ್ಪಟ್ಟಿರುವ ಅದರ ಕಣ್ಣನ್ನೂ, ಫಣಿ = ಹುತ್ತಿನಲ್ಲಿ ವಾಸಮಾಡುವುದಾಗಿಯೂ ಸರಳವಾಗಿಯೂ ವಕ್ರವಾಗಿಯೂ ಕಪ್ಪಾಗಿಯೂ ಹುಬ್ಬಿಗೆ ಉಚಿತೋಪಮಾನವೆಂದು ಕವಿಲೋಕ ನಿರ್ಣೀತವಾದ ಕೃಷ್ಣಸರ್ಪವನ್ನೂ, ಮತ್ತು ಫಲಂ = ದೊಡ್ಡದಾಗಿ ಬೆಳೆದು ಬಹುಸ್ಥಲವನ್ನು ಆಕ್ರ ಮಿಸುವ ಆಲದಮರಕ್ಕೂ ಶೋಭಾವಹವಾಗಿ, ಬಣ್ಣದಿಂದಲೂ ಆಕಾರದಿಂದಲೂ ನೋಡಿದವರ ಕಣ್ಣನ್ನೂ ಮನಸ್ಸನ್ನೂ ಬಂದಿವಿಡಿವ, ಇದನ್ನು ಬಿಟ್ಟರೆ ಅಧರಕ್ಕೆ ಬೇರೆ ಉಚಿತೋಪಮಾನ ಕಾಣಬಾರದ ಆಲದ ,ಹಣ್ಣನ್ನೂ, ಅಂತಂತಿರೆ = ಧರಿಸಿಕೊಂಡ ನೋ ಎಂಬ ಸಂದೇಹವನ್ನು ಹುಟ್ಟಿಸುವಂತೆ, ನೇತ್ರಭ್ರೂಬಿಂಬಾಧರಂಗಳಿಂದ ಕೂಡಿ, ಎಸೆಗುಂ = ಪ್ರಕಾಶಿಸುತ್ತಾನೆ—ಎಂದು ಪದ್ಯಾರ್ಥವು.

ಒಂದು ವಸ್ತುವನ್ನು ತತ್ಸದೃಶವಾದ ಮತ್ತೊಂದು ವಸ್ತುವಿನೊಡನೆ ಹೋಲಿ ಸುವುದರಲ್ಲಿ ಆಹ್ಲಾದವೂ ಯಥೋಚಿತವಾಗಿ ಸ್ವರೂಪಜ್ಞಾನವೂ ಹೆಚ್ಚುವುದು. ಸ್ವತಸ್ಸಂತೋಷಜನಕವಾದ ವಸ್ತುವಿನೊಡನೆ ವಸ್ತ್ವಂತರವನ್ನು ಸಮವೆಂದು ಹೇಳಿ ದರೆ ತತ್ಸಾಹಚರ್ಯದಿಂದ ಇದೂ ಸಂತೋಷಜನಕವಾಗುವುದನ್ನು ಬಹುಕಡೆ ಅನುಭ ವಿಸಿದ್ದೇವೆ. ಇದೇ ಮುಖಕ್ಕೆ ಚಂದ್ರನ ಸಾಮ್ಯವನ್ನು ಕೊಡುವುದರಲ್ಲಿ ಕಾರಣವು. ಚಂದ್ರನಲ್ಲಿರುವ ಅಥವಾ ಚಂದ್ರನಿಗೆ ಕುರುಪಾದ ಗುಣಗಳೆಲ್ಲವೂ ಮುಖದಲ್ಲಿ ಇಲ್ಲದಿದ್ದರೆ, ಅದಕ್ಕೂ ಇದಕ್ಕೂ ಹೇಗೆ ಸಾಮ್ಯವು ಸಿದ್ಧಿಸುವುದು? ಆದುದರಿಂದಲೇ ಕಳಂಕರಹಿತನಾದ ಚಂದ್ರನೆಂದು ಮುಖವನ್ನು ನಿರೂಪಿಸಲಿಲ್ಲ. ಹಾಗೆ ವರ್ಣಿ

ಸುವುದಕ್ಕಿಂತ ಈ ರೀತಿಯಾದ ವರ್ಣನೆಯಲ್ಲಿ ರಸವು ಹೆಚ್ಚುವುದು. ಆದುದರಿಂದ ಆ ಕಳಂಕ ಸ್ಥಾನದಲ್ಲಿ ಕವಿಸಂಪ್ರದಾಯಸಿದ್ಧವಾದ ಜಿಂಕೆ ಹುತ್ತು ಆಲಗಳಿಗೆ ಸಾರಭೂತವಾದ ಅಕ್ಷಿ ಫಣಿ ಫಲಂಗಳನ್ನು ಇಟ್ಟುಕೊಂಡಿದೆ ಎಂದು ಹೇಳಿ, ಚಂದ್ರತ್ವ ಸಾಮ್ಯ ನಿರೂಪಕ ಧರ್ಮಗಳು ಮುಖಚಂದ್ರನಲ್ಲಿಯೂ ಉಂಟೆಂದು ಹೇಳಿರುವನು.

ನೇತ್ರಕ್ಕೆ ಹರಿಣಲೋಚನವನ್ನೂ ಭ್ರೂವಿಗೆ ಕೃಷ್ಣಸರ್ಪವನ್ನೂ, ಅಧರಕ್ಕೆ ವಟಫಲವನ್ನೂ ಸಾಮಾನ್ಯವಾಗಿ ಕವಿಗಳು ಉಪಮಾನವಾಗಿ ಹೇಳುವರು. ಅವಳ ಮುಖವು ಚಂದ್ರನ ಹಾಗೆಯೂ, ನೇತ್ರವು ಜಿಂಕೆಯ ಕಣ್ಣಿನ ಹಾಗೆಯೂ, ಹುಬ್ಬು ಹಾವಿನಹಾಗೆಯೂ, ತುಟಿಯು ಆಲದ ಹಣ್ಣಿನಹಾಗೆಯೂ ಇವೆ ಎಂದು ಹೇಳದೆ, ಚಂದ್ರನ ಕಳಂಕವನ್ನು ವರ್ಣಿಸುವುದರಲ್ಲಿರುವ ಕವಿಸಮಯವನ್ನು ಈ ರೀತಿಯಲ್ಲಿ ಉಪಯೋಗಿಸಿ ಮುಖವನ್ನು ವರ್ಣಿಸಿರುವುದು ಕವಿಯ ಪ್ರತಿಭಾಶಕ್ತಿಗೆ ಉದಾಹರಣವಾಗಿರುವುದು.

ಚಂದ್ರಕಳಂಕ ವಿಷಯದಲ್ಲಿನ ಕವಿಸಮಯ ಜ್ಞಾನವಿಲ್ಲದಿದ್ದರೆ ಶ್ರೀರಾಮನ ಪಾರ್ಶ್ವದಲ್ಲಿ ತಣ್ಬುಳಿಲ ತಾಣದೊಳ್ ಕುಳಿತಿರ್ದ ಸೀತಾದೇವಿಯನ್ನು ನೋಡಿ ವಿಸ್ಮಿತನಾಗಿ ದಶಾಸ್ಯನು ವರ್ಣಿಸಿದ ವರ್ಣನೆಯ ಸ್ವಾರಸ್ಯವು ತಿಳಿಯುತ್ತಿರಲಿಲ್ಲ. ಅದೇನೆಂದರೆ :—

ಮೃಗಲೋಚನಂಗಳಿರ್ಪುವು ।
ಮೃಗಮೆಲ್ಲಿರ್ದಪುದೊ ವಟಫಲಂ ವಟಮಿಲ್ಲೀ ॥
ಪಗಲುಮೆಸೆವಿಂದುವೆತ್ತಣಿ ।
ನೊಗೆದುದೊ ಪೇಳೆಂದು ನೋಡಿದಂ ನಗೆಮೊಗಮಂ ॥

( ಪಂಪರಾಮಾಯಣಂ )

ಈ ಪದ್ಯದಲ್ಲಿರುವ "ಪಗಲುಮೆಸೆವಿಂದುವೆತ್ತಣಿನೊಗೆದುದೊ" ಎಂದು ಹೇಳಿರುವುದು ಯಾರ ಮನಸ್ಸನ್ನು ತಾನೇ ಅಪಹರಿಸುವುದಿಲ್ಲ!

(13) ಕಳಹಂಸಾಲಸಯಾನೆಯುಂ ಮೃಗಮದಾಮೋದಾಸ್ಯನಿಶ್ವಾಸೆಯುಂ ।
ತಳಿರೇ ತಾವರೇಯೇ ಮದಾಳಿಕುಳಮೇ ಕನ್ನೆಯ್ದಿಲೇ ಮತ್ತಕೋ ॥
ಕಿಳಮೇ ಕಂಡಿರೆ ಪಲ್ಲವಾಧರೆಯನಂಭೋಜಾಸ್ಯೆಯುಂ ಭೃಂಗಕುಂ ।
ತಳೆಯುಂ ಕೈರವನೇತ್ರೆಯುಂ ಪಿಕರವಪ್ರಖ್ಯಾತೆಯುಂ ಸೀತೆಯುಂ ॥

ಕಳರುತಿ ಮತ್ತಕೋಕಿಳಮನೀಕ್ಷಣಮುತ್ಪಲಮಂ ವಿನೀಳಕಮಂ ।
ತಳಮಳಿಮಾಳೆಯುಂ ಕಚಭರಂ ನವಿಲಂ ನಡೆ ಹಂಸೆಯುಂ ತಳಂ ॥
ತಳಿರ್ಗನಾನನಂ ಕಮಳಮಂ ನಳಿತೋಳ್ ಲತೆಯುಂ ಲತಾಂತಕೋ ।
ಮಳೆ ಮರೆಗೊಂಡು ಮೆಯ್ಗರೆದು ಕಾಡುವ ಕಾರಣಮೇನೊ ಜಾನಕೀ ॥
(ಪಂಪರಾಮಾಯಣಂ)

ಇಲ್ಲಿ ಕವಿಯು ವನಾಂತರಗಳಲ್ಲಿ ಸೀತಾದೇವಿಯನ್ನು ಅರಸಿ ಕಾಣದೆ ಉನ್ಮತ್ತನಾಗಿ ರಾಮಚಂದ್ರನು ಈ ರೀತಿಯಲ್ಲಿ ಪ್ರಲಾಪಿಸುತ್ತಾನೆಂದು ವರ್ಣಿಸಿರುವನು. ಇಲ್ಲಿ ಕವಿಯು ಕವಿಸಂಪ್ರದಾಯಸಿದ್ಧವಾದ ಉತ್ತಮ ಸ್ತ್ರೀಯರುಗಳ ಅವಯವಗಳ ವರ್ಣನಾಪ್ರಕಾರವನ್ನು ರಸಪುಷ್ಟೀಕರಣದಲ್ಲಿ ತಿರಿಗಿಸಿ ತನ್ನ ಸಾಮರ್ಥ್ಯವನ್ನು ಚೆನ್ನಾಗಿ ತೋರಿಸಿಕೊಳ್ಳುತ್ತಾನೆ. ಹೇಗೆಂದರೆ:—

ಪದ್ಯಗಳ ಅರ್ಥವು ಸ್ಪಷ್ಟ.

ಪ್ರಥಮಪದ್ಯ—ಇಲ್ಲಿ ಉಪಮಾನಗಳಿಂದ ಸೀತೆಯು ಸೌಂದರ್ಯ ಸೌಕುಮಾರ್ಯಾದಿಗಳ [1] ಪರಾಕಾಷ್ಠೆಯು [2] ವ್ಯಂಜಿತವಾಗುವುದು. ಶ್ರೀರಾಮನು ವನದಲ್ಲಿ ಸಂಚರಿಸುವ ಕಾಡುಜನರು, ಮೃಗಗಳು—ಇವುಗಳನ್ನು ಬಿಟ್ಟು "ತಳಿರೇ ತಾವರೆಯೇ ಮದಾಳಿಕುಳಮೇ" ಎಂದು ಅವುಗಳನ್ನು ಮಾತ್ರವೇ ಸೀತೆಯನ್ನು ಕಂಡಿರೇ ಎಂದು ಕೇಳುವುದರಲ್ಲಿ ಔಚಿತ್ಯವುಂಟು. ಹೇಗೆ? ಸೀತೆಯು ಪಲ್ಲವಾಧರೆಯು; ಅಧರಪಲ್ಲವವೂ ಪಲ್ಲವವೂ ಒಂದೇಕಡೆ ಹುಟ್ಟಿ ಬೆಳೆದಂತಿರುವುವು; ಪಲ್ಲವವನ್ನು ಪಲ್ಲವವಲ್ಲದೆ ಮತ್ತಾವುವೂ ಅಷ್ಟು ಚೆನ್ನಾಗಿ ಗುರುತು ಹಿಡಿಯಲಾರವು. ಹೀಗಿರುವುದರಿಂದ ಪಲ್ಲವಾಧರೆಯಾದ ಸೀತೆಯು ಹೋದ ಸ್ಥಳವನ್ನು ಪಲ್ಲವವನ್ನು ಕೇಳುವುದೇ ಸರಿ. ಇದರಂತೆಯೇ ಉಳಿದುವನ್ನು ಯೋಜಿಸಿಕೊಳ್ಳಬಹುದು.

ದ್ವಿತೀಯ ಪದ್ಯ—ಶ್ರೀರಾಮನು ಮೊದಲು ತಾವರೆ ಮೊದಲಾದುವುಗಳು ಸೀತೆಯಿರುವ ಸ್ಥಲವನ್ನು ಬಲ್ಲವೆಂದು ತಿಳಿದು, ಅವುಗಳನ್ನು ಕೇಳಿ, ಅವುಗಳಿಂದ ಪ್ರತ್ಯುತ್ತರವನ್ನು ಬಹುಹೊತ್ತು ನಿರೀಕ್ಷಿಸಿ ಹೊಂದದೆ ಇರಲು; ತನ್ನ ಪ್ರೀತಿಯನ್ನು ಪರೀಕ್ಷಿಸಬೇಕೆಂದು ಸೀತೆಯು ಅವುಗಳಲ್ಲಿ ಮರೆಯಿಸಿಕೊಂಡು ಅವುಗಳಿಂದ ಪ್ರತ್ಯುತ್ತರವನ್ನು ಹೇಳಗೊಳಿಸದೆ ಈ ರೀತಿಯಲ್ಲಿ ಕಾಡುವಳು ಎಂದು ಭ್ರಮಿಸಿ, ಬಳಿಕ ಅವಳ ಕರುಣವೇ ಶರಣವೆಂದು ನಂಬಿ, ದೈನ್ಯವೃತ್ತಿಯಿಂದ "ಮೈಗರೆದು ಕಾಡುವ ಕಾರಣಮೇನೊ-ಜಾನಕೀ" ಎಂದು ಅವಳನ್ನೇ ಶರಣಹೊಂದುತ್ತಾನೆ. ಉನ್ಮತ್ತನಾದವನಿಗೆ

---

1. ಕೊನೆಯ ಎಲ್ಲೆ; ಇದಕ್ಕೆ ಮೇಲಿಲ್ಲವೆಂಬ ಅರ್ಥ. 2. ಸೂಚಿಸಲ್ಪಡುವುದು.

ವಿವೇಕವೆಲ್ಲಿಂದ ಬರುವುದು ? ಸೀತೆಯ ರುತಿಯು ಕೋಕಿಳದಲ್ಲಿ, ಈಕ್ಷಣವು ಉತ್ಪಲ ದಲ್ಲಿ, ವಿನೀಳಕುಂತಳವು ಅಳಿಮಾಲೆಯಲ್ಲಿ, ಈ ರೀತಿಯಾಗಿ ಕೆಲಕೆಲವು ಅಂಗಗಳು ಕೆಲಕೆಲವಲ್ಲಿ ಮರೆಸಿಯಿಕೊಂಡವೆಂದು ಭ್ರಮಿಸಲು ಕಾರಣವೇನೆಂದರೆ—ಸೀತೆಯ ಧ್ವನಿಯು ಕೋಕಿಲದಲ್ಲಿ ಮರೆಯಿಸಿಕೊಳ್ಳದಿದ್ದರೆ ಕೋಕಿಳಕ್ಕೆ ಅಂಥ ಕಲಧ್ವನಿಯು ಹುಟ್ಟುವ ಸಂಭವವಿರುತ್ತಿರಲಿಲ್ಲ; ಅವಳ ಈಕ್ಷಣವು ಉತ್ಪಲದಲ್ಲಿ ಮರೆಯಿಸಿಕೊಳ್ಳ ದಿದ್ದರೆ ಅಂಥ ಸೌಂದರ್ಯವು ಅದಕ್ಕೆ ಬರುತ್ತಿರಲಿಲ್ಲವೆಂದು ತಿಳಿದನು. ಇತ್ಯಾದಿ.

ಹೀಗಿರಲು ಶ್ರೀರಾಮನು ಮೊದಲು ತಳಿರು ಮೊದಲಾದುವುಗಳನ್ನು ಸೀತೆಯಿ ರುವ ಸ್ಥಳವನ್ನು ಕೇಳಿ, ಬಳಿಕ ಅವಳ ಈಕ್ಷಣ ಮೊದಲಾದುವು ಉತ್ಪಲಾದಿಗಳಲ್ಲಿ ಮೈಗ ರೆದುವೆಂದು ಭ್ರಮಿಸಿ ಬಳಿಕ ಅವಳನ್ನೇ ಶರಣಹೊಂದಿದನೆಂದು ವರ್ಣಿಸಿರುವುದರಲ್ಲಿ ಅರ್ಥೌಚಿತ್ಯ, ಪದೌಚಿತ್ಯ, [1]ಸ್ಥಿತ್ಯೌಚಿತ್ಯಗಳು ಚೆನ್ನಾಗಿ ಕಂಡುಬರುವುವು.

ಇವಲ್ಲದೆ ಈ ಎರಡು ಪದ್ಯಗಳಲ್ಲಿಯೂ ಪದಗಳ ಜೋಡಣೆಯಿಂದ ಕವಿಗೆ ಬೇರೆ ಆಶಯಗಳು ಉಂಟೆಂದು ಗೊತ್ತಾಗುವುದು. ಅವೇನೆಂದರೆ—೧. ತಾವರೆ ಮೊದಲಾದುವುಗಳನ್ನು ನೋಡಿದ ಕೂಡಲೆ ಅವುಗಳು ವಿರಹತಪ್ತನಾದ ಶ್ರೀರಾಮನ ಚಿತ್ತಭಿತ್ತಿಯಲ್ಲಿ ಸೀತಾದೇವಿಯ ಚಿತ್ರಪಟವನ್ನು ರಚಿಸದೇ ಇರವು. ಅದರಿಂದ ವಿರ ಹತಾಪವು ವೆಗ್ಗಳಿಸಿ ರಾಮನಿಗೆ ಸಹಿಸಲಶಕ್ಯವಾಗಿ ಆಗುವುದು. ೨. ಬಿಸಿಲ ಬೇಗೆಗೆ ಬಾಯಾರಿ ಬಳಲಿದವನು ದೂರದಲ್ಲಿ ಬಿಸಿಲ್ಗುದುರೆಯನ್ನು ಕಂಡು ಸಮೀಪದಲ್ಲಿಯೇ ನೀರು ಸಿಕ್ಕುವುದೆಂದು ಭ್ರಮಿಸಿ ಶಾಂತಿಹೊಂದುವ ಹಾಗೆ ಶ್ರೀರಾಮನು ಇವುಗ ಳನ್ನು ನೋಡಿ ಸ್ವಲ್ಪ ಶಾಂತನಾದನು. ೩. ಸೀತಾದೇವಿಯು ಶ್ರೀರಾಮಮುದ್ರಿಕೆ ಯನ್ನು ಕಂಡು ಅದನ್ನು ತನ್ನ ನಯನಕ್ಕೆ ಒತ್ತಿ ಹೃತ್ಕಮಲದಲ್ಲಿ ಇಟ್ಟುಕೊಂಡು ಚೈತನ್ಯ ಪಡೆದಂತೆ ಶ್ರೀರಾಮನು ಸೀತಾವಯವಗಳ ಪ್ರತಿಕೃತಿಗಳನ್ನು ಕಂಡು ಆಪ್ಯಾಯಿತನಾದನು—ಎಂಬ ಆಶಯಗಳೂ [2]ವ್ಯಂಗ್ಯ ಮರ್ಯಾದೆಯಿಂದ ತಿಳಿದು ಬರುವುವು.

ಹೀಗಿರಲು ಇಲ್ಲಿ ಕವಿಯು ಶೃಂಗಾರರಸಕ್ಕೆ ವಾಕ್ಚಾತುರ್ಯವೆಂಬ ಒರತೆಯನ್ನು ಕೊಟ್ಟಿರುವನು.

---

1. ತನ್ನ ಸ್ಥಿತಿಗೆ ಸರಿಯಾಗಿ ಮಾತುಗಳನ್ನು ಆಡುವಿಕೆ.
2. ವ್ಯಂಗ್ಯಮರ್ಯಾದೆಯೆಂದರೆ :—ವಾಕ್ಯದಲ್ಲಿ ಅನ್ವಿತವಾದ ಪದಗಳಿಂದ ವಾಚ್ಯ ವಾಗಿ, ಎಂದರೆ, ಸ್ಪಷ್ಟವಾಗಿ ತಿಳಿದು ಬರುವ ಅರ್ಥವನ್ನು ವಾಚ್ಯಾರ್ಥ

(14) ನಾಗೇಂದ್ರನಂ ಬಿಡದೆ ತಲೆವಾಗಿಸಿತ್ತಮರ ।
ನಾಗೇಂದ್ರನಂ ಬುದ್ಧಿದೊರೆಯಿಸಿತ್ತು ಪುರಮರ್ದ ।
ನಾಗೇಂದ್ರನಂ ನಿಂದು ಬೆರಗಾಗಿಸಿತ್ತಮಲ ಧರ್ಮಜನ ಕೀರ್ತಿ ಬಳಿಕ ॥
ನಾಗೇಂದ್ರಶಯನಾಲಯವ ಜಡಧಿಯೆನಿಸಿ ನುತ ।
ನಾಗೇಂದ್ರವರದಾಯುಧವ ಪೊಳ್ಳುಗಳೆದು ಮಥ ।
ನಾಗೇಂದ್ರಧರನ ಜಾತೆಯ ನಿಲವುಗೆಡಿಸಿ ನೆರೆ ರಾಜಿಸಿತು ಮೂಜಗದೊಳು ॥

(ಜೈಮಿನಿ ಭಾರತ.)

ಕವಿಗಳು ಕೀರ್ತಿಯನ್ನು ಬೆಳ್ಳಗಿರುವ ವಸ್ತುವೆಂದು ವರ್ಣಿಸುವರು. ಈ ಕವಿಸಮಯವನ್ನು ಲಕ್ಷೀಕರಿಸಿಕೊಂಡು, ಧರ್ಮರಾಜನ ಕೀರ್ತಿಯು ಸರ್ವತ್ರ ವ್ಯಾಪಿಸಿತೆಂಬುದನ್ನು ವಾಚ್ಯಮರ್ಯಾದೆಯಿಂದ ಹೇಳದೆ, ವ್ಯಂಗ್ಯಮರ್ಯಾದೆಯಾಗಿ ಹೇಳಿ ತನ್ನ ಸಾಮರ್ಥ್ಯವನ್ನು ಇಲ್ಲಿ ಕವಿಯು ಪ್ರಕಾಶಪಡಿಸುತ್ತಾನೆ.

" ಸಮಾನಾನಾಮುತ್ತಮಶ್ಲೋಕೋಭವತು " ಎಂಬ ಮರ್ಯಾದೆಯಲ್ಲಿ ಸಮಾನಸ್ಕಂಧರಲ್ಲಿ ಪ್ರಶಸ್ತಿಯನ್ನು ಹೊಂದುವುದೀಗ ಕೀರ್ತಿಕರವು. ರಾಜನು ಇತರ ರಾಜರು ಮೂಗಿನಮೇಲೆ ಬೆರಳಿಟ್ಟುಕೊಂಡು ನೋಡುವಂತೆ ದಾನಮಾಡಿದರೆ ಅದೀಗ ಅವನಿಗೆ ಮೇಲ್ಮೆ. ಪಂಡಿತರ ಗೋಷ್ಠಿಯಲ್ಲಿ ಪಾಂಡಿತ್ಯವನ್ನು ತೋರಿಸಿದರೇನೆ ಪಂಡಿತನಾದವನಿಗೆ ಮೇಲ್ಮೆ; ಏನೂ ತಿಳಿಯದ ಕುರುಬರಲ್ಲಿ ಗಟ್ಟಿಗನೆನಿಸಿಕೊಂಡರೆ, ಅದೊಂದು ಮೇಲ್ಮೆಯೆ? ಆದುದರಿಂದ ಕವಿಯು ಧರ್ಮಜನ ಕೀರ್ತಿ

---

ವೆಂದೂ; ಆ ವಾಕ್ಯವನ್ನು ಉಪಯೋಗಿಸಿದ ಸಂದರ್ಭದಿಂದಲೂ, ಆ ವಾಕ್ಯಗತವಾದ ಪದಗಳ ಸಾಹಚರ್ಯದಿಂದಲೂ, ಎಂದರೆ ಪದಗಳನ್ನು, ಒಂದರ ಪಕ್ಕದಲ್ಲಿ ಮತ್ತೊಂದು ಕ್ಲಿಪ್ತವಾದ ಪದವು ಬರುವಹಾಗೆ, ಜೋಡಿಸಿರುವ ಕ್ರಮದಿಂದಲೂ, ಸೂಚಿತವಾಗುವ ಅರ್ಥವನ್ನು ವ್ಯಂಗ್ಯಾರ್ಥವೆಂದೂ ಹೇಳುವರು. ಸಂದರ್ಭವನ್ನು ಅನುಸರಿಸಿ ಉಂಟಾಗುವ ವ್ಯಂಗ್ಯಕ್ಕೆ ಉದಾಹರಣೆ—" ಸೂರ್ಯನು ಉದಯಿಸಿದನು " ಎಂಬ ಮಾತು ನಿದ್ರೆಮಾಡುತ್ತಿರುವ ವಿದ್ಯಾರ್ಥಿಯ ಪಕ್ಷದಲ್ಲಿ ಪಠನಕಾಲವು ಪ್ರಾಪ್ತವಾಯಿತೆಂದೂ, ರಾಜನ ಪರದಲ್ಲಿ ಪ್ರಜೆಗಳ ಕ್ಷೇಮಲಾಭವನ್ನು ವಿಚಾರಿಸುವ ಕಾಲವು ಒದಗಿತೆಂದೂ, ಕೂಲಿಯಿಂದ ಜೀವಿಸುವವನಿಗೆ ಕೂಲಿ ಸಿಕ್ಕುವ ಕಾಲವು ದೊರಕಿತೆಂದೂ, ಕಾಮುಕರಾದ ನೂತನ ದಂಪತಿಗಳಿಗೆ ಅಗಲುವ ಕಾಲವು ಬಂದಿತೆಂದೂ ಅರ್ಥಕೊಡುವುವು. ಪದದ ಸಾಹಚರ್ಯದಿಂದ ಉಂಟಾಗುವ ವ್ಯಂಗ್ಯಕ್ಕೆ ಹಿಂದೆ ಅನುವಾದಮಾಡಿರುವ ( 11 ) ನೆಯ ಪದ್ಯವನ್ನು ನೋಡಿ.

ಯು ತನ್ನಂತೆ ಶ್ರೇಷ್ಠವಾಗಿಯೂ, ಬಿಳುಪಾಗಿಯೂ ಇರುವ ವಸ್ತುಗಳ ಮುಂದೆ ತನ್ನ ಮಾಹಾತ್ಮ್ಯವನ್ನು ತೋರಿಸಿಕೊಂಡಿತು; ಆದರಿಂದ ಅವುಗಳೆಲ್ಲವೂ ತಿರಸ್ಕಾರ ಹೊಂದಿ, ರೂಪಾಂತರವನ್ನು ಪಡೆದುವೆಂದು ವರ್ಣಿಸಿರುತ್ತಾನೆ. ಅದು ಹೇಗೆಂದರೆ?

ಅಮಲಧರ್ಮಜನ ಕೀರ್ತಿ, ನಾಗೇಂದ್ರನಂ—ಆದಿಶೇಷನನ್ನು, ಬಿಡದೆ ತಲೆವಾಗಿಸಿತ್ತು; ಅಮರನಾಗೇಂದ್ರನಂ—ಐರಾವತವನ್ನು, ಬುದ್ಧಿದೊರೆಯಿಸಿತು—ಮಂಕುಮಾಡಿತು; ಪುರಮರ್ದನ—ತ್ರಿಪುರಾರಿಯಾದ ಈಶ್ವರನ, ಅಗೇಂದ್ರನಂ—ವಾಸಸ್ಥಾನವಾದ ಕೈಲಾಸ ಪರ್ವತವನ್ನು, ನಿಂದು ಬೆರಗಾಗಿಸಿತ್ತು—ಇದನ್ನು ನೋಡಿ ನಿಂತಲ್ಲಿಯೇ ನಿಂತಿತು, ಎಂದರೆ, ಸ್ತಬ್ಧವಾಯಿತು; ಬಳಿಕ, ನಾಗೇಂದ್ರಶಯನ—ಶೇಷಶಾಯಿಯಾದ ವಿಷ್ಣುವಿನ, ಆಲಯವು—ಮನೆಯಾದ ಕ್ಷೀರಸಮುದ್ರವನ್ನು, ಜಡಧಿಯೆನಿಸಿ—ಮಂಕುಬುದ್ಧಿಯುಳ್ಳದೆಂದು ಮಾಡಿ, (ಜಡಧಿ-ಜಲಧಿ, ಸಮುದ್ರ; ಶ್ಲೇಷಾರ್ಥ); ನುತನಾಗೇಂದ್ರವರದ—ಗಜೇಂದ್ರನಿಗೆ ವರಪ್ರದಾನಮಾಡಿದ ವಿಷ್ಣುವಿನ, ಆಯುಧವ—ಕೈಯ್ಯಲ್ಲಿ ಬೆಳ್ಳಗಿರುವ ಶಂಖವನ್ನು, ಪೊಳ್ಳುಗಳೆದುಂ—ಟೊಳ್ಳುಮಾಡಿಬಿಟ್ಟು; [1]ಮಥನಾಗೇಂದ್ರಧರನ—ಸಮುದ್ರಮಥನದಲ್ಲಿ ಕಡೆಗೋಲಾದ ಮಂದರಪರ್ವತವನ್ನು ಧರಿಸಿದ ಕ್ಷೀರಸಮುದ್ರದ, ಜಾತೆಯು—"ಕ್ಷೀರಸಾಗರ ಕನ್ಯಕೆ" ಯಾದ ಲಕ್ಷ್ಮಿಗೆ, ನಿಲವುಗೆಡಿಸಿ[1]—ಸ್ಥಾನಭ್ರಂಶವನ್ನುಂಟುಮಾಡಿ, ಮೂಜಗದೊಳು, ರಾಜಿಸಿತು, ಎಂದು ವರ್ಣಿಸಿರುತ್ತಾನೆ.

ಸರ್ಪಕ್ಕೆ ತಲೆ ಬಗ್ಗಿಸಿಕೊಂಡಿರುವುದು ಸ್ವಭಾವ, ಆನೆಗೆ ಬುದ್ಧಿಮಾಂದ್ಯವು ಸ್ವಭಾವ, ಕೈಲಾಸಕ್ಕೆ ಸ್ತಬ್ಧವಾಗಿ ನಿಂತಿರುವುದು ಸ್ವಭಾವ, ಕ್ಷೀರಸಮುದ್ರವು ಜಡಧಿಯೇ, ಶಂಖವು ಟೊಳ್ಳೇ, ಲಕ್ಷ್ಮಿಯು ಚಂಚಲಳೇ. ಹೀಗಿರುವಾಗ ಸಹಜವಾದ ಗುಣಗಳ ಸಹಜತ್ವವನ್ನು ಅಪಲಪಿಸಿ, ಧರ್ಮಜನ ಕೀರ್ತಿಪ್ರಸರಣದಿಂದ ಹೀಗಾದುವೆಂದು [2]ಅನುಮಾನಿಸಿ ಹೇಳಿರುವುದು ಕವಿಯ ಔಚಿತ್ಯಜ್ಞಾನಪ್ರಕಾಶ.

---

1. ಮಥನಾ...ಗೆಡಿಸಿ = ಸಮುದ್ರಮಥನ ಕಾಲದಲ್ಲಿ ಕಡೆಗೋಲಾದ ಮಂದರ ಪರ್ವತವನ್ನು ಬೆನ್ನಿನ ಮೇಲೆ ಧರಿಸಿದ ಕೂರ್ಮರೂಪಿಯಾದ ವಿಷ್ಣುವಿನ, ಜಾತೆಯು—ಪಾದೋದ್ಭವಳಾದ ಗಂಗೆಯು (ವಿಷ್ಣು ಪಾದೋದ್ಭವಾ ಗಂಗಾ—ಅಮರ) ನಿಲವುಗೆಡಿಸಿ—ಸ್ವರ್ಗದಿಂದ ಭೂಮಿಗೆ ಭೂಮಿಯಿಂದ ಪಾತಾಲಕ್ಕೆ ಹೋಗುವಹಾಗೆ ಮಾಡಿ—ಎಂಬ ಅರ್ಥವೂ ಆಗುತ್ತದೆ. 2. ಕಾರಣಗಳಿಂದ ಊಹಿಸಿ.

ಆದಿಶೇಷನು ಪಾತಾಲವಾಸಿ; ಐರಾವತವು ಸ್ವರ್ಗವಾಸಿ; ಕೈಲಾಸವು ಮೇರು ಶಿಖರವಾಗಿ ಭೂಮಿಯಲ್ಲೆಲ್ಲಾ ಅತ್ಯುನ್ನತ ಪ್ರದೇಶ; ಕ್ಷೀರಸಮುದ್ರವು ಮಹಾ ಭೂಮಿಯ ಅಡಿಯಲ್ಲಿ ಇರುವುದು; ಲಕ್ಷ್ಮಿಯು ಸರ್ವತ್ರ ಸಂಚರಿಸುತ್ತಿರುವಳು; ಹೀಗೆ ಮೂಜಗಳೊಳು ನೆರೆ ರಾಜಿಸಿತು—ಎಂದು ಕೀರ್ತಿಯ ಸರ್ವದೇಶ ವ್ಯಾಪ್ತಿಯನ್ನು ವರ್ಣಿಸಿರುವನು. ಇದು ಇವನ ಔಚಿತ್ಯಜ್ಞಾನವನ್ನು ಮತ್ತಷ್ಟು ಪ್ರಕಾಶಿಸುವುದು.

ಪ್ರತಿ ಪಾದದ ಆದಿಯಲ್ಲಿ "ನಾಗೇಂದ್ರ ನಾಗೇಂದ್ರ" ಎಂದು ಸೇರಿಸಿರುವುದು ಕವಿಯ ಶಬ್ದಪ್ರಯೋಗಶಕ್ತಿಗೆ ಪ್ರಕಾಶವು. ಇದು ಅಷ್ಟು ಅತಿಶಯವಾದುದಲ್ಲ.

(15) ಮೃದುತಳಕಾಂತಿಯಿಂ ಮಿಳಿರ್ವ ಪೂಗುಡಿ ಕೆಂದಳಿರ್ದೊಂಗಲಂತೆ ತೋ।
ರಿದೊಡದನೊಲ್ಲದೊಳ್ದಳಿರ಼್ೆ ನಿಳ್ಕಿದೊಡಂತಲಗೊಂಚಲಂತೆ ತೋ॥
ರಿದೊಡೆ ನಖಾಂಶುವಿಂದದುಮನೊಲ್ಲದೆ ಮಾಮರನಲ್ಲಿದೊಂದು ಮಾ।
ಯದ ಮರನೆಂದು ಸಾರ್ದಳತಿಮುಗ್ಧೆ ಕುಜಾಂತರಮಂ ವನಾಂತದೊಳ್ ॥
(ಚಂದ್ರಪ್ರಭ ಪುರಾಣಂ.)

ಇಲ್ಲಿ ಕವಿಯು ಒಬ್ಬ ಮುಗ್ಧ ನಾಯಿಕೆಯು ಪುಷ್ಪಾಪಚಯವನ್ನು ವರ್ಣಿಸುತ್ತಾನೆ.

ಅತಿಮುಗ್ಧೆಯಾದ ಒಬ್ಬ ಸ್ತ್ರೀಯು ಮಾಮರದಲ್ಲಿ, ಪೂಗುಡಿಯನ್ನು, ಕೊಯ್ಯಲು ಪೋಗಿ, ಅದು ಮೃದುತಳಕಾಂತಿಯಿಂದ, ಕೆಂದಳಿರ್ದೊಂಗಲಂತೆ ತೋರಿದೊಡೆ, ಅದನೊಲ್ಲದೆ ಆ ಮರದಲ್ಲೇ ಒಳ್ದಳಿರನ್ನು ಕೊಯ್ಯಲೆಂದು ನಿಳ್ಕಿದೊಡೆ—ಹಸವನ್ನು ನೀಡಲು, ಅದು ಅಲಗೊಂಚಲಂತೆ—ಪುಷ್ಪಗುಚ್ಛದಂತೆ, ತನ್ನ ನಖಾಂಶುವಿಂದೆ ತೋರಿದೊಡೆ, ಅದುಮನೊಲ್ಲದೆ—ಅದನ್ನು ಬಿಟ್ಟು, ಇದು ಮಾಮರವಲ್ಲ, ಇದೊಂದು ಮಾಯದ ಮರವೆಂದು, ಕುಜಾಂತರಮಂ—ಬೇರೊಂದು ಮಾವಿನ ಮರವನ್ನು, ಸಾರ್ದಳ್—ಎಂದು ಪದ್ಯಾರ್ಥ.

ಇಲ್ಲಿ ಕವಿಯು ಅವಳ ಸೌಂದರ್ಯಾತಿಶಯವನ್ನೂ, ಮುಗ್ಧತ್ವವನ್ನೂ ಕವಿಸಮಯದ ಆಧಾರದ ಮೇಲೆ ಹೃದಯಂಗಮವಾಗಿ ನಿರೂಪಿಸಿರುತ್ತಾನೆ. ಹೇಗೆಂದರೆ? ಸ್ತ್ರೀಯರ ಹಸ್ತತಲದಲ್ಲಿ ಕೋಮಲತ್ವಾರುಣತ್ವಾರೋಪಣಕ್ಕಾಗಿ ಚಿಗುರಿನ ಸಾಮ್ಯವನ್ನು ಕೊಡುವುದು ಕವಿಸಂಪ್ರದಾಯವು. ನಖವನ್ನೂ ಅದರಿಂದ

ಹೊರಟ ಕಾಂತಿಯುನ್ನೂ ಬೆಳ್ಳಗೆ ವರ್ಣಿಸುವುದೂ ಕವಿಸಮಯ. ಇಲ್ಲಿ ಕವಿಯು ಅವಳ ಹಸ್ತಸಂಪರ್ಕದಿಂದ ಬೆಳ್ಳಗಿರುವ ಮಾವಿನ ಹೂವು ಕೆಂಪಗಾಗಿ ಕೆಂದಳಿರಂತೆ ಕಾಣಿಸಿಕೊಂಡಿತೆಂದೂ, ಬಿಳುಪಾದ ನಖಕಾಂತಿಸಂಪರ್ಕದಿಂದ ಕೆಂಪಗಿರುವ ಚಿಗುರು ಬೆಳ್ಳಗಿರುವ ಅಲರ್ಗೊಂಚಲಂತೆ ಕಾಣಿಸಿಕೊಂಡಿತೆಂದೂ ಉತ್ಪ್ರೇಕ್ಷಿಸಿ, ಅದನ್ನು ನೋಡಿ, ಮುಗ್ಧೆಯಾದುದರಿಂದ ಹೆದರಿಕೊಂಡಳೆಂದು ವರ್ಣಿಸಿ, ಪಾಠಕರಿಗೆ ಆನಂದವನ್ನುಂಟು ಮಾಡಿರುತ್ತಾನೆ. ಈ ಆನಂದಕ್ಕೆ ವಿಸ್ಮಯವೇ ಕಾರಣವು. ಆ ವಿಸ್ಮಯವು ಸ್ವಭಾವತಃ ಇದ್ದುದು ವಿರೂಪವಾಯಿತು ಎಂದು ಹೇಳಿರುವುದರಿಂದ ಹುಟ್ಟಿರುವುದು. ನಾಯಿಕೆಯು ತನ್ನ ಹಸ್ತತಳಕಾಂತಿಯಿಂದಲೇ ಪೂಗುಡಿ ಕೆಂಪಗೆ ಕಾಣಿಸಿಕೊಂಡಿತೆಂದು ತಿಳಿವಷ್ಟು ಅರಿಯದವಳಾಗಿ, ಆ ಮರವನ್ನು ಮಾಯದ ಮರವೆಂದೇ ನಂಬಿ ಚಕಿತಳಾದಳೆಂದು ಹೇಳಿರುವನು : ಇದರಿಂದ ಅವಳ ಮುಗ್ಧಾವಸ್ಥೆಯು ಎಷ್ಟರ ಮಟ್ಟಿಗೆ ಪ್ರಕಾಶವಾಗಿರುವುದು. ಅಲ್ಲದೆ ಹೀಗಾಗುವುದಕ್ಕೆ ತನ್ನ ಸೌಂದರ್ಯವೇ ಕಾರಣವೆಂದು ತಿಳಿಯದವಳಾಗಿದ್ದಳೆಂಬುದರಿಂದ ಪ್ರೌಢಾವಸ್ಥೆಯ ಸನ್ನಿಕರ್ಷವೂ ಇಲ್ಲವೆಂದೂ ಗೊತ್ತಾಗುವುದು. ಹಸ್ತತಳಕಾಂತಿಯಿಂದ ಪೂಗುಡಿಯೂ, ನಖಕಾಂತಿಯಿಂದ ಚಿಗುರೂ ಬೇರೆ ರೂಪವಾದುವೆಂಬುದರಿಂದ ಅವಳ ಸೌಂದರ್ಯಸೌಕುಮಾರ್ಯಾತಿಶಯವು ವ್ಯಂಜಿತವಾ ುವುದು. ಪುಷ್ಪಾಪಚಯವನ್ನು ಮಾಡಲು ಒಂದು ಮರದ ಹತ್ತಿರ ಹೋಗಿ, ಅದನ್ನು ಬಿಟ್ಟು ಮತ್ತೊಂದು ಮರದ ಹತ್ತಿರ ಹೋದುದನ್ನು ನೋಡುತ್ತಿದ್ದ ನಾಯಕನ ಹೃದಯದಲ್ಲಿ ಎಷ್ಟು ಆಹ್ಲಾದವುಂಟಾಗಿರಬಹುದು ಆಲೋಚಿಸಿ ನೋಡಿರಿ. ಕವಿಯ ಭಾವವನ್ನು ಯಥಾವತ್ತಾಗಿ ತಿಳಿಯಬೇಕಾದರೆ, ಆ ನಾಯಕನ ಸ್ಥಿತಿಯಲ್ಲಿ ನಿಮ್ಮನ್ನು ಇಟ್ಟುಕೊಂಡು, ನಾಯಿಕೆಯ ವ್ಯಾಪಾರವನ್ನು ಒಳಗಣ್ಣಿಂದ ನೋಡಬೇಕು. ಆಗ ರಸೋದ್ರೇಕವು ಈ ವರ್ಣನೆಯಿಂದ ನಿಮ್ಮ ಹೃದಯದಲ್ಲಿ ಎಷ್ಟರಮಟ್ಟಿಗೆ ತುಂಬಿ ತುಳುಕಾಡುವುದೆಂಬುದು ತಿಳಿದುಬರುತ್ತದೆ

ಹೀಗಿರುವುದರಿಂದ ಈ ಪದ್ಯದಲ್ಲಿ ಸ್ತ್ರೀಯರ ಹಸ್ತತಲಕ್ಕೆ ಆರುಣ್ಯವೂ ನಖಕಾಂತಿಗೆ ಧಾವಳ್ಯವೂ ಎಂಬ ಕವಿಸಮಯವು ರಸೋದ್ರೇಕಕ್ಕೆ ಆಶ್ರಯಕೊಟ್ಟಿತೆಂದು ನಿಸ್ಸಂದೇಹವಾಗಿ ಹೇಳಬಹುದು.

(16) ಕಮಲದಳಂಗಳೊಳಗೆ ಕುಂ।
ಕುಮಜಲಮಂ ತೀವಿ ಚಕ್ರಕುಚೆಯರ್ ಭರದಿಂ॥

ವಿಮಲೇಂದುಮುಖಿಯರಂ ವಿ ।
ಭ್ರಮದಿಂ ನಡೆದಿಟ್ಟು ಕಂಡರೆಳವಿಸಿಲೊಳ್ಳಂ ॥ ೧ ॥

ಇಡೆ ಶಶಿಮುಖಿಯರ್ ಕಂಡಾ ।
ಗಡೆ ಧವಳೋತ್ಪಲದ ನಡುವೆ ಚಂದನರಸಮಂ ॥
ಬಿಡೆ ತೀವಿಕೊಂಡು ನಡೆನಡೆ ।
ದೊಡನೊಡನಿಟ್ಟಿಟ್ಟು ಜೊನ್ನಮಂ ಪಸರಿಸಿದರ್ ॥ ೨ ॥

( ಗಿರಿಜಾಕಲ್ಯಾಣಂ )

ಪದ್ಯಗಳ ಪ್ರತಿಪದಾರ್ಥವು ಸುಲಭವಾಗಿದೆ.

ಇಲ್ಲಿ ಕವಿಯು ಕೊಳಗಳಲ್ಲಿ ಕಮಲ, ಉತ್ಪಲ, ಹಂಸ, ಚಕ್ರವಾಕಗಳು ಸದಾ ಇದ್ದೇ ಇರುವುವು; ಸೂರ್ಯೋದಯದಲ್ಲಿ ಕಮಲಕ್ಕೆ ವಿಕಾಸವೂ, ಚಕ್ರವಾಕಗಳಿಗೆ ಸಂತೋಷವೂ, ಚಂದ್ರನಿಗೆ ಕಾಂತಿವಿಹೀನತೆಯೂ ಉಂಟಾಗುವುವು; ಮತ್ತು ಚಂದ್ರಿಕೆಯಲ್ಲಿ ಚಕ್ರವಾಕಗಳಿಗೆ ದುಃಖವುಂಟಾಗುವುದು— ಎಂಬ ಕವಿಸಮಯಗಳ ಆಧಾರದಮೇಲೆ ಜಲಕ್ರೀಡೆಯನ್ನು ಬಹು ರಮಣೀಯವಾಗಿ ವರ್ಣಿಸುತ್ತಾನೆ.

ಚಕ್ರಕುಚೆಯರು ಚಕ್ರವಾಕಗಳಂತೆ ಸಂತುಷ್ಟರಾಗಿ ವಿಕಸಿತವಾದ ಕೆಂದಾವರೆಗಳಲ್ಲಿ ಕೆಂಪಗಿರುವ ಕುಂಕುಮಜಲವನ್ನು ತುಂಬಿ ಸೂರ್ಯನ ಕಿರಣಗಳೋ ಎಂದು ತೋರುವ ಹಾಗೆ ಚಂದ್ರಮುಖಿಯರ ಮೇಲೆ ಎರಚಲು; ಅದರ ಪೆಟ್ಟನಿಂದ ಅವರು ಸೂರ್ಯಕಿರಣ ಸಂಪರ್ಕದಿಂದ ಕಾಂತಿಗುಂದಿದ ಚಂದ್ರನಂತೆ ವಿಮಲೇಂದುಮುಖಿಯರಾದರು. ಅದಕ್ಕೆ ಇವರು ಮುಯ್ಯನ್ನು ತೀರಿಸಿಕೊಳ್ಳಬೇಕೆಂದು ತಮ್ಮ ಪರ್ಯಾಯದಲ್ಲಿ ತಾವು ಶಶಿಮುಖಿಯರಾದುದರಿಂದ ತಮ್ಮಂತೆ ಅಥವಾ ತಮ್ಮ ಮುಖವನ್ನು ನೋಡಿ, ವಿಕಾಸವನ್ನು ಹೊಂದಿದ ಧವಳೋತ್ಪಲದ ನಡುವೆ ಜ್ಯೋತ್ಸ್ನೆಯಂತೆ ಬೆಳ್ಳಗಿರುವ ಚಂದನರಸವನ್ನು ತುಂಬಿಕೊಂಡು ಚಕ್ರಕುಚೆಯರಾದ ಅವರಿಗೆ ದುಃಖವನ್ನು ಹುಟ್ಟಿಸುವುದಕ್ಕೋ ಎಂಬಂತೆ ಎರಚಿ ಎರಚಿ ಜೊನ್ನವನ್ನು ಪ್ರಸರಿಸಿದರು—ಎಂದು ಪದ್ಯಾಭಿಪ್ರಾಯ.

ಕಮಲದಲ್ಲಿ ಕುಂಕುಮಜಲವನ್ನೂ, ಧವಳೋತ್ಪಲದಲ್ಲಿ ಚಂದನರಸವನ್ನೂ

ತುಂಬಿಕೊಂಡುದು § ಆಧಾರಾಧೇಯಗಳಿಗೆ ಅಭೇದ ತೋರುವುದಕ್ಕೋಸ್ಕರಲೂ, ಕುಂಕುಮಜಲವು ಸೂರ್ಯಕಿರಣದಂತೆಯೂ, ಚಂದನಜಲವು ಚಂದ್ರಕಿರಣದಂತೆಯೂ ಕಾಣುವುದಕ್ಕೋಸ್ಕರಲೂ ಎಂದು ಭಾವಿಸಬೇಕು.

(17) ಅಜನಜಡನೆಂದು ನುಡಿವುದು ।
ಕುಜನತೆ ಜಡಜಾತಜಾತನೆಂತಜಡನವಂ ॥
ಸುಜನವಿರೋಧಿಯನಜಡಂ ।
ಸೃಜಯಿಪನೆ ಪರೋಪತಾಪಫಲನಂ ಖಲನಂ ॥

(ಶಬರಶಂಕರವಿಲಾಸಂ)

"ಲಡಯೋರಭೇದಃ" ಎಂಬ ಸಂಕೇತದಮೇಲೆ 'ಜಲ' 'ಜಡ' ಶಬ್ದಗಳಿಗೆ ಅಭೇದವನ್ನು ಕಲ್ಪಿಸಿ, ಅಜನು ಜಡನೇ ಎಂಬುದನ್ನು ಸ್ಥಾಪಿಸಿ ಹೇಳುವುದು ಚಮತ್ಕಾರವೇ ಆಗಿದೆ.

(18) ಮತ್ತೊಂದು ಉದಾಹರಣೆ—

ನಾಗರಿಕೆಯು ಪಕ್ಷಿಶಾಲೆಯ ಮಧ್ಯದಲ್ಲಿರುವ ಪೀಠದಲ್ಲಿ ಕುಳಿತು ಅಲ್ಲಿರುವ ಊಳಿಗದ ಪೆಣ್ಣುಗಳಂ ಕುರಿತು—"ಎಲೆ ಚಂದ್ರಮುಖಿಯೇ, ನೀನು ಚಕ್ರವಾಕ ಪಕ್ಷಿಗಳ ಹಿಂಡಿಗೆ ನುಗ್ಗದೆ ಹಿಂದಿರುವಳಾಗು. ಎಲೆ ನಾಗವೇಣಿಯೇ, ನವಿಲುಗಳು ನಾಟ್ಯವಾಡುವ ಸ್ಥಳಕ್ಕೆ ನಲಿಯುತ್ತ ಪೋಗದಿರು. ಎಲೆ ಸಿಂಹಮಧ್ಯಳೇ, ಉಲ್ಲಾಸದಿಂದ ಹುಲ್ಲುಗಳಂ ಮೆಲ್ಲುತ್ತಲಿರುವ ಹುಲ್ಲೆಯ ಮರಿಗಳ ಮರಕತದ ಮನೆಯ ಹೊಸತಿಲಂ ಮೆಟ್ಟದಿರು. ಎಲೆ ಪಲ್ಲವಪಾಣಿಯೇ, ನೀನು ನಿಂತಲ್ಲಿ ನಿಲ್ಲದೆ ಕೋಗಿಲೆಗಳಿರುವ ಗೂಡುಗಳಿಗೆ ಕೆಯ್ಯಂ ನೀಡದಿರು. ಎಲೆ ಬಿಂಬಾಧರೆಯೇ, ನೀನು ಹಂಬಲಿಸುತ್ತ ಇಂಪಾಗಿ ಪಂಜರದಲ್ಲಿ ರಂಜಿಸುತ್ತ ಕಿವಿಗಿಂಪಾದ ಸೊಲ್ಲುಗಳಂ ಸೊಲ್ಲಿಸುತ್ತಿರುವ ಗಿಳಿಗಳ ಬಳಿಯಲ್ಲಿ ಸುಳಿಯದೆ ಸುಮ್ಮನಿರುವಳಾಗು. ಎಲೆ ಪಿಂಗಾಕ್ಷಿಯೆ, ಮುಂಗಡೆಯಲ್ಲಿ ಮಂಗಳವಾದ ಅಂಗಳದಲ್ಲಿ ಮೇವರಿತು ಮೆಲ್ಲುತ್ತ ಸಂಚರಿಸುತ್ತಿರುವ ಪಾರಿವಾಳದ ಪಕ್ಷಿಗಳಂ ಹಾರಿಸುವೆನೆಂದು ಓರೆನೋಟಗಳಿಂ ನೋಡಿ ಒಯ್ಯಾರವಂ ತೋರಿ ಎನ್ನ ಮಾತುಗಳಂ ಮೀರಿ ಪೋಗದೆ ನಿಲ್ಲುವಳಾಗು.

§ ಬಟ್ಟಲಲ್ಲಿ ನೀರು ತುಂಬಿದ್ದರೆ, ಬಟ್ಟಲು ಆಧಾರ, ನೀರು ಆಧೇಯವೆನ್ನಿಸಿಕೊಳ್ಳುವುದು.

ಎಲೆ ಘನಕೇಶಿಯೇ, ಹಸಿವಿನಿಂದ ಹಂಬಲಿಸುತ್ತ ಚಪಲಗಳಾದ ಚಾತಕಪಕ್ಷಿಗಳ ಮರಿಗಳಿಗೆ ಹಿಮಜಲಬಿಂದುಗಳಂ ಕೊಟ್ಟು ಸಂತೋಷವಂ ಪುಟ್ಟಿಸುವಳಾಗು. ಎಲೆ ಕಮಲಮುಖಿಯೇ, ನಡೆಬಾವಿಯ ತಡಿಯಲ್ಲಿ ಎಡೆಯಾಡುತ್ತ ಎಡೆಬಿಡದೆ ಕ್ರೇಂಕಾರವಂ ಗೆಯ್ಯುವ ಅಂಚೆಯ ಮರಿಗಳಿಗೆ ಸಂಚರಿತು ಮಿಂಚುತ್ತಿರುವ ತಾವರೆಯ ದಂಟುಗಳನ್ನು ಮೆಲ್ಲಿಸುವಳಾಗು. ಎಲೆ ತುಂಬುಜವ್ವನದ ಕುಂಭಕುಚೆಯೇ, ನೀನು ನಿನ್ನ ಪೆರ್ಮೊಲೆಗಳಂ ಪೊರುವುದೆ ನಿನಗೆ ಊಳಿಗವಾಗಿರುವುದಲ್ಲದೆ ದೇವಿಯರು ಬಿಜಯಂಗೆಯ್ಯುವ ದಾರಿಗೆ ಕಸ್ತೂರಿಯ ನಾರಣೆಗೈದು ಕುಂಕುಮದ ಕಾರಣೆಯಂ ಬಿಟ್ಟು, ಪಚ್ಚಗಪ್ಪುರದ ರಂಗವಲಿಯನ್ನಿಕ್ಕುವುದಂ ಮರೆದು ಸೊಕ್ಕಿನಿಂದಿರುವುದು ನ್ಯಾಯವೆ ಪೇಳು. ಎಲೆ ಶುಕವಾಣಿಯೇ, ಎಚ್ಚರಿಕೆ ಪರಾಕೆಂದು ದೇವಿಯರ ಬಿರುದು ಪದ್ಯಗಳಂ ಪರಿಪರಿಯಾಗಿ ಪಾಡುವುದಂ ಮರೆತು ಮರುಳಾಗಿದ್ದಲ್ಲಿ ನಿನಗೆ ಮನ್ನಣೆಯು ಉಂಟಾಗುವುದೆ ಪೇಳು. ಎಲೆ ಮಂದಗಮನೆಯೆ, ದಿನಕೊಂದು ಹಜ್ಜೆಯನ್ನಿಡದೆ ಶೀಘ್ರದಿಂ ಪೋಗಿ, ಸಿರಿಯಂತೆ ಮೆರೆಯುವ ದೇವಿಯರು ಬರುವ ದಾರಿಯಲ್ಲಿ ಪಾದಗಳು ಒತ್ತದಂತೆ ತೊಟ್ಟುತೆಗೆದ ಜಾಜಿಯ ಪುಷ್ಪಗಳಂ ಸುರಿದು ನಯವಾದ ಸುರಿಪುಟದ ನಡೆಮುಡಿಯಂ ಪಾಸದೆ ಮಾಸದ ಮೈಬಣ್ಣವನಾಂತು ನಿಂತಿರುವ ನಿನ್ನಂ ಕಂಡು ದೇವಿಯು ಮಿಾಸಲಳಿಯದೆ ಬಿಡಳು. ಎಲೆ ಕಲವಾಣಿಯೇ, ನೀನು ಬಲುಹೊತ್ತಿನಿಂದ ಮಲೆಯುತ್ತ, ಪಲಬಗೆಯ ಪಕ್ಷಿಗಳಂ ನೋಡುತ್ತ, ಚೆಲುವಾದ ಸಂಗೀತವಂ ತೊರೆದು, ಮಂದಮತಿಯಂತೆ ಹಿಂದು ಮುಂದನರಿಯದೆ ದೇವಿಯ ಸೇವೆಯಂ ಮರೆತು, ನಿಂದಿರುವುದು ನ್ಯಾಯವೆ ಪೇಳು. ಎಲೆ ಚಂಚಲಾಕ್ಷಿಯೇ, ಕದ್ದಾಳೆಯ ಮರದ ಕತ್ತಲೆಯು ಹೊದ್ದದಂತೆ ಮುದ್ದಾದ ರತ್ನದೀಪವಂ ಬಿಟ್ಟು ಕಾದಿರುವುದಂ ಬಿಟ್ಟು ಸೊಗಸಾಗಿರುವ ಬಗಸೆಗಣ್ಣುಗಳ ಕಾಂತಿಯಂ ಪಸರಿಸಿ ಪಕ್ಷಿಗಳ ಪಾರಿಸುತ್ತ ನಿಂತಿರುವುದು ನೀತಿಯೇ ಪೇಳು. ಎಲೆ ಬಟ್ಟಮೊಲೆಯಬಾಲೆಯೇ, ಕಟ್ಟಿದ ಕಾಸೆಯಿಂ ಬಿಗಿದ ಎದೆಗಟ್ಟನ್ನೂ ಬಿಚ್ಚದೆ ನಿಟ್ಟುಸಿರಂ ಬಿಡುತ್ತ ಸಜ್ಜುಗೊಂಡ ಗೆಜ್ಜೆಯ ಕಾಲುಗಳನಿಟ್ಟು ನಾಟ್ಯದ ಹಂಬಲವಂ ಬಿಟ್ಟು ಪೆಟ್ಟುಬಿದ್ದವಳಂತೆ ಸಿಟ್ಟುಗೊಂಡು ಮಟ್ಟುಮಿಾರಿದ ಬಳಲಿಕೆಯಂ ತೊರೆಯದೆ ಮುದ್ದಾದ ಮುಖದ ಬೆಮರುಗಳಂ ಒರೆಸದೆ ಬಿರುಸಾಗಿ ಹುಬ್ಬುಗಳಂ ಗಂಟಿಕ್ಕಿ ನಾಟ್ಯಶಾಲೆಯಿಂದ ನಾಚಿಕೆಯಿಲ್ಲದೆ ಬಂದು ನವಿಲುಗಳ ನಾಟ್ಯವಂ ನೋಡುತ್ತ ನಿಂದಿರುವುದು ಚಂದವೆ ಪೇಳು. ಎಲೆ ಕುಂದರದನೆಯೇ, ಇಂದುಕಾಂತಶಿಲೆಯಿಂ ಸುಂದರವಾದ ದೇವಿಯ ಗದ್ದುಗೆ

ಯಂ ಸಿದ್ಧವಂ ಗೆಯ್ಯದೆ ಮುಗ್ಧಳಂತೆ ಮುಖವನ್ನೆತ್ತಿ ಹಾರುವ ಪಾರಿವಾಳಗಳನರೆ ದೃಷ್ಟಿಯಿಂದ ಏಕೆ ನೋಡುತ್ತ ನಿಂದಿರುವೆ? ಎಲೆ ಬಿತ್ತರಿಯೆ, ಮುತ್ತಿನ ಮಾಲೆಯು ಕಿತ್ತು ಪೋಗದಂತೆ ಕತ್ತಿನಲ್ಲಿ ನಿಂತು ಪಕ್ಷಿಗಳಂ ಪಾರಿಸೆಂದು ನೀರಜಾಕ್ಷಿಯಂ ನಿಲ್ಲದೆ ಪೋಗಿ ಸೊಲ್ಲಿಸುವಳಾಗು. ಎಲೆ ರಾಜೀವಪಾದೆಯೇ, ರಾಜೋಪಚಾರಕ್ಕೆ ರಾಜಿ ಸುತ್ತ ಸೋಜಿಗವಂ ತೋರಿ ಈ ಜಗಕ್ಕೆ ಮೇಟಾಗಿರುವ ಗಂಧ ತಾಂಬೂಲ ಫಲ ಪುಷ್ಪಗಳನಿಂಬಾಗಿ ತಟ್ಟೆಗಳಲ್ಲಿ ತುಂಬಿ ಮಡಗಿ, ಪ್ರಶಸ್ತವಾದ ಹಸ್ತಪಾವಡೆಯಂ ಮುಚ್ಚಿ, ದೇವಿಯರ ಪಾದವಂ ತೊಳೆಯುಲೋಸುಗ ಪದ್ಮರಾಗದೆಣೆಯಿಲ್ಲದಣಿಯಾದ ಪಾತ್ರದಲ್ಲಿ ಪನ್ನೀರಂ ತುಂಬಿ, ದೊಂಬಿಗೊಂಡು ತುಂಬಿ ಬರುವ ದುಂಬಿಗಳ ದಾರಿಗೆ ನುಸಾರವಾಗಿ ಸೊಂಪಾದ ಸಂಪಗೆಯ ಮೊಗ್ಗುಗಳನ್ನು ಒಗ್ಗುಗೂಡಿಸಿ, ದೇವಿಯರ ಪಾದಸೇವೆಯಲ್ಲಿ ಮೋದದಿಂದ ಕಾದಿರುವಳಾಗು. ಎಲೆ ರಂಗುದುಟಿಯ ತುಂಗಸ್ತ ನದ ಮಂಗಳಾಂಗಿಯೇ, ಸಿಂಗರಂಗೊಂಡು ಮುಂಗಡೆಯ ಅಂಗಣದಲ್ಲಿ ಬಂಗಿಯಂ ತಿಂದ ಮಂಗನಂತೆ ನಿಂತು ನೋಡದೆ ಪಚ್ಚಗಪ್ಪುರದ ಪುಡಿಯಂ ಚೆಲ್ಲಿ ಪನ್ನೀರ ಚಳೆ ಯವನ್ನಿತ್ತು ಲಾಮಂಚದ ತಡಿಕೆಯ ಅಂಚಿನಲ್ಲಿ ಕಳೆಗುಂದದ ಚೆಂದದ ಕುಂದದ ಮಾಲೆಗಳನ್ನಳವಡಿಸಿ ದುಂಡುಮಲ್ಲಿಗೆಯ ದಂಡೆಗಳ ತಂಡಗಳನ್ನು ತುಂಡುಗೈದು ಹೆಚ್ಚಾದ ಕುಚ್ಚುಗಳಂ ರಚಿಸಿ, ದಿಕ್ಕುದಿಕ್ಕುಗಳಲ್ಲಿ ಪಲಬಗೆಯ ಪಕ್ಕಿಗಳು ಪೊಕ್ಕು ಕೊಕ್ಕುಗಳಿಂ ಕುಕ್ಕಿ ಚಪ್ಪರದ ಚಿಗುರುಗಳಂ ಚದುರಿಸದಂತೆ ಬೆದರಿಸುತ, ಚದುರತ ನದಿಂ ನಿಂತು ಕಾದಿರುವಳಾಗು. ಈಗ ದೇವಿಯರು ಬರುವ ಸಮಯವಾದುದು." ಎಂದು ಸಖಿಯರಂ ಕುರಿತು ಬುದ್ಧಿಯಂ ಪೇಳುತ್ತಿದ್ದಳು.

( ಶ್ರೀ ಕೃಷ್ಣರಾಜ ಸೂಕ್ತಿಮುಕ್ತಾವಳಿಯೊಳ್ ವತ್ಸರಾಜನ ಕಥೆ. )

ಈ ವರ್ಣನೆಯು ಅಂತಃಪುರದಲ್ಲಿ ರಾಜಸ್ತ್ರೀಯರು ತಮ್ಮ ಊಳಿಗದ ಹೆಣು ಗಳಿಗೆ ಆಜ್ಞೆಯಂ ಮಾಡುವ ರೀತಿಯಾಗಿರುವುದು.

ಇಲ್ಲಿ ಕವಿಯು ಅಂತಃಪುರದ ರಾಮಣೀಯಕ ಸ್ಥಿತಿಯನ್ನು ಮನೋಹರವಾಗಿ ತಿಳಿಸುತ್ತಾನೆ. ಇಲ್ಲಿ ಅಂತಃಪುರದ ಸೌಖ್ಯ ಸಂಪತ್ಸಮೃದ್ಧಿವಿಷಯದಲ್ಲಿ ಹೇಳಬೇ ಕಾದ ಸಂಗತಿಗಳನ್ನು ವಾಚ್ಯವಾಗಿ ಹೇಳದೆ, ವರ್ಣನೆಯಿಂದ ಊಹಿಸಿ ತಿಳಿದುಕೊ ಳ್ಳುವಹಾಗೆ ಮಾಡಿರುವುದು ಕವಿಗೆ ಅತಿಶಯವೇ ಸರಿ. ಅಂತಃಪುರವೆಂಬುದು ರಾಜರ ಸುಖಸ್ಥಾನವು. ದೊರೆಗಳೇ ಈ ಲೋಕದಲ್ಲಿ ಐಹಿಕ ಸೌಖ್ಯವನ್ನು ಸಂಪೂರ್ಣವಾಗಿ

ಅನುಭವಿಸತಕ್ಕವರು; ಅವರನ್ನು ಬಿಟ್ಟರೆ ಇತರರು ಯಾರಿಗೂ ಅಷ್ಟು ಸುಖವನ್ನು ಅನುಭವಿಸಲು ಸಾಧ್ಯವಿಲ್ಲ. ಆದರೂ ಅಂಥ ಸುಖವನ್ನು ಮನಸ್ಸಾಕ್ಷಾತ್ಕಾರದಿಂದ ಎಲ್ಲರೂ ಅನುಭವಿಸಬಹುದು. ಅಂತಃಪುರವಾದರೋ ಪ್ರಾಯಶಃ ಪ್ರಪಂಚದಲ್ಲಿ ನೋಡಿ ಅನುಭವಿಸಿ ಸುಖಪಡತಕ್ಕ ವಸ್ತುಗಳ ಭಂಡಾರವಾಗಿರುವುದು. ಪಕ್ಷಿಜಾತಿಗಳಲ್ಲಿಯೂ, ಮೃಗಜಾತಿಗಳಲ್ಲಿಯೂ, ವೃಕ್ಷಸಸ್ಯಾದಿಗಳಲ್ಲಿಯೂ ನೋಡತಕ್ಕವುಗಳೆಲ್ಲವೂ ಅಲ್ಲಿವೆ. ಅವುಗಳ ಸೊಗಸನ್ನು ಹೆಚ್ಚು ಮಾಡಲು ಬೇಕಾದ ಪರಿಕರಗಳೆಲ್ಲವೂ ಸಿದ್ಧವಾಗಿರುವುವು. ಅಂತಃಪುರದಲ್ಲಿ ಅಲ್ಲಲ್ಲಿ ವೃಕ್ಷಗಳಿಗೆ ಲತೆಗಳನ್ನು ಹಬ್ಬಿಸಿಯೂ; ವೃಕ್ಷಗಳ ಕೊಂಬೆಗಳು ಒಂದಕ್ಕೊಂದು ಹೆಣೆದುಕೊಂಡು ಪಚ್ಚೆಯ ಕೋಟೆಗಳಾಗಿ ಕಾಣುವಂತೆ ಮಾಡಿಯೂ; ನೆಲವನ್ನು ಪಾತಿಪಾತಿಗಳಾಗಿ ವಿಭಾಗಿಸಿ, ಆಯಾ ಪಾತಿಗಳಲ್ಲಿ ನಾನಾಬಣ್ಣದ ಪುಷ್ಪಗಳು ವಿಕಸಿಸಿ ಚಿತ್ರವಿಚಿತ್ರವಾದ ಆಕೃತಿಗಳುಂಟಾಗುವಂತೆ ಹೂಗಿಡಗಳನ್ನು ನೆಟ್ಟೂ, ದೊಡ್ಡದೊಡ್ಡ ಮರಗಳ ತಣ್ಣೆಳಲಲ್ಲಿ ಕುಳಿತುಕೊಳ್ಳಲು ಆಸನಗಳನ್ನಿಟ್ಟೂ; ಮೃಗಪಕ್ಷಿ ಮೊದಲಾದ ಪ್ರಾಣಿಗಳ ಸ್ವೇಚ್ಛಾವಿಹಾರಕ್ಕೆ ಅನುಕೂಲವಾದ ನಡೆಬಾವಿ, ಕೊಳ, ಕಟ್ಟೆ, ಪೊದರು, ಗೂಡು, ಗುಡ್ಡ, ದಿಣ್ಣೆ ಮೊದಲಾದವುಗಳನ್ನು ಅಲ್ಲಲ್ಲಿ ಕಲ್ಪಿಸಿಯೂ; ಬಿಸಿಲಿನ ತಾಪನಿವಾರಣಕ್ಕಾಗಿ ಅಲ್ಲಿಲ್ಲಿ ಧಾರಾಗೃಹಗಳನ್ನು ನಿರ್ಮಿಸಿಯೂ, ಇರುವರು. ಅಲ್ಲಲ್ಲಿ ಮರೆಯಲ್ಲಿ ನಿಂತು, ಚಕ್ರವಾಕ ದಂಪತಿಗಳು ಸ್ವೇಚ್ಛೆಯಾಗಿ ವಿಹರಿಸುವುದನ್ನೂ, ನವಿಲುಗಳು ಗರಿಗಳನ್ನು ಚಕ್ರಾಕಾರವಾಗಿ ಬಿಚ್ಚಿ ನಾಟ್ಯಮಾಡುವುದನ್ನೂ, ಜಿಂಕೆಗಳು ಹಚ್ಚಗಿರುವ ಗರಿಕೆಹುಲ್ಲನ್ನು ಕಚ್ಚಿ, ಆ ಕಚ್ಚಿದ ಹುಲ್ಲಿನ ಕಬಳವನ್ನು ಕತ್ತೆತ್ತಿ ನಾಲ್ಕುಕಡೆಗೂ ನೋಡುತ್ತ ಅಗಿದು ನುಂಗುವುದನ್ನೂ, ಹಂಸಗಳು ತಮ್ಮ ಚಲನೆಯಿಂದ ನೀರಿನಲ್ಲಿ ಸಣ್ಣ ಸಣ್ಣ ಚಕ್ರಗಳೂ ಉಂಟಾಗುವಂತೆ ಈಜಾಡುತ್ತಿದ್ದು, ಆಗಾಗ ಹುಳುಹೊಟ್ಟೆಗಳನ್ನು ತಿನ್ನಲು ತಲೆಮುಂದಾಗಿ ಮುಳುಗುವುದನ್ನೂ ನೋಡಿಯೂ, ಗಿಳಿಗಳು ಪಂಜರದಲ್ಲಿ ನುಡಿಸುತ್ತಿರುವ ನುಡಿಗಳನ್ನೂ ಕೋಗಿಲೆಗಳು ಇಂಪಾಗಿ ಪಾಡುವ ಪಂಚಮಸ್ವರವನ್ನೂ ಕೇಳಿಯೂ, ಅನುಭವಿಸುವ ಸುಖವನ್ನು ಮಾತಿನಿಂದ ತಿಳಿಸಲು ಯಾರಿಗೂ ಸಾಧ್ಯವಲ್ಲ. ಪರಿಚಯದಿಂದಲೇ ತಿಳಿಯತಕ್ಕವಾಗಿವೆ. ಇಂಥವುಗಳನ್ನೆಲ್ಲಾ ಅಂತಃಪುರದಲ್ಲಿ ಅನುಭವಿಸಬಹುದು. ಅಂತಃಪುರವು ಇಂಥ ಅತಿಶಯವಾದ ಸ್ಥಳವೆಂದು ಈ ವರ್ಣನೆಯಿಂದ ತಿಳಿದುಬರುವುದು.

ಮತ್ತು "ರತ್ನಹಾರೀತು ಪಾರ್ಥಿವಃ" ಎಂಬಂತೆ, ಅಂತಃಪುರದಲ್ಲಿ ರತ್ನ

ಪ್ರಾಯಕರಾದ ಸುಂದರಿಯರು ಅನೇಕರುಂಟು, ಅವರೇ ಸಕಲವಾದ ಊಳಿಗವನ್ನು ಮಾಡುತ್ತಿರುವವರು ಎಂಬ ವಿಷಯವು "ಚಂದ್ರಮುಖಿ," "ಘನಕೇಶಿ," "ಶುಕವಾಣಿ" ಇತ್ಯಾದಿ ಪದಪ್ರಯೋಗದಿಂದಲೂ, ಅಂಥ ಸ್ತ್ರೀಯರನ್ನೇ ಕುರಿತು ಆಜ್ಞಾಪ್ರಕಾರವು ಪ್ರವೃತ್ತವಾಗಿರುವುದರಿಂದಲೂ ತಿಳಿದು ಬರುತ್ತದೆ. ಮತ್ತು ಮೃಗಪಕ್ಷಿ ಮೊದಲಾದುವುಗಳ ಕಾಪಾಡುವ ಸೊಗಸು ಆಜ್ಞಾಪ್ರಕಾರದಲ್ಲಿ ನಿರೂಪಿತವಾಗುವುದು. ಮತ್ತು "ಎಲೆ ತುಂಬುಜವ್ವನದ ಕುಂಭಕುಚೆಯೆ" ಇತ್ಯಾದಿಯಾಗಿ ಕೊನೆಯವರೆಗಿನ ವಾಕ್ಯಗಳಿಂದ ಮಾನುಷಸುಖವನ್ನು ಹೆಚ್ಚಿಸಲ್ಕಿರುವ ಉಪಕರಣಗಳೆಲ್ಲವನ್ನು ಅಂತಃಪುರದಲ್ಲಿ ಉಪಯೋಗಿಸದೆ ಬಿಡರೆಂಬ ವಿಷಯವೂ ಗೊತ್ತಾಗುವುದು. ಅಂತಃಪುರದ ಅಂದವನ್ನು ಯಾವುದು ಕೆಡಿಸುವುದೋ ಅದನ್ನು ಮಾಡಕೂಡದು, ಯಾವುದು ಹೆಚ್ಚಿಸುತ್ತದೆಯೋ ಅದನ್ನು ಮಾಡಬೇಕು, ಎಂಬುದೇ ಆ ಆಜ್ಞಾವಾಕ್ಯಗಳಿಗೆ ಮುಖ್ಯತಾತ್ಪರ್ಯವೆಂದು ದೃಢವಾಗಿ ಹೇಳಬಹುದು. ಈತಾತ್ಪರ್ಯವನ್ನು ಕವಿಯು ವಾಚ್ಯಮರ್ಯಾದೆಯಲ್ಲಿ ತಿಳಿಸಿಲ್ಲ; ವ್ಯಂಗ್ಯಮರ್ಯಾದೆಯಲ್ಲಿಯೇ ತಿಳಿಸಿರುವನು. ಹಾಗೆ ತಿಳಿಸುವುದೇ ಕಾವ್ಯಕ್ಕೆ ಶೋಭಾವಹವೆಂದು ಕವಿಯು ಚೆನ್ನಾಗಿ ಬಲ್ಲನು. ಯಾವಕಾವ್ಯದಲ್ಲಿ ವಾಚ್ಯಾರ್ಥಕ್ಕಿಂತ ವ್ಯಂಗ್ಯಾರ್ಥವು ಅತಿಶಯವಾಗಿಯೂ ಮನೋಹರವಾಗಿಯೂ ಇದೆಯೋ, ಆ ಕಾವ್ಯವೇ ಉತ್ತಮವೆಂದು ರಸಜ್ಞರು ಹೇಳುವರು. ಈ ವಿಷಯವನ್ನು ಆಜ್ಞಾವಾಕ್ಯಗಳಲ್ಲಿ ಕೆಲವನ್ನು ತೆಗೆದುಕೊಂಡು ಪ್ರದರ್ಶನಮಾಡುವೆನು. ಮೊದಲನೆಯ ವಾಕ್ಯದಲ್ಲಿ:—ಎಲೆ ಚಂದ್ರಮುಖಿಯೇ ನೀನು ಚಂದ್ರಮುಖಿಯಾದುದರಿಂದ, ಚಕ್ರವಾಕ ದಂಪತಿಗಳು ನಿನ್ನ ಮುಖವನ್ನು ನೋಡಿ ಚಂದ್ರನೆಂದು ಭ್ರಮಿಸಿ ಚಂದ್ರೋದಯವಾಯಿತೆಂದು ತಿಳಿದು ದುಃಖದಿಂದ ಹಿರಿದುಹೋಗಿ ಕೊರಗಿ ಬಡವಾಗುವುವು: ಆದುದರಿಂದ ಅವುಗಳ ಹಿಂಡಿಗೆ ನುಗ್ಗಿ, ಅವುಗಳ ಅಂದವನ್ನು ಕೆಡಿಸಬೇಡ, ಎಂಬ ಅರ್ಥವೂ—ಎರಡನೆಯ ವಾಕ್ಯದಲ್ಲಿ—ಎಲೆ ನಾಗವೇಣಿಯೇ, ನವಿಲುಗಳು ನಿನ್ನ ವೇಣಿಯನ್ನು ಹಾವೆಂದು ನಂಬಿ, ನಾಟ್ಯವಾಡುವುದನ್ನು ನಿಲ್ಲಿಸಿ ಅದನ್ನು ತಿನ್ನಲು ನಿನ್ನ ಹತ್ತಿರ ಓಡಿಬರುವುವು: ಅದರಿಂದ ಮೇಘವೇ ಎಂದು ಭ್ರಮಿಸಿ ನಾಟ್ಯವಾಡುವುದಕ್ಕಾಗಿಯೇ ಏರ್ಪಾಡು ಮಾಡಿರುವ ನವಿಲುಮನೆಗಳ ಪ್ರಯೋಜನವೇ ಹೋಗುವುದಲ್ಲದೆ ಪ್ರೇಕ್ಷಕರ ಆನಂದವು ನಂದುವುದಾದುದರಿಂದ ಅಲ್ಲಿಗೆ ಹೋಗದಿರು, ಎಂಬ ಅರ್ಥವೂ—"ಎಲೆ ಘನಕೇಶಿಯೇ" ಇತ್ಯಾದಿ—ಎಲೆ ಘನಕೇಶಿಯೇ ಚಾತಕಗಳು ನಿನ್ನ ಕೇಶಪಾಶವನ್ನು

ನೋಡಿ ಮೇಘವೆಂದೂ, ನೀನು ಕೊಡುವ ನೀರನ್ನು ಮಳೆಯ ಹನಿಯೆಂದೂ ತಿಳಿದು ಕುಡಿದು ನಲಿದು ಉಬ್ಬಿಹೋಗುವುವು: ಆದುದರಿಂದ ನೀನೇ ಅವುಗಳಿಗೆ ನೀರನ್ನು ಕುಡಿಸು, ಎಂಬ ಅರ್ಥವೂ—"ಕಮಲಮುಖಿ" ಇತ್ಯಾದಿ—ಎಲೆ ಕಮಲಮುಖಿಯೇ, ಹಂಸಗಳಿಗೆ ನೀನು ತಾವರೆಯ ದಂಟನ್ನು ತಿನ್ನಲು ಕೊಟ್ಟರೆ, ನಿನ್ನ ಕೈಯ್ಯ ದಂಟನ್ನೂ ನಿನ್ನ ಮುಖವನ್ನೂ ನೋಡಿ, ಇದು ಕಿತ್ತು ತಂದ ತಾವರೆಯ ದಂಟಲ್ಲ, ಕೊಳದಲ್ಲಿರುವ ದಂಟೆಂದೇ ನಂಬಿ ಸಂತೋಷದಿಂದ ಮೆಲ್ಲುವುವು' ಎಂಬ ಅಭಿಪ್ರಾಯವೂ—"ಬಿಂಬಾಧರೆ" "ಪಲ್ಲವಪಾಣಿ" ಇತ್ಯಾದಿ—ಎಲೆ ಬಿಂಬಾಧರೆಯೇ, ನಿನ್ನ ಅಧರವನ್ನು ಕಂಡು ಬಿಂಬಫಲವೆಂದು ಗಿಳಿಗಳೂ, ಎಲೆ ಪಲ್ಲವಪಾಣಿಯೇ, ನಿನ್ನ ಕೈಯ್ಯನ್ನು ಚಿಗುರೆಂದು ಕೋಗಿಲೆಗಳೂ ಕಚ್ಚಿಬಿಡುವುವು; ಅದರಿಂದ ನಿನ್ನ ಅಧರದ ಮಾಧುರ್ಯವೂ, ನಿನ್ನ ಹಸ್ತದ ಸೊಂಪೂ ಹೋಗಿಬಿಡುವುವು, ಆದುದರಿಂದ ಅವುಗಳ ಗೂಡುಗಳ ಸಮೀಪಕ್ಕೆ ನೀವು ಹೊಗದಿರಿ ಎಂಬ ಆಶಯಗಳೂ—ಇತ್ಯಾದಿಗಳು ಇಲ್ಲಿ ಪದಸಮಭಿಹಾರದಿಂದ ಸೂಚಿಸಲ್ಪಡುವುವು.

ಹೀಗಿರಲು, ಈ ಉದಾಹರಣೆಯು ಜಾತಿ, ದ್ರವ್ಯ, ಕ್ರಿಯೆ, ಗುಣ, ಅಲಂಕಾರ, ಮುಖ್ಯವಾಗಿ ವ್ಯಂಗ್ಯ—ಇವುಗಳ ವಿಷಯದಲ್ಲಿರುವ ಕವಿಸಮಯಕ್ಕೆ ಉತ್ತಮೋದಾಹರಣವೆಂದು ನಿಸ್ಸಂದೇಹವಾಗಿ ಹೇಳಬಹುದು.

[1] ಏವಂಚ ಮೇಲೆ ನಿರೂಪಿಸಿದ ಪದ್ಯಗಳಿಂದ ಕವಿಸಮಯವಿಂಥದೆಂದು ತಿಳಿದುಬರುವುದೂ ಅಲ್ಲದೆ ಅದು ನಾಗವರ್ಮನು ಹೇಳಿದಂತೆ "ಲೋಕವಿಷಯಸ್ಥಿತಿಯಲ್ತು, "ಅಖಿಳಾಗಮಾರ್ಥಮುಂ ಅಲ್ತು" ಎಂಬುದೂ ಗೊತ್ತಾಗುವುದು. ಮತ್ತು ಆ ಕವಿಸಮಯವು ಜಾತಿ ದ್ರವ್ಯ ಕ್ರಿಯಾಗುಣಾಶ್ರಯವಾಗಿಯೂ, ಅಲಂಕಾರಾಶ್ರಯವಾಗಿಯೂ, ರಸಾಶ್ರಯವಾಗಿಯೂ, ವ್ಯಂಗ್ಯಾಶ್ರಯವಾಗಿಯೂ ಇದೆಯೆಂದೂ ಹೇಳಬಹುದು. [2] ಯದ್ಯಪಿ, ಅಲಂಕಾರವೂ ರಸವೂ ಜಾತಿ ದ್ರವ್ಯ ಕ್ರಿಯಾಗುಣಾತ್ಮಕವಾಗಿಯೇ ಇದ್ದರೂ ಅವುಗಳನ್ನು ಸ್ಪಷ್ಟೀಕರಣಕ್ಕಾಗಿ

---

1. ಏವಂಚ, ಅಥವಾ ಇತ್ಥಂಚ—ಎಂಬ ಮಾತುಗಳನ್ನು ವಿಷಯವನ್ನು ಸಿದ್ಧಾಂತಿಸುವಲ್ಲಿ, ಸಾಧಾರಣವಾಗಿ ಉಪಯೋಗಿಸುತ್ತಾರೆ. ಇದಕ್ಕೆ—ಹೀಗೆಲ್ಲಾ ಮೇಲೆ ನಿರೂಪಿಸಿದ ಪ್ರಮಾಣಗಳ ಬಲದಿಂದ, ಎಂದು ಅರ್ಥ. 2 ಹಾಗಿದ್ದರೂ.

ಬೇರೆಬೇರೆಯಾಗಿಯೇ ಹೇಳಿದ್ದೇನೆ. ಈ ವಿಷಯವು ಮೇಲಿನ ಪ್ರಕರಣಗಳಲ್ಲಿ ವ್ಯಕ್ತವಾಗುವುದು.

---

ಆ ಕವಿಸಮಯವು ಪರಂಪರಾಪ್ರಾಪ್ತವಾಗಿಯೂ ಇರಬೇಕು. ಇದನ್ನು ನಾಗವರ್ಮನು ತನ್ನ ಲಕ್ಷಣವಾಕ್ಯದಲ್ಲಿಯೂ ಹೇಳಿದ್ದಾನೆ. ಏಕೆ ಕವಿಸಮಯವು ಪರಂಪರಾಪ್ರಾಪ್ತವಾಗಿರಬೇಕೆಂದರೆ, ಅದು ಹಾಗೆ ಇರದಿದ್ದರೆ ಔಚಿತ್ಯಹಾನಿ, ರಸಭಂಗ, ಕಾವ್ಯಾಭಿವೃದ್ಧಿ ಪ್ರತಿಬಂಧಕಗಳು ಉಂಟಾಗುವುವು. ಹೇಗೆಂದರೆ? ಕವಿಸಮವೆಂಬುದು 'ಲೋಕಕವಿಸಮಯಸ್ಥಿತಿಯುಲ್ತು', 'ಅಖಿಳಾಗಮಾರ್ಥಮುಂ', ಅಲ್ತು; ಆದುದರಿಂದ ಒಬ್ಬ ಕವಿಯ ಸಂಕೇತವನ್ನು ಮತ್ತೊಬ್ಬನು ಅನುಮೋದಿಸದೆ ಬೇರೆಯೇ ಪ್ರವರ್ತಿಸಿದರೆ ಪಾಠಕರಿಗೆ ಅವರವರ ಆಶಯವನ್ನು ತಿಳಿವುದೇ ಕಷ್ಟವಾಗುವುದು. ಉದಾಹರಣೆಗಾಗಿ. ಕೀರ್ತ್ಯಕೀರ್ತಿಗಳು ದೃಶ್ಯಪದಾರ್ಥಗಳಲ್ಲವಾದುದರಿಂದ ಕೀರ್ತಿಗೆ ಬಿಳುಪುಬಣ್ಣವನ್ನೂ ಅಕೀರ್ತಿಗೆ ಕಪ್ಪುಬಣ್ಣವನ್ನೂ ಕೊಟ್ಟು ವರ್ಣಿಸುವುದು ಕವಿಸಂಪ್ರದಾಯ. ಆ ಸಂಪ್ರದಾಯವನ್ನುಲ್ಲಂಘಿಸಿ ಒಬ್ಬ ಕವಿಯು ಕೀರ್ತಿಗೆ ಕಪ್ಪುಬಣ್ಣವನ್ನು ಕೊಟ್ಟು ವರ್ಣಿಸಿದ್ದಾನೆಂದು ಇಟ್ಟುಕೊಳ್ಳೋಣ. ಚಿರಪರಿಚಯದಿಂದ ಕಪ್ಪಿಗೆ ವರ್ಣಿಸಿರುವುದನ್ನು ಓದುವಾಗ ಅಕೀರ್ತಿಯ ಜ್ಞಾನವೇ ಪಾಠಕರ ಹೃದಯದಲ್ಲಿ ಸಹಜವಾಗಿ ಹುಟ್ಟುವುದು. ಕವಿಯು ತಾನು ಬೇರೇ ಭಿನ್ನಸಂಕೇತದಿಂದ ವರ್ಣಿಸಿದ್ದೇನೆಂದು ಅಲ್ಲಿ ಸೂಚಿಸಿ ಇರುವುದಿಲ್ಲ. ಆದುದರಿಂದ ಪ್ರಥಮದಲ್ಲಿ ಹುಟ್ಟಿದ ಅಕೀರ್ತಿ ಜ್ಞಾನವೇ ಕೊನೆಯುವರೆಗೂ ಅನುಸರಿಸಿ ಬರುವುದು. ಕೊನೆಯಲ್ಲಿ ನಾವು ಭ್ರಮಿತರಾದೆವು; ಕೀರ್ತಿಯೇ ವರ್ಣಿಸಲ್ಪಟ್ಟಿರುವುದು ಎಂದು ತಿಳದುಬಗುವುದು. ಆಗ ಮನಸ್ಸು ಪೆಚ್ಚಾಗಿ ರಸಭಂಗವುಂಟಾಗುವುದು. ಹಾಗೆ ಅಲ್ಲದೆ ಕೀರ್ತಿಗೆ ಬಿಳುಪು ಬಣ್ಣವನ್ನೇ ಕೊಟ್ಟು ವರ್ಣಿಸಿದ್ದರೆ ಮೊದಲಿಂದ ರಸವು ವರ್ಣನೆಯಲ್ಲಿ ಹೆಚ್ಚುತ್ತ ಕೊನೆಗೆ ಪರಿಪಕ್ವದಶೆಗೆ ಬರುವುದು.

ಕವಿಯು ತನ್ನ ಭಾವವನ್ನು ಸ್ಪಷ್ಟವಾಗಿ ತಿಳಿಸದೆ ವರ್ಣನೆಯಿಂದ ಪಾಠಕರು ಊಹಿಸಿಕೊಳ್ಳುವಂತೆ ಮಾಡಬೇಕು. ಆಗಲ್ಲವೇ ಕವಿಯ ಭಾವದಲ್ಲಿ ಔಚಿತ್ಯವು ತೋರಿ ಬರುವುದು. ಆದುದರಿಂದ ಕವಿಸಮಯವು ಪರಂಪರಾಪ್ರಾಪ್ತವಾಗಿರದಿದ್ದರೆ ಕವಿಭಾವವು ಸ್ಪಷ್ಟವಾಗುವುದು ಕಷ್ಟ; ಔಚಿತ್ಯಹಾನಿಯುಂಟಾಗುವುದು.

ಅಲ್ಲದೆ ಕವಿಗಳಲ್ಲಿ ಪ್ರತಿಭೆಗೂ ಸ್ಪರ್ಧೆಗೂ ಅವಕಾಶವುಂಟಾಗುವುದಿಲ್ಲ. ಸ್ಪ

ರ್ಧೆಯೇ ಅಭಿವೃದ್ಧಿಗೆ ಕಾರಣವೆಂಬುದು ತಿಳಿದೇ ಇದೆ. ಒಬ್ಬ ಕವಿಯು ತನಗೆ ತೋರಿದಹಾಗೆ ತಾನು ಸಂಕೇತವನ್ನು ಕಲ್ಪಿಸಿ ವರ್ಣಿಸುವನು. ಅವನ ದಾರಿಯು ಬೇರೆಯೇ ಆಗುವುದು. ಚಮತ್ಕಾರದಲ್ಲಿ ಸ್ಪರ್ಧೆಗೆ ಅವಕಾಶವೇ ಇರುವುದಿಲ್ಲ. ಒಬ್ಬ ಕವಿಯು ಹೀಗೆ ವರ್ಣಿಸಿರುವನು, ಆ ವರ್ಣನೆಯನ್ನು ಇನ್ನೂ ಹೃದಯಂಗಮವಾಗಿಯೂ ಚಮತ್ಕಾರವಾಗಿಯೂ ಮಾಡಬೇಕೆಂಬ ಉತ್ಸಾಹವು ಹುಟ್ಟುವುದಿಲ್ಲ. "ನಿರಸ್ತಪಾದಪೇದೇಶೇ ಏರಂಡಃ ಸ್ಪದ್ರುಮಾಯತೇ" ಎಂಬಂತಾಗುವುದು. ಪಾಠಶಾಲೆಯಲ್ಲಿ ಅನೇಕರ ಜತೆಯಲ್ಲಿ ಓದುವುದಕ್ಕೂ ಒಬ್ಬನೇ ಓದುವುದಕ್ಕೂ ಇರುವ ತಾರತಮ್ಯವು ಇಲ್ಲಿ ಉಂಟಾಗುವುದು. ಎಲ್ಲರೂ ನಡೆದ ಮಾರ್ಗದಲ್ಲಿ ತಾನೂ ನಡೆದರೆ ತನಗೂ ಅವರಿಗೂ ಇರುವ ವ್ಯತ್ಯಾಸವು ತಿಳಿದುಬರುವುದು. ತನ್ನ ನಡತೆಯ ಕೊರತೆಯೂ ಗೊತ್ತಾಗುವುದು. ಹೀಗಿರುವುದರಿಂದ ತಾರತಮ್ಯಜ್ಞಾನವುಂಟಾಗಿ ಕವಿಗಳಲ್ಲಿ ನಾನು ವಿಾರಿಸಬೇಕು ತಾನು ವಿಾರಿಸಬೇಕೆಂಬ ಸ್ಪರ್ಧೆಯು ಹುಟ್ಟುವುದಕ್ಕೆ ಪ್ರಾಚೀನ ಕವಿಸಂಕೇತವನ್ನು ಅನುಮೋದಿಸುತ್ತ ಬರಬೇಕು. ಸ್ಪರ್ಧೆಯೇ ಉತ್ಕರ್ಷವನ್ನು ಪಡೆವುದಕ್ಕೆ ಯತ್ನಿಸಲು ಕಾರಣವೆಂಬುದು ಎಲ್ಲೆಲ್ಲಿಯೂ ಕಾಣಪಡುವುದರಿಂದ ಕವಿಗಳಲ್ಲಿಯೂ ಈ ವಿಧವಾದ ಸ್ಪರ್ಧೆಯು ಕಾವ್ಯಾಭಿವೃದ್ಧಿಗೆ ಕಾರಣವು.

ಈ ವಿಷಯವನ್ನು ಕವಿಗಳ ಸಜಾತೀಯವಾದ ಉಕ್ತಿಗಳಿಂದ ದಿಗ್ದರ್ಶನ ಮಾಡುವೆನು.

(1) ಮಾಕಂದಂ ಪೋತಿರೆ ಜಂ।
ಬೂಕುಜಫಲದಿಂ ಶುಕಾಳಿ ಸುರಿಯಾಯ್ತು ಪಿಕಂ ॥
ಮೂಕತೆವೆತ್ತಿರ್ಪುದರಿಂ।
ದೇಕಗ್ರಾಹಿಗೆ ಸುಬೋಧಯಂ ಸಮನಿಪುದೇ ॥

(ಜಗನ್ನಾಥವಿಜಯಂ)

ಮಾಕಂದಂ ಫಲಹೀನಮಾದ ಪದದೊಳ್ ಜಂಬೂಫಲಾಸ್ವಾದನ।
ಸ್ವೀಕಾರೋತ್ಸವದಿಂದದಂ ಮರೆದು ಕೀರಂ ಪ್ರೌಢಿಯಂ ತಾಳ್ದಿದ ॥
ತ್ತೇಕಗ್ರಾಹಿ ಕನಲ್ದು ಚೂತಕಳಿಕಾಸ್ವಾದವ್ಯವಚ್ಛೇದದಿಂ।
ಮೂಕೀಭಾವಮನಪ್ಪುಕೆಯ್ದುದವಿವೇಕವ್ಯಾಕುಳಂ ಕೋಕಿಳಂ ॥

(ಪಂಪರಾಮಾಯಣಂ)

ಇವು ವರ್ಷರ್ತುವಿನಲ್ಲಿ ಪ್ರಸಕ್ತವಾದ ವರ್ಣನೆಗಳು. ಕೋಕಿಲೆಯು ಮಾವಿನ ಚಿಗುರು, ಹೂವು, ಹೀಚು ಕಾಯಿ ಮಾತ್ರವೇ ತಿನ್ನುತ್ತದೆಯೆಂದೂ ಅದರಿಂದಲೇ ಅದಕ್ಕೆ ಪಂಚಮಸ್ವರವು ಉಂಟಾಗುತ್ತದೆಯೆಂದೂ ಕವಿಸಂಕೇತವು. ಈ ಸಂಕೇತಕ್ಕೆ "ವಸಂತಕಾಲೇ ಸಂಪ್ರಾಪ್ತೇ ಕಾಕಃಕಾಕಃ ಪಿಕಃಪಿಕಃ" ಎಂಬ ವಚನವೇ ದೃಷ್ಟಾಂತವಾಗಿದೆ.

ಈ ಕವಿಸಮಯವನ್ನೇ ವರ್ಷರ್ತು ವರ್ಣನೆಯಲ್ಲಿ ಉದ್ಯುಕ್ತರಾದ ಈ ಇಬ್ಬರು ಕವಿಗಳೂ ಉಪಯೋಗಿಸಿರುವರು. ಆ ವರ್ಣನೆಗಳನ್ನು ಚೆನ್ನಾಗಿ ಪರಾಮರ್ಶಿಸಿ ನೋಡಿದಾಗಲ್ಲವೆ ಅವರವರ ಪ್ರತಿಭಾಶಕ್ತಿಗಳಿಗಿರುವ ಭೇದವೂ, ಆದರಿಂದ ಪಾಠಕರ ಹೃದಯದಲ್ಲಿ ಈ ಕವಿಯು ಎಷ್ಟು ಶಕ್ತನೋ ಎಂಬ ಆಶ್ಚರ್ಯವೂ, ಆನಂದವೂ ಉಂಟಾಗುವುದು ವ್ಯಕ್ತವಾಗುವುದು.

ವರ್ಷಾಕಾಲವೆಂದು ಸೂಚಿಸುವುದಕ್ಕೆ ಇದೇ ಉತ್ತಮ ದೃಷ್ಟಾಂತ. ಈ ದೃಷ್ಟಾಂತದಲ್ಲಿ ಉತ್ತಮತ್ವವು ಹೇಗೆ? ವರ್ಷಾಕಾಲದಲ್ಲಿ ಸಂಭವಿಸುವ ಸಿಡಿಲು, ಗುಡುಗು, ಮಿಂಚು, ಜಡಿಮಳೆ ಮೊದಲಾದವುಗಳ ವರ್ಣನೆಯಲ್ಲಿ ಪಾಠಕರ ಹೃದಯದಲ್ಲಿ ಉದ್ವೇಗವೇ ಹುಟ್ಟುವುದು. ಕೇಕಾರುತಿ, ಶುಕ, ಪಿಕ, ಇಂದ್ರಗೋಪ, ಕಾಮನ ಬಿಲ್ಲು, ಮುಂತಾದುವುಗಳ ವರ್ಣನೆಯಲ್ಲಿ ಆಹ್ಲಾದವೇ ಹುಟ್ಟುವುದು. ಆದುದರಿಂದ ಶುಕಪಿಕಾದಿವರ್ಣನೆಯೇ ಈ ಋತುವಿಗೆ ತಕ್ಕುದು.

ಪ್ರಥಮಪದ್ಯಾರ್ಥ—ಶುಕಾಳಿ, ಮಾಕಂದಂ = ಮಾವಿನಮರವು, ಬೀತಿರೆ = ಪಲ್ಲವಪುಷ್ಪಾದಿ ಶೂನ್ಯವಾಗಲು, ಜಂಬೂಕುಜಫಲದಿಂ, ಸುಖಿಯಾಯ್ತು; ಪಿಕಂ, ಮೂಕತೆವೆತ್ತುದು = ಅಲಾಪಿಸದೆ ಮೂಕನಾಯಿತು; ಅದರಿಂದೆ ಏಕಗ್ರಾಹಿಗೆ = ಒಂದೇ ವಸ್ತುವೇ ಗತಿಯೆಂದಿರುವವನಿಗೆ, ಸುಖೋದಯಂ ಸಮನಿಪುದೇ?—ಎಂದು.

ಇಲ್ಲಿ ಕವಿಯು ಶುಕಪಿಕದೃಷ್ಟಾಂತದಿಂದ ಆಹ್ಲಾದವನ್ನು ಉಂಟುಮಾಡಿರುವುದಲ್ಲದೆ ಹಿತೋಪದೇಶವನ್ನೂ ಮಾಡಿರುತ್ತಾನೆ.

ದ್ವಿತೀಯಪದ್ಯ—ಪ್ರಥಮ ಶ್ಲೋಕದ ಅರ್ಥಾನುವಾದವೇ ಆಗಿದೆ. ಆದರೂ ಉಕ್ತಿಭಂಗಿ ಚೆಲುವಾಗಿ ಆಹ್ಲಾದವನ್ನು ಹೆಚ್ಚಿಸುತ್ತದೆ. ಮಾಕಂದಂ, ಫಲಹೀನಮಾದ ಪದದೊಳ್ = ಕಾಲದಲ್ಲಿ, ಜಂಬೂಫಲಾಸ್ವಾದನಸ್ವೀಕಾರೋತ್ಸವದಿಂದೆ, ಅದಂ ಮರೆದು, ಕೀರಂ = ಶುಕವು, ಪ್ರೌಢಿಯುಂ ತಾಳ್ದಿದತ್ತು = ಬುದ್ಧಿವಂತನೆಂದು

ತೋರಿಸಿ ಕೊಂಡಿತು ; ಏಕಗ್ರಾಹಿಯಾದ ಕೋಕಿಲವು, ಚೂತಕಲಿಕಾಸ್ವಾದವ್ಯವಚ್ಛೇದದಿಂ, ಕನಲ್ದು, ಮೂಕೀಭಾವಮಂ, ಅಪ್ಪುಕೆಯ್ದುದು = ಸ್ವೀಕರಿಸಿತು ; ಏಕೆಂದರೆ ಅದು ಅವಿವೇಕವ್ಯಾಕುಲಂ = ಅವಿವೇಕವುಳ್ಳದು, ಯುಕ್ತಾಯುಕ್ತಜ್ಞಾನವಿಲ್ಲದು, ಎಂದು ಪದ್ಯಾರ್ಥ.

ಮೇಲಿನ ಪದ್ಯಕ್ಕೂ ಇದಕ್ಕೂ ಇರುವ ತಾರತಮ್ಯವನ್ನು ವಿಚಾರಮಾಡಿ ನೋಡೋಣ. ಮೇಲಿನ ಪದ್ಯದಲ್ಲಿ ಹೆಚ್ಚಾಗಿ ಆಲೋಚಿಸಿದರಲ್ಲದೆ ಬುದ್ಧಿಗೋಚರವಾಗದ ಕೀರದ ಪ್ರೌಢಿಮೆಯನ್ನೂ, ಕೋಕಿಲದ ಅವಿವೇಕವನ್ನೂ, ಅವುಗಳ ಕೃತ್ಯದಿಂದಲೂ ಮತ್ತು "ಪ್ರೌಢಿಯಂ ತಾಳ್ದಿದತ್ತು," "ಅವಿವೇಕವ್ಯಾಕುಳಂ" ಎಂಬ ಪದಗಳ ಪ್ರಯೋಗಗಳಿಂದಲೂ ಇಲ್ಲಿ ತೋರ್ಪಡಿಸಿ ಇದೆ. ಮೇಲಿನ ಪದ್ಯದಲ್ಲಿ "ಮೂಕತೆವೆತ್ತಿರ್ದುದು," "ಸುಖಿಯಾಯ್ತು" ಎಂಬ ಪದಗಳಿಂದ ವ್ಯಕ್ತವಾಗುವ ಶುಕಪಿಕಗಳ ಸುಖದುಃಖಗಳನ್ನು ಈ ಪದ್ಯದಲ್ಲಿ ಅವುಗಳ ವ್ಯಾಪಾರದಿಂದ ಊಹಿಸಿಕೊಳ್ಳುವಹಾಗೆ ಕವಿಯು ಮಾಡಿರುತ್ತಾನೆ. ಮತ್ತು ಮೇಲಿನ ಪದ್ಯದಲ್ಲಿ ವಾಚ್ಯವಾಗಿ ಹೇಳಿರುವ ಹಿತೋಕ್ತಿಯು ಈ ಪದ್ಯದಲ್ಲಿ ವ್ಯಂಗ್ಯಮರ್ಯಾದೆಯಿಂದ ಗಮ್ಯವಾಗುವ ಹಿತೋಕ್ತಿಯು ಏಕದೇಶವಾಗಿರುವುದು. ಹೇಗೆ? "ಏಕಗ್ರಾಹಿ" ಯಾದವನು "ಅವಿವೇಕವ್ಯಾಕುಳನು" ದುಃಖಿಯೇ ಆಗುವನು, ಎಂಬ ಅರ್ಥವು ಇದರಲ್ಲಿ ಸ್ಪಷ್ಟವಾಗಿದೆ. ಹಿತೋಕ್ತಿಯನ್ನು ವಾಚ್ಯಕಕ್ಷ್ಯೆಯಲ್ಲಿ ಹೇಳುವುದಕ್ಕಿಂತ ವ್ಯಂಗ್ಯಮರ್ಯಾದೆಯಲ್ಲಿ ಹೇಳುವುದು ಮೇಲಲ್ಲವೆ?

ಮತ್ತೊಂದುದಾಹರಣೆ—

(2) ಈಂಗಡಲೊಳಗೋಲಾಡುವ ।
ಮೀಂಗಳ ಬಳಗಂಗಳೆಂಬಿನಂ ಶರದದ ಬೆ ॥
ಳ್ದಿಂಗಳೊಳಾಡಿದುವು ಚಕೋ ।
ರಂಗಳ್ ಚಂದ್ರಾಂಶುಪೂರ್ಣ ಚಂಚುಪುಟಂಗಳ್ ॥

(ಮಲ್ಲಿನಾಥಪುರಾಣಂ)

ನೆರೆದು ಚಕೋರಪ್ರಕರಂ ।
ಖರಚಂಚುವಿನುಡಿದು ತಿನೆ ಸುಧಾಕರಕಿರಣಾಂ ॥
ಕುರನಿಕರಮನಮರ್ದಿನ ಸೊನೆ ।
ಸುರಿದಪುದೆನೆ ಪಸರಿಸಿತ್ತು ಬೊಸವೆಳ್ದಿಂಗಳ್ ॥

(ಕವಿಕುಂಜರ ಲೀಲಾವತಿ)

ಈ ಎರಡು ಪದ್ಯಗಳೂ ಚಂದ್ರಿಕಾವರ್ಣನೆಯಲ್ಲಿ ಪ್ರವೃತ್ತವಾಗಿರುವುವು. ಇವೆರಡರಲ್ಲಿಯೂ ವರ್ಣನಾಪ್ರಕಾರವು ಬೇರೆಬೇರೆಯಾಗಿದ್ದರೂ ಚಕೋರಗಳು ಜ್ಯೋತ್ಸ್ನಾಪಾನಮಾಡುವುವೆಂಬುವುದೊಂದೇ ಕವಿಸಮಯವು. ಎರಡರಲ್ಲಿಯೂ ಆನಂದವು ಸಮಾನವಾಗಿರುವುದು.

ಮೊದಲನೆಯ ಪದ್ಯದಲ್ಲಿ ಚಂದ್ರಿಕಾಪೂರ್ಣವಾದ ಆಕಾಶವನ್ನು ಈಂಗಡಲೆಂದೂ, ಆಕಾಶದಲ್ಲಿ ಚಂದ್ರಿಕಾಪಾನದಿಂದ ನಲಿದಾಡುವ ಚಕೋರಗಳು ಈಂಗಡಲಲ್ಲಿ ಓಲಾಡುವ ಮೀನುಗಳೆಂದೂ ಉತ್ಪ್ರೇಕ್ಷಿಸಿ ಇದೆ.

ದ್ವಿತೀಯ ಪದ್ಯದಲ್ಲಿ ಚಕೋರಗಳು ಅನೇಕವಾಗಿ ಸೇರಿ ತಮ್ಮ ತೀಕ್ಷ್ಣವಾದ ಚಂಚುಗಳಿಂದ ಚಂದ್ರಕಿರಣಗಳೆಂಬ ಲತಾಂಕುರಗಳನ್ನು ಕಿತ್ತು ತಿನ್ನಲು, ಆ ಲತೆಗಳ ತುದಿಗಳಿಂದ ಬೆಳ್ಳಗೆ ಪ್ರಸರಿಸುವ ಹಾಲಿನಂತೆ—ಅಮೃತಕಿರಣನ ಕಿರಣಗಳು ಅಮೃತಧಾರೆಗಳೇ ಆಗಿರುವುದರಿಂದ, ಪೊಸತಾದ ಬೆಳದಿಂಗಳು ಸುರಿದಪುವು ಎಂದು ಉತ್ಪ್ರೇಕ್ಷಿಸಿ ಇದೆ. ಮೇಲಿನ ಪದ್ಯದಲ್ಲಿ ಚಕೋರಕ್ಕೆ ಮೀನಿನ ಆಕೃತಿಸಾಮ್ಯವು ಉಂಟಾಗುವುದಕ್ಕೆ "ಚಂದ್ರಾಂಶುಪೂರ್ಣ ಚಂಚುಪುಟಂಗಳ್" ಎಂದು ಪ್ರಯೋಗಿಸಿದೆ. ಈ ವಿಶೇಷಣದ ಅರ್ಥವನ್ನೇ ವಿಸ್ತರಿಸಿ "ಚಕೋರಪ್ರಕರಂ ಖರಚಂಚುವಿನುಡಿದು ತಿನೆ ಸುಧಾಕರಕಿರಣಾಂಕುರ ನಿಕರಮಂ" ಎಂದು ಮತ್ತೊಂದರಲ್ಲಿ ಹೇಳಿದೆ. ಮೀನುಗಳು ನೀರಿನಲ್ಲಿ ಓಲಾಡುವುದೂ, ಪಕ್ಷಿಗಳು ಲತಾಂಕುರಗಳನ್ನು ಛೇದಿಸಿ ತಿನ್ನುವುದೂ ಎಂಬ ಉಪಮಾನಗಳು ಸ್ವತಏವ ಪ್ರೇಕ್ಷಕರಿಗೆ ಆನಂದ ಕೊಡುವುದರಿಂದ ಅವುಗಳ ಸಾಹಚರ್ಯದಿಂದ ಉಪಮೇಯಗಳು ಆನಂದದಾಯಕಗಳೆಂಬುದು ಸಿದ್ಧ.

(3) ನಡೆಯಂ ವನ್ಯಗಜಂಗಳ ।
ನಡೆಯೊಳ್ ಸೋಗೆಗಳ ಸೋಗೆಯಂ ಸೋರ್ಮುಡಿಯೊಳ್ ॥
ನುಡಿಯಂ ಕೋಕಿಳರುತಿಯೊಳ್ ।
ಪಡಿಯಿಡಲೊಡನುಯ್ವೆ ತನಯ ಜನಕಾತ್ಮಜೆಯಂ ॥

(ಪಂಪರಾಮಾಯಣಂ)

ಅಂಚೆಗೆ ಮಂದಯಾನಮದಮಿಂದೊಳಸೋರ್ಗೆ ಮದೋತ್ಕಕೋಕಿಲ ।
ಕ್ಕಂ ಚಿರಮಕ್ಕೆ ಕಾಕಳಿಯ ಹೂಂಕೃತಿ ಭೃಂಗಚಯಕ್ಕೆ ಮೇಚಕೋ ॥

ದಂಚಿತದರ್ಪಮುಬ್ಬರಿಸದಿರ್ಕಿನಿಸಂ ಮೆರೆ ಬಂದು ನೀಂ ಬನ।
ಕ್ಕಂ ಚಪಲಾಕ್ಷಿ ನಿನ್ನ ನಡೆಯಂ ನುಡಿಯುಂ ಮುಡಿಯುಂ ವಿನೋದದಿಂ।
(ಚಂದ್ರಪ್ರಭಪುರಾಣಂ)

ಇಲ್ಲಿ ಕವಿಸಮಯವು ಸ್ಪಷ್ಟವು.

ಪ್ರಥಮಪದ್ಯ—ರಾಮನು ಜನಕಾತ್ಮಜೆಯನ್ನು ಅರಣ್ಯಕ್ಕೆ ಕರೆದುಕೊಂಡು ಹೋಗುವುದನ್ನು ನೋಡಿ ಕೌಸಲ್ಯೆಯು ಹೀಗೆ ಪ್ರಲಾಪಿಸುವಳು. ಸೋಗೆಯೆಂಬ ಪದಕ್ಕೆ ನವಿಲು, ನವಿಲಿನ ಗರಿ ಎಂಬೆರಡು ಅರ್ಥವೂ ಉಂಟು. ಸೋರ್ಮುಡಿ= ದೀರ್ಘವಾದ ಕೇಶಪಾಶ. ಪಡಿಯಿಡಲು=ಸಾದೃಶ್ಯನೋಡಲು.

ದ್ವಿತೀಯಪದ್ಯ—ಅಂಚೆಗೆ, ಮಂದಯಾನಮದವು=ತನ್ನ ಮಂದಯಾನಕ್ಕೆ ಸಮವೇ ಇಲ್ಲವೆಂಬ ಗರ್ವವು. ಇಂದು, ಒಳಸೋರ್ಗೆ=ಸೇದಿಹೋಗಲಿ; ಮದೋತ್ಕ=ಮದದಿಂದ ಕುತೂಹಲ ವಿಶಿಷ್ಟವಾದ, ಕೋಕಿಲಕ್ಕೂ, ಕಾಕಳಿಯ=(ಕಾಕಲೀತುಕಲೇಸೂಕ್ಷ್ಮೇ ಧ್ವನೌತುಮಧುರಾಸ್ಫುಟೇ ಇತ್ಯಮರಃ) ಮಧುರಧ್ವನಿಯ ವಿಷಯದಲ್ಲಿ, ಹೂಂಕೃತಿ=“ಪಂಚಮಸ್ವರ ಹಾಡುವುದರಲ್ಲಿ ನೀನೇನೀನೆಂದು ಗರ್ವ ಪಡಬೇಡ; ನಿನ್ನನ್ನು ಮೀರಿಸಿರುವರೂ ಉಂಟು. ನಿನ್ನ ಗರ್ವವು ಇಂದಿಗೆ ನಾಶ. ಇಗೋ ಕೇಳು!” ಎಂಬ ಅನ್ಯಕೃತ ತಿರಸ್ಕಾರವು, ಚಿರವಾಗಿ ಆಗಲಿ. ಭೃಂಗಚಯಕ್ಕೆ, ಮೇಚಕೋದಂಚಿತದರ್ಪವು=(ಕೃಷ್ಣೇನೀಲಾಸಿತಶ್ಯಾಮ ಕಾಲಶ್ಯಾಮಲಮೇಚಕಾಃ, ಇತ್ಯಮರಃ), ಇನಿಸಂ=ಎಳ್ಳಷ್ಟೂ ಉಬ್ಬರಿಸದಿರ್ಕೆ. ಚಪಲಾಕ್ಷಿ, ನೀಂ, ಬನಕ್ಕಂ ಬಂದು, ವಿನೋದದಿಂ ನಿನ್ನ ನಡೆಯಂ, ನುಡಿಯುಂ, ಮುಡಿಯಂ, ಮೆರೆ=ತೋರಿಸು: ಆಗ ಅಂಚೆಗೂ ಕೋಕಿಲಕ್ಕೂ ಭೃಂಗಕ್ಕೂ ದರ್ಪಕಿಡುವುದೆಂದು ಭಾವಾರ್ಥ.

ಹೀಗಿರಲು ಈ ಎರಡು ಪದ್ಯಗಳಲ್ಲಿಯೂ ನಾಯಿಕೆಯ ಸೌಂದರ್ಯವೂ, ತನ್ನಿರೂಪಕ ವ್ಯಾಪಾರವೂ ಒಂದೇ ವಿಧವಾಗಿದ್ದರೂ ಎರಡನೆಯ ಪದ್ಯವನ್ನು ಬರೆದ ಕವಿಯು ಪ್ರೌಢನೆಂಬುದು ತಿಳಿದುಬರುತ್ತದೆ.

(4) ತೀಡುವ ಪಕ್ಷಿಮಾನಿಳನ ತೀಟದೊಳುತ್ಕಟಮಾಗೆ ರಾಗಮಿ।
ರ್ಪೋಡಿದ ಚಂಚುವಂ ತೆರೆದರಂಕೆಯುಗಲ್ದಿರೆ ಕಂಠನಾಳಮಂ॥
ನೀಡಿ ವಿಯತ್ತಳಕ್ಕೊಗೆದು ಕಾರ ಮುಗಿಲ್ಪನಿಯಂ ಮನಂ ಕುಳಿ।
ರ್ಕೋಡುವಿನಂ ಕದುರ್ಕಿ ನಲಿದಾಡಿದುದಾಗಳದೊಂದು ಚಾತಕಂ॥
(ಪಂಪರಾಮಾಯಣಂ)

ನೆಗೆದುದು ಸಾರ್ದು ಪೊರ್ದಿತಮರಿತ್ತು ತುಳುಂಕಿತು ಬೆಂಗೆ ನೀರ ಧಾ।
ರೆಗಳುರೆ ಸಾಂಟಲೀಂಟಿದುದು ನೇಹದೆ ನೋಡಿತುದಂಚಚಂಚುವಿಂ ॥
ದುಗಿದುದು ಪಕ್ಕದಿಂ ಪೊಡೆದುದಂಘ್ರಿಗಳಿಂದೊದೆದತ್ತು ನೆತ್ತಿಯಿಂ।
ನಗೆಪಿದುದಪ್ಪಿತಳ್ಕಿರಿದುದಂಬುಕಣಂಗಳನೊಂದು ಚಾತಕಂ ॥

(ಗಿರಿಜಾಕಲ್ಯಾಣಂ)

ವರ್ಷಾಕಾಲದಲ್ಲಿ ಮುಂಗಾರಮಳೆಯ ಹನಿಗಳನ್ನು ಚಾತಕಗಳು ಪಾನಮಾಡು ತ್ತವೆಯೆಂಬ ಕವಿಸಮಯದಿಂದ ಈ ಸ್ವಭಾವೋಕ್ತಿ ವರ್ಣನೆಗಳು ಪ್ರಾಪ್ತವಾಗಿರು ವುವು. ಮಳೆ ಬರುವುದಕ್ಕೆ ಮೊದಲು ಉಂಟಾಗುವ ನಸುಗತ್ತಲೆಯಲ್ಲಿ ಚಾತಕಗಳು ಮಾತ್ರವೇ ಹಾರಾಡುತ್ತವೆ; ಇತರ ಪಕ್ಷಿಗಳಾವುವೂ ಹಾರಾಡುವುದಿಲ್ಲ. ಇದನ್ನು ನೋಡಿ ಕವಿಗಳು ಹೀಗೆ ಸಂಕೇತ ಮಾಡಿರುವರೋ ಎಂಬ ಊಹೆಗೆ ಅವಕಾಶ ವುಂಟು.

ಪ್ರಥಮ ಪದ್ಯಾರ್ಥ—ತೀಡುವ = ಬೀಸುವ, ಪಶ್ಚಿಮಾನಿಳನ ತೀಟದೊಳ್, ರಾಗಂ = ಚಾತಕಕ್ಕೆ ಪ್ರೀತಿಯು ಎಂದರೆ "ಇನ್ನೇನು! ಮಳೆ ಬೀಳುವುದು; ಹನಿಯನ್ನು ಕುಡಿದು ದಾಹ ತೀರಿಸಿಕೊಳ್ಳುವೆನು" ಎಂಬ ಆಶೆಯು, ಉತ್ಕಟವಾಗೆ = ಹೆಚ್ಚಾಗಲು: ಇಪ್ಪೋರ್ಗಿದ = ದ್ರವವು ಹೋದ, ಶುಷ್ಕವಾದ; ಚಂಚುವಂ ತೆರೆ ದು, ಎರಂಕೆ = ರೆಕ್ಕೆಯು, ಅಗಲ್ವಿರೆ = ಅಗಲಿರಲು; ಕಂಠನಾಳಮಂ = ನಾಳದಂತೆ ನೀಟಾಗಿರುವ ಕಂಠವನ್ನು ನೀಡಿ, ವಿಯತ್ತಳಕ್ಕೆ = ಆಕಾಶಕ್ಕೆ, ಹಾರಿ, ಒಗೆದು, ಕಾರ = ವರ್ಷಾಕಾಲದ, ಮುಗಿಲ ಹನಿಯನ್ನು, ಮನಂ, ಕುಳಿರ್ಕೊರ್ಡುವಿನಂ = ತಣ್ಣತಣ್ಣನೆಯಾಗುವವರೆಗೂ, ಕರ್ದುಂಕಿ, (ಪಕ್ಷಿಗಳ ವ್ಯಾಪಾರವಾದುದರಿಂದ ಕರ್ದುಕಿ ಎಂದು ಪ್ರಯೋಗಿಸಿದೆ, ಕುಡಿದು ಎಂದು ಹೇಳಿಲ್ಲ.) ಆಗಳ್, ಒಂದು ಚಾತಕಂ ನಲಿದಾಡಿದುದು ಎಂದು.

ಈ ಪದ್ಯದಲ್ಲಿ ಚಾತಕವು ಆಕಾಶಕ್ಕೆ ಸಂತೋಷದೊಡನೆ ನೆಗೆದ ರೀತಿಯು ಪಾಠಕರ ಹೃದಯವನ್ನು ವಿಸ್ತರಿಸದೆ ಇರದು.

ದ್ವಿತೀಯ ಪದ್ಯಾರ್ಥ—ಒಂದು ಚಾತಕಂ, ನೆಗೆದುದು; ಸಾರ್ದು ಪೊರ್ದಿತು ಅಮರಿತ್ತು = ನೋಡುವುದಕ್ಕೆ ಸೊಗಸಾಗಿತ್ತು; ತುಳುಂಕಿತು = ತುಳುಕಾಡಿತು; ಬೆಂಗೆ ನೀರ ಧಾರೆಗಳ್, ಉರೆ ಸಾಂಟಲ್ = ಚೆನ್ನಾಗಿ ನಾಟಿಕೊಳ್ಳಲು, ಅಂಬುಕಣಂ ಗಳಂ ಈಂಟಿದುದು = ಪಾನಮಾಡಿತು; ನೇಹದೆ = ಪ್ರೀತಿಯಿಂದ, ನೋಡಿತು;

ಉದಂಚಿತಚಂಚುವಿಂ = ಉದ್ದವಾದ ಕೊಕ್ಕಿನಿಂದ, ಉಗಿದುದು = ಚಿಗುಟಿತು; ಪಕ್ಕದಿಂ = ರೆಕ್ಕೆಯಿಂದ, ಪೊಡೆದುದು ; ಅಂಘ್ರಿಗಳಿಂದೊದೆದತ್ತು ; ನೆತ್ತಿಯಿಂದೆ ನೆಗೆಪಿದುದು = ಮೇಲಕ್ಕೆ ಹಾರಿಸಿತು ; ಅಪ್ಪಿತು, ಅಳ್ಳಿರಿದುದು = ಹಾರಿಸಿತು ಎಂದು.

ಈ ಪದ್ಯದಲ್ಲಿ ಪಕ್ಷಿಗಳು ನೀರಿನಲ್ಲಿ ಮಾಡುವ ವ್ಯಾಪಾರಗಳೆಲ್ಲವನ್ನೂ ಸ್ವಲ್ಪವೂ ಬಿಡದೆ ಕ್ರಮತಪ್ಪದೆ ಎಷ್ಟು ಆಹ್ಲಾದಕರವಾಗಿ ವರ್ಣಿಸಿರುವುದು !

ಈ ಯೆರಡು ಪದ್ಯಗಳ ಅರ್ಥವು ತಿಳಿದಮೇಲೆ ಆ ವರ್ಣನೆಗಳ ತಾರತಮ್ಯಜ್ಞಾನವೂ ಸ್ಪಷ್ಟವಾಗುವುದಲ್ಲದೆ ಲೋಕಪರಿಚಯವಿಲ್ಲದಿದ್ದರೆ ಸ್ವಭಾವವನ್ನು ಹೃದಯಂಗಮವಾಗಿ ವರ್ಣಿಸುವುದಕ್ಕಾಗುವುದಿಲ್ಲವೆಂದೂ ತಿಳಿಯಬಹುದು.

(೫) ಇದಿರೊಳ್ ನಿಂದಿರ್ದೊಡಂಗಕ್ಕಡರೆ ತೊಡೆದ ಬಾವನ್ನದಂತಾವಗಂ ನೋ
ಡಿದ ಕಣ್ಗಳ್ಗಿಟ್ಟ ತೆಳ್ಗಪ್ಪುರದ ಸಲಗೆಯುಂತಕ್ಕರಿಂ ಕೂಡಿ ಕೊಂಡಾ॥
ಡಿದ ಬಾಯೊ ೞರಂದದಿಂ ತೀವಿದ ತನಿಗೆನೆವಾಲಂತೆ ನೇರ್ಪಟ್ಟ ನಿನ್ನ ।
ಗ್ಗದ ದೇಹಚ್ಛಾಯೆಯಿಂ ತಣ್ಣನೆ ತಣಿಯದೆ ಲೋಕತ್ರಯಂ ಚಂದ್ರನಾಥಾ॥
(ಗುಣವರ್ಮನ ಚಂದ್ರನಾಥಾಷ್ಟಕಂ)

ಪಡೆದವತಂಸಮಂ ಕಿವಿಗೆ ನುಣ್ನುಡಿಯಿಂ ದರಹಾಸರಶ್ಮಿಯಿಂ ।
ಪಡೆದೆನಸುಂ ನಿಜಾಕೃತಿಗೆ ಚಂದನದಣ್ಪನಪಾಂಗರೋಚಿಯಿಂ ॥
ಪಡೆದಳಿಕುಂತಲಕ್ಕಲರ ಬಾಸಿಗಮಂ ತನಗಂದು ಸೋಂಕಿನಿಂ ।
ಪಡೆದನುಡಲ್ ನೃಪಂ ಸತಿಯ ಮೆಯ್ಪುಳಗೆಂಬ ನವೀನಚೀನಮಂ ॥
(ಚಂದ್ರಪ್ರಭಪುರಾಣಂ)

ಈ ಯೆರಡು ಪದ್ಯಗಳೂ ಒಂದೇ ಕವಿಸಮಯದ ಆಧಾರವುಳ್ಳವುಗಳು. ಪ್ರಥಮ ಪದ್ಯಾರ್ಥವು ಹಿಂದೆ ( ಪುಟ ೧೬ ರಲ್ಲಿ ) ವಿಸ್ತೃತವಾಗಿರುವುದು.

ದ್ವಿತೀಯ ಪದ್ಯಾರ್ಥ—ನೃಪಂ, ಅಂದು, ಸತಿಯ ನುಣ್ನುಡಿಯಿಂ, ತನ್ನ ಕಿವಿಗೆ ಅವತಂಸಮಂ = ಪುಷ್ಪಾಭರಣವನ್ನು ಪಡೆದು; ದರಹಾಸರಶ್ಮಿಯಿಂ, ನಿಜಾಕೃತಿಗೆ, ಚಂದನದಣ್ಪಂ, ಎನಸುಂ ಪಡೆದು ; ಅಪಾಂಗರೋಚಿಯಿಂ, ತನ್ನ ಅಳಿಕುಂತಳಕ್ಕೆ, ಅಲರ ಬಾಸಿಗಮಂ ಪಡೆದು ; ಸೋಂಕಿನಿಂ, ಅವಳ ಮೆಯ್ಪುಳಗೆಂಬ ನವೀನಚೀನಮಂ, ತನಗೆ ಉಡಲ್ ಪಡೆದಂ—ಎಂದು ಅನ್ವಯ.

ಇಲ್ಲಿ, ಒಂದು ಶ್ಲೋಕವು ಶೃಂಗಾರರಸದಲ್ಲಿ ಪ್ರವೃತ್ತವಾಗಿದೆ; ಮತ್ತೊಂದು ಶಾಂತಿರಸದಲ್ಲಿ. ಆಯಾ ರಸಗಳಿಗನುಕೂಲವಾದ ವರ್ಣನಾವೈಖರಿಗಳು ಹೊರಟಿವೆ.

ಎರಡನೆಯ ಪದ್ಯದಲ್ಲಿ ಶೃಂಗಾರರಸೋದ್ದೀಪಕ ಸಾಮಗ್ರಿಗಳು ಹೇಳಲ್ಪಟ್ಟವೆ. ಮೊದಲನೆಯದರಲ್ಲಿ ವೈರಾಗ್ಯರಸಕ್ಕೆ ಉಚಿತವಾದುವುಗಳು. ಎರಡು ಪದ್ಯಗಳೂ ರಸಪುಷ್ಟಿಯಲ್ಲಿ ಒಂದೇ ತುಲೆಯಲ್ಲಿರುವುವು. ಆಯಾ ರಸಗಳನ್ನು ಉತ್ಪಾದಿಸುವುದರಲ್ಲಿ ಇನ್ನೂ ಅತಿಶಯವಾಗಿ ವರ್ಣಿಸುವುದು ಅಸಾಧ್ಯವೆಂದೇ ತೋರುತ್ತದೆ. ರಸಪುಷ್ಟಿಯಲ್ಲಿ ಎರಡೂ ಪರಭಾಗವನ್ನು ಹೊಂದಿವೆ.

ಮತ್ತು

(6) ವಾಯುವಿನಲ್ಲಿ ಮಾಂದ್ಯ ಶೈತ್ಯ ಸೌರಭ್ಯರೂಪವಾದ ಗುಣಗಳು ಇರಬೇಕು. ಅವುಗಳಿಲ್ಲದಿದ್ದರೆ ವಾಯುಚಲನವು ಆಹ್ಲಾದಕರವಾಗಿಯೂ ಹಿತವಾಗಿಯೂ ಇರದು. ಈ ಗುಣಗಳನ್ನು ಇಟ್ಟುಕೊಂಡು ಸಂದರ್ಭೋಚಿತವಾಗಿ ರಸೋತ್ತೇಜಕವಾಗುವಂತೆ ವರ್ಣಿಸುವ ನಿಮಿತ್ತ ಪುಂಸ್ತ್ವಾರೋಪಣವನ್ನು ಮಾಡಿ ಕವಿಗಳು ವರ್ಣಿಸುವ ಸಂಕೇತವುಂಟು. ಚೈತನ್ಯಕಾರ್ಯವನ್ನು ವರ್ಣಿಸುವಾಗ ನಮಗೆ ಸಜಾತೀಯ ವಿಜಾತೀಯ ಪ್ರಾಣಿಗಳಂತೆ ಉತ್ಪ್ರೇಕ್ಷಿಸಿ ಹೇಳದಿದ್ದರೆ ತನ್ನಿರೂಪಿತ ವ್ಯಾಪಾರಗಳು ಸ್ಪಷ್ಟವಾಗಲಾರವು. ಆದುದರಿಂದ ಕವಿಗಳು ವಾಯುವಿಗೆ ತತ್ತತ್ಸಂದರ್ಭಕ್ಕೆ ಉಚಿತವಾದ ರೀತಿಯಲ್ಲಿ ಪುಂಸ್ತ್ವಾರೋಪ ಮಾಡಿಯೇ ಪ್ರಾಯಶಃ ವರ್ಣಿಸುವರು. ಆಯಾ ವರ್ಣನೆಗಳನ್ನು ನೋಡಿದಾಗಲ್ಲವೆ ಕವಿಸಮಯವು ಕವಿಗಳ ಪ್ರತಿಭೆಗೆ ಹೇಗೆ ಅವಕಾಶವನ್ನು ಕೊಡುತ್ತದೆಯೋ ಅದನ್ನು ತಿಳಿಯಬಹುದು.

ಉದಾಹರಣೆ :—

೧. ನೆಲಸುತ್ತುಂ ಕೊಳದೊಳ್ ಸರೋಜಮುಕುಳಂ ಸಸ್ಮೇರಮಪ್ಪಂತು ಜ ।
ಕ್ಕುಲಿಸುತ್ತುಂ ಪೊಸತಂ ಲತಾಪ್ರಸವಮುಂ ಮುಂದಾಡಿ ತಣ್ಗಂಪನ ॥
ಗ್ಗಲಿಸುತ್ತುಂ ಪರಪುಷ್ಟಕೀರರವಮಂ ತಂದೊಂದನೊಂದೊಂದರೊಳ್ ।
ಕಲಸುತ್ತುಂ ಬನದಿಂ ವಿನೋದಚತುರಂ ಬಂದತ್ತು ಮಂದಾನಿಲಂ ॥

( ಮಲ್ಲಿನಾಥಪುರಾಣಂ )

---

ಟಿಪ್ಪಣಿ—ಸಸ್ಮೇರ ಮಪ್ಪಂತು = ಹುಸಿನಗೆ ನಗುವಹಾಗೆ, ಜಕ್ಕುಲಿಸುತ್ತುಂ = ಆಟವಾಡಿಸಿ. ಮುಂದಾಡಿ...ಸುತ್ತುಂ = ತಲೆಸವರಿ, ಅವರಿಗೂ ತಿಳಿಯದಂತೆ ತಣ್ಗಂಪನ್ನು ಅಪಹರಿಸಿ.

ಉದಂಚಿತಚಂಚುವಿಂ = ಉದ್ದವಾದ ಕೊಕ್ಕಿನಿಂದ, ಉಗಿದುದು = ಜಿಗುಟಿತು; ಪಕ್ಕದಿಂ = ರೆಕ್ಕೆಯಿಂದ, ಪೊಡೆದುದು ; ಅಂಘ್ರಿಗಳಿಂದೊದೆದತ್ತು ; ನೆತ್ತಿಯಿಂದೆ ನೆಗೆಪಿದುದು = ಮೇಲಕ್ಕೆ ಹಾರಿಸಿತು ; ಅಪ್ಪಿತು, ಅಳ್ಳಿರಿದುದು = ಹಾರಿಸಿತು ಎಂದು.

ಈ ಪದ್ಯದಲ್ಲಿ ಪಕ್ಷಿಗಳು ನೀರಿನಲ್ಲಿ ಮಾಡುವ ವ್ಯಾಪಾರಗಳೆಲ್ಲವನ್ನೂ ಸ್ವಲ್ಪವೂ ಬಿಡದೆ ಕ್ರಮತಪ್ಪದೆ ಎಷ್ಟು ಆಹ್ಲಾದಕರವಾಗಿ ವರ್ಣಿಸಿರುವುದು !

ಈ ಯೆರಡು ಪದ್ಯಗಳ ಅರ್ಥವು ತಿಳಿದಮೇಲೆ ಆ ವರ್ಣನೆಗಳ ತಾರತಮ್ಯಜ್ಞಾನವೂ ಸ್ಪಷ್ಟವಾಗುವುದಲ್ಲದೆ ಲೋಕಪರಿಚಯವಿಲ್ಲದಿದ್ದರೆ ಸ್ವಭಾವವನ್ನು ಹೃದಯಂಗಮವಾಗಿ ವರ್ಣಿಸುವುದಕ್ಕಾಗುವುದಿಲ್ಲವೆಂದೂ ತಿಳಿಯಬಹುದು.

(೨) ಇದಿರೊಳ್ ನಿಂದಿರ್ದೊಡಂಗಕ್ಕಡರೆ ತೊಡೆದ ಬಾವನ್ನದಂತಾವಗಂ ನೋ
ಡಿದ ಕಣ್ಗಳ್ಗಿಟ್ಟ ತೆಳ್ಗರ್ಪೂರದ ಸಲಗೆಯಂತಕ್ಕರಿಂ ಕೂಡಿ ಕೊಂಡಾ॥
ಡಿದ ಬಾಯೊಳ್ ರಂದದಿಂ ತೀವಿದ ತನಿಗೆನೆವಾಲಂತೆ ನೇರ್ಪಟ್ಟ ನಿನ್ನ ।
ಗ್ಗದ ದೇಹಚ್ಛಾಯೆಯಿಂ ತಣ್ಣನೆ ತಣಿಯದೆ ಲೋಕತ್ರಯಂ ಚಂದ್ರನಾಥಾ॥
(ಗುಣವರ್ಮನ ಚಂದ್ರನಾಥಾಷ್ಟಕಂ)

ಪಡೆದವತಂಸಮಂ ಕಿವಿಗೆ ಸುಣ್ಣಿಡಿಯಿಂ ದರಹಾಸರಶ್ಮಿಯಿಂ ।
ಪಡೆದೆನಸುಂ ನಿಜಾಕೃತಿಗೆ ಚಂದನದಣ್ಪನಪಾಂಗರೋಚಿಯಿಂ ॥
ಪಡೆದಳಿಕುಂತಲಕ್ಕಲರ ಬಾಸಿಗಮಂ ತನಗಂದು ಸೋಂಕಿನಿಂ ।
ಪಡೆದನುಡಲ್ ನೃಪಂ ಸತಿಯ ಮೆಯ್ವಳಗೆಂಬ ನವೀನಚೀನಮಂ ॥
(ಚಂದ್ರಪ್ರಭಪುರಾಣಂ)

ಈ ಯೆರಡು ಪದ್ಯಗಳೂ ಒಂದೇ ಕವಿಸಮಯದ ಆಧಾರವುಳ್ಳವುಗಳು. ಪ್ರಥಮ ಪದ್ಯಾರ್ಥವು ಹಿಂದೆ ( ಪುಟ ೧೬ ರಲ್ಲಿ ) ವಿಸ್ತೃತವಾಗಿರುವುದು.

ದ್ವಿತೀಯ ಪದ್ಯಾರ್ಥ—ನೃಪಂ, ಅಂದು, ಸತಿಯ ಸುಣ್ಣಿಡಿಯಿಂ, ತನ್ನ ಕಿವಿಗೆ ಅವತಂಸಮಂ = ಪುಷ್ಪಾಭರಣವನ್ನು ಪಡೆದು; ದರಹಾಸರಶ್ಮಿಯಿಂ, ನಿಜಾಕೃತಿಗೆ, ಚಂದನದಣ್ಪಂ, ಎನಸುಂ ಪಡೆದು ; ಅಪಾಂಗರೋಚಿಯಿಂ, ತನ್ನ ಅಳಿಕುಂತಳಕ್ಕೆ, ಅಲರ ಬಾಸಿಗಮಂ ಪಡೆದು; ಸೋಂಕಿನಿಂ, ಅವಳ ಮೆಯ್ವಳಗೆಂಬ ನವೀನಚೀನಮಂ, ತನಗೆ ಉಡಲ್ ಪಡೆದಂ—ಎಂದು ಅನ್ವಯ.

ಇಲ್ಲಿ, ಒಂದು ಶ್ಲೋಕವು ಶೃಂಗಾರರಸದಲ್ಲಿ ಪ್ರವೃತ್ತವಾಗಿದೆ; ಮತ್ತೊಂದು ಶಾಂತಿರಸದಲ್ಲಿ. ಆಯಾ ರಸಗಳಿಗನುಕೂಲವಾದ ವರ್ಣನಾವೈಖರಿಗಳು ಹೊರಟಿವೆ.

ಎರಡನೆಯ ಪದ್ಯದಲ್ಲಿ ಶೃಂಗಾರರಸೋದ್ದೀಪಕ ಸಾಮಗ್ರಿಗಳು ಹೇಳಲ್ಪಟ್ಟಿವೆ. ಮೊದಲನೆಯದರಲ್ಲಿ ವೈರಾಗ್ಯರಸಕ್ಕೆ ಉಚಿತವಾದುವುಗಳು. ಎರಡು ಪದ್ಯಗಳೂ ರಸಪುಷ್ಟಿಯಲ್ಲಿ ಒಂದೇ ತುಲೆಯಲ್ಲಿರುವುವು. ಆಯಾ ರಸಗಳನ್ನು ಉತ್ಪಾದಿಸುವುದರಲ್ಲಿ ಇನ್ನೂ ಅತಿಶಯವಾಗಿ ವರ್ಣಿಸುವುದು ಅಸಾಧ್ಯವೆಂದೇ ತೋರುತ್ತದೆ. ರಸಪುಷ್ಟಿಯಲ್ಲಿ ಎರಡೂ ಪರಭಾಗವನ್ನು ಹೊಂದಿವೆ.

ಮತ್ತು

(6) ವಾಯುವಿನಲ್ಲಿ ಮಾಂದ್ಯ ಶೈತ್ಯ ಸೌರಭ್ಯರೂಪವಾದ ಗುಣಗಳು ಇರಬೇಕು. ಅವುಗಳಿಲ್ಲದಿದ್ದರೆ ವಾಯುಚಲನವು ಆಹ್ಲಾದಕರವಾಗಿಯೂ ಹಿತವಾಗಿಯೂ ಇರದು. ಈ ಗುಣಗಳನ್ನು ಇಟ್ಟುಕೊಂಡು ಸಂದರ್ಭೋಚಿತವಾಗಿ ರಸೋತ್ತೇಜಕವಾಗುವಂತೆ ವರ್ಣಿಸುವ ನಿಮಿತ್ತ ಪುಂಸ್ತ್ವಾರೋಪಣವನ್ನು ಮಾಡಿ ಕವಿಗಳು ವರ್ಣಿಸುವ ಸಂಕೇತವುಂಟು. ಚೈತನ್ಯಕಾರ್ಯವನ್ನು ವರ್ಣಿಸುವಾಗ ನಮಗೆ ಸಜಾತೀಯ ವಿಜಾತೀಯ ಪ್ರಾಣಿಗಳಂತೆ ಉತ್ಪ್ರೇಕ್ಷಿಸಿ ಹೇಳದಿದ್ದರೆ ತನ್ನಿರೂಪಿತ ವ್ಯಾಪಾರಗಳು ಸ್ಪಷ್ಟವಾಗಲಾರವು. ಆದುದರಿಂದ ಕವಿಗಳು ವಾಯುವಿಗೆ ತತ್ತತ್ಸಂದರ್ಭಕ್ಕೆ ಉಚಿತವಾದ ರೀತಿಯಲ್ಲಿ ಪುಂಸ್ತ್ವಾರೋಪ ಮಾಡಿಯೇ ಪ್ರಾಯಶಃ ವರ್ಣಿಸುವರು. ಆಯಾ ವರ್ಣನೆಗಳನ್ನು ನೋಡಿದಾಗಲ್ಲವೆ ಕವಿಸಮಯವು ಕವಿಗಳ ಪ್ರತಿಭೆಗೆ ಹೇಗೆ ಅವಕಾಶವನ್ನು ಕೊಡುತ್ತದೆಯೋ ಅದನ್ನು ತಿಳಿಯಬಹುದು.

ಉದಾಹರಣೆ :—

೧. ನೆಲಸುತ್ತುಂ ಕೊಳದೊಳ್ ಸರೋಜಮುಕುಳಂ ಸಸ್ಮೇರಮಪ್ಪಂತು ಜ ।
ಕ್ಕುಲಿಸುತ್ತುಂ ಪೊಸತಂ ಲತಾಪ್ರಸವಮಂ ಮುಂದಾಡಿ ತಣ್ಗಂಪನ ॥
ಗ್ಗಲಿಸುತ್ತುಂ ಪರಪುಷ್ಟಕೀರರವಮಂ ತಂದೊಂದನೊಂದೊಂದರೊಳ್ ।
ಕಲಸುತ್ತುಂ ಬನದಿಂ ವಿನೋದಚತುರಂ ಬಂದತ್ತು ಮಂದಾನಿಲಂ ॥

( ಮಲ್ಲಿನಾಥಪುರಾಣಂ )

---

ಟಿಪ್ಪಣಿ—ಸಸ್ಮೇರ ಮಪ್ಪಂತು = ಹುಸಿನಗೆ ನಗುವಹಾಗೆ, ಜಕ್ಕುಲಿಸುತ್ತುಂ = ಆಟವಾಡಿಸಿ. ಮುಂಡಾಡಿ...ಸುತ್ತುಂ = ತಲೆಸವರಿ, ಅವಳಿಗೂ ತಿಳಿಯದಂತೆ ತಣ್ಗಂಪನ್ನು ಅಪಹರಿಸಿ.

ಇಲ್ಲಿ ಕವಿಯು ಅಂತಃಪುರಪರಿವೃತನಾಗಿ ವಿನೋದಾರ್ಥವಾಗಿ ಕ್ರೀಡಾವನಕ್ಕೆ ಹೊರಟ ರಾಜನ ಅಭಿಮುಖವಾಗಿ ಬೀಸಿದ ವಾಯುವನ್ನು ಒಬ್ಬ ವಿನೋದ ಚತುರನಾದ ಪುರುಷನು ತನ್ನಂತೆ ವಿನೋದಚತುರನಾದ ರಾಜನನ್ನು ಕರೆದುಕೊಂಡು ಹೋಗಲು ಎದುರುಬಂದವನಂತೆ ವರ್ಣಿಸಿರುವನು. ಈ ಪದ್ಯದಲ್ಲಿ ನಿರೂಪಿತ ವಾಯುಕರ್ತೃಕ ವ್ಯಾಪಾರಗಳು ಆತನಲ್ಲಿ ವಿನೋದ ಚತುರತ್ವವನ್ನು ಸೂಚಿಸುವುವಲ್ಲದೆ, ರಾಜನ ಸ್ಥಿತಿಗನುರೂಪವಾಗಿರುವವುಗಳೇ ಆಗಿರುವುವು.

೨. ಅಂಡಯ್ಯನು "ಕಬ್ಬಿಗರಕಾವ" ದಲ್ಲಿ ವನಪಾಲಕನ ಅರಿಕೆಯ ಮೇರೆ ಮನ್ಮಥನ ಅಪರಾವತಾರವಾದ ರಾಜನು ಪೂದೋಂಟವನ್ನು ಪ್ರವೇಶಿಸಿದ ಸಮಯದಲ್ಲಿ ಆತನ ಎದುರಿಗೆ ಬೀಸಿದ ವಾಯುವನ್ನು "ಕಾವನಾನೆ" ಎಂದು ಉತ್ಪ್ರೇಕ್ಷಿಸಿ, ತನ್ನ ಪ್ರತಿಭಾಶಕ್ತಿಯನ್ನು ತೋರಿಸಿಕೊಂಡಿರುತ್ತಾನೆ. ಹೇಗೆಂದರೆ—

ತಳಿರಂ ಮೆಲ್ಲನೆ ನೂಂಕಿ ಮಾಮಿಡಿಗಳಂ ಸೆಂಡಾಡುತುಂ ಕೂಡೆ ಪೂ।
ಗಳ ದೂಳಿಂ ಪೊರೆಯೇರುತುಂ ಸೊನೆಗಳೊಳ್ ನೀರಾಟಮಂ ಮಾಡುತುಂ॥
ಬಳಿಯಂ ಕೈಮಿಗೆ ಬರ್ಪ ತುಂಬಿಯುಲಿಯಿಂದಂ ಡಂಗುರಂಬೊಯ್ಸುತುಂ।
ತಳರ್ದೇಗಂ ಬಂದುದೊ ಕಾವನಾನೆಯೆನಲಾ ತಣ್ಗಾಳಿ ತನ್ನಿಚ್ಛೆಯಿಂ॥

ಇಲ್ಲಿ ಕವಿಯು ತಣ್ಗಾಳಿಯನ್ನು ಆನೆಯಂತೆ ನಿರೂಪಿಸಿರುವನು. ಆನೆಯ ವ್ಯಾಪಾರಗಳೆಲ್ಲವು ಹೇಳಲ್ಪಟ್ಟಿದ್ದರೂ ಆದರ ಕ್ರೌರ್ಯವು ಮಾತ್ರ ಕಾಣಬರುವುದಿಲ್ಲ. ಹೀಗೆ ಕ್ರೌರ್ಯವಿಲ್ಲದ ಆನೆಯಂತೆ ವರ್ಣಿಸಿರುವುದು ನಾಯಕನ ಸ್ಥಿತಿಯನ್ನು ನೋಡಿಯೇ, ಎಂದು ತಿಳಿಯಬೇಕು. ನಾಯಕನೋ ನನೆಯಂಬನು, ಅವನ ಪೊಳಲೋ ಪೂವಿನ ಪೊಳಲು; ಆದುದರಿಂದ ಅಲ್ಲಿಯ ಆನೆಗಳಲ್ಲಿ ಕ್ರೌರ್ಯವಿರಲೇ ಕೂಡದು; ಮತ್ತು ಆ ಆನೆಗಳೂ ಶೃಂಗಾರಶೇಖರರೂ ಆಗಿರಬೇಕಲ್ಲವೆ. ಇಲ್ಲಿ ಆನೆಯಂತೆ ಉತ್ಪ್ರೇಕ್ಷೆ ಮಾಡುವುದರಲ್ಲಿ ಕವಿಯ ಮತ್ತೊಂದು ಭಾವವೇನೆಂದರೆ :—

ಎಂಥ ವಿರಾಗಿಗಳಾದರೂ ಈ ವನಃಪ್ರವೇಶವನ್ನು ಮಾಡಿದರೆ ಸರಾಗಿಗಳಾಗದೆ ಬಿಡರು. ಪ್ರವೇಶಕಾಲದಲ್ಲಿಯೇ ಕಣ್ಣಿಗೆ ಗೋಚರಿಸದಂತೆ ಮೆಲ್ಲಮೆಲ್ಲನೆ ಸುಳಿಯುವ ತಂಗಾಳಿಯೇ ಆನೆಯಂತೆ ತೊರನುಗ್ಗಿ ವಿರಾಗಿಗಳನ್ನು ತುಳಿಯುತ್ತ ಬರುವಾಗ, ಆ ತೋಟದಲ್ಲಿ ನಿತ್ಯವಾಸಮಾಡುವ ಇತರ ಮನ್ಮಥ ಸೇನಾಪ್ರಧಾನ ಪರಿಕರಗಳು ಒಳಗೆ ಹೊಕ್ಕವರನ್ನು ಏನೇನು ಮಾಡಿಬಿಡುವುವೋ ಎಂಬ ಭೀತಿಯು ವಿರಾಗಿಗಳ ಎದೆಯಲ್ಲಿ ಹುಟ್ಟಿ ಮೊಳೆದೋರಬೇಕಲ್ಲವೆ. "ತುಂಬಿಯುಲಿಯಿಂ

ದಂ ಡಂಗುರಂಬೊಯ್ಸುತುಂ" ಎಂಬುದು ಸಂದರ್ಭಕ್ಕೆ ಉಚಿತವಾದ ವಿಶೇಷಣವೆಂದು ಪರ್ಯಾಲೋಚಿಸಿದರೆ ತಿಳಿದುಬರುವುದು.

೩. ಮತ್ತು "ಚಿಕದೇವರಾಜ ವಿಜಯ" ದಲ್ಲಿ ರಾಜನು ವೇಶ್ಯಾವಾಟದ ಸೊಗಸನ್ನು ನೋಡಲು ಒಳ್ಳೆಯ ಬೆಳದಿಂಗಳಲ್ಲಿ ಹೊರಟಿರುವಾಗ, ಆತನ ಎದುರಿಗೆ ಪ್ರವಹಿಸಿದ ಮಂದಮಾರುತವನ್ನು ಈರೀತಿ ವರ್ಣಿಸಿರುವುದರಲ್ಲಿ ಅತಿಶಯವು ಕಾಣಬರದೇ ಇಲ್ಲ.

ಸೊಗವಟ್ಟು ಸೊರಗಿ ಮುಲರ್ಗಣ್ ।
ಮುಗಿವನ್ನಂ ಬನ್ನವಡಿಸಿ ಪದ್ಮಿನಿಯಂ; ಮೆ ॥
ಯ್ದೆಗೆಯದೆ ಕುಮುದಿನಿಗೆಳಸುತೆ ।
ಬಗೆವಂದುದು ಬಿರುದುಬೊಜಗನಂತೆ ಸಮೀರಂ ॥ 1

ಮೊದಲು ಈ ಪದ್ಯದಲ್ಲಿ ವಾಯುವನ್ನು "ಬಿರುದುಬೊಜಗ" ನಂತೆ ವರ್ಣಿಸಿಯೂ ಅನಂತರ

ಅಳಿವಗೆಯೋಪರೋಸರಸಿಮುಳ್ಕದ ಸೊರ್ಕಿನ ಸೂರರುರ್ಕಿನಿಂ ।
ಗಳಿಲನೆ ಸಿಂಗರಂಬಡೆಯಿಮುಂಗಜವೀರನಳಲ್ದು ಸಂಗರಂ ॥
ಗೊಳಲಿದೆ ಬರ್ಪನೆಂದೊದರಿ ತುಂಬಿಗಳೆಂಬದಿಗೋಲನಾಂತಲರ್ ।
ತಳವರನಂತೆ ಸಾರುತನುಗೆಯ್ದುದು ದರ್ಪಕವೀರಸೇನೆಯುಂ ॥ 2

ಎಂಬಂತೆ, ದರ್ಪಕನ ವೀರಸೇನೆಯಂ ಸಜ್ಜುಗೊಳಿಸಲು ಬಂದ ತಳವರನಂತೆ ನಿರೂಪಿಸಿಯೂ, ಬಳಿಕ

---

**ಟಿಪ್ಪಣಿ**—1. ಪದ್ಮಿನಿಯಂ—ಪದ್ಮಿನಿ ಎಂಬ ಸ್ತ್ರೀಯನ್ನು, ಇಲ್ಲಿ ಕಮಲಲತೆಗೆ ಸ್ತ್ರೀತ್ವಾರೋಪಣ ಮಾಡಿ, ಅದರ ಪುಷ್ಪವನ್ನು ಕಣ್ಣಂತೆ ನಿರೂಪಿಸಿದೆ. ಸೂರ್ಯಾಸ್ತಮಯದಲ್ಲಿ ಕಮಲಗಳು ಮುಕುಳಿತವಾಗುತ್ತವೆಯಲ್ಲವೆ. ಮೆಯ್ದೆಗೆಯದೆ = ಮೆಯ್ಯಂ+ತೆಗೆಯದೆ, ಹಿಂಜರಿಯದೆ, ಸೋತುಹೋಗದೆ.

2. ಅಳಿವಗೆಯೋಪರ್ = ಅಳಿಯಾದ, ಧೈರ್ಯವಿಲ್ಲದ ಎದೆಯುಳ್ಳ, ಒಪರು. ಅಳ್ಕದ = ಹೆದರದ, ಉರ್ಕು = ಪರಾಕ್ರಮ ಅಳಲ್ದು = ಬೆಂಕಿಬೆಂಕಿಯಾಗಿ, ಉರಿದು. ಅದಿಗೋಲು = ಹೆದರಿಸುವುದಕ್ಕೆ ಇಟ್ಟುಕೊಂಡಿರುವ ಕೋಲು. ದರ್ಪಕ = ಸಂದರ್ಭೋಚಿತವಾಗಿ ಪರಾಕ್ರಮವನ್ನು ತೋರಿಸುವ ಮನ್ಮಥನ ಹೆಸರು.

ಮುಡಿಗಂಪಂ ಸವಿದೀಂಟಿ ಮುದ್ದುಸೊಸಲಂ ಮುಂಡಾಡಿ ಸುಣ್ಗಲ್ಲಮಂ ।
ಬಿಡದಾಘ್ರಾಣಿಸಿ ಸೋಗೆಗಣ್ಗೊನೆಗಳಂ ಮುತ್ತಿಟ್ಟು ಮುಂಬಾಯ್ದು ಕೆಂ ॥
ಪಡದೊರ್ಳ್ವಾಯ್ದೆರೆಜೇನನೀಂಟಿ ಕೊರಲಂ ತಳ್ಕೈಸಿ ಪೇರಳ್ಕರಿಂ ।
ತೊಡರ್ದೆಲ್ಲಾ ಬೆಲೆವೆಣ್ಗಳಂ ನಲಿಯಿಕುಂ ತಣ್ಗಾಳಿಯೇಂ ನೋಂತುದೋ ॥ 4

ಎಂಬ ಮರ್ಯಾದೆಯಲ್ಲಿ ರಸಿಕವಿಟಜನರಿಗೂ, "ತಣ್ಗಾಳಿಯು ಯಾವ ವ್ರತಗಳನ್ನು ಆಚರಿಸಿದನೋ!" ಎಂದು ಅಸೂಯೆ ಹುಟ್ಟುವಂತೆ, ವೇಶ್ಯೆಯರಲ್ಲಿ ಸುಖವನ್ನು ಅನುಭವಿಸುವ ಶೃಂಗಾರಶೇಖರನಾದ ವಿಟನೆಂದು ಉತ್ಪ್ರೇಕ್ಷಿಸಿರುವನು.

೪. ಮತ್ತು ಅರ್ಧನೇಮಿಪುರಾಣದಲ್ಲಿ ಕವಿಯು ಘೋರಾರಣ್ಯ ಮಧ್ಯದಲ್ಲಿ ಸುತ್ತಿಸುತ್ತಿ ಬಳಲಿ ಶ್ರಾಂತನಾಗಿರುವ ರಾಜನ ಸ್ಥಿತಿಯನ್ನೂ, ಅವನಿದ್ದ ಸ್ಥಲವನ್ನೂ ಲಕ್ಷಿಸಿ ವರ್ಣಿಸಿರುವ ರೀತಿಯು ಕವಿಯ ಸಾಮರ್ಥ್ಯಕ್ಕೆ ಪ್ರಕಾಶವಾಗಿರುವುದು.

ಅದು ಹೇಗೆಂದರೆ—

ಅನುಸಿಂಚತ್ಪಲ್ಲಕೀಶೀಕರಪರಿಚಯದಿಂ ಶೀತಶೀತಂ, ಲತಾಲಿಂ ।
ಗನದಿಂದಂ ಮಂದಮಂದಂ, ಫಣಿಪಿಲಸನದಿಂ ಭೀತಭೀತಂ, ಚಲಚ್ಛಂ ॥
ದನಶಾಖಾಂದೋಳದಿಂದಂ ಚಕಿತಚಕಿತಮಾಯ್ತುಚ್ಚರತ್ಕೀಚಕಪ್ರ ।
ಸ್ವನಿತಂ ವಾನೇಯನಾಗಸ್ಫುಟಿತಕಟಮದಾಮೋದಭಾರಂ ಸಮೀರಂ ॥ 5

ತಳರಂ ತೂಗಿ ಪರಾಗಮಂ ಪಿಡಿದು ಪೂನೀರಂ ತಡಂಗೂಡಿ ಗು ।
ಗ್ಗುಳನೀರಾಸ್ಯಮನಾಂತು ಚಂದನರಸಕ್ಷೋದಂಗಳಂ ಪೊತ್ತು ಶೀ ।
ತಳಕರ್ಪೂರಮೃಗೋದ್ಭವಾಗುರುಕುಮುಸ್ತಾಗ್ರಂಥಿಗಂಧಂಗಳಂ ।
ತಳೆದೇಂ ಗಂದಿಗರಂತೆ ಬಂದಲೆದುದೋ ಮತ್ತೊಂದು ಮಂದಾನಿಲಂ ॥ 6

ವನಜಮನೊಕ್ಕಲಿಕ್ಕಿ, ಮರಿದುಂಬಿಯನಾಳ್ದು, ತರಂಗಮೆಂಬ ತ ।
ಕ್ಕಿನ ಪರಿಕಾರರಂ ತುಳಿದು, ಸೀಕರಮಂ ತಳೆದೊಟ್ಟೆಕೊಂಡು ಮಾ ॥
ವಿನ ಪುಡಿಯಂ ಮೃಗೇಂದ್ರಭಯದಿಂದ ತಿರೋಹಿತನಾಗೆ, ಬರ್ಪ ಕಾ ।
ನನಕರಿಯಂತೆ ಬಂದುದೆಲರೊಯ್ಯನೆ ರಯ್ಯನೆ ವಾರಿದೇಶದಿಂ ॥ 7

ಇಲ್ಲಿ ಮೊದಲೆರಡು ಪದ್ಯಗಳಿಂದ ಕಾಡಿನ ಸ್ಥಿತಿಯು ತಿಳಿದುಬರುವುದರಲ್ಲಿ ಸಂಶಯವಿಲ್ಲ. ಮೂರನೆಯ ಪದ್ಯದಿಂದ ಮಂದಮಾರುತವು ಕಾಡಿನಲ್ಲಿ ಬೀಸುತ್ತಿ

---

4. ಸೋಗೆ— ಕಣ್ಣುಕಪ್ಪು. ಮುಂಬಾಯ್ದು—ಮುಂದಕ್ಕೆ ಹಾಯ್ದು. ಬಾಯ್ದೆರೆ—ಅಧರ, ತುಟಿ. 5, ವಾನೇಯ—ವನಸಂಬಂಧವಾದ.

ದ್ದರೂ, “ ಒಳ್ಳಿದರಪ್ಪವರೆಂತು ಬಾಧೆವಟ್ಟೊಡಮುಪಕಾರಮಂ ಪೆರರ್ಗೆ ಮಾಡದೆ ಬಾಧೆಯನೇಕೆ ಮಾಡುವರ್ ” ಎಂಬಂತೆ, ತನ್ನ ನೈಜಗುಣವನ್ನು ಕಳೆದುಕೊಳ್ಳುವು ದಿಲ್ಲವೆಂದು ಗೊತ್ತಾಗುವುದು. ಅಲ್ಲದೆ, “ ವನಜಮುನೊಕ್ಕಲಿಕ್ಕಿ ” ಇತ್ಯಾದಿ ವಿಶೇ ಷಣಪಂಚಕವು “ ಕಾನನಕರಿಯುವ್ಯಾಪಾರ ” ವನ್ನು ತೋರಿಸುವುವು. ಮತ್ತು ವಾಯುವೆಂಬ ಆನೆಯು ಮೃಗೇಂದ್ರಭಯದಿಂದ ತಿರೋಹಿತನಾಗಲು ಮಾವಿನ ಪು ಡಿಯುಂ ಒಟ್ಟಿಕೊಂಡಿತೆಂದು ಹೇಳಿರುವುದು ಸಹೃದಯರ ಹೃದಯವನ್ನು ವಶೀಕರಿ ಸುವುದು.

ಹೀಗಿರುವುದರಿಂದ ವಾಯುವರ್ಣನೆಯ ವಿಷಯದಲ್ಲಿ ಪ್ರವೃತ್ತವಾಗಿರುವ ಸಂಕೇತವು ಯಾವಯಾವ ರೀತಿಯಲ್ಲಿ ಕವಿಗಳಿಗೆ ಉತ್ಪ್ರೇಕ್ಷೆಮಾಡಲು ಅವಕಾಶ ಕೊಡುವುದೆಂಬುದನ್ನು ಮೇಲಿನ ಅನುವಾದಗಳು ಸ್ಪಷ್ಟವಾಗಿ ತಿಳಿಸುವುವು.

ಏವಂಚ, ಮೇಲೆ ಅನುವಾದ ಮಾಡಿದ ಪದ್ಯಗಳಿಂದ ಕವಿಗಳ ತಾರತಮ್ಯ ತಿಳಿದುಬರುವುದಕ್ಕೂ ಅವರ ಪ್ರತಿಭಾವಿಕಾಸಕ್ಕೂ, ಅವರಲ್ಲಿ ಪರಸ್ಪರ ಸ್ಪರ್ಧೆ ಹುಟ್ಟಿ ಒಬ್ಬನನ್ನು ಒಬ್ಬನು ಮೀರಿಸಬೇಕೆಂಬ ಆಶೆಯಿಂದ ಪ್ರವೃತ್ತಿಸುವುದಕ್ಕೂ, ಮತ್ತು ಪಾಠಕರ ಹೃದಯದಲ್ಲಿ ವಿಸ್ಮಯ ಹುಟ್ಟುವುದಕ್ಕೂ, ಕವಿಸಮಯವು ಪರಂಪರಾಪ್ರಾಪ್ತವಾದುದಾಗಿಯೇ ಇರಬೇಕು ಎಂದು ನಿರ್ಧರವಾಗಿ ಹೇಳಬಹುದು. ಅದು ಹಾಗಿಲ್ಲದಿದ್ದರೆ ಕಾವ್ಯಾಭಿವೃದ್ಧಿಗೆ ಅವಕಾಶವಿರಲಾಗದು ; ಕಾವ್ಯವು ಇದ್ದಸ್ಥಿತಿಯ ಲ್ಲಿಯೇ ನಿಲ್ಲುವುದೇ ಹೊರತು ನಾಲ್ಕುಕಡೆಗೂ ಶಾಖೋಪಶಾಖೆಯಾಗಿ ಪ್ರಸರಿಸಿ ವೃದ್ಧಿಹೊಂದಲಾರದು.

---

ಕವಿಸಮಯಗಳನ್ನು ಈರೀತಿಯಲ್ಲಿಯೇ ಹೇಳಬೇಕೆಂಬುದಕ್ಕೆ ಗಮಕವೇನು? ಕೀರ್ತಿಯನ್ನು ಬೆಳ್ಳಗೆಯೂ, ಅಕೀರ್ತಿಯನ್ನು ಕಪ್ಪಗೆಯೂ ಏಕೆ ವರ್ಣಿಸಬೇಕು? ಪ್ರತಾಪಾನುರಾಗಗಳಿಗೆ ಕೆಂಪುಬಣ್ಣವನ್ನೂ ಏಕೆ ಕೊಡುವರು? ಹಿಮವತ್ಪರ್ವತ ದಲ್ಲಿಯೇ ಭೂರ್ಜವೃಕ್ಷವೂ ಮಲಯಪರ್ವತದಲ್ಲಿಯೇ ಚಂದನವೃಕ್ಷಗಳೂ, ಇವು ಗಳು ಇತರ ಕಡೆಗಳಲ್ಲಿ ಬೆಳೆದರೂ ಹುಟ್ಟವೆಂದು ನಿಯಮಮಾಡುವುದೇಕೆ? ಚಂದನ ವೃಕ್ಷದಲ್ಲಿ ಪುಷ್ಪ ಫಲಗಳಿದ್ದರೂ ಇಲ್ಲವೆಂದು ಏಕೆ ಹೇಳುವರು? ಹಸ್ತವನ್ನು ಪಲ್ಲವ ಕ್ಕೇನೇ ಹೋಲಿಸಬೇಕೆಂದು ಏಕೆ ನಿರ್ಬಂಧಿಸುವರು? ಇತ್ಯಾದಿ—ಈರೀತಿಯಲ್ಲಿ ಯೇ ಕವಿಸಮಯಗಳು ಹುಟ್ಟುವುದಕ್ಕೆ ಕಾರಣವೇನಾದರೂ ಇರುವುದೇ? ಅಥವಾ

ಬರಿಯ ಸಂಕೇತವೇ? ಎಂಬ ಪ್ರಶ್ನೆಗಳು ಹುಟ್ಟುವುದು ಸಹಜ. ಕವಿಸಮಯ ನಿಬಂಧನಗಳೆಲ್ಲಕ್ಕೂ ಕಾರಣಗಳನ್ನು ನಿರೂಪಿಸುವುದಕ್ಕಾಗದಿದ್ದರೂ ಅನೇಕ ಕಡೆ ಹೇಳಬಹುದು. ಹೇಗೆಂದರೆ?

ಸಕಲ ಪ್ರವೃತ್ತಿ ನಿವೃತ್ತಿಗಳೂ ಸುಖದುಃಖನಿಬಂಧನವಾಗಿರುವುದು ಕಂಡೇ ಇದೆ. ಕೀರ್ತ್ಯಕೀರ್ತಿಗಳು ಸುಖದುಃಖ ನಿಮಿತ್ತಗಳು, ದೃಷ್ಟಿಗೋಚರಗಳಲ್ಲವು. ಇವುಗಳನ್ನು ಕಣ್ಣಿಗೆ ಕಂಡಂತೆ ಕವಿಗಳು ಸ್ಪಷ್ಟವಾಗಿ ತಿಳಿಸಬೇಕಾಗುತ್ತದೆ. ಏಕೆ ಎಂದರೆ, ಸುಖಾತಿಶಯಕ್ಕಾಗಿ. ಶ್ರೋತ್ರೇಂದ್ರಿಯಪ್ರತ್ಯಕ್ಷಕ್ಕಿಂತ ಒಂದು ವಸ್ತುವು ಚಕ್ಷುರಿಂದ್ರಿಯ ಪ್ರತ್ಯಕ್ಷವಾದರೆ ಅದರ ಸಂಸ್ಕಾರವು ಚಿರಸ್ಥಾಯಿಯಾಗಿಯೂ ಸುಖಾತಿಶಯದಾಯಕವಾಗಿಯೂ ಆಗುವುದು. ಧಾವಳ್ಯ ಕಾರ್ಷ್ಣ್ಯಗಳು ಸ್ವಭಾವತಃ ಸುಖದುಃಖಜನಕಗಳು. ಆದುದರಿಂದ ಅಮೂರ್ತದ್ರವ್ಯವಾದ ಕೀರ್ತಿಗೆ ಧಾವಳ್ಯವನ್ನೂ ಅಕೀರ್ತಿಗೆ ಕಾರ್ಷ್ಣ್ಯವನ್ನೂ ಆರೋಪಿಸಿ ಹೇಳುವುದರಲ್ಲಿ ಔಚಿತ್ಯವುಂಟು.

ಲೋಕದಲ್ಲಿ ಜನಗಳಿಗೆ ಹಿಂಸೆಯನ್ನೂ ಕ್ಷೋಭೆಯನ್ನೂ ಕೊಟ್ಟು ಹತ್ತಿರಕ್ಕೆ ಒಬ್ಬರನ್ನೂ ಸೇರಿಸದಹಾಗೆ ಮಾಡುವುದರಲ್ಲಿ ಬೆಂಕಿಯಂತೆ ಉತ್ತಮವಾದ ದೃಷ್ಟಾಂತವು ಮತ್ತೆ ಬೇರೆ ಇಲ್ಲ. ಆರುಣ್ಯವೂ ತೈಕ್ಷ್ಣ್ಯವೂ ಬೆಂಕಿಗೆ ನಿರೂಪಕಧರ್ಮವು. ಪ್ರತಾಪಕ್ಕೆ ಆರುಣ್ಯವನ್ನೂ ಔಷ್ಣ್ಯವನ್ನೂ ಕೊಡುವುದಕ್ಕೆ ಇದೇ ಕಾರಣವಿರಬಹುದು.

ಎಲ್ಲಿ ಯಾವುದು ಹೆಚ್ಚಾಗಿದೆಯೋ ಅಲ್ಲಿ ಎಲ್ಲವೂ ಅದೇ ಎಂದು ಹೇಳುವುದು ಸ್ವಭಾವ. ಒಬ್ಬನಲ್ಲಿ ಅನೇಕ ಸುಗುಣಗಳಿದ್ದು ಒಂದೆರಡು ದುರ್ಗುಣಗಳಿದ್ದರೂ ಅವನನ್ನು ಸುಗುಣಿಯೆಂದೇ ಹೇಳುವರು. ಅದರಂತೆಯೇ ಮಲಯಪರ್ವತದಲ್ಲಿ ಚಂದನವೇ ಹೆಚ್ಚಾಗಿ ಬೆಳೆವುದರಿಂದಲೂ, ಹಿಮವತ್ಪರ್ವತದಲ್ಲಿ ಭೂರ್ಜವೇ ಹೆಚ್ಚಾಗಿ ಬೆಳೆವುದರಿಂದಲೂ, ಮಲಯಗಿರಿಯಲ್ಲಿಯೇ ಚಂದನೋತ್ಪತ್ತಿಯೂ, ಹಿಮಗಿರಿಯಲ್ಲಿಯೇ ಭೂರ್ಜಜನ್ಮವೂ ಎಂಬ ಕವಿಸಮಯವು ಹುಟ್ಟಿರಬಹುದು. ಹೀಗೆಯೇ ವಸಂತದಲ್ಲಿಯೇ ಕೋಕಿಲರುತವೂ, ವರ್ಷರ್ತುವಿನಲ್ಲಿಯೇ ಮಯೂರನೃತ್ಯವೂ ಇತ್ಯಾದಿ ಕವಿಸಮಯಗಳೂ ಹುಟ್ಟಿರುವುದಕ್ಕೆ ಕಾರಣವನ್ನು ಊಹಿಸಿಕೊಳ್ಳಬಹುದು.

ಶುಕ್ಲಪಕ್ಷದಲ್ಲಿ ಅಂಧಕಾರವೇ ಇಲ್ಲವೆಂಬ ಕವಿಸಮಯಕ್ಕೆ ಪೂರ್ವರಾತ್ರಿಯಲ್ಲಿ ಚಂದ್ರಿಕೆಯು ಬಹುಕಾಲವಿರುವುದೂ; ಕೃಷ್ಣಪಕ್ಷದಲ್ಲಿ ಚಂದ್ರಿಕೆಯೇ ಇಲ್ಲವೆಂಬ ಕವಿಸಮಯಕ್ಕೆ ಪೂರ್ವರಾತ್ರಿಯಲ್ಲಿ ಅಲ್ಪಕಾಲ ಚಂದ್ರಿಕೆ ಇರುವುದೂ ಅಥವಾ

ಇಲ್ಲದೆಯೇ ಇರುವುದೂ ಮತ್ತು ಜನಗಳ ವಿಹಾರಕ್ಕೆ ಪೂರ್ವರಾತ್ರಿಯೇ ಅನುಕೂಲಕಾಲವಾಗಿರುವುದೂ ಹೇತುವು. ಕವಿಗಳ ವರ್ಣನೆಯು ಸುಖೋತ್ಪತ್ತಿಕಾರಣವೇ ಆಗಲಾಗಿ ಈ ವಿಧವಾದ ಕವಿಸಮಯದಲ್ಲಿ ಔಚಿತ್ಯವಿರುವುದು.

ಉಕ್ತಿವೈಚಿತ್ರ್ಯಕ್ಕಾಗಿಯೂ ಕೆಲಕೆಲವು ಸಂಕೇತಗಳನ್ನು ಅಂಗೀಕರಿಸುವರು. ಚಂದನವೃಕ್ಷದಲ್ಲಿ ಫಲವೂ ಪುಷ್ಪವೂ ವಾಸನೆಯೂಗಿಲ್ಲ, ಕಾಷ್ಠ ಮಾತ್ರ ಸುಗಂಧವಾಗಿದೆ. ಇತರ ವೃಕ್ಷಗಳಲ್ಲಿ ಹಾಗಲ್ಲ. ಕಾಷ್ಠಕ್ಕಿಂತ ಪುಷ್ಪಗಳಲ್ಲಿ ವಾಸನೆ ಹೆಚ್ಚು, ಫಲಗಳಲ್ಲಿ ಇನ್ನೂ ಹೆಚ್ಚು. ಮಾವಿನ ಮರದಲ್ಲಿ ವಾಸನೆಯಿಲ್ಲ. ಪುಷ್ಪದಲ್ಲಿ ವಾಸನೆಯುಂಟು. ಫಲದಲ್ಲಿಯಂತೂ ವಾಸನೆಯು ಮಿತಿಮೀರಿದೆ. ಚಂದನವು ತಾಪನಿವಾರಣದಲ್ಲಿ ಅತ್ಯುತ್ತಮವೆಂದು ತಿಳಿದಿದೆ. ಈ ಗುಣವು ಪುಷ್ಪದಲ್ಲಿಯೂ ಫಲದಲ್ಲಿಯೂ ಹೆಚ್ಚಾಗಿರಬೇಕಲ್ಲವೆ. ಅದು ಹಾಗಿಲ್ಲ. ಆದುದರಿಂದ ಚಂದನದಲ್ಲಿ ಪುಷ್ಪಫಲಗಳಿಲ್ಲವೆಂಬ ಕವಿಸಮಯದಲ್ಲಿ ಅರ್ಥೌಚಿತ್ಯವುಂಟು. “ ಸುವರ್ಣಸ್ಯೇವ ಸೌರಭಂ ”ಇತ್ಯಾದಿ ಉತ್ಪ್ರೇಕ್ಷೆಯನ್ನು ಅಂಗೀಕರಿಸುವುದಕ್ಕೆ ಇದೇ ಕಾರಣವಿರಬಹುದು.

ಗುಣಸಾಮ್ಯವಿದ್ದ ವಸ್ತುಗಳೆರಡರಲ್ಲಿ ಒಂದು ವಸ್ತುವನ್ನು ಕಂಡರೆ ಮತ್ತೊಂದು ವಸ್ತುವೂ ಜ್ಞಾಪಕಕ್ಕೆ ಬರುವುದು. ಆಹ್ಲಾದವಿಷಯದಲ್ಲಿ ಚಂದ್ರನೂ ಮುಖವೂ ಒಂದೇ ತರಗತಿಯಲ್ಲಿರುವುವು. ವೈಶಾಲ್ಯ ಚಾಂಚಲ್ಯಗಳಲ್ಲಿ ಜಿಂಕೆಯ ಕಣ್ಣಿಗೂ ಉತ್ತಮ ಸ್ತ್ರೀ ನೇತ್ರಕ್ಕೂ ಸಾದೃಶ್ಯವುಂಟು. ವೇಣಿಗೂ ಸರ್ಪಕ್ಕೂ ಆಕೃತಿಯಲ್ಲಿ ಬಲುಮಟ್ಟಿಗೆ ಹೋಲಿಕೆ ಇದೆ. ಅವುಗಳಲ್ಲಿ ಒಂದು ಮನಸ್ಸಿನ ಲಕ್ಷ್ಯಕ್ಕೆ ಬಂದರೆ ಸಮಾನಧರ್ಮವುಳ್ಳ ಮತ್ತೊಂದು ವಸ್ತುವು ಸ್ಫೂರ್ತಿಗೆ ಬರುವುದು ಸಹಜ. ಸ್ಫೂರ್ತಿಗೆ ಬಂದಮಾತ್ರಕ್ಕೆ ಹೋಲಿಸಿಯೇ ಹೇಳಬೇಕೆಂಬ ನಿಯಮವೇಕೆ? ಹಾಗೆ ಹೋಲಿಸಿ ಹೇಳುವುದರಲ್ಲಿ ಎರಡು ಪ್ರಯೋಜನಗಳುಂಟು. ಒಂದು ವಸ್ತುವಿನ ವಿಷಯವಾಗಿ ಅನ್ಯೂನಾತಿರಿಕ್ತವಾದ ಜ್ಞಾನವು ಬರಬೇಕಾದರೆ, ಅದರೊಡನೆ ಹೋಲಿಸಬಹುದಾದ (ಎಂದರೆ ಯಾವುದಾದರೂ ಒಂದುಭಾಗದಲ್ಲಿ ಸಮಾನಗುಣವು ತೋರಿಬರುವ) ಮತ್ತೊಂದು ವಸ್ತುವಿನೊಡನೆ ಹೋಲಿಸಬೇಕು; ಮತ್ತು ಅವುಗಳಿಗಿರುವ ಪರಸ್ಪರ ವ್ಯತ್ಯಾಸವನ್ನೂ ಸಹ ತಿಳಿಸಬೇಕು. ಒಂದು ವಸ್ತುವಿನ ವಿಷಯದಲ್ಲಿ ನಮ್ಮ ಅಭಿಪ್ರಾಯವು ಈರೀತಿಯಲ್ಲಿ ಹೇಳಿಯಲ್ಲದೆ ಬೇರೆ ವಿಧದಲ್ಲಿ ಸ್ಪಷ್ಟವಾಗುವುದಿಲ್ಲ. ಅಲ್ಲದೆ ಪರಿಚಿತವಾದ ವಸ್ತುವಿನೊಡನೆಯೇ ಹೋಲಿಕೆಯನ್ನು ಮಾಡಬೇಕು.

ಅಪರಿಚಿತವಾದ ವಸ್ತುವಿನಲ್ಲಿ ಸಂಪೂರ್ಣ ಹೋಲಿಕೆಯಿದ್ದರೂ, ಅದರ ಹೋಲಿಕೆಯಿಂದ ಪ್ರಯೋಜನವಿಲ್ಲ. ಸಂಪೂರ್ಣವಾಗಿ ಸಮಾನಧರ್ಮವುಳ್ಳ ಅಪರಿಚಿತ ವಸ್ತುವಿನೊಡನೆ ಹೋಲಿಸುವುದಕ್ಕಿಂತ ಅಲ್ಪಸ್ವಲ್ಪವಾಗಿಯಾದರೂ ಹೋಲಿಕೆ ತೋರಿಬರುವ ಪರಿಚಿತವಸ್ತುವಿನೊಡನೆ ಹೋಲಿಸುವುದರಲ್ಲಿ ವಸ್ತುಜ್ಞಾನವು ಮನಸ್ಸಿಗೆ ಸುಗಮವಾಗುವುದು. ಆದುದರಿಂದ ಲೋಕದಲ್ಲಿ ದೃಷ್ಟಸಾಮ್ಯವನ್ನೇ ಕೊಟ್ಟು ವರ್ಣಿಸುವರು; ಅದರಿಂದ ಯಥೋಚಿತವಾಗಿ ವಸ್ತುಜ್ಞಾನವುಂಟಾಗುವುದು. ಇದೊಂದು ಅಲಂಕಾರಕ್ಕೆ ಪ್ರಯೋಜನ. ಕೋಮಲತ್ವ ಮಸೃಣತ್ವಗಳಲ್ಲಿ ಹಸ್ತಕ್ಕೂ ಪಲ್ಲವಕ್ಕೂ ಸಾಮ್ಯವಿರುವಹಾಗೆ ಬೆಕ್ಕಿನಮೈಗೂ ಬಾಳೆಯ ದಿಂಡಿಗೂ ಇದೆ. ಇವೆಲ್ಲವೂ ದೃಷ್ಟಸಾಮ್ಯಗಳೇ. ಆದರೂ ಬಾಳೆಯ ದಿಂಡಿಂದಲೂ ಬೆಕ್ಕಿನ ಮೈಯ್ಯಿಂದಲೂ ವಸ್ತುಜ್ಞಾನ ಬರುವುದಿಲ್ಲ. ಏಕೆಂದರೆ—ಆಕೃತಿಸಾಮ್ಯವಿಲ್ಲ; ಆಹ್ಲಾದಕತ್ವವೂ ಇಲ್ಲ. ಚಿಗುರಿನ ಸಾಮ್ಯವನ್ನು ಹೇಳಿದರೆ, ವಸ್ತುಜ್ಞಾನವುಂಟಾಗುತ್ತದೆ. ಏಕೆಂದರೆ—ಮಾರ್ದವ ಮಸೃಣತ್ವರೂಪಗುಣಗಳು ಇರುವುದೂ ಅಲ್ಲದೆ ಆಕೃತಿಸಾಮ್ಯವೂ ಉಂಟು; ಮತ್ತು ಮನಸ್ಸಿನಲ್ಲಿ ಆಹ್ಲಾದವೂ ಹುಟ್ಟುತ್ತದೆ. ಆದುದರಿಂದ ಹಸ್ತಕ್ಕೆ ಚಿಗುರಿನ ಸಾಮ್ಯವನ್ನು ಕೊಡುವುದರಲ್ಲಿ ಯಥೋಚಿತವಾದ ಸ್ವರೂಪಜ್ಞಾನವೂ ಮತ್ತು ಆಹ್ಲಾದವೂ ಉಂಟಾಗುವುವು. ವರ್ಣನೆಗೆ ಆಹ್ಲಾದವೇ ಮುಖ್ಯಪ್ರಯೋಜನವು. ಹೀಗಿರುವುದರಿಂದ ಸ್ತ್ರೀಯರ ಅವಯವಗಳನ್ನು ಇವಿವುಗಳಿಗೇನೆ ಹೋಲಿಸಿ ವರ್ಣಿಸಬೇಕೆಂಬ ಸಂಕೇತ ಹುಟ್ಟಿರಬಹುದು.

ಕೆಲವು ಕೆಲವು ವಸ್ತುಗಳಲ್ಲಿ ಪ್ರಮುಖವಾದ ಅಂಗಗಳನ್ನು ಹೇಳಿದರೇನೆ ಸಾಕು; ಆ ವಸ್ತುಗಳು ಬುದ್ಧಿಗೋಚರವಾಗುವುವು. ಅವುಗಳಲ್ಲಿಯೂ ಯಾವ ಅಂಗವನ್ನು ಹೇಳಿದರೆ ಹೃದಯಕ್ಕೆ ಹಿತವುಂಟಾಗುತ್ತದೆಯೋ, ಆ ಅಂಗವನ್ನೇ ಹೇಳಬೇಕು. ಆದುದರಿಂದಲೇ ಕವಿಗಳು ಆನೆಯನ್ನು ವರ್ಣಿಸುವಾಗ ಕೋಡಿನಿಂದ ಮಾಡುವ ಅದರ ವಪ್ರಕ್ರೀಡೆಯನ್ನೂ, ಶುಂಡಾದಂಡವನ್ನೆತ್ತಿ ಮಾಡುವ ಫೂತ್ಕಾರವನ್ನೂ, ಜಲಕ್ರೀಡೆಯನ್ನೂ ನಿರೂಪಿಸುವರು. ಮಯೂರಗಳನ್ನು ವರ್ಣಿಸುವಾಗ ಅದರ ನೃತ್ಯವನ್ನೂ, ಭ್ರಮರಗಳಲ್ಲಿ ಝುಂಕಾರವನ್ನೂ, ಪರ್ವತಗಳಲ್ಲಿ ಶೃಂಗಾದಿಗಳನ್ನೂ ವರ್ಣಿಸುವರು. ಪರ್ವತಗಳಲ್ಲಿ ಆನೆಯ ಸಾಲುಗಳನ್ನೂ ಸಿಂಹ ಶರಭಾದಿಗಳ ವ್ಯಾಪಾರವನ್ನೂ ವರ್ಣಿಸುವುದು ಅದರ ಗಹನತ್ವ ನಿರ್ಮಾನುಷತ್ವ ಸೂಚನಾರ್ಥವಾಗಿ. ಜಲಾಶ್ರಯಮಾತ್ರದಲ್ಲಿ ಹಂಸಾದಿಗಳನ್ನು, ನದಿಗಳಲ್ಲಿ ನೀಲೋತ್ಪಲಾದಿಗಳನ್ನು ವರ್ಣಿಸು

ವುದು ಆಹ್ಲಾದಾತಿಶಯಕ್ಕಾಗಿ. ರಣರಂಗವನ್ನು ಸಮುದ್ರದಂತೆಯೂ ವರ್ಷಾಕಾಲದಂತೆಯೂ, ಋತು ಕೀರ್ತಿ ಮೊದಲಾದುವುಗಳನ್ನು ಪುರುಷನಂತೆಯೂ, ಸ್ತ್ರೀಯಂತೆಯೂ, ವಲ್ಲಿಯಂತೆಯೂ ವರ್ಣಿಸುವುದು ಸ್ಪಷ್ಟೀಕರಣಕ್ಕಾಗಿಯೂ, ಆಹ್ಲಾದಕ್ಕಾಗಿಯೂ, ಕೆಲವುವೇಳೆ ನಾಯಕನ ಸ್ಥಿತಿಯನ್ನು ತಿಳಿಸುವುದಕ್ಕಾಗಿಯೂ ಎಂದು ತಿಳಿಯಬೇಕು. ಚಂದ್ರಕಳಂಕವನ್ನು ಜಿಂಕೆ, ಆಲದ ಮರ, ಇತ್ಯಾದಿಗಳಂತೆ ವರ್ಣಿಸುವುದು ಆಕೃತಿಭಾನದಿಂದ.

ಈ ರೀತಿಯಲ್ಲಿ ಕವಿಸಮಯನಿಬಂಧನಕ್ಕೆ ಕಾರಣವನ್ನು ಊಹಿಸಿಕೊಳ್ಳಲು ಸಾಧ್ಯವು. ಮುಖ್ಯವಾಗಿ ಆಹ್ಲಾದವೇ ಕವಿಸಮಯ ನಿಬಂಧನಕ್ಕೆ ಹೇತುವೆಂದು ಹೇಳಬೇಕು. ಹೀಗಿರಲು, ಎಲ್ಲಿ ಸಮಯವನ್ನು ಉಲ್ಲಂಘಿಸಿಯಾದರೂ, ಅಥವಾ ಅಪರಿಚಿತವಾದ ರೀತಿಯಲ್ಲಿಯಾದರೂ ವರ್ಣನೆಯು ಪ್ರವೃತ್ತವಾಗುವುದೋ ಅಲ್ಲಿ ಆಭಾಸವು ಹುಟ್ಟುವುದರಲ್ಲಿ ಸಂದೇಹವಿಲ್ಲ. ಆದುದರಿಂದ ಕವಿಗಳು ಹಾಸ್ಯರಸವನ್ನು ಹುಟ್ಟಿಸುವುದಕ್ಕೆ ಸಂಕೇತವಿರೋಧವಾದ ಅಪರಿಚಿತವಾದ ಅಥವಾ ತುಚ್ಛವಾದ ವರ್ಣನೆಯಿಂದಲೇ ನಿರೂಪಿಸುವರು. ಅಲ್ಲದೆ ಆ ಸಂದರ್ಭದಲ್ಲಿ ಯಾವ ಮಾತನ್ನು ಪಾಠಕರು ನಿರೀಕ್ಷಿಸುತ್ತಿರುವರೋ ಆ ಮಾತನ್ನು ಅಲ್ಲಿ ಹೇಳಿಸುವುದೇ ಇಲ್ಲ.

ಇತ್ಥಂಚ, ಕವಿಸಮಯ ನಿಬಂಧನದ ಏರ್ಪಾಡಿನಲ್ಲಿ ಸಮರ್ಪಕವಾದ ಕಾರಣವು ಕಂಡುಬರುವುದರಿಂದಲೂ, ಆ ನಿಬಂಧನವನ್ನು ಬಿಟ್ಟು ಬೇರೆ ವಿಧದಲ್ಲಿ ಪ್ರವರ್ತಿಸುವುದರಲ್ಲಿ ಹೆಚ್ಚಾಗಿ ಶ್ರಮಪಡಬೇಕಾಗಿ ಬರುವುದರಿಂದಲೂ, ಅತಿಶಯವೇನೂ ಉಂಟಾಗಲಾರದುದರಿಂದಲೂ, ಅದೇ ಸಮಯನಿಬಂಧನದಲ್ಲಿ ಪ್ರವರ್ತಿಸುವುದರಿಂದ ಪಾಠಕರಿಗೂ ಸೌಕರ್ಯ ಹೆಚ್ಚುವುದರಿಂದಲೂ, " ಮಹಾಜನೋ ಯೇನ ಗತ ಸ್ಸಪಂಥಾಃ " ಎಂಬ ಮರ್ಯಾದೆಯಲ್ಲಿ ಹಿರಿಯರು ನಡೆದ ದಾರಿಯಲ್ಲೇ ನಡೆವುದು ಉತ್ತಮವೆಂದು ತೋರುತ್ತದೆ. ಆದರೂ ಸಹೃದಯರಿಗೆ ಆಹ್ಲಾದವುಂಟಾಗುವಂತೆಯೂ, ಪ್ರಾಚೀನ ಕವಿಗಳನ್ನು ಮೀರಿಸುವಂತೆಯೂ ನವೀನ ಮಾರ್ಗದಲ್ಲಿ ಪ್ರವರ್ತಿಸುವ ಶಕ್ತಿಯುಳ್ಳವರಿಗೆ ಮಾತ್ರ ಇಂಥ ನಿಯಮವೇ ಕೂಡದು. ಅವರು ಸರ್ವಸ್ವತಂತ್ರರೇ. ಮುಂದಕ್ಕೆ ಲೋಕವೇ ಅವರನ್ನೇ ಅನುಸರಿಸುತ್ತ ಬಂದು, ಅವರ ಪಥವೇ ಸುಪಥವಾಗುವುದು.

ಆದರೆ, ವಸ್ತುಗತ್ಯಾ ಯಾವುದು ಇಲ್ಲವೋ ಅದು ಇರುವಂತೆಯೂ, ಯಾವುದು ಇರುವುದೋ ಅದು ಇಲ್ಲದಂತೆಯೂ, ಅಸಾಧ್ಯವಾದುದು ಸಾಧ್ಯವಾದಹಾಗೆಯೂ, ಸಾಧ್ಯವಾದುದು ಅಸಾಧ್ಯವಾದಹಾಗೆಯೂ ಒಂದು ಸಂಕೇತವನ್ನು ಏರ್ಪಾಡುಮಾಡಿಕೊಂಡು, ಎಂದರೆ ಒಂದು ಸಮಯನಿಬಂಧನವನ್ನು ಆಶ್ರಯಿಸಿ, ಕಾವ್ಯವನ್ನು ಬರೆವುದಕ್ಕಿಂತ ಇದ್ದುದನ್ನು ಇದ್ದಹಾಗೆಯೇ ಬರೆದರೆ ಸಾಲದೇ? ಲೋಕಸ್ಥಿತಿಗೆ ಅನುರೂಪವಾಗಿಲ್ಲವೆ? ಆಹ್ಲಾದವುಂಟಾಗದೆ? ಸ್ವಭಾವೋಕ್ತಿ ಅಥವಾ ಲೋಕವನ್ನು ಯಥಾವಸ್ಥಿತವಾಗಿ ನಿರೂಪಿಸುವುದು ಮನಕ್ಕೆ ಇಂಪಾಗಿಲ್ಲವೆ? "ಸಿದ್ಧಮನ್ನಂ ಪರಿತ್ಯಜ್ಯ ಭಿಕ್ಷಾಮಟತಿ ದುರ್ಮತಿಃ" ಎನ್ನುವಹಾಗೆ ಸಂಕೇತದಮೇಲೆ ಪ್ರವರ್ತಿಸುವುದು ಬುದ್ಧಿಯಿಲ್ಲದ ಕೆಲಸವು. ವಿರೋಧಪ್ರವೃತ್ತಿಯು ಸುತರಾಂ ಸುಖದಾಯಕವಲ್ಲ—ಎಂದು ಕೆಲವರು ಆಕ್ಷೇಪಿಸಬಹುದು.

ಈ ಆಕ್ಷೇಪಣೆಯು ಕವಿಹೃದಯವನ್ನು ತಿಳಿದವರ ಮಾತಾಗಿ ಕಾಣುವುದಿಲ್ಲ. ಕಾವ್ಯಪರಿಶ್ರಮವೂ ಲೋಕಪರಿಚಯವೂ ಇದ್ದವರು ಬೇರೆ ಹೀಗೆ ಎಂದೂ ಹೇಳಲಾರರು. ಸ್ವಭಾವೋಕ್ತಿಯೇ ಉತ್ಕೃಷ್ಟವೆಂದು ಹೇಳುವವರೂ ಕೂಡ ಕವಿಸಂಕೇತವನ್ನು ಸರ್ವಥಾ ಬಿಟ್ಟಿಲ್ಲ. ಹೆಚ್ಚಾಗಿ ಅದನ್ನು ಉಪಯೋಗಿಸಕೂಡದೆಂದವರಭಿಪ್ರಾಯ. ಸ್ವಭಾವೋಕ್ತಿಯಿಂದಲೇ ಸಾಧ್ಯವಾಗದ ಅನೇಕ ಸಂಗತಿಗಳು ಕಾವ್ಯವಿಷಯಕ್ಕೆ ಬರತಕ್ಕಿವೆ. ಅವುಗಳಿಗೆ ಕವಿಸಂಕೇತವೇ ಬೇಕು. ಅವುಗಳನ್ನು ಬಿಟ್ಟು ಬಿಟ್ಟರೆ ಕಾವ್ಯಸುಖವು ಮುಕ್ಕಾಲುಪಾಲು ಹೋದಂತಾಗುವುದು. ಅಲ್ಲಲ್ಲೇ ಕಾವ್ಯದಲ್ಲಿ ಸಂಕೇತಾಶ್ರಯವಾದ ವರ್ಣನೆಗಳು ಕಾವ್ಯಕ್ಕೆ ಶೋಭಾವಹವೇ. ಅವುಗಳೇ ಕಾವ್ಯರಸವನ್ನು ಅನುಭವಿಸುವಂತೆ ಮಾಡಿಸುವಂಥವು. ಹೇಗೆ ಮಧುರ ಪದಾರ್ಥಗಳನ್ನೇ ತಿನ್ನುತ್ತಿರುವಾಗ ಮಧ್ಯಮಧ್ಯದಲ್ಲಿ ಇತರ ರಸಗಳಾದ ಉಪ್ಪು ಹುಳಿ ಕಾರಗಳ ಆಪೇಕ್ಷೆಯು ಸಹಜವಾಗಿ ಹುಟ್ಟುವುದೋ, ಹೇಗೆ ಅವುಗಳನ್ನು ಆಗಾಗ ತೆಗೆದುಕೊಳ್ಳದಿದ್ದರೆ ಆ ಮಧುರಪದಾರ್ಥಗಳ ರುಚಿಯು ಕೆಟ್ಟುಹೋಗುವುದೋ, ಹಾಗೆಯೇ ಅಲಂಕಾರ ಜಾತಿ ದ್ರವ್ಯ ಕ್ರಿಯಾಗುಣಾತ್ಮಕವಾದ ವರ್ಣನೆಗಳ ಸಾಹಚರ್ಯವು ಸ್ವಭಾವೋಕ್ತಿಗೆ ಅವಶ್ಯಕವಾಗಿರುವುದು. ಅವುಗಳಿಂದಲೇ ಸ್ವಭಾವೋಕ್ತಿಗೆ ಶೋಭೆಯು ಹೆಚ್ಚುವುದು. ಒಂದರ ಪರಭಾಗಕ್ಕೆ ಇತರ ಸಾಹಚರ್ಯವು ಬೇಕೆಂಬುದು ಎಲ್ಲರಿಗೂ ಗೊತ್ತಿದೆ. ಹೀಗಿರುವುದರಿಂದ ಸ್ವಭಾವೋಕ್ತಿ ಪ್ರಾಶಸ್ತ್ಯವನ್ನು ಹೇಳುವವರೂ ಕೂಡ ಕವಿಸಮಯಗಳನ್ನು ಎಂದೂ ಅಲೆಗಳೆಯರು.

ಇದರಿಂದ ಸ್ವಭಾವೋಕ್ತಿಯೇ ಉತ್ತಮವೆಂದೂ, ಅದೇ ಹೆಚ್ಚಾಗಿ ಇರಬೇಕೆಂದೂ ನನ್ನ ತಾತ್ಪರ್ಯವಲ್ಲ. ಉಪಮೋತ್ಪ್ರೇಕ್ಷಾದಿಗಳೇ ಇದ್ದರೂ ಹಿತವಿಲ್ಲ; ಸ್ವಭಾವೋಕ್ತಿಯೇ ಇದ್ದರೂ ಹಿತವಿಲ್ಲ. ಎಲ್ಲವೂ ಯಥಾಯೋಗ್ಯವಾಗಿ ಸೇರಿಸಿರಬೇಕು. ಹಿತವನ್ನು ಉಂಟುಮಾಡುವ ವಿಷಯದಲ್ಲಿ ಕ್ಲಿಪ್ತವಾದ ಸೂತ್ರವನ್ನು ಹೇಳುವುದು ಅಸಾಧ್ಯವು.' ಆದುದರಿಂದ ಸಂದರ್ಭಾನುಗುಣವಾಗಿ ಅವುಗಳಲ್ಲಿ ಹೆಚ್ಚು ಕಡಮೆ ಇರಬೇಕು. ಹಾಗೆ ಸೇರಿಸಿದ್ದರೇನೇ ಸೊಗಸು. ಯಾವಯಾವುದನು ಹೇಗೆಹೇಗೆ ಎಷ್ಟೆಷ್ಟರಮಟ್ಟಿಗೆ ಸೇರಿಸಬೇಕು—ಎಂದರೆ,

ಸೊಗಯಿಸುವ ಕಬ್ಬಮುಂ ಕ।
ಬ್ಬಿಗರಲ್ಲದೆ ಮೆಚ್ಚರುಳಿದರೇನರಿಪರ್ ತುಂ ॥
ಬಿಗಳಲ್ಲದೆ ಪೂವೊಳ್ ಮಗ।
ಮಗಿಸುವ ಕಂಪಂ ಕಡಂದುರೇನರಿದಪುದೇ ॥

ಎಂಬಂತೆ, ಆ ಕಾರ್ಯದಲ್ಲಿ ನಿಪುಣರಾದ ಕವಿಗಳೇ ಹೇಳಬೇಕು; ಅಥವಾ ಕವಿಹೃದಜ್ಞರಾದ ರಸಿಕರು ತಿಳಿಸಬೇಕು. ಇತರರು ಯಾರಿಗೂ ಸಾಧ್ಯವಿಲ್ಲ. ನಾನಾವಿಧವಾದ ಸಂಕೇತನಿಬದ್ಧವಾದ ವರ್ಣನಾಪ್ಯೈಖರಿಗಳನ್ನು ಮನೋರಂಜಕವಾಗುವುದಕ್ಕೋಸ್ಕರ ಹೇಗೆ ಸೇರಿಸಬೇಕೆಂಬುದಕ್ಕೆ ಈ ಕೆಳಗಣ ಉದಾಹರಣೆಯು ಒಳ್ಳೆಯ ದೃಷ್ಟಾಂತವಾಗಿರುವುದು.

ಘೋರಾರಣ್ಯದಲ್ಲಿ ಬೇಟೆಯಾಡಿ ಬಳಲಿ ನೀರನ್ನು ಅರಸಿಕೊಂಡು ಹೋಗುವ ವರ್ಣನೆ:—

ವಚನ॥ ಅಂತು ಮಹೋಗ್ರವರಾಹಂ ಸೂಜಿ ಸಲ್ಲದ ಪೆರ್ಮರಂಗಳೊಳಗೆ ಮುದುಕಿ ಮಾಯಮಾಗಿ ಪೋಪುದುಂ, ನಿಂದು ಪರಿಭಾವಿಸಿ ಪಿರಿಯ ಮರದ ನೆಳಲ್ಗೆ ಸಾರ್ದು ಬಿಲ್ಲನೂರಿ ಕೊಪ್ಪಿನೊಳ್ ಕೆಯ್ಯಂ ಸಾರ್ಚಿ ನಟ್ಟದಿಟ್ಟೆಯಿಂ ಜಾನಿಸಿ ಬಿಲ್ಲುಂ ಬೆರಗುಮಾಗಿ ತನ್ನನುಚಿತಾವೇಗಕ್ಕಮಯಥಾಯಥೋದ್ವೇಗಕ್ಕಂ ಮನದೊಳೆ ನಕ್ಕು, ಕುರುಳ ಸುರ್ಬಿಂ ಪುರ್ಜಿಂಗಿಳಿವ ಬೆಮರ ಬರಿವೊನಲಂ ಸುಟ್ಟುಂಬೆರಲಿಂ ತೊಡೆದೀಡಾಡುತ್ತುಂ, ತನ್ನ ಬರವಂ ನೋಡುತ್ತುಂ ನಾಡೆಯುಂ ಬಳಲ್ದು

ಟಿಪ್ಪಣಿ—೧. ಕೊಪ್ಪು—ಬಿಲ್ಲಿನ ತುದಿ, ಕೋಟಿ, ಸುಟ್ಟುಂಬೆರಲ್—ತರ್ಜನಿ. ಮಕರಂದ—ಮಂತ್ರಿಪುತ್ರನಾದ ಇವನೂ, ರಾಜಪುತ್ರನಾದ ರೂಪಕಂದರ್ಪದೇವನೂ ಮಿತ್ರರು.

ಜಾನಿಸುತಿರ್ದ ರೂಪಕಂದರ್ಪದೇವನಂ ಮಕರಂದನೆಯ್ದೆವಂದು ಕೆಲದೊಳ್ ನಿಂದು ತಿರಿದು ತಂದ ತಳಿರಿಂ ಬೀಸಿ, ಮುಗುಳ್ನಗೆಯುಂ ಮೊಗಕ್ಕೆ ಸೂಸಿ ಮೆಲ್ಲನಿಂತೆಂದಂ:—

ಇಂ ಧ್ಯಾನಿಸಲೇಂ ಕೃತನಯ ।
ನಾಂಧ್ಯಮನರುಣಾಶ್ಮರಶ್ಮಿಸೂತಪ್ರಾತ ॥
ಸ್ಸಂಧ್ಯಮನವಲೋಕಿಪವಿಾ ।
ವಿಂಧ್ಯಮನಿದನುಳಿದು ಬಿನದಮಾವುದುಮುಂಟೇ ॥ ೨ ॥

ನಡುವಗಲಾದುದು ನೀಂ ನೀ ।
ರಡಿಸಿದೆಯುದಕಾಶ್ರಯಂಗಳಂ ಕಾಣ್ಬಿನ್ನಂ ॥
ನಡೆವಮೆನುತ್ತಲ್ಲಿಂದಂ ।
ನಡೆದರ್ ಬಿಂಮೆಂಬ ಬಿಂಜಡಡವಿಯೊಳವರ್ಗಳ್ ॥ ೩ ॥

ತದಕಿನ ತಾಳ ತೆಂಗಿನ ತಳಂಕಿನ ತುಂಬುರ ಚಿಲ್ಲ ಬೆಲ್ಲವ ।
ತ್ತ್ರದ ಬಿಳಿಯತ್ತಿಯಿಪ್ಪೆಯ ಮರಂಗಳ ಕೊಂಬುಗಳಂಬರಂಬರಂ ॥
ಪುದಿದು ಪೊದಳ್ದು ಸುರ್ಬಡರೆ ಪರ್ಬಿರೆ ಕಾರಿರುಳೋಳಿ ಕೊಂಬುಗೊಂ ।
ಡುದೆನೆ ಕರಂಗಿ ಕಳ್ತಲಿಸುತಿರ್ದುದು ಕಾನನಮೆತ್ತ ನೋಳ್ಪೊಡಂ ॥ ೪ ॥

ಫಳಿನೀಮಿಾಳತ್ತಮಾಳದ್ಯುತಿಮಳಿನತೆಯಿಂ ನೀಳಶೈಳಾಂಬುದಶ್ಯಾ ।
ಮಳಸಂಕೀರ್ಣಾಂಶುವಿಂ ಲುಬ್ಧಕಬಳ ಶಬರೀಕೇಶಕೃಷ್ಣಪ್ರಭಾಸಂ ॥
ಕುಳದಿಂ ಭಲ್ಲೂಕಕಾಳೋರಗಕುಳಕಳಿತೋನ್ಮೇಷಕಲ್ಮಾಷಮಾಷಾ ।
ವಿಳಕಾಂತಿವ್ರಾತದಿಂ ನೂರ್ಮಡಿಸಿದುದು ವನಾಗಾರಘೋರಾಂಧಕಾರಂ ॥ ೫ ॥

ಗಿರಿಘಾತದ್ವಿಪದಂತಭಂಗವಿಶದಂ ಶಾರ್ದೂಲಸಂದಷ್ಟಶಂ ।
ಬರರಕ್ತಾಹಿತಲೋಹಿತಂ ರುರುಗಳಗೃದ್ಧಾಹಿತೋಜ್ಝಮರ್ಮ ॥
ಮರ್ರಕಾಳಾಹಿಕಳೇವರಾವಿಳಮನೇಕಶ್ವಾಪದಾನೀಕನಿ ।
ಷ್ಠುರತುಂಡತ್ರುಟಿತಾವಕೀರ್ಣದರವೃತ್ತಾಕಾನನಂ ಕಾನನಂ ॥ ೬ ॥

ವ॥ ಅಂತು ಭೀತಿಯ ವಿಭೂತಿಭವನಮುಮಪಾಯದುಪಾಯಾಸ್ಪದಮುಮೆನಿಸಿ ಪೊಲಗಿಟ್ಟು ಪೊಕ್ಕ ಭೂತಕೋಟಿಗಂ ಭಯಜ್ವರಮನಾಗಿಸುವ ಮನೋಹರತೆಗೆ ಬಂಜೆಯಾದ ಬಿಂಜಡಡವಿಯೊಳಗನೆ ಕಾಳಿಂದಿಯ ಮಡುವಿನೊಳ್ ಮುಳುಗಿ ಪೋಪಂತೆಯುಂ, ತಮಿಸ್ರಗುಹೆಯುಂ ಪೊಕ್ಕು ಪೋಪಂತೆಯುಂ, ಕಾಡಿಗೆಯ ಬೆಟ್ಟಮಂ ಬಗಿದು ಪೋಪಂತೆಯುಮೆತ್ತಾನುಂ ಪಿರಿದಂತರಮಂ ಸಾಯ್ತು ಪೋಗಿ,

ಸುಡುವಡಗಿಂ ಕರಂ ಪೊಗೆವ ಪರ್ಬುವ ಕೊರ್ಬಿಗೆ ಪೆಕ್ಕಮಪ್ಪ ಪೆ ।
ರ್ಬಡೆತದ ನಾತವಾನೆಗಳ ಬಲ್ವೆಣನಂ ಬಗುಳುತ್ತೆ ಮುತ್ತಿ ಕೀ ॥
ವಡುತೆ ತಗುಳ್ವಿನಂ ತೆಗೆವ ನಾಯ್ಗಳಗುರ್ವಿಸುತಿರ್ಪ ತೋರ್ಪ ಪೇ ।
ರಡವಿಯು ಬೇಡವಳ್ಳಿಗಳನೀಕ್ಷಿಸುತುಂ ನಡೆದಂ ನರಾಧಿಪಂ ॥ ೮ ॥

ಉಗುಳಿಪ, ಮೂಗಂ ಮುಚ್ಚಿಪ, ।
ಪೊಗಮಂ ಮೂದಿರಿಕನಾಗಿಪುದ್ಗಾರಮನಾ ॥
ವಗಮೊಗೆಯಿಪ, ಬೇಡರ ಪ ।
ಳ್ಳಿಗಳಂ ಪತಿ ಪಾಯ್ದು ಪೋಗೆ ಕಿರಿದಂತರಮಂ ॥ ೯ ॥

ತೊಡೆ ಮುಗುಳ್ದುದು ತೋಳ್ ಸಡೆದುದು ।
ಪೆಡದಲೆ ಸುರ್ಕಿದುದು ಕೆಯ್ಗೆ ಕೆಂಪಿಳಿದುದು ಪಿ ॥
ನ್ನಡು ತಡೆವಂತಾದುದು ಮೆ ।
ಲ್ಲಡಿ ಚಳಿತುದು ಪೋಪ ವಿಪುಳವಿದ್ಯಾಧರನಾ ॥ ೧೦ ॥

ಮೊನೆವರಲೊತ್ತೆ ಮೆಲ್ಲಡಿಗಳಂ, ಬಿಸಿಲಳ್ಕೆ ಬಳಲ್ದ ಮೆಯ್ಯ, ಬಿ ।
ರ್ರನೆ ಬಿರುಗಾಳಿ ಬೀಸುತಿರೆ ಮೆಲ್ದುಟಿ ನಿಷ್ಠುರಮಾಗೆ, ಗಂಟಲು ॥
ಳ್ಳನಿತುವರಂ ತೆಲಳ್ದೊಣಗೆ, ನಾಲಗೆ ನಿಬ್ಬರಮಾಗೆ, ಕಣ್ಬೊಡರ್ ।
ಕಸಲದೆ ನಂದೆವೊಯ್ದ ತೆರನಾಗೆ, ತೃಷಾತುರನಾದನಾನೃಪಂ ॥ ೧೧ ॥

ತೇಜಕ್ಕೆನ್ನೊಳ್ ಸೆಣಸುವ ।
ನೀಜನಪತಿಯೆಂದು ಕಾಯ್ದು ತೆರದಳುರ್ದಂ ನೀ ॥
ರೇಜಸಖಂ ಕಾಯ್ದು ಕದಿ ।
ರ್ಸೂಜಿಗಳಿಂದೊತ್ತಿ ನೆತ್ತಿಯುಂ ಕುತ್ತುವವೋಲ್ ॥ ೧೨ ॥

ಕಡುವಿಸಿಲಳುರ್ವಂತಿರೆ ಕೆಂ ।
ಪಡದುರ್ದು ಮೊಗಮಿರ್ಪು ಸಾರ್ವವೋಲ್ ಕೊರಲೆಡೆಯಿಂ ॥
ದೆಡೆಯುಡುಗದೆ ಬೆಮರ್ವನಿಗಳ್ ।
ಬಿಡೆ ಬರಬರ ಬತ್ತಿದತ್ತು ಬಾಯ್ದೆರೆ ನೃಪನಾ ॥ ೧೩ ॥

ಟಿ—೮. ಅಡಗು—ಮಾಂಸ.
೧೩. ಇರ್ಪು—ದ್ರವ, ರಸ.

ಕುಸಿಯುತ್ತುಂ ಕೂಂಟುತುಂ ನುಣ್ಮಳಲೊಳಡಿಗಳಂ ಪಾಸಿ ಮೆಟ್ಟುತ್ತುಮೆಂಟುಂ
ದೆಸೆಯುಂ ರಕ್ತಾಲಸಾಪಾಂಗದಿನೆಳವಿ ಜಲೋದ್ದೇಶಮುಂ ಭಾವಿಸುತ್ತುಂ ॥
ಬಿಸುಸುಯ್ಯುಂ ಸುಯ್ಯುತುಂ ಪೆರ್ಮೆಳೆಗಳ ನೆಳಲಂ ಪೊರ್ದುತುಂ ಕುಳ್ಳಿರುತ್ತುಂ ।
ವಸುಧೇಶಂ ಕ್ಲೇಶದಿಂದಂ ನಡೆದನಡವಿಯೊಳ್ ದುಃಖಮೇಂ ಸೀಯನುಂಟೇ ॥

ನೆವದಿಂ ನೀರ್ದಾಣಮುಂ ಸೂಚಿಸುತೆಲೆಗೊಡೆಯುಂ ಸಾರ್ಚುತುಂ ಸ್ವೇದಬಿಂದು ।
ಪ್ಲವಮಂ ಸೀಂಟುತ್ತೆ ಕುಳ್ಳಿರ್ದೆಡೆಯೊಳಡಸಿ ನೆಮ್ರ್ಮಾಗುತುಂ ಮಾರ್ಗದೊಳ್ ಪ ॥
ಲ್ಲವಮಂ ಪಾಸುತ್ತೆ ತನ್ನಾಸರನರಿಯದೆ ಸಂತೈಸುತುಂ ಕೈಗುಡುತ್ತಂ ।
ದವನೀಶಂಗಾಸೆಯಾದಂ ಪ್ರಿಯುಸಚಿವಸುತಂ; ಭೃತ್ಯನಿಂತಾಗವೇಡಾ? ॥ ೧೫ ॥

ವ॥ ಅಂತಳವಿಗಳಿದ ಪಿಪಾಸೆಯುಂ ಪಸಿಯುಮುಸಮುಯುಂಬಡೆದು ಮುನ್ನಂ ತನ್ನ ಮನಮುನಳುರ್ದು ನೂಂಕಿ ಕಳೆದು, ಕಾಮಾನಳನನಳುರ್ದು ಕಳೆವಂತಳುರೆ ಬಳಲ್ದುಳಲ್ದುಂ, ಧೃತಿಯುನವಳಂಬಿಸಿ ಬಿಸಿಲಂ ಬೆನ್ನೊಳಿಕ್ಕಿ ನೀರ್ನೆಳಲನರಸಿ ಗುಗ್ಗುರಿಗಲ್ಲ ಪರಿವರಲ ತರಿವೊರಬಿನ ನುಚ್ಚುವಣಲ ನೀರರಿದು ಪರಿದು ದಿಂಟೆಯು ದರಿಯು ಕುಳಿಯು ಕುತ್ತುರ ಕುಳಿವಳ್ಳಮುಂ ಕಂಡದರ ಬಳಿವಿಡಿದು ಬೆಳೆದ ಬಳ್ಳಿಯ ಪಸಿಯ ಪುಲ್ಲ ಪೂಲಿಯ ನಾನಲನರಿದು ನಡೆವಾಗಳೊಂದೆಡೆಯೊಳ್,

ಮಿರುಗುವ ಬೆಳತಿಗೆಗಣ್ಬೊಣ ।
ರೊರತೆಯ ಜಲದೊಳಗೆ ಪೊಳೆಯೆ ನೀರ್ಗುಡಿವುದುಮುಂ ॥
ಮರೆದೆಳಮಿಾನ್ಗಳ್ಗೆತ್ತೇಂ ।
ಕಿರುವೇಡಿತಿ ತುಡುಕಿ ಶಬರನಂ ನಗಿಸಿದಳೋ ॥ ೧೭ ॥

ವ॥ ಅದಂ ಕಂಡವನಿಪಾಲವಿಳವಳುಮಿಾಜಳಮುಂ ದೃಶ್ಯಮಲ್ಲದೆ ಪರಿಸ್ಪೃಶ್ಯಮಲ್ಲೆಂದಲ್ಲಿಂ ತಳರ್ದು ನಡೆಯೆ ಮತ್ತೊಂದೆಡೆಯೊಳ್,

ಮೊಗದೊಳ್ ಕಣ್ ಪೊಳೆಯುತ್ತಿರೆ ।
ಬಗರಗೆಯೊಳ್ ಪೊಳೆವ ಮಿಾನ್ಗಳಂ ಕಂಡರಸಂ ॥
ಮೊಗೆವೊಡೆ ನೀರ್ನೆರೆಯವೆನು ।
ತ್ತಗಲ್ದನಲ್ಲಿಂದೆ ಕರುಣಮಾರಿಸೆ ತೃಷೆಯುಂ ॥ ೧೮ ॥

---

೧೪. ಎಳವಿ—ಧಾ. ಎಳವು, ವೀಥೀಕರಣೇ. ೧೫. ಇಂತಾಗವೇಡಾ—ಹೀಗಾಗಬೇಡವೆ, ಬೇಕೆಂದರ್ಥ.

ಟಿಪ್ಪಣಿ— ೧೭. ಪ್ರತಿಫಲನವನ್ನು ಮೀನೆಂದು ಭ್ರಮಿಸಿ ಎಂದು ಭಾವ. ಗೆತ್ತು—ಭ್ರಮಿಸಿ. ಅಶುದ್ಧವಾದುದರಿಂದ ಎರಡೂ ಪರಿಸ್ಪೃಶ್ಯವಲ್ಲ. ೧೮. ಮೀನಿಗೆ ನೀರು ಸಾಲದೆ ಹೋಗುವುದೆಂಬ ಕರುಣೆಯು. ಬಗರಗೆ—ಬುಗ್ಗೆ.

ಮತ್ತೊಂದೆಡೆಯೊಳ್

ಸುರಿಸುರಿವ ನೀರನಿಲ್ಲಿಂ ।
ದೊರೆದಂಬೂಕೃತದಿನುರ್ಕಿದುಗುಳ್ಗಳ ನೊರೆಯುಂ ॥
ಪರಿದಿಕ್ಕಿದಂತೆ ತುರುಗಿ ।
ದೊರ್ರತೆಯುನಿದು ಕರಡಿ ಕುಡಿವ ತೆರನೆಂದರಿದಂ ॥ ೧೯ ॥

ಮತ್ತೊಂದೆಡೆಯೊಳ್

ಪುಲಿ ನೀರುಣುತಿರೆ ಪಾಯ್ದು ।
ಕ್ಕಲವಂದಿ ತದೀಯವಿಪುಳಗಳವಿಗಳದಸ್ರ ॥
ಗಲದಿಂ ಬಗರಗೆ ತೀವಿದೊ ।
ಡೆ ಲವಲಿಕೆಯಿನೂಡಿ ಪೋದುದೆಂದರಿದರಸಂ ॥ ೨೦ ॥

ವ॥ ಅಂತು ಪೋಪಿನವೊಂದೆಡೆಯೊಳಿಡಿದ ಮಳಲೇರಿಗೊಂಡು ಬಳಸಿ ತಿಳಿದ ಅಳ್ಳೊರತೆಯೊಳ್

ನಿಮಿರ್ದ ಕೊರಲ್ ಮರಲ್ದು ಮಡಿದೂರಿದ ಮುಂದಣ ಕಾಲ್ಗಳೆರ್ದ ಪ ।
ಶ್ಚಿಮತನು ಜೋಲ್ದುದರಂ ಪೆರಗನಪ್ಪಿದ ಕೊಂಬುಗಳಾಲಿಸುತ್ತೆ ವಿ ॥
ಶ್ರಮಿಸುವ ಕರ್ಣಮುಳ್ಕುಗುಳ್ದ ಕಣ್ ಮಿಡುಕೋಡುವ ಕಂಠನಾಳಮುಂ ।
ದಮರ್ದಿರೆ ನೀರನುಂಬೆರಲೆಯುಂ ಬರಲೊಲ್ಲದೆ ನೋಡಿದಂ ನೃಪಂ ॥ ೨೧ ॥

ವ॥ ಅದಂ ಕೆಲಕಿಕ್ಕಿ ಪೋಗೆ ಮುಂದೊಂದು ಬಗರಗೆಯೊಳ್

ಕಡುಬಡವಾಗಿ ಮುಂಬಯಕೆಯಿಂ, ಬಿಸಿಲಳ್ವೆ ಕರಂ ಬಳಲ್ದು, ಮೆ ।
ಲ್ಗುಡುಕುಗೊಳಲ್ಕವೊಲ್ಲದಿರೆ, ಮೆಲ್ಲಗೆ ತಂದು ಪೊದಳ್ದ ಪೀಲಿಯುಂ ॥
ಪಿಡಿದು ಮೊಗಕ್ಕೆ, ನೀಡಿ ಕೊರಲಂ ತಿಳಿನೀರ್ಗಳ ನೀಂಟಿ ಕೊಂಡು, ಬಾ ।
ಯ್ವಿಡುವ ಮಯೂರಿಗೇಂ ಮುರಿದು ನೀಡುತುಮಿರ್ದುದೊ ಸೋಗೆ ಬೇಗದಿಂ ॥ ೨೨

ವ॥ ಅದಂ ನೋಡುತ್ತುಂ ನಡೆಯೆ ಮತ್ತೊಂದೆಡೆಯೊಳ್

ಕುಡಿದು ಕರಂ ಚಳಲ್ಗರೆಯೆ ನಾಲಗೆಯುಂ ಮಿಗೆ ನೀಡಿ, ನೀರಸೋ ।
ಗಡಿಸಿ ಮರಲ್ದು ನಕ್ಕಿ ತುಟಿಯುಂ ಕಡೆವಾಯ್ಗಳನಗ್ರಪಾದದಿಂ ॥

---

೧೯. ಜೊಲ್ಲಿನ ನೀರು ಎಷ್ಟುಸಲ ಎತ್ತೆತ್ತಿ ಸುರಿದರೂ, ಅದರ ಅಂಟು ಹೋಗದಿರಲು.

೨೦. ತನ್ನ ಗಾಯವನ್ನೂ ಲಕ್ಷ್ಯಮಾಡದೆ ನೀರನ್ನು ಕುಡಿಯುತಿದ್ದಿತೆಂದು ಭಾವ. ದಾಹಾತಿಶಯವೆಂಬುದೇ ವ್ಯಂಗ್ಯ.

ತೊಡೆದು ತಡುಂಬಿ ತಾತೊಡಬಗೆತ್ತುವ ಮಾಗುಳಿಸುತ್ತೆ (?) ಬಿಟ್ಟು ಕ ।
ಣ್ಣೊಡರ್ಗಳನಿಕ್ಕೆಲಕ್ಕಲಸಿ ಪೋಪ ತರಕ್ಷುವನದ್ಭುತಕ್ಷುವಂ ॥ ೨೩ ॥

ವ॥ ಅದಂ ಪಿಂತಿಕ್ಕಿಯಾಪಳ್ಳದೊಳುಳ್ಳ ನೀರನೆಲ್ಲಿಯುಂ ಪಡೆಯದೆ ಪೊರಮಟ್ಟು ಬಟ್ಟೆಗೊಂಡು ಪೋಗಿ ಪೋಗಲಾರದಸಕಳಿದ ಪಿಪಾಸೆಯಿಂ ಬಸವಳಿವ ಮಾನವಮದನನಂ ಮಕರಂದಂ ಮೆಲ್ಲನೆ ಮೆಳೆಯ ನೆಳಲ್ಗೆ ತಂದು ನೆರ್ವಿಸಿಕೊಂಡು ನಿರ್ಮಾನುಷಮಪ್ಪ ಕಾನನದೊಳ್ ಪಾನೀಯಮನರಸುವುಪಾಯಮಾವುದೆಂದು ಕಿಂಕರ್ತವ್ಯತಾಮೂಢಂ ದಿಗವಳೋಕನಂಗೆಯ್ಯುತ್ತಿರೆ ಕಟ್ಟೆದಿರೊಳ್

ತಿಗ್ಮಾಂಶುದ್ಯೋತಿಗಡ್ಡಂ ಮರೆವಿಡಿದುಡಿದಂಭೋಜಮುಂ, ಭ್ರಾಜಿವೇಣೀ ।
ಸ್ರಗ್ಭೃಗ್ಗಾಳಿವ್ರಜಂ ಪೀಲಿಯ ಪೊಸದಳೆಯುಂ ಪೋಲೆ, ಭೂಪಾಲಲೋಲ ॥
ದ್ದೃಗ್ಮೀನಂ ತನ್ನ ಲಾವಣ್ಯದ ತಿಳಿಗಡಲೊಳ್ ಸೂಟಿವಂದಾಡೆ, ಬಂದಳ್ ।
ದಿಗ್ಭೂಳೋಪಾಂತದೊಳ್ ಪಜ್ಜಳಿಸಿ ಪರಪುತುಂ ಕಾಂತಿಯುಂ ಕಾಂತೆಯೊರ್ಬಳ್ ॥

ಆಕೆಯ ಲಾವಣ್ಯಾಮೃತ ।
ಸೇಕದೆ ತೃಷೆ ಮಗ್ಗಿ ತರ್ಕುಮಲ್ಲದೊಡಂತ ॥
ತ್ಯಾಕುಳಿತಚಿತ್ತನವನವ ।
ಳೋಕಿಸುವನೆ ಸೋಲ್ತನಂತೆ ಮಾನವಮದನಂ ॥ ೨೫ ॥

ಅಲ್ಲಿಂ ಪೆರಗೆ

ತಳದೆಳಗೆಂಪಿಂ ಪಳಿಕಿನ ।
ಕಳಶಂ ಕಿಸುಗಲ್ಲ ಕಳಶದಂತಿರೆ ತಳೆದು ॥
ತ್ಪಳದಳಧವಳವಿಳೋಚನೆ ।
ವಿಳಾಸದಿಂ ಮತ್ತಮೊರ್ವಳಂಗನೆ ಬಂದಳ್ ॥ ೨೬ ॥

ಬಳಗಳ್ಕಾಡುವ ಜಳದಿಂ ।
ಕಳಶಂ ಕಣ್ಗೆಸೆದುದಾಸ್ಯರುಚಿತಸ್ಕರನೀ ॥
ಖಳನೆಂದು ಪಿಡಿದೊಡಾಕೋ ।
ಮಳೆ, ಭಯದೆರ್ದೆವೊಯ್ವ ತುಹಿನಕರಬಿಂಬದವೋಲ್ ॥ ೨೭ ॥

---

ಟೀ— ೨೩. ತರಕ್ಷು—ತೋಳ. ಅದ್ಭುತಕ್ಷುವಂ—ಆಶ್ಚರ್ಯಕರವಾದ ಸೀನುಳ್ಳುದು.
೨೫. ಸೋಲ್—ಮೋಹಿಸಿಹೋಗುವುದು.
೨೭. ಭಯ···ವೋಲ್—ಬಳಗಳ್ಕಾಡುವ ಜಲದಿಂ ಎಂಬುದರಲ್ಲಿ ಅನ್ವಯಿಸುತ್ತದೆ.

ವ|| ಆಕೆವೆರಸಾಕಾಂತೆಯೆಯ್ದೆವಂದು ತೃಷಾನಳತಪ್ತನಾಗಿರ್ದ ಚಂದ್ರೋದಯು ನ ಮೇಲೆ ಸೊದೆವಳೆಯುಂ ಸೂಸುವಂತೆಯುಂ, ಘನಸಾರಾಸಾರದಿಂ ಸವನಂಗೆಯ್ವಂ ತೆಯುಂ, ಚಂದನಚರ್ಚೆಯುಂ ಚೆಲ್ಲುವಂತೆಯುಂ, ಅತಿದೀರ್ಘಧವಳವಿಳೋಚನಂಗ ಳಿನಡರೆ ನೋಡಿ ಕಳಶಜಲದಿನೀ ಕುಲರತ್ನಕಳಶನ ಬಳಲ್ಕೆಯುಂ ಕಳೆದೆಮ್ಮ ವನವಿಹಾ ರವಿನೋದಮುಂ ಸಫಲಂಮಾಡಿ ಅಕೃತಾರ್ಥತಾಕಳಂಕಮುಂ ತೊಳೆದು ಕಳೆವುದೆಂದು ಕೆಳದಿಯು ಕೆಯ್ಯ ಕಳಶಮುಂ ಕೊಂಡು ನೀಡೆ, ಮಕರಂದಂ ತಳೆದುಕೊಂಡು,

ಕುಳಿರ್ವ ಜಳಕಳಶಮದು ಕರ |
ತಳಮಂ ಸೋಂಕುವುದುಮಾಲಿಗೊಂಡು ಶರೀರಂ ||
ಪುಳಕಿಸೆ, ನಾಳದೊಳಾಕೋ |
ಮಳೆ ತೀವಿದ ಕಮಳನಾಳಮಂ ಕಳೆವಾಗಳ್ || ೨೮ ||

ಪೊಕ್ಕ ಕದಂಪು, ಪತ್ತಿ ಪೆಡೆಗೊಂಡ ಕೊರಲ್, ಪುಣೆಚೆರ್ದ ಕೀನಿವಲ್ |
ಪೊಕ್ಕಡಗಿರ್ದ ಕಣ್, ಕುರುಳಿಗೊಂಡರೆಬತ್ತಿದ ಬಾಯ್, ಬಳಲ್ದ ಮೆ |
ಯ್ಯುಕ್ಕುಳಿಸಿರ್ದ ಪೆರ್ಬಸಿರುಗುರ್ವಿಸೆ ಬಂದನದೊರ್ವ ಪಾರ್ವನ |
ಲ್ಲೊಕ್ಕಿಳಿತರ್ಪ ಕೈಪೆಮರಂ ತುದಿನಾಲಗೆಯಿಂದೆ ನಕ್ಕುತುಂ || ೨೯ ||

ವ|| ಆಪಾರ್ವನ ಬಗೆವಂ ಕಂಡರಸಂ — ಈ ದ್ವಿಜಂ ಬಾಲದ್ವಿಜದಂತೆ ನೀರಡಸಿ ಬಾಯುಂ ಬಿಡುತೆ ಬಂದಪ್ಪನೆಯ್ದೆ ಬಂದೆನ್ನ ಮೊಗಮುಂ ದೀನದೃಷ್ಟಿಯಿಂ ನೋಡ ದನ್ನೆಗಂ ಕೃಪಣೋಕ್ತಿಗಳಂ ಕಿವಿಗೀಡಾಡದನ್ನೆಗಂ ಸನ್ನೆಗೆಯ್ದಾದೊಡವಿಾತನ ತೃಷಾಗ್ನಿಯುಂ ಮಗ್ಗಿಸಂಬುದುಮಾರ್ಯಪುತ್ರನಂತೆಗೆಯ್ವೆನೆಂದಿರ್ಪನ್ನೆಗಂ ; ಬೇಡದೆ ಬೆಸಗೊಳ್ಳದಾಬ್ರಾಹ್ಮಣಂ ಬಂದು ಮುಂದೆ ಕುಕ್ಕುರಿಸಿ ಕುಳ್ಳಿರ್ದು ಕೊರಲಂ ನೀಡಿ ಸುಬ್ಬಗೊಂಡ ಗಡ್ಡಮುಮಂ ಮಿಾಸೆಯುಮನಗಲೆ ನೂಂಕಿ ಸೀರಿದ ತಲೆಯೋರಂತಿ ರ್ದ ಬಾಯೊಳಡ್ಡಗೆಯ್ಯನಿಡುವುದುಂ, ಮಕರಂದಂ

ಎರೆಯೆ ಸಿಡಿಲ್ವ ಸೀವರದ ಸೀರ್ಪನಿಗಳ್ ಪೊರಸೋರ್ಗುಮೆಂಬಿನಂ |
ತುರುಗಿರೆ ಮಿಾಸೆಯೊಳ್ ಮುಗುಳೆ ಕಣ್ಮಲರ್ಗಳ್ ಮಲರ್ದಳ್ಳೆ ಪೊಯ್ಯೆ ಮೆ |
ಯ್ಯೊರಗೆ ಕೆಲಕ್ಕೆ ಕಂಟಣಿಸೆ ಮೆಯ್ಸುವಿರೊಯ್ಯನೆ ಕಂಠಕಂದಳಂ |
ತೆರೆದು ಮಿಡುಂಕೆ ಮೂಗಲರೆ ಪೀರ್ದನಸುಂಗೊಳೆ ಪಾರ್ವನಂಬುವಂ || ೩೦ ||

ವ|| ಅಂತು ಕಳಶದ ನೀರನೊಂದು ಪನಿಯುಮನುಳಿಪದೆ ತೆಗೆದು ತೇಗಿ ತಲೆ ಯುಂ ತೂಗಿ ತಾಂಬೂಲಯಾಚನಾನಂತರಂ ಹೃಷ್ಟನುಂ ಸಂತುಷ್ಟನುಮಾಗಿ ಮಹೀ

ಪತಿಯುಂ ಪಲವು ಸೂಳ್ ಪರಸಿ ಮತ್ತಮಾವಿಪ್ರನಿಂತೆಂದಂ:—

ಮುಂಚುವುದೆರೆವನನೀವಂ।
'ಕಿಂಚಾನರ್ಘ್ಯಂ ಯುದವಸರೇ ದತ್ತ'ಮೆನು॥
ತ್ತುಂ ಜಲದನೀವುದಲ್ಲದೊ।
ಡೇಂ ಚಾಗಮೆ ದಾನಿ ನೀನೆ ದಾನವಿನೋದಾ॥ ೩೩॥
ಮೆಚ್ಚದೊಡೇನಿತರಜನಂ।
ಮೆಚ್ಚದ ಪೆಱ ಮೆಚ್ಚೆ ಸೊಬಗನೆನಿಪುದರಿಗಣಂ॥
ಮೆಚ್ಚೆ ಕಲಿಯೆನಿಪುದೆರೆವಂ।
ಮೆಚ್ಚೆ ಮಹಾದಾನಿಯೆನಿಪುದೀವರದೇವಾ॥ ೩೪॥

ಎಂದಾಪಾರ್ವಂ ಪೋದಂ॥ (ಕವಿಕುಂಜರಲೀಲಾವತಿ, ೮ ೬)

ಈ ವರ್ಣನೆಯಲ್ಲಿ ಸ್ವಭಾವೋಕ್ತ್ಯುಪಮೋತ್ಪ್ರೇಕ್ಷೆಗಳು ಉತ್ತೇಜಕವಾಗುವಂತೆ ಹೇಗೆ ಸೇರಿಸಲ್ಪಟ್ಟಿರುವುದು ನೋಡಿದಿರಾ! ಇದನ್ನು ಓದುವಾಗ ಇದು ವರ್ಣನೆಯೆಂಬ ಭಾವ ಹುಟ್ಟುವುದಿಲ್ಲ. ನಾವೇ ಆ ರಾಜನ ಜತೆಯಲ್ಲಿ ಇದ್ದುಕೊಂಡು, ಅವನಂತೆ ಬಿಸಲಲ್ಲಿ ಬಳಲಿ, ದಾಹಪೀಡಿತರಾಗಿ ನೀರನ್ನು ಅರಿಸಿಕೊಂಡು ಹೋಗುತ್ತ, ಅವನು ಅನುಭವಿಸಿದ ಅನುಭವಗಳನ್ನು ಅನುಭವಿಸಿಯೂ, ಅವನು ನೋಡಿದ ನೋಟಗಳನ್ನು ನೋಡಿಯೂ, ಆ ಪಾರ್ವನೊಡನೆ ರಾಜನನ್ನು ಹೊಗಳುತ್ತಲೂ ಇದ್ದು "ಪಾರ್ವಂ ಪೋದಂ" ಎಂಬ ಕೊನೆಯ ವಾಕ್ಯವನ್ನು ಓದಿದೊಡನೆಯೇ, "ಆಹಾ! ಇದು ವರ್ಣನೆಯು. ಕವಿಯು ನಮ್ಮನ್ನು ಮರಳು ಮಾಡಿಬಿಟ್ಟನು. ಅವನು ಎಷ್ಟು ಸಮರ್ಥನೋ!" ಎಂಬ ಭಾವವು ನಿಸ್ಸಂದೇಹವಾಗಿ ಹುಟ್ಟುವುದು. ಇದರಿಂದ ಈ ವರ್ಣನೆಯಲ್ಲಿ ಕವಿಯ ಆಶಯುವು ಸಿದ್ಧಿಸಿತೆಂದು ಹೇಳಬೇಕಾಗಿಲ್ಲ.

ಕಾವ್ಯಕ್ಕೆ ಮುಖ್ಯವಾಗಿ ಎರಡು ಪ್ರಯೋಜನಗಳುಂಟು. ವಿಷಯವನ್ನು ಸ್ಪಷ್ಟವಾಗಿ ತಿಳಿಸುವುದೊಂದು ಪ್ರಯೋಜನ; ಆಹ್ಲಾದವನ್ನುಂಟುಮಾಡುವುದು ಮತ್ತೊಂದು. ಇದನ್ನು ಎಲ್ಲರೂ ಒಪ್ಪಿಕೊಂಡಿರುವರು. ಪ್ರಾಯಶಃ ಈ ವಿಷಯದಲ್ಲಿ ಭಿನ್ನಾಭಿಪ್ರಾಯವಿಲ್ಲ. ಕವಿಸಂಕೇತವನ್ನು ಅಂಗೀಕರಿಸದಿದ್ದರೆ ಈ ಎರಡು

ಟ—೩೪. ಎರೆವಂ — ಯಾಚಕನು.

ಪ್ರಯೋಜನವೂ ಏಕತ್ರ ಸಿದ್ಧಿಸಲಾಗದು. ಆದುದರಿಂದಲೇ ಕವಿಗಳು ಕೋಪ ತಾಪ, ಕೀರ್ತ್ಯಕೀರ್ತಿ, ದ್ವೇಷಾನುರಾಗಾದಿಗಳಿಗೆ ಬಣ್ಣವನ್ನು ಕೊಡುವುದು; ನದಿ, ಲತೆ, ವನಗಳನ್ನು ಸ್ತ್ರೀಯಂತೆ ವರ್ಣಿಸುವುದು; ಋತು, ಕಾಲ, ಅಗ್ನಿಗಳನ್ನು ಪುರುಷನಂತೆ ವರ್ಣಿಸುವುದು. ಕೆಲವುವೇಳೆ ಅಗೋಚರವಾದ ಪದಾರ್ಥಗಳ ವ್ಯಾಪಾರವನ್ನು ವಿಶದವಾಗಿ ತಿಳಿಸಬೇಕಾಗುವುದು. ಆಗ ಕವಿಗಳು ಸಾಮಾನ್ಯರಂತೆ ನೀರಸವಾಗಿ ತಿಳಿಸದೆ, ಮಂದಮಾರುತವನ್ನು ಹಿಂದೆ (೪೧—೪೪ ಪುಟಗಳಲ್ಲಿ ಅನುವಾದ ಮಾಡಿರುವ ಪದ್ಯಗಳಲ್ಲಿ) ನಿರೂಪಿಸಿರುವಂತೆಯೇ ಸರಸವಾಗಿ ತಿಳಿಸುವರು. ಋತುಧರ್ಮಗಳನ್ನು ತಿಳಿಸುವಾಗ ರಾಜನ ಹೋಲಿಕೆಯನ್ನು ಕೊಟ್ಟೇ ವರ್ಣಿಸುವರು. ಚೇತನತ್ವಾದ್ಯಾರೋಪಗಳನ್ನು ಮಾಡದೆಯೇ ಸ್ಪಷ್ಟಪಡಿಸುವುದಕ್ಕೂ ಆಹ್ಲಾದ ಹುಟ್ಟಿಸುವುದಕ್ಕೂ ಸಾಧ್ಯವಾಗಿದ್ದ ಪಕ್ಷದಲ್ಲಿ, "ರವಿ ಕಾಣದ ಕವಿ ಕಂಡ" ಎಂಬ ಹಿರುದುಳ್ಳ ಕವಿಗಳೂ ಹಿಗೆ ಮಾಡುತ್ತಲೇ ಇರಲಿಲ್ಲ.

ಆದುದರಿಂದಲೇ "ಘನಸಮಯಪ್ರವೇಶ" ವನ್ನು ವರ್ಣಿಸುವಾಗ ಅಭಿನವ ಪಂಪನು "ಅಖಿಲಜನಮನೋವಿಕಾಸಕ್ಕವಕಾಶವಾಗೆ" ಎಂದು ಹೇಳಿ, ಈ ರೀತಿಯಲ್ಲಿ ವರ್ಣಿಸುವನು :—

"ಅಪರಾಂಭೋರಾಶಿವೇಳಾವನಮುಮರಪುರೋದ್ಯಾನಮುಂ ನೋಡಲೇಳ್ತಂ।
ದಪುದೋ, ನೀಳಾಚಲಂಗಳ್ ಕುಲಪರಿಭವಮುಂ ಪಿಂಗಿಸಲ್ ನಾಕಲೋಕಾ ॥
ಧಿಪನೊಳ್ ಮೇಲೆತ್ತಿ ಕಾದಲ್ ನೆರೆದುವೊ, ಬಡಬಾಭೀತಿಯಿಂ ಮೇಣ್ ಶರಣ್ಬೊ।
ಕ್ಕಪುದೋ ನೀರಾಕರಂ ವ್ಯೋಮಮುನೆನೆ ನೆಗೆದತ್ತಂದು ನೀಳಾಭ್ರಜಾಳಂ ॥೧॥

ಪಡುವಣ ಕಡಲಿಂದೊಗೆದುದು।
ಬಡಬಾಗ್ನಿಯ ಪೊಗೆ ಪೊದಳ್ದ ಕಿಡಿವೆರಸೆನಲೇಂ॥
ಕುಡುಮಿಂಚುವೆರಸು ಗಗನಮು।
ನಡರ್ದುದು ನೀರಂಧ್ರನೀಳನೀರದನಿವಹಂ ॥೨॥
ಪೊತ್ತುವ ಬಡಬಾಗ್ನಿಯ ಪೊಗೆ।
ಸುತ್ತಿದೊಡುಮ್ಮಳಿಸಿ ಕರ್ಗಿ ಪಡುವಣ ಕಡಲೊಳ್ ॥
ನಿತ್ತರಿಸದೆ ನೆಗೆದುವು ಜಲ।
ಮತ್ತದ್ವಿಪಘಟೆಗಳೆನಿಸಿದುವು ಘನಘಟೆಗಳ್ ॥೩॥

ಇದವೋಘಂ ಮೇಘಕಾಲಂ ಬರೆ ಗಗನಗೃಹದ್ವಾರದೊಳ್ ತೋರಣಂಗ।
ಟ್ಟದುದೋ, ಮೇಣ್ ಪಂಚರತ್ನಾವಳಿವಿಳಸಿತಮುಂ ಕಂಠಿಕಾಮಾಲೆಯುಂ ತಾ ॥

ಳ್ದಿದಳೋ ದಿಗ್ದೇವಿ, ಮೇಣ್ ರನ್ನದ ಪೊರಜೆ ನವಾಂಭೋದಮಾದ್ಯದ್ಗಜಕ್ಕಿ ।
ಕ್ಕಿದುದೋ, ಪೇಳೆಂಬಿನಂ ಕಣ್ಗೆಸೆದುದು ಶಬಳಚ್ಛಾಯೆಯಿಂ ಶಕ್ರಚಾಪಂ॥ ೪ ॥

ರಾಗದ ಬಳ್ಳಿ ಚಾದಗೆಗೆ, ಕಾಂಚನಚಂಚಳಲಾಸ್ಯತರ್ಜನಂ ।
ಸೋಗೆನವಿಲ್ಗೆ, ಮೇಖಳೆ ಘನಾಘನಲಕ್ಷ್ಮಿಗೆ, ದೀಪಮಾಲೆ ಜಾ ।
ರಾಗಮನಕ್ಕೆ, ಜಂತ್ರದುರಿಯುಣ್ಗೆ ವಿಯೋಗಜನಕ್ಕೆನಲ್ ನಭೋ ।
ಭಾಗದೊಳಂದು ಬಿತ್ತರಿಸಿದತ್ತು ತಟಿಲ್ಲತೆ ಲಾಸ್ಯಲೀಲೆಯಿಂ ॥ ೫ ॥

ಬಿಡೆ ಕೆಮ್ಮನೆ ಗರ್ಜಿಸಿ ತ ।
ಕ್ಕಿಡೆ ತಗದೆಡೆಯುನ್ನದೆರಗುವಸ್ಥಿರನಪ್ಪಾ ॥
ಜಡನಚಿರಪ್ರಭೆ ನಿಮಿಷದೊ ।
ಳಡಂಗುಗುಂ ಬೆಳಗದೆಂತುಮದು ಸತ್ಪಥಮಂ ॥ ೬ ॥

ಘನಗರ್ಭಾಶಾವಧೂಪುಂಸವನದೆಸೆವ ತೂರ್ಯಸ್ವನಂ ಚೂಳಿಕಾವ ।
ರ್ಧನಮಾಂಗಲ್ಯಂ ಬಳಾಕಕ್ಕೆಸೆಯೆ ಪಸರಿಪಾತೋದ್ಯಘೋಷಂ ವಿಡೂರಾ ॥
ವನಿಯೊಳ್ ವೈಡೂರ್ಯರತ್ನಂ ಜನಿಯಿಸೆ ನೆಗಳ್ವಾನಂದಭೇರೀರವಂ ತಾ ।
ನೆನೆ ರೋದೋಭಾಗದೊಳ್ ಘೂರ್ಣಿಸಿದುದಭಿನವಾಂಭೋದಗಂಭೀರನಾದಂ॥ ೭

ಉಗುಳುತ್ತುಂ ಸಿಡಿಲೆಂಬ ತೋರಗಿಡಿಯುಂ ಕಾಲೂರಿ ಭೂಭಾಗದೊಳ್ ।
ಗಗನಾಭೋಗಮನೆಯ್ದೆ ನೀಳ್ದು ಘನವೇಣೀಬಂಧಮಂ ಬಿರ್ಚಿ ಮಿಂ ॥
ಚುಗಳೆಂಬುಳ್ಕುವ ದಾಡೆಗಳ್ ಪೊಳೆಯೆ ಚಂದ್ರಾದಿತ್ಯರಂ ನುಂಗಿ ಬೇ ।
ಸಗೆಯುಂ ಬೆರ್ಚಿಸಿ ಗರ್ಜಿಸುತ್ತುಮೊಗೆದಂ ಕಾರೆಂಬ ಕಾಳಾಸುರಂ ॥ ೮

ಮದಮದಿರಾಪ್ರಮತ್ತನ ಜಡಾಶಯದಂತೆ ಜಡಾಶಯಂ ಕಲಂ ।
ಕಿದುದು ಮನೋಜದೀಪಕಳಿಕಾನನದಂತಿರೆ ಕಾನನಂ ಕರಂ ॥

---

ಟಿಪ್ಪಣಿ—೪. ಪೊರಜೆ = ಆನೆಯ ಮೇಲೆ ಹಾಕುವ ಆಭರಣ ವಿಶೇಷ .

೬. ಇಲ್ಲಿ ಶ್ಲೇಷಗರ್ಭಿತ ವ್ಯಂಗ್ಯಾರ್ಥವನ್ನು ನೋಡಿ.

೭. ವಿಡೂರಾವನಿಯಲ್ಲಿ ವರ್ಷಾಕಾಲದಲ್ಲಿ ವೈಡೂರ್ಯ ಹುಟ್ಟುತ್ತದೆ ಎಂದು ಪ್ರವಾದ. ಇಲ್ಲಿ ಪುಂಸವನ, ಚೂಳಿಕಾವರ್ಧನ, ವೈಡೂರ್ಯಜನನ—ಇವುಗಳ ಸ್ವಾರಸ್ಯವನ್ನು ಆಲೋಚಿಸಿ.

ಗಿದುದು ವಿರೋಧಿವಾಹಿನಿಗಳಂತಿರೆ ವಾಹಿನಿಗಳ್ ಕಡಂಗಿ ಮಿಾ।
ರಿದುವನುಕೂಲಮಾರ್ಗಮನದೇಂ ಮಳೆಗಾಲಮಳುಂಬಮಾದುದೋ ॥ ೯॥
(ಪಂಪರಾಮಾಯಣಂ)

ಕವಿಯು ಹೇಳುವಂತೆ ಈ ವರ್ಣನೆಯಿಂದ ಪಾಠಕರ ಮನೋವಿಕಾಸವಾಗದ್ದೆ ಇರದು.

ಸುಮ್ಮನೆ ಆಕಾಶವು ಮೇಘಾವೃತವಾಯಿತು, ಸಿಡಿಲು ಬೀಳುವುದು, ಮಿಂಚು ಹೊಳೆಯುವುದು, ಗುಡುಗು ಕೇಳುವುದು, ಮಳೆ ಬೀಳುವುದು, ನದಿ ಕೊಳ ಕಟ್ಟೆಗಳು ತುಂಬಿ ತುಳುಕಾಡುವುವು, ಬಿಸಿಲ ಬೇಗೆಯು ಕಡಮೆಯಾಗುವುದು—ಎಂದು ಹೇಳಿ ಘನಸಮಯವನ್ನು ವರ್ಣಿಸುವುದಕ್ಕೂ, ಈ ರೀತಿಯಲ್ಲಿ ವರ್ಣಿಸುವುದಕ್ಕೂ ಇರುವ ವ್ಯತ್ಯಾಸವನ್ನು ಪಾಠಕರೇ ತಿಳಿಯಬಹುದು.

ಮುಂದಣ ಅನುವಾದಗಳಲ್ಲಿ ಕಾವ್ಯದ ತೆರದ ಬರವಣಿಗೆಯ ಅತಿಶಯವು ಸ್ಪಷ್ಟವಾಗುತ್ತದೆ.

ಶಿಶಿರಋತುವನ್ನು ಗಿರಿಜಾಕಲ್ಯಾಣದಲ್ಲಿ ಹರಿಹರನು—

"ಇತ್ತಲ್ ಭೂತಳದೊಳ್ ಹಿಮ।
ಮೊತ್ತರಿಸಿತು ಭುವನಜನಮನುರೆ ನಡುಗಿಸುತುಂ ॥
ಸುತ್ತುತ್ತುಂ ಸುಗಿಯುತ್ತುಂ।
ಮುಕ್ಕುತ್ತುಂ ಮುಂದುಗೆಡಿಸುತುಂ ಮುಸುಕಿಡುತುಂ॥ ೧॥
ಮೃಗಸಂತತಿಯುಂ ಕೊಳರ್ವ।
ಕ್ಕಿಗಳಂ ಪಕ್ಕಿಗಳನದ್ರಿತಟದೊಳ್ ಕೊಳನೊ ॥
ತ್ತುಗಳೊಳ್ ಕೋಟರದೊಳ್ ಮಿಗೆ।
ಪುಸಿಸುತ್ತುಂ ಬಂದಸಮುಮ! ಶಿಶಿರನೃಪಾಲಂ ॥ ೨॥

ಕಿಡಿಗಳ್ ಕೆಚ್ಚನೆಯಾಲಿಕಲ್ಲುರಿಯ ಮೊತ್ತಂ ಕೆಂದಳಿರ್, ಕೆಂಡದೊಂ।
ಡಡಕಿಲ್ಮಾಣಿಕದಿಂಡೆ, ಕಾಯ್ವ ತಪನಂ ಚಂದ್ರಂ, ಪೊದಳ್ದಾತಪಂ ॥
ಗಡ ಬೆಳ್ದಿಂಗಳೆನಿಪ್ಪುದೊಂದು ಪೆಸರಂ ತಾಂ ಮಾಡಿದಂತಿರ್ದುದಾ।
ಕಡುಪಿಂ ತನ್ನಯ ಕಾಲದಲ್ಲಿ ಹಿಮರಾಜಂ ಧಾರಿಣೀಚಕ್ರದೊಳ್ ॥ ೩॥

ಮತ್ತಮದಲ್ಲದೆಯುಂ,

ಟ—೯. ಇಲ್ಲಿ ಉಪಮಾನಗಳಲ್ಲಿರುವ ವೈಚಿತ್ರ್ಯವನ್ನೂ, ತಾತ್ಪರ್ಯದಿಂದ ಉಂಟಾಗುವ ಹಿತೋಕ್ತಿಯನ್ನು ಆಲೋಚನೆ ಮಾಡಿರಿ,

೧—೩. ಅಡಕಿಲ್—ಬಂದರ ಮೇಲೊಂದಿಡುವಿಕೆ; ವೈಷಮ್ಯವನ್ನು ಕಳೆದುವೆಂದು ತಾತ್ಪರ್ಯ. ಈ ವರ್ಣನೆಯಲ್ಲಿ ರಾಜ್ಯವು ಪರರಾಜರಿಂದ ಜಯಿಸಲ್ಪಟ್ಟಾಗ ಸಹಜವಾಗಿ ಉಂಟಾಗುವ ಬದಲಾವಣೆಗಳೆಲ್ಲವೂ ಸೂಚಿತವಾಗಿವೆ.

ಮಿಗೆ ಬೆಮರರುತುದು ನೀರಡಿ ।
ಕೆಗಳಿಂಗಿದುವೃಷ್ಣದುಸಿರಡಂಗಿತು ತಪನಂ ॥
ಗೊಗೆದುದು ಪೆರ್ಚಿದ ತಣ್ಪಾ ।
ಗ್ನಿಗೆ ಶೀತಂ ಪತ್ತಿತೇನನೆಂಬೆಂ ಹಿಮದೊಳ್ ॥ ೪ ॥
ಉದಯಂ ಶೀತೋದಯಮು ।
ಗ್ಗದ ಮಧ್ಯಾಹ್ನಂ ತುಷಾರಮಧ್ಯಾಹ್ನಂ ಮಿ ॥
ಕ್ಕುದುದಸ್ತಮಯಂ ತಾನು ।
ಷ್ಣದಸ್ತಮಯಮೆನಿಸಿತಮಮ ! ಹಿಮವಿಭ್ರಮದೊಳ್ ॥ ೫ ॥
ತಿಳಿವೊಡೆ ಶಶಿ ರವಿ ರವಿ ಶಶಿ ।
ಬೆಳಗುವ ಜೊನ್ನಂ ಬಿಸಿಲ್ ಬಿಸಿಲ್ ತಾಂ ಜೊನ್ನಂ ॥
ಚಳಿ ಬಿಸುಪು ಬಿಸುಪು ಚಳಿಯೆನೆ ।
ಬಳೆದುದು ಹಿಮರಾಜತೇಜವಿಜಾಜಗದೆಡೆಯೊಳ್ ॥ ೬ ॥
ಆಸಮಯದೊಳ್
ಪಲ್ವರೆಯೊಳ್ ಹುಹುಯೆಂಬಾ ।
ಚೆಲ್ವುಗ್ಗಡಣೆಯೊಳಹಸ್ತಂ ದಂಡಿಗೆಯೊಳೆ ತಾ ।
ನೊಲ್ವನ್ನಂ ಶಿಶಿರನಟಂ ।
ಸಾಲ್ವನ್ನಂ ಜನವನಾಡಿಸಿದನುರ್ವರೆಯೊಳ್ ॥ ೭ ॥
ನುಡಿಯೆ ಹುಹು ಕಡೆಯಮಾತೇ ।
ನೊಡಲೇ ಪ್ರಾಣಂಗೆ ಚಳಿಯ ಕುಪ್ಪಸಮಾಯ್ತೆಂ ॥
ದೊಡೆ ಹಿಮದ ಮಹಿಮೆಯಂ ಪೇ ।
ಳ್ವೊಡೆ ಬಲ್ಲಿದನಾವನೊರ್ವನುರ್ವೀತಳದೊಳ್ ॥ ೮ ॥

ಟ—೬. 'ಶಶಿರವಿ' = ರವಿಯ ತೈಕ್ಷ್ಣ್ಯವು (ಕ್ರೌರ್ಯವು) ಶಶಿಯಲ್ಲಿಯೂ, ಶಶಿಯ ಆಹ್ಲಾದಕತ್ವವು ರವಿಯಲ್ಲಿಯೂ ವಿನಿಮಯವಾಯಿತು, ಇತ್ಯಾದಿ.

ಪಲ್ವರೆ—ದಂತವೀಣೆ; ಪರೆ—ವಾದ್ಯವಿಶೇಷ. ಉಗ್ಗಡಣೆ—ಉಗ್ಗಳಿಸು ಎಂಬುದರಿಂದ ಹುಟ್ಟಿದುದು.

ಒಡಲೇ—ಶರೀರವೇ.

ಉರೆ ಶೀತಂ ಪತ್ತಿದೊಡಿರ ।
ಲರಿಯದೆ ಜೀವಂ ಬಿಗುತ್ತುರ್ಜ ಜಠರಾಗ್ನಿಯನೆ ॥
ಚ್ಚರಿಸೆ ಹೊಗೆಯುಸಿರ ಪಥದಿಂ ।
ಪೊರಮಡುವುದು ಜನದ ಮುಖದೊಳಲ್ಲದೊಡುಂಟೇ ॥ ೯ ॥
ಪುಟ್ಟಿತು ಚಳಿ ಒಳೆದುದು ಚಳಿ ।
ಕೊಟ್ಟುದು ಚಳಿ ಕೊಂಡುದೆಲ್ಲಮುಂ ಚಳಿ ಚಳಿಯೆಂ ॥
ದುಟ್ಟುದು ಚಳಿ ತೊಟ್ಟುದು ಚಳಿ ।
ಮೆಟ್ಟಿತು ಚಳಿ ಮುಟ್ಟಿತೆಲ್ಲ ಚಳಿ ಪೊಸಚಳಿಯೊಳ್ ॥೧೦॥ ಎಂದೂ

ಮತ್ತು ಗುಣವರ್ಮನು—

ಕಡಲೊಳಗಿರ್ಪ ವಿಷ್ಣುವನಿಶಂ ಬಡಬಾಗ್ನಿಯು ಕಿರ್ಚುಮಿಲ್ಲದಿ ।
ರ್ದೊಡೆ ಸುರಸಿಂಧುವಂ ತಳೆದ ಶಂಭು ನಿಜಾಕ್ಷಿಯು ಬೆಂಕಿ ಸೋಂಕದಿ ॥
ರ್ದೊಡೆ ಪವನಾಧ್ವದೊಳ್ ನಡೆವ ಭಾನು ಕೃಶಾನುವಿನಾಶೆಯೊಳ್ ಪಗಲ್ ।
ನಡೆಯದೊಡೆಂತು ನಿತ್ತರಿಪರೆಂಬನಿತಾದುದು ಮಾಘಡಂಬರಂ ॥ ೧೧ ॥

(ಪುಷ್ಪದಂತಪುರಾಣಂ)

ಎಂದೂ ವರ್ಣಿಸಿರುವರು. ಅದು ಹಾಗಿರಲಿ. ಈ ವಸಂತರ್ತುವಿನ ವರ್ಣನೆಗಳನ್ನು ಓದಿನೋಡಿ,—

ಕಳಿಕೆಗಳೆಂಬ ಹರ್ಷಪುಳಕಾವಳಿಯುಂ ತಳೆದಿರ್ಪಳಾಮ್ರಕೋ ।
ಮಳೆ, ಮಧುಪಾವಳೀನಿನದಮೆಂಬ ಕಳಧ್ವನಿಯಿಂದ ಮಲ್ಲಿಕಾ ॥
ಲಳನೆ ಕಡಂಗಿ ಪಾಡಿದಪಳಬ್ಜಿನಿ ತನ್ನ ಪರಾಗಮೆಂಬ ತಂ ।
ಬುಳಮುಗೆ ನಕ್ಕಪಳ್; ವಿಕೃತಿಯುಂ ಮಧುಸಂಗತಿ ಮಾಡದಿರ್ಕುಮೇ ॥ ೧೨ ॥

(ಜಗನ್ನಾಥವಿಜಯಂ)

ಪೊಸಮಕರಂದಮೆಂಬ ಬೆಮರುಣ್ಮಿರೆ, ತೆಂಬೆಲರೆಂಬ ಸುಯ್ಯೆಲರ್ ।
ಪಸರಿಸೆ, ಗುಚ್ಛಮೆಂಬ ಮೊಲೆ ಚಪ್ಪಲದಿರ್ಪ್ಪೆ, ಸಿತಾಬ್ಜಮೆಂಬ ಕಣ್ ॥

---

ಟಿ—೯. ಬಿಗುತ್ತುರ್ಜ—ಹೆದರಿ. ಹಿಮಗಾಲದಲ್ಲಿ ಚಳಿಗೆ ಬಿಟ್ಟ ಉಸಿರು ಹೊಗೆಯಂತೆ ಕಾಣುವುದಕ್ಕೆ ಕಾರಣವನ್ನು ಈ ರೀತಿ ಉತ್ಪ್ರೇಕ್ಷಿಸಿದೆ.

೧೧. ಕೃಶಾನುವಿನಾಶೆ-ರಾತ್ರಿಯಲ್ಲಿ ಸೂರ್ಯರು ಅಗ್ನಿಯಲ್ಲಿ ಸೇರುವನೆಂದು ನಂಬಿಕೆ

೧೨. ಮಧುಸಂಗತಿ—ಮಧು = ವಸಂತಋತು, ಹೆಂಡ.

ಮಿಸುಪ ಪರಾಗಮೆಂಬ ನಸುಗೆಂಪಿನೊಳೊಂದಿರೆ, ನಾಡೆ ಕಣ್ಗೆ ಶೋ ।
ಭಿಸಿದಳಲಂಪಿನಿಂ ನೆರೆದು ನಂದನಲಕ್ಷ್ಮಿ ವಸಂತಕಾಂತನೊಳ್ ॥ ೧೪
( ಚಂದ್ರಪ್ರಭಾಪುರಾಣಂ )

ವಿಕಸತ್ಪುಷ್ಪಾಟ್ಟಹಾಸಂ ಸ್ಮಿತಕುಸುಮರಜೋಭಸ್ಮವಿಭ್ರಾಜಿ ಮಾದ್ಯ ।
ತ್ಪಿಕನಾದಂ ಭೃಂಗಸಿದ್ಧಾಂಜನರಸಘುಟಿಕಂ ಪಲ್ಲವೋದ್ಯಜ್ಜಟಂ ಕೆ ॥
ಯ್ಯಕಪಾಲಂ ಚಂದ್ರಬಿಂಬಂ ತನಗೆನೆ ಜಗತೀಚಕ್ರಮಂ ಚೈತ್ರಕಾಪಾ ।
ಲಿಕನೆಂಬಂ ಬಂದದೇಂ ಮೋಹಿಸಿದನೊ ಮಧುಬಿಂದೂದ್ವಮದ್ಗಂಧವಾಹಂ ॥ ೧೪
( ಕವಿಕುಂಜರಲೀಲಾವತಿ )

ಈ ಮಧುಸಂಗತಿಯು ಓದಿದಾಗ, ವಸಂತಋತುವಿನಲ್ಲಿ ವನರಾಮಣೀಯ ಕತೆಯನ್ನು ನಾವೇ ಹೋಗಿ ಸಾಕ್ಷಾತ್ತಾಗಿ ನೋಡಿ ಅನುಭವಿಸುವಾಗ ಹೇಗೋ ಅದಕ್ಕಿಂತ ಅತಿಶಯವಾಗಿ ನಮಗೆ “ ವಿಕೃತಿಯಂ ಮಾಡದಿರ್ಕುಮೆ ” ಹೇಳಿ? ಅದಂತಿರಲಿ.

ಅರುಣೋದಯವನ್ನು—

ಹರಿದಶ್ವಂ ಬಂದಪಂ ವಾಹಳಿಗೆನುತರುಣಂ ವ್ಯೋಮವಿಸ್ತೀರ್ಣರಂಗಾಂ ।
ತರವೀಥೀಚ್ಛನ್ನತಾರಾಸ್ಫಟಿಕಶಕಲಂ ನೂಂಕುತುಂ ಚಾರುಚಾಮೀ ॥
ಕರಯಂತ್ರವ್ರಾತದಿಂ ಕುಂಕುಮಘನರಸಮಂ ಸಿಂಪಿಸುತಿರ್ದನೆಂಬಂ ।
ತಿರಲೆತ್ತಂ ನೀಳ್ದು ಪೊಣ್ಮಿತ್ತುದಯಸಮಯದೊಳ್ ಶೋಣಸೂರ್ಯಾಂಶುಜಾಲಂ॥೧೫
ಎಂಬದಾಗಿಯೂ; ( ಕಾದಂಬರಿ )

ಸೂರ್ಯಾಸ್ತಮಯವನ್ನು—

ಭವಬದ್ಧಕ್ರೋಧದಿಂ ಸಂಧಿಸೆ ಪೆರಗೆ ತಮಂ ಸ್ಥಾನಮಂ ಬಿಟ್ಟು, ತೇಜಂ ।
ತವೆ, ಶೋಕಂ ಚಕ್ರವಾಕಕ್ಕೊಡರಿಸೆ, ದಿವಸಶ್ರೀಯಸೀಡಾಡಿ, ಕೈಕೊಂ ॥
ಡವರೋಧಸ್ತ್ರೀಯರಂ ಪದ್ಮಿನಿಯರನೆನಸುಂ ನೋಡದುತ್ತಾನಪಾದಂ ।
ದಿವಸೇಂದ್ರಂ ಭೀತಿಯಿಂದಂಬರಮನುಳಿದು ವಾರಾಶಿಯಂ ಪೋಗಿ ಪೊಕ್ಕಂ ॥ ೧೬
ಎಂದೂ; ( ಪಂಪರಾಮಾಯಣಂ )

ಟಿ—೧೪. ಕಾಪಾಲಿಕನೆಂದು ತಿಳಿಸುವ ಗುರುತುಗಳೆಲ್ಲವೂ ಹೇಳಿವೆ.

೧೫. ರಾಜನು ಸ್ವಾರಿ ಚಿತ್ತೈಸುವ ದಾರಿಯಲ್ಲಿ ಮಾಡುವ ಕಾರ್ಯಗಳೆಲ್ಲಾ ಹೇಳಿದೆ.

೧೬. ಅಂಬರ—ಆಕಾಶ, ಬಟ್ಟೆ. ಭೀತನಾದವನು ಬಟ್ಟೆಹೋಗುವುದೂ ತಿಳಿಯದೆ ಓಡಿಹೋಗುವಂತೆ.

ಚಂದ್ರೋದಯವನ್ನು —

ಸೂಸಿದ ಸೇಸೆಯಕ್ಕಿಗಳವೋಲಿರೆ ಮೂಡಿದ ತಾರಕಾಳಿಯು ।
ಲ್ಲಾಸಿಪ ನೆಯ್ದಿಲೊಳ್ ಮೊರೆವಳಿಧ್ವನಿ ಮಂಗಳವಾದ್ಯಮಾಗೆ, ತೇ ॥
ರೈಸಿದ ಸಂಜೆಯೋಸರಿಸೆ ಕಾನಕಕಾಂಡಪಟಂಬೊಲಾಗಳು ।
ದ್ಭಾಸಿತರಾಗನಿಂದು ಪಸೆನಿಂದನುದಂಚಿತರಾತ್ರಿಕನ್ಯೆಯೊಳ್ ॥ ೭

(ದಮಯಂತೀಸ್ವಯಂವರಂ)

ಎಂದು ಉತ್ಪ್ರೇಕ್ಷಿಸುವುದೂ, ಮತ್ತು

ಲೀಲಾವತಿಯಲ್ಲಿ ಪುರುಷವಿರಹವನ್ನು —

ಬಗೆಯೊಳಪೊಕ್ಕ ಕೋಮಳೆಯನೀಕ್ಷಿಸುವಂತೆ ಬಳಲ್ದ ಕಣ್ಮಲರ್ ।
ಮುಗಿದಿರೆ, ಚುಂಬನಕ್ಕೆಳಸುವಂತಧರಂ ತನಿಗೆತ್ತೆ, ಪೂವಿನಂ ॥
ಬುಗಳುಗಿವಂತೆ ಬಾಯ್ದೆರೆ ಕರಂ ಮಿಡುಕುತ್ತಿರೆ ಸುಯ್ಗಳುಗ್ಮೆ ಮೂ ।
ರ್ಛೆಗೆ ನೆಗೆದಂತೆ, ಮೆಯ್ಮರೆದು ನಿದ್ರೆಯೊಳೊಪ್ಪಿದನಾಕುಮಾರಕಂ ॥ ೧೮

ಸ್ತ್ರೀ ವಿರಹವನ್ನು —

ನಗೆಗಣ್ಣಂ ಪೋಲ್ತುದೆಂದೆನ್ನಯ ಮೊಗರಸಮಂ ಪೋಲ್ತುದೆಂದೆತ್ತಿ ಕಂಪಂ ।
ಮಿಗೆ ಸುಯ್ಯಂ ಪೋಲ್ತುದೆಂದೀಕೆಗೆ ಮಸಗುವ ಪೂವಿಂಗೆ ಚಂದ್ರಂಗೆ ತೆಂಗಾ ॥
ಳಿಗೆ ಕಾಯ್ದಾನಿನ್ನನಾಪೂಗಳೆ ಮನಸಿಜನಂಬಾಗಿಯಾಚಂದ್ರನೇ ತಾ ।
ನೊಗೆದೀಕಿಚ್ಚಾಗಿಯಾತೆಂಬೆಲರೆ ಮುಳಿದು ನಂಜಾಗಿ ಕೊಂದಪ್ಪುವೀಗಳ್ ॥ ೧೯

ಎಂದು ನಿರೂಪಿಸುವುದೂ: ಪಾಠಕರ ಮನಸ್ಸಿನಲ್ಲಿ ವಿಷಯವನ್ನು ಚೆನ್ನಾಗಿ ಸ್ಫುರಿಸುವುದಕ್ಕೂ, ಅವರ ಊಹೆಗೂ ಮೀರಿದ ರೀತಿಯಲ್ಲಿ ನಿರೂಪಿಸುವುದರ ಮೂ

ಟ—೧೭. ಮದುವೆಯಲ್ಲಿ ಧಾರೆಗೆ ಪೂರ್ವವಾಗಿ ನಡೆಸುವ ಆಚಾರಗಳೆಲ್ಲವೂ ನಿರೂಪಿತವಾಗಿವೆ.

೧೮. ಬಗೆ—ಹೃದಯ. ತನಿಗೆತ್ತೆ—ಚೆನ್ನಾಗಿ ಅಡಲು. ಇಲ್ಲಿ ಸುಖಪಾರವಶ್ಯವು ನಿರೂಪಿತವಾಗಿದೆ.

೧೯. ಸ್ವಭಾವಸಿದ್ಧವಾಗಿ ಕಾಮೋದ್ದೀಪಕಗಳಾದ ಮಲಯಮಾರುತ ಚಂದ್ರ ಪುಷ್ಪಗಳು ಇವಳಿಗೆ ಹೆಚ್ಚಾಗಿ ವಿರಹತಾಪವನ್ನು ಕೊಟ್ಟುವೆಂದು ತಾತ್ಪರ್ಯ, ತಾಪವನ್ನು ಹೆಚ್ಚಿಸಲು ಕಾರಣವನ್ನು ಕವಿಯು ಚಮತ್ಕಾರವಾಗಿ ಬೇರೆ ವಿಧವಾಗಿ ಹೇಳಿದ್ದಾನೆ.

ಲಕ ಆಹ್ಲಾದವನ್ನು ಹೆಚ್ಚಿಸುವುದಕ್ಕೂ ಅಲ್ಲದಿದ್ದರೆ ಮತ್ತೇತಕ್ಕೆಂದು ತಿಳಿಯಬೇಕು?

ಈ ವಿಷಯವು ಈಗಿನ ಕನ್ನಡ ಕವಿಶ್ರೇಷ್ಠರಾದ ಎಸ್. ಜಿ. ನರಸಿಂಹಾರ್ಯರು ನಮ್ಮ ಶ್ರೀಮನ್ಮಹಾರಾಜರವರ ತಂದೆಗಳಾದ ಶ್ರೀ ಚಾಮರಾಜೇಂದ್ರವೊಡೆಯರವರು ಗತಿಸಿದ ಕಾಲದಲ್ಲಿ ಬರೆದ ಈ ಪದ್ಯಗಳಿಂದ ವ್ಯಕ್ತಗಳಾಗುವುದು :—

"ಬರಸಿಡಿಲು ಹೊಡೆದಂತೆ ಭೂಮೀ ।
ಶ್ವರನ ಚಾಮನೃಪಾಲವರ್ಯನ ।
ಮರಣವಾರ್ತಾಶೂಲವೆಲ್ಲರ ಕೊಡಕೆಗಳನಿರಿದು ॥
ಕೊರಗಿಸಿತು ಮರುಗಿಸಿತು ಕಂಬನಿ ।
ಯೊರತೆಯಲಿ ನನೆಯಿಸಿತು ಮರವೆಯೊ ।
ಳೊರಗಿಸಿತು ಬಾಯ್ಬಿಡಿಸಿತಳಲಿಸಿತಳಿಸಿತನಿಬರನು ॥ ೧

"ಕೇಳಿಸಿತು, ಬಾಣವನು ಕಿವಿಯೊಳು ।
ಕೀಲಿಸುವವೊಲು ನಿಮಿಷನಿಮಿಷ ।
ಕ್ಕೊಳುತಿರ್ದ ಶತಘ್ನಿಗಳ ಭೀಕರದ ಭಾಂಕಾರ ॥
ಕೇಳಲೊಡನೊಳಗೊಳಗೆ ಕುದಿಗೊಂ !
ಡೇಳುವಳ್ಕಿಯು ಬೊಬ್ಬೆಯುಬ್ಬಿನ ।
ಗೋಳು ಪಸರಿಸಿ ತೀವಿ ತುರುಗಿತು ಸಕಲದಿಕ್ತಟವ ॥ ೨

"ಆದುದೇ ಮೃತಿ ನೃಪತಿಗಕಟಾ ।
ಕೋದುದೇ ನಮ್ಮೆದೆಯೊಳಲಗನು ।
ಸೀದುದೇ ಕಣ್ಣಾಲಿಗಳನಕಟಕಟ ಕಿವಿಯೊಳಗೆ ॥
ಕಾದ ಸೀಸವ ಸುರಿದುದೇ ಮೇ ।
ಣೂದಿದುದೆ ಕೊನೆಗಾಣದುರಿವ ವಿ ।
ಷಾದವಹ್ನಿಜ್ವಾಲೆಗಳ ನೆಲೆಗೊಳಿಸಿ ಹೃದಯದಲಿ ॥ ೩

"ನಗೆಮೊಗದ ಸವಿನುಡಿಯ ಮೆಲ್ಪಿನ ।
ಬಗೆಯ ಪಿಸುಣರ ನುಡಿಯ ಕೇಳದ ।
ಸುಗುಣದೊಲವಿಂ ನಂಟರಿಷ್ಟರನಾಶ್ರಿತರ್ಕಳನು ॥
ಸೊಗದೊಳಿರಿಸುವ ಸಜ್ಜನರ್ಕಳ ।
ಬಗೆಯರಿದು ಮನ್ನಿಸುವ ಮುಂದಿಗೆ ।
ಸೊಗವನೊದವಿಪ ನೃಪತಿ ಕಣ್ಮರೆಯಾದನಕಟಕಟಾ ॥ ೪

“ ವನಿತೆಯರಿಗೊಡನಾಡಿ ವಿದ್ಯಾ ।
ವನಿತೆಯನೆ ಕೆಳೆಗೊಳಿಸಿ ಸರಸತಿ ।
ಗನುಗೊಳಿಸಿ ನೇಹವನು ಸಿರಿಯೊಡನಿಲ್ಲಿ ನೆಲೆಗೊಳಿಸಿ ॥
ಘನವೆನಿಪ ನಿಜರಾಜಕಾರ‍್ಯದೆ ।
ತನಗೆ ನೆರವಪ್ಪಂತೆ ಪ್ರಜೆಗಳಿ ।
ಗನುಪಮಿತಪದವಿಯನು ಕರುಣಿಸಿದರಸನಳಿದನೆ ಹಾ ॥ ೫

“ ವೀಣೆಗಳು ಮುಸುಕಿಟ್ಟು ಮೌನದಿ ।
ಕೋಣೆಯೊಳಗಡಗಿದುವು ಬಿನ್ನನೆ ।
ಜಾಣಳಿದು ನಾಟಕಗಳುಳಿದುವು ತೆರೆಯ ಮರೆಯೊಳಗೆ ॥
ವಾಣಿ ಮೈಗರೆದಳು ಕವೀಂದ್ರರ ।
ಗೋಣಿನೆಡೆಯೊಳು ತನಗೆ ನಿಲವನು ।
ಕಾಣದಕಟಾ ರಾಜ್ಯಲಕ್ಷ್ಮಿಯು ಮರುಗಿ ಕೊರಗಿದಳು ॥ ೬

“ ಒಡೆದುದಕಟಾ ಹಡಗು ತೆರೆಗಳ ।
ಗಡಣವುಬ್ಬಿದ್ದಪ್ಪಳಿಸಿ ಕಂ ।
ಗೆಡಿಸುತಿದೆ ಹಾ ಮೂಡಿ ಮುಳುಗಿದೆವಳಲ ಕಡಲೊಳಗೆ ॥
ತಡಿಯ ಕಾಣಿಪರಾರೆನುತೆ ಬಾ ।
ಯ್ವಿಡುವ ನಮ್ಮನು ಕರುಣದಿಂ ಕೈ ।
ವಿಡಿದು ಕಡೆಹಾಯಿಸಲಿ ಯದುಕುಲತಿಲಕ ಶ್ರೀಕೃಷ್ಣ ॥ ೭ ”

ಇಲ್ಲಿ ತಿಳಿಸಿರುವ ಕವಿಯ ಆಶಯವು ಕವಿಸಂಕೇತವಿಲ್ಲದೆ ಸಾಮಾನ್ಯವಾದ ಮಾತಿನಿಂದ ಹೇಳಿದರೆ ಇಷ್ಟೇ ಆಗುವುದು. ಚಾಮರಾಜವೊಡೆಯರವರ ಮರಣ ಸಮಾಚಾರವು ಇದ್ದಕ್ಕಿದ್ದ ಹಾಗೆಯೇ ರಾಜಧಾನಿಯನ್ನು ಮುಟ್ಟಿತು. ಜನಗಳು ಬಹಳವಾಗಿ ಶೋಕಿಸಿದರು. ಮಿನಿಟ ಮಿನಿಟ್ಟಿಗೆ ಗುಂಡುಗಳು ಹಾರಿಸಲ್ಪಟ್ಟುವು. ಆ ಕಾಲದಲ್ಲಿ ಮಹಾರಾಜರವರ ಗುಣಗಳು ಜ್ಞಾಪಕಕ್ಕೆ ಬಂದುವು, ಅವುಗಳನ್ನು ನೆನಸಿಕೊಂಡು ಎಲ್ಲರೂ ಅತ್ತರು. ಮಹಾರಾಜರು ಎಲ್ಲರೊಡನೆ ಸುಮುಖವಾಗಿ ಮಾತನಾಡುತ್ತಿದ್ದರು; ನಂಟರಿಷ್ಟರು, ಸಜ್ಜನರು, ಸಾಮಾನ್ಯಜನರು ಎಲ್ಲರನ್ನೂ ತಕ್ಕತಕ್ಕ

ರೀತಿಯಲ್ಲಿ ಆದರಿಸುತ್ತಿದ್ದರು. ಚಾಡಿಕೋರರ ಮಾತಿಗೆ ಕಿವಿಗೊಡುತ್ತಿರಲಿಲ್ಲ. ಸ್ತ್ರೀಯರುಗಳಿಗೆ ವಿದ್ಯಾಭ್ಯಾಸವನ್ನು ಮಾಡಿಸಿದರು. ಯೋಗ್ಯರಾದವರನ್ನು ಆರಿಸಿಕೊಂಡು ಕೆಲಸಕೊಡುತ್ತಿದ್ದರು. ಜನಗಳಿಗೆ ಹಿತವಾಗುವ ರೀತಿಯಲ್ಲಿ ಆಳುತ್ತಿದ್ದರು. ಅವರಿಗೆ ಸಂಗೀತ ಸಾಹಿತ್ಯ ನಾಟಕಗಳಲ್ಲಿ ಬಹಳ ಅಭಿರುಚಿ ಇದ್ದಿತು. ಕವಿಗಳಿಗೆ ಪ್ರೋತ್ಸಾಹ ಕೊಟ್ಟು ನಾಟಕಗಳನ್ನು ಬರೆಯಿಸಿ ಆಡಿಸುತ್ತಿದ್ದರು. ಯುವರಾಜರಿಗೆ ರಾಜ್ಯಾಭಿಷೇಕವಾಗುತ್ತದೋ ಇಲ್ಲವೋ ಎಂದು ಎಲ್ಲರಿಗೂ ಹೆದರಿಕೆಯುಂಟಾಯಿತು. ದೇವರೇ ಈ ಕಾದಲ್ಲಿ ನಮ್ಮನ್ನು ಕಾಪಾಡಬೇಕೆಂದು ಪ್ರಾರ್ಥಿಸಿದರು. ಈ ಅಭಿಪ್ರಾಯವನ್ನು ಹೀಗೆ ಹೇಳಿದರೆ ಯಾರಿಗೂ ರುಚಿಸುವುದಿಲ್ಲ. ವಿಷಯವೇನೋ ಇಷ್ಟೆ. ಕವಿಸಮಯವನ್ನು ಅಂಗೀಕರಿಸಿದರೆ ಅದೇ ಅಭಿಪ್ರಾಯವು ಎಷ್ಟು ಆಹ್ಲಾದವನ್ನುಂಟುಮಾಡುತ್ತದೆ ನೋಡಿದಿರಾ. ಅಲ್ಲದೆ, ಕವಿಯು ೬ ನೆಯ ಪದ್ಯದಲ್ಲಿ ಪತ್ನಿಯರುಗಳಂತೆ ರಾಜನನ್ನು ಆಶ್ರಯಿಸಿದ್ದ ಸಂಗೀತ ಸಾಹಿತ್ಯಾದಿಗಳ ಪಾಡನ್ನು ಪತಿವಿಯೋಗವನ್ನು ಹೊಂದಿದ ಪತಿವ್ರತಾ ಸ್ತ್ರೀಯರು ಮುಸುಕಿಟ್ಟು ಕೋಣೆಯನ್ನು ಆಶ್ರಯಿಸುವಂತೆಯೂ, ಅಂತಃಪುರವನ್ನು ಬಿಟ್ಟು ಈಚೆಗೆ ಬಾರದಂತೆಯೂ, ಯಾರಿಗೂ ಕಾಣಿಸಿಕೊಳ್ಳದೆ ಗೋಪ್ಯವಾಗಿ ವಾಸಮಾಡುವಂತೆಯೂ ವರ್ಣಿಸಿರುವುದರಲ್ಲಿ ಏನು ಅತಿಶಯವೋ ಎಲೈ, ಪಾಠಕರೇ, ನೀವೇ ಆಲೋಚಿಸಿನೋಡಿರಿ. ಇದೇ ಕಾವ್ಯಕ್ಕೂ ಇತರ ಗ್ರಂಥಗಳಿಗೂ ಇರುವ ವ್ಯತ್ಯಾಸ.

ಇಷ್ಟರವರೆಗೂ ಅಲಂಕಾರ ವಿಚಾರದಲ್ಲಿ ಹೇಳಿಯಾಯಿತು. ಇನ್ನು ಮುಂದೆ ರಸಸಂಕೇತವನ್ನು ಕುರಿತು ವಿಚಾರಮಾಡುವೆನು.

ಕಾರಣವಿಲ್ಲದೆ ಕಾರ್ಯೋತ್ಪತ್ತಿ ಇಲ್ಲ; ಕಾರ್ಯಕ್ಕೆ ಒಂದು ಕಾರಣವಿದ್ದೇ ಇರಬೇಕು. ಒಂದು ಕಾರ್ಯವು ಸಿದ್ಧಿಸಿದರೆ, ಅದಕ್ಕೆ ಕಾರಣವಿದ್ದೇ ಇರಬೇಕೆಂದು ತಿಳಿವುದು ನಿರ್ವಿಚಾರವಾಗಿದೆ. ಇದೀಗ ಲೋಕಸ್ಥಿತಿಯು. ರಸಾವಿರ್ಭಾವವನ್ನು ಕಾಣುತ್ತೇವೆ. ರಸಜ್ಞರು "ವಿಭಾವೈರನುಭಾವೈಶ್ಚ ಸಾತ್ವಿಕೈರ್ವ್ಯಭಿಚಾರಿಭಿಃ। ಆನೀಯಮಾನಸ್ಸ್ವಾದುತ್ವಂ ಸ್ಥಾಯಿಭಾವೋರಸಃಸ್ಮೃತಃ"॥ ಎಂದು ಹೇಳುವರು. ಅವರ ಅಭಿಪ್ರಾಯದ ಪ್ರಕಾರ ರಸವೆಂಬುದು ಮನಸ್ಸಿನಲ್ಲಿಯೇ ಹುಟ್ಟಬೇಕು. ಯಾರ ಮನಸ್ಸಿನಲ್ಲಿ? ಪ್ರೇಕ್ಷಕರ ಅಥವಾ ಪಾಠಕರ ಮನಸ್ಸಿನಲ್ಲಿಯೋ ಅಲ್ಲದೆ ನಾಯಿಕಾನಾಯಕರ ಮನಸ್ಸಿನಲ್ಲಿಯೋ? ಎಂಬ ವಿಚಾರದಲ್ಲಿ ಭಿನ್ನಾಭಿಪ್ರಾಯಗಳಿರುವಂತಿದೆ. ( ಅದು ಪ್ರಕೃತವಿಚಾರವಲ್ಲ. ) ಅದು ಹೇಗಾದರೂ ಆಗಲಿ, ಮನಸ್ಸಿನಲ್ಲಿ ರಸ

ಹುಟ್ಟುತ್ತದೆ ಎಂಬುದು ನಿಜ. ಅದರ ಉತ್ಪತ್ತಿಗೆ ಇತರಕಾರಣಗಳೂ ಇರುವುವು. ರಸವೆಂಬ ವೃಕ್ಷಕ್ಕೆ ಬೀಜಸ್ಥಾನವಾಗಿರುವುವು ಕೆಲವು, ಗೊಬ್ಬರ ನೀರು ಬಿಸಿಲುಗಳಂತಿರುವುವು ಕೆಲವು, ವೃಕ್ಷವಾಯಿತೆಂದು ತೋರಿಸುವುವು ಕೆಲವು. ಇವುಗಳನ್ನು ವಿಭಾವ, ಅನುಭಾವ, ಸಾತ್ವಿಕಭಾವ, ಸಂಚಾರೀಭಾವಗಳೆಂದು ಕರೆವರು. ಈ ಕಾರಣಗಳಿದ್ದರೂ ಫಲವು ಮಾತ್ರ ಸರ್ವತ್ರ ನಿಯತವಾಗಿರುವಂತೆ ಕಾಣಬರುವುದಿಲ್ಲ. ಫಲವಾದ ಕಡೆಯಲ್ಲಿಯೂ ತಾರತಮ್ಯಗಳು ಕಂಡುಬರುವುವು. ಹೀಗಿರಲು ರಸವಿಷಯದಲ್ಲಿ ಕ್ಲಿಪ್ತವಾದ ಕಾರ್ಯಕಾರಣಭಾವವನ್ನು ನಿರೂಪಿಸಲಾಗುವುದಿಲ್ಲವೆಂದು ತೋರುತ್ತದೆ. ಆದರೂ ಕವಿಗಳು ರಸವಿಷಯದಲ್ಲಿ ಕಾರ್ಯಕಾರಣಭಾವಗಳು ನಿಯತವಾಗಿರುವಂತೆಯೇ ಸಂಕೇತಮಾಡಿಕೊಂಡು ನಿರೂಪಣಮಾಡುತ್ತಿರುವರು. ಉದಾಹರಣೆಗಾಗಿ. ಶೃಂಗಾರರಸಕ್ಕೆ ಉದ್ದೀಪಕ ವಿಭಾವಗಳಾದ ಗಿರಿ, ವನ, ಚಂದ್ರೋದಯ, ಚೂತಪಲ್ಲವ, ಕೋಕಿಲಾಲಾಪ, ಮೊದಲಾದುವು ಕೆಲವರ ಹೃದಯದಲ್ಲಿ ಶೃಂಗಾರರಸವನ್ನು ಹುಟ್ಟಿಸುತ್ತದೆ; ಕೆಲವರಲ್ಲಿ ಹುಟ್ಟಿಸುವುದಿಲ್ಲ; ಕೆಲವರಲ್ಲಿ ಹೆಚ್ಚಾಗಿಯೂ, ಕೆಲವರಲ್ಲಿ ಅತ್ಯಂತ ಸೂಕ್ಷ್ಮವಾಗಿಯೂ ಹುಟ್ಟಿಸುತ್ತದೆ. ಹೀಗೆ ಕಾರ್ಯದಲ್ಲಿ ತಾರತಮ್ಯ ಸದ್ಭಾವಕ್ಕೆ ಸ್ತ್ರೀಪುರುಷರ ಅವಸ್ಥಾಭೇದವೇ ಕಾರಣವೆಂದು ಕೆಲವರು ನಿರೂಪಿಸುವರು. ಅದನ್ನು ಒಪ್ಪಿಕೊಳ್ಳುವುದಕ್ಕಾಗುವುದಿಲ್ಲ. ಏಕೆಂದರೆ—ಕವಿಗಳ ವರ್ಣನೆಯನ್ನು ನೋಡಿದರೆ ಅದು ಆಗ ತಿಳಿದುಬರುವುದು. ನಾಯಕವಿರಹದಿಂದಾದ ನಾಯಿಕೆಯ ಅವಸ್ಥೆಯನ್ನು ಜಗನ್ನಾಥವಿಜಯದಲ್ಲಿ—

ಸೋಂಕಿದ ಗಾಳಿ ದಳ್ಳುರಿವೊಲಾದುದು, ಪೊಕ್ಕ ಸರೋವರಾಂಬು ಕಾ ।
ಯ್ಪಿಂ ಕುದಿದತ್ತು, ನಂದನವನಂ ಕರಿಕೇಳ್ವುದು ನೋಡೆ ಸುಯ್ಯ ಸು ॥
ಯ್ವಿಂಕೆಯಿನೆಯ್ದೆ ಚಂದ್ರಿಕೆ ಬಿಸಿಲ್ಗೆಣೆಯಾಯ್ತು, ನಿಜಾಂಗತಾಪದಿಂ ।
ಪಂಕರುಹಾಕ್ಷಿ ಕಾಮಶಿಖಿ ಪೆಣ್ಬರಿಜಂ ತಳೆದಂತೆ ತೋರಿದಳ್* ॥ ಎಂದೂ

ಅರ್ಧನೇಮಿಪುರಾಣದಲ್ಲಿ—

“ ತರುಣಿಯ ಮೆಯ್ಯ ಬೆಂಕೆಯೊಳೆ ಬಿಳ್ದಮೃತಾಂಶುಮರೀಚಿ ಸುಟ್ಟ ಕ ।
ರ್ಪೂರದವೊಲಾಗಿ ಸುಟ್ಟಪುದಿದಲ್ಲದೊಡೆಲ್ಲಿಯದಲ್ಲಿ ತಾಪಮೋ ॥
ಸರಿಸದೆ ಪುಷ್ಪಬಾಣಮಿಸೆ ನಾಂಟಿ ಮುರುಂಟಿದ ಪೂವೆ ಪುಳ್ಳಿಯಾ ।
ಗಿರೆ ಮನಮೆಯ್ದೆ ಬೆಂದಪುದಿದಲ್ಲದೊಡೆಲ್ಲಿಯದಂಗಜಾನಳಂ ॥ ಎಂದೂ,

---

* —ಪೆಣ್ಬರಿಜು = ಹೆಂಗಸಿನ ವೇಷ.

ಗಿರಿಜಾಕಲ್ಯಾಣದಲ್ಲಿ—

" ಒತ್ತುವ ಪದ್ಮಪತ್ರಕದಳೀದಳಸಂಕುಳಮೆಯ್ದೆ ಬೆಂದು ಸೀ ।
ಯುತ್ತಿವೆ ದೂರದಿಂದೆ ಸಖಿಯರ್ ತವೆ ಚೆಲ್ಲುವ ಶೀತವಾರಿಯು ॥
ರ್ಕುತ್ತಿವೆ ಬೀಸುತಿರ್ಪ ಕುಸುಮೋಜ್ಜ್ವಳವೀಜನವೃಂದವೋವೊ ಪೊ ।
ತ್ತುತ್ತಿವೆ ತನ್ವಿಯೋ ವಿರಹವಹ್ನಿಗೆ ಪುಟ್ಟಿದದೊಂದು ಮೂರ್ತಿಯೋ॥ ಎಂದೂ,

ಈರೀತಿಯಲ್ಲಿ ಕವಿಗಳು ವರ್ಣಿಸುವರು. ಇದು ಅತಿಶಯೋಕ್ತಿಯೆಂದು ಹೇಳುವುದಕ್ಕಿಲ್ಲ. ಎಲ್ಲ ಕವಿಗಳೂ ಸ್ವಲ್ಪ ಹೆಚ್ಚು ಕಡಮೆ ಹೀಗೆಯೇ ವರ್ಣಿಸುವರು. ಇದು ಲೋಕಸಿದ್ಧವೂ ಅಲ್ಲ. ಕಿಂಚಿದಂಶದಲ್ಲಿ ನಿಜವಾದರೂ ಇಷ್ಟುಮಟ್ಟಿಗೆ ಮಾತ್ರ ಆಗುವುದಿಲ್ಲ. ರಸೋದ್ರೇಕವೇ ಆಗುವುದಿಲ್ಲವೆಂದು ಹೇಳಲಾಗದು. ಅಲ್ಪಸ್ವಲ್ಪವಾಗಿ ಈಗಲೂ ಉಂಟಾಗುತ್ತದೆ. ಸ್ವೇದಾಶ್ರುಸ್ತಂಭನಾದಿ ಸಾತ್ವಿಕ ಭಾವಗಳಾದರೋ ಕಾವ್ಯದಲ್ಲಿ ಹೇಳಿರುವಂತೆ ಮಾತ್ರ ಜನಿಸುವುದಿಲ್ಲ. ಶೃಂಗಾರ ರಸದಲ್ಲಿ ಹೀಗೆ. ರೌದ್ರರಸದಲ್ಲಿ ಕವಿಗಳು ನಿರೂಪಿಸುವಂತೆ ಈಗಲೂ ತದ್ರಸಜನ್ಯವಾದ ಕಾರ್ಯಗಳು ಯಥಾವತ್ತಾಗಿಯೇ ಇವೆ. ಅತ್ಯಂತವಾಗಿ ಕುಪಿತನಾದವನು "ಈ ಶಿಕ್ಷೆಯನ್ನು ಮಾಡಿಸದೆ ಬಿಡೆನು" "ನಿನ್ನನ್ನು ಕೊಂದುಹಾಕಿಬಿಡುತ್ತೇನೆ" "ಮನೇಲಿ ಎಕ್ಕ ಹುಟ್ಟಿಸಿ ಬಿಡುತ್ತೇನೆ" ಎಂದು ಈಗಲೂ ಹೇಳುವುದನ್ನು ಕೇಳುತ್ತೇವೆ. ಕೋಪಾವಿಷ್ಟನಾದವನು ತನ್ನನ್ನು ಮರೆತು ಕೆಲಸ ಮಾಡುವುದನ್ನೂ ನೋಡುತ್ತೇವೆ. ಈ ಲೋಕಾನುಭವವೂ ಗದಾಯುದ್ಧದಲ್ಲಿ ಭೀಮಸೇನನು ಉಮ್ಮಳಿಸಿ ಕೌರವೇಶ್ವರನ ಸಂಹಾರವಿಷಯದಲ್ಲಿ ಮಾಡಿದ ಸಂಕಲ್ಪವೂ ಬಲುಮಟ್ಟಿಗೆ ಒಂದೇ ಬಗೆಯಾಗಿರುವುವು. ಪಾಠಕರ ಸೌಕರ್ಯಕ್ಕಾಗಿ ಆ ಭಾಗವನ್ನು ಇಲ್ಲಿ ಅನುವಾದ ಮಾಡುತ್ತೇನೆ ;—

ವ॥ ಅಂತುಮ್ಮಳಿಸಿ ಕುರುಕುಲಮಹೀಪಾಲಬೃಹದೂರುದ್ವಂದ್ವಂಗಳಂ ತನ್ನ ಗದಾದಂಡದಿಂ ನುರ್ಗುನುರಿಮಾಡಲುಂ, ತತ್ಕೌರವೇಶ್ವರನ ಬಾಹುಶಾಖೆಗಳಂ ತನ್ನ ಗದಾಕುಠಾರದಿಂ ತತ್ತರದರಿಯಲುಂ, ತತ್ಪಿಂಗಾಕ್ಷನ ವಕ್ಷಸ್ಥಲಮಂ ತನ್ನ ಗದಾಲಾಂಗಲದಿಂದಿರ್ಬಗಿಯಾಗೆ ಪೋಳ್ದು ಪರಪಲುಂ, ತತ್ಫಣಿರಾಜಕೇತನನ ಲಲಾಟಶಿಲಾಪಟ್ಟಮಂ ತನ್ನ ಗದಾಘಾತದಿಂ ನುರ್ಚುನುರಿಮಾಡಲುಂ, ತದ್ದ್ರುಪದೀದ್ರೋಹನ ಮಣಿಮಯಮಕುಟಮಂ ತನ್ನ ಗದಾಪ್ರಹರಣದಿಂದುರುಳ್ಚಿ ಪುಡಿಯೊಳ್ ಪೊರಳ್ಚಲುಂ, ಆ ಸುಯೋಧನರುಧಿರಧಾರಾಪೂರದಿಂ ತನ್ನ ಗದ್ಗದಾಯಮಾನವಿಪುಳ

ಕೋಪಪಾವಕಶಿಖಾಕಲಾಪಮನಾರಿಸಲುಂ ಪಡೆಯದಡಹಡಿಸಿ ಭೀಮಸೇನಂ ಕಿಡಿ
ಕಿಡಿವೋಗಿ ಮೀಸೆಯುಂ ಕಡಿದು,

ಮೀರಿದ ಸಗೆವನ ಪಟ್ಟಂ ।
ಬಾರಿಸುವೆನೊ ಮುನ್ನಮರರುಂಡಮೃತಮನೇಂ ॥
ಕಾರಿಸುವೆನೊ ಖಚರರಸಡ ।
ದೇರ್ರಿಸುವೆನೊ ಮೇರುಗಿರಿಯ ತೂರಲ ತುದಿಯುಂ ॥ ೧

ಎತ್ತುವೆನೊ ಮಂದರಾದ್ರಿಯ ।
ನೊತ್ತುವೆನೊ ರಸಾತಳಕ್ಕೆ ನೆಲನಂ ದೆಸೆಯುಂ ॥
ಮುತ್ತುವೆನೊ ಪಗೆಯ ಬೆನ್ನಂ ।
ಪತ್ತುವೆನೊ ದಿಶಾಗಜಂಗಳಂ ತುತ್ತುವೆನೋ ॥ ೨

ದಾಂಟುವೆನೊ ಕುಲನಗಂಗಳ ।
ನೀಂಟುವೆನೊ ಚತುಸ್ಸಮುದ್ರಮಂ ರವಿಶಶಿಯುಂ ॥
ಮೀಂಟುವೆನೊ ಗಗನತಳಮಂ ।
ಗಂಟಲಸೊತ್ತುವೆನೊ ಸಕಲದಿಕ್ಪಾಲಕರಂ ॥ ೩

ವ॥ ಅಂತು ಕುರುಕುಲಕೃತಾಂತಕನಂತಕನಂತೆ ಮಾಮಸಕಂ ಮಸಗಿ ಪ್ರಳ
ಯಕಲ್ಪಸಂಕಲ್ಪಂಗೆಯ್ದು,

ದೆಸೆಗಿಳಿದನೊ ಮೇಣ್ ನಾಲ್ಕುಂ ।
ದೆಸೆಗಳ ಕೋಣೆಗಳೊಳುಳಿದನೋ ಖಳನಿಲ್ಲೀ ॥
ವಸುಮತಿಯೊಳ್ ಗಾಂಧಾರಿಯ ।
ಬಸಿರಂ ಮೇಣ್ ಮಗುಳೆ ಪೋಗಿ ಪೊಕ್ಕಿರ್ದಪನೋ ॥ ೪

ಭುವನಂಗಳ್ ಪದಿನಾಲ್ಕು, ನಾಲ್ಕು ಪೆಸರಿಂ ವಾರಾಶಿಗಳ್, ಪತ್ತು ದಿ।
ಗ್ವಿವರಂ, ನೋೞ್ಪೊಡಜಾಂಡಮಂಡಲದೊಳಿಂಬಿಲ್ಲ ಮತ್ತೆತ್ತಲೋ ॥
ಡುವನಾರಂ ಗೆಡೆಗೊಳ್ವನಾರ ಮರೆಯುಂ ಪೊಕ್ಕಿರ್ಪನಿಂದಿಂತಿದಂ ।
ತಿವರಿಂದಂ ಪೊರಗೆಲ್ಲಿ ಪೊಕ್ಕು ಬರ್ದುಕಲ್ಕಕ್ಕುಂ ‡ ಭುಜಂಗಧ್ವಜಂ ॥ ೫

ಚರಮಚರಮೆಂಬ ಜಗದಂ ।
ತರದೊಳ್ ಖಳನೆಲ್ಲಿ ಪೊಕ್ಕೊಡಂ ತದ್ಘುಜಪಂ॥

‡ ಟೀ—ಭುಜಂಗಧ್ವಜ—ಇವನಿಗೆ ಸರ್ಪಪತಾಕವೇ ಚಿಹ್ನವಾದುದರಿಂದ.

ಜರದೊಳಗಿರ್ದೊಡೆ ಹರಿಹರ ।
ಹಿರಣ್ಯಗರ್ಭರ್ಕಳಲ್ಲಿಯುಂ ಕೊಲ್ಲದಿರೆಂ ॥ ೬

ಚತುರಂತಕ್ಷಿತಿಕಾಂತೆ ಕೇಳ್ ಜಲಧಿ ಕೇಳ್ ಸಪ್ತಾರ್ಚಿ ಕೇಳ್ ತಾತ ಮಾ ।
ರುತ ಕೇಳ್ ಮಾರುತಮಾರ್ಗ ಕೇಳ್ ಪಗೆವನಂ ಕೊಂದೆನ್ನ ಕೋಪಾಗ್ನಿಗಾ ॥
ಹುತಿಮಾಳ್ಪೆಂ ಕೊಲಲಾರದಂದು ತರಿಸಂದಾನೆನ್ನ ಸಂದಗ್ನಿಗಾ ।
ಹುತಿಮಾಳ್ಪೆಂ ಗಡಮೆಂದು ಪುಣ್ಯೋದರಿದಂ ಕೌರವ್ಯಕೋಳಾಹಳಂ ॥ ೭

ಇಲ್ಲಿ ಕವಿಯು ಮೊದಲು ಕ್ರಮಕ್ರಮವಾಗಿ ಕೋಪವೇರುವುದನ್ನು ವರ್ಣಿಸುತ್ತ ಬಂದು, ಕೋಪವು ಮಂಡೆಯೇರಿ ಹೋಗಲು, ಮನುಷ್ಯನು ಸಾಧ್ಯಾಸಾಧ್ಯಗಳನ್ನು ವಿಚಾರಿಸದೆ ಆಡುವ ರೀತಿಯಲ್ಲಿ ಭೀಮಸೇನನಿಂದ ಮಾತಾಡಿಸುತ್ತ ಬಂದಿರುವನು.

ಹೀಗಿರಲು, ಒಂದೊಂದು ರಸದಲ್ಲಿ ಮಾತ್ರ ಲೋಕಾನುಭವಕ್ಕೆ ವ್ಯತ್ಯಾಸವಿಲ್ಲದೆ ಕಿಂಚಿದಂಶದಲ್ಲಾದರೂ ತತ್ಕಾರ್ಯವನ್ನು ನೋಡುತ್ತೇವೆ; ಒಂದೊಂದರಲ್ಲಿ ನೋಡುವುದೇ ಇಲ್ಲ, ಒಂದೆರಡರಲ್ಲಿ ಹೆಚ್ಚು ಕಡಮೆಯಾಗಿಯಾದರೂ ನೋಡುತ್ತೇವೆ. ಆದರೂ ರಸವನ್ನು ವರ್ಣಿಸುವಾಗ ಪ್ರತಿ ರಸಕ್ಕೂ ಆಲಂಬನವಿಭಾವರಾದ ಸ್ತ್ರೀಪುರುಷರ ಸ್ಥಿತಿಯನ್ನೂ ನೋಡದೆ ಒಂದೇ ತೆರದ ಕ್ಲಿಪ್ತಸಂಕೇತದಿಂದಲೇ ಕವಿಗಳು ವರ್ಣಿಸುವಂತೆ ತೋರುವುದು. ಆದುದರಿಂದ ರಸವಿಷಯದಲ್ಲಿಯೂ ಕವಿಸಂಕೇತವನ್ನು ಒಪ್ಪಿಕೊಳ್ಳಲೇಬೇಕಾಗುವುದು.

ಹೀಗಿದ್ದರೂ—ಲೋಕದ ಸ್ಥಿತಿಯೇ ಮಾರಾಡಿದೆ, ಪೂರ್ವಕಾಲದವರಂತೆ ಜನಗಳಲ್ಲಿ ಈಗ ಶಕ್ತಿ ಸಾಮರ್ಥ್ಯಾದಿಗಳು ಏಕಪ್ರಕಾರವಾಗಿಲ್ಲ. ಆದುದರಿಂದ ರಸಕಾರ್ಯಗಳು ಕಾವ್ಯಗಳಲ್ಲಿರುವಂತೆ ಈಗ ಕಾಣುವುದಿಲ್ಲ. ಕೆಲವುಕಡೆ ಕಿಂಚಿದಂಶದಲ್ಲಿ ಕಾಣುವುದೂ, ಕೆಲವುಕಡೆ ಕಾಣಿಸಿಕೊಳ್ಳದಿರುವುದೂ ಇದಕ್ಕೆ ಕಾರಣವೇಹೊರತು ರಸವಿಷಯದಲ್ಲಿ ಸಂಕೇತವಿದೆಯೆಂದು ಹೇಳುವುದಕ್ಕಾಗುವುದಿಲ್ಲವೆಂದು ಕೆಲವರು ಆಕ್ಷೇಪಿಸುವರು. ಇವರು ಹೇಳುವುದು ಸಮಂಜಸವಾಗಿ ತೋರಿದರೂ ಸಿದ್ಧಾಂತವೆಂದು ಹೇಳಲಾಗುವುದಿಲ್ಲ. ಏಕೆ? ಜನಗಳಲ್ಲಿ ಶಕ್ತ್ಯಾದಿಗಳು ಕಡಮೆಯಾದರೂ ಭೂತಗಳೂ ಅವುಗಳ ವ್ಯಾಪಾರವೂ ಇನ್ನು ಏಕರೀತಿಯಾಗಿಯೇ ಇರುವ ನಿಮಿತ್ತ ಮನುಷ್ಯನ ಸ್ಥಿತಿಯು ಮಾರ್ಪಾಡಾಗಿಲ್ಲವೆಂಬ ನಂಬಿಕೆಯು ವಿಶೇಷವಾಗಿ

ಟೀ—ತರಿಸಂದು = ಧಾ. ತರಿಸಲ್, ನಿಶ್ಚಯೇ.

ಬಾಧಿಸುತ್ತದೆ. ರಸಾವಿರ್ಭಾವದ ವಿಷಯದಲ್ಲಿ ಸಂಕೇತವಿದೆಯೆಂದು ಹೇಳುವುದಕ್ಕಾಗದಿದ್ದರೂ ರಸನಿರೂಪಣಪ್ರಕಾರದಲ್ಲಾದರೂ ಸಂಕೇತವುಂಟೆಂದು ಒಪ್ಪಿಕೊಳ್ಳಲೇಬೇಕು. ಏಕೆಂದರೆ-ರಸವು ಸಾಮಾಜಿಕನಿಷ್ಠವೆಂದು ಒಪ್ಪಿಕೊಂಡರೆ ತತ್ಕಾರ್ಯಕಾರಣರೂಪವಾದ ಸಂಕೇತವನ್ನು ಇಟ್ಟುಕೊಳ್ಳಲೇ ಬೇಕು. ಹಾಗೆ ಇಟ್ಟುಕೊಳ್ಳದಿದ್ದರೆ ಇಲ್ಲಿ ಈ ರಸವೇ ಹುಟ್ಟಿತು, ಈ ರಸದ ಉದ್ರೇಕವೇ ಇಲ್ಲಿ ವರ್ಣಿಸಲ್ಪಟ್ಟಿತು ಎಂದು ತಿಳಿಯಲಾಗುವುದಿಲ್ಲ. ರಸವು ನಾಯಿಕಾನಾಯಕನಿಷ್ಠವೆಂದು ಒಪ್ಪಿಕೊಳ್ಳುವುದಕ್ಕಿಲ್ಲ. ಏಕೆಂದರೆ-ಪುತ್ರಶೋಕದಿಂದ ನರಳುವವನಿಗೆ ದುಃಖವೇ ಹೊರತು ಕರುಣರಸವಿಲ್ಲ. ಆಗ ಆ ದುಃಖವು ಅವನಲ್ಲಿ ಎಂದಿಗೂ ರಸವಾಗಿ ಪರಿಣಮಿಸುವುದಿಲ್ಲ. ಸ್ಮಶಾನವಾಸಿಯಾಗಿದ್ದ ಹರಿಶ್ಚಂದ್ರನು ದುಃಖವನ್ನೇ ಅನುಭವಿಸಿದನು. ಹರಿಶ್ಚಂದ್ರವೇಷವನ್ನು ಧರಿಸಿ ನಾಟಕದಲ್ಲಿ ಕುಣಿಯುವವನಿಗೂ ಅದು ಆ ಕಾಲದಲ್ಲಿ ಸಂತೋಷವಾಗಿರುವುದಿಲ್ಲ, ಕಷ್ಟವಾಗಿಯೇ ಇದೆ. ಹರಿಶ್ಚಂದ್ರಕಥೆಯನ್ನು ಓದುವ ಪಾಠಕರ ಹೃದಯದಲ್ಲಿಯೂ, ಹರಿಶ್ಚಂದ್ರನಾಟಕವನ್ನು ನೋಡುವ ಸಾಮಾಜಿಕರ ಹೃದಯದಲ್ಲಿಯೂ ಆ ಹರಿಶ್ಚಂದ್ರನ ದುಃಖವು ರಸವಾಗಿ ಪರಿಣಮಿಸುವುದು. ರಸೋದ್ದೀಪಕಗಳು ಇವರಿಗೆ ಸಂಬಂಧಿಸದಿದ್ದರೂ ತಾದಾತ್ಮ್ಯಜ್ಞಾನದಿಂದ ಉಂಟಾಗುವುವು. ಶೃಂಗಾರರಸೋದ್ರೇಕವಿಷಯದಲ್ಲಿ—ಪಾಠಕರು ಕೋಕಿಲಾಲಾಪಗಳನ್ನು ಕೇಳದಿದ್ದರೂ, ಮಲಯಮಾರುತಸ್ಪರ್ಶವನ್ನು ಅನುಭವಿಸದಿದ್ದರೂ, ಪುಷ್ಪಪರಿಮಳವನ್ನಾಘ್ರಾಣಿಸದಿದ್ದರೂ, ಅವರಲ್ಲಿ ರಸೋದ್ರೇಕವುಂಟಾಗುತ್ತದೆ; ಅಶ್ರುಸ್ತಂಭಾದಿಸಾತ್ವಿಕಭಾವಗಳು ಪಾಠಕರಲ್ಲುಂಟಾಗುವುದನ್ನು ಅನೇಕಕಡೆ ನಾವೇ ನೋಡಿರುತ್ತೇವೆ. ಕವಿಗಳು ತಮ್ಮ ಶಬ್ದಶಕ್ತಿಯಿಂದ ಪಾಠಕರಲ್ಲಿ ನಾಯಕನ ತಾದಾತ್ಮ್ಯಜ್ಞಾನವನ್ನು ಬಳೆಯಿಸಿ ಪ್ರತ್ಯಕ್ಷವಾಗಿ ಅವರು ಮಂದಮಾರುತಾದಿಗಳನ್ನು ಅನುಭವಿಸದಿದ್ದರೂ "ಕಿವಿಯಿಂದೀಂಟಿಸುವರ್ ಸಮಸ್ತರಸಮಂ" ಎಂಬಂತೆ ಕಿವಿಯು ಮೂಲಕವಾಗಿ ಮನಸ್ಸಿನಲ್ಲಿಯೇ ಅನುಭವಿಸುವಂತೆ ಮಾಡುವರು. ಕವಿಗಳು "ಅಘಟಿತಘಟನಾನೂತನಬ್ರಹ್ಮರಲ್ತೇ!"

ಏವಂಚ ರಸವರ್ಣನಾಪ್ರಕಾರದಲ್ಲಿ ನಿಯತಸಂಕೇತವನ್ನೇ ಅಂಗೀಕರಿಸಬೇಕಾಗುವುದು. ಹಾಗೆ ಅಂಗೀಕರಿಸದಿದ್ದರೆ ಪಾಠಕರ ಅಥವಾ ಸಾಮಾಜಿಕರ ಹೃದಯದಲ್ಲಿ ರಸವು ಯಾವ ರೀತಿಯಲ್ಲಿ ಹುಟ್ಟತಕ್ಕುದು? ಹುಟ್ಟದೇ ಇದ್ದರೂ ಇರಲಿ; ತಾವತಾ ಹಾನಿಯೇನು? ಎಂದರೆ,-ಮನುಷ್ಯನಲ್ಲಿ ಮನುಷ್ಯತ್ವವು ಹೋದಂತೆಯೂ,

ಸೌಖ್ಯದಲ್ಲಿ ಸೌಖ್ಯತ್ವವು ಹೋದಂತೆಯೂ, ಕಾವ್ಯದಲ್ಲಿ ಕಾವ್ಯತ್ವವು ಹೋದಂತಾಗುವುದರಲ್ಲಿ ಯಾವ ಸಂದೇಹವೂ ಇಲ್ಲ.

ಈ ರೀತಿಯಲ್ಲಿ ವ್ಯಂಗ್ಯದಲ್ಲಿಯೂ ಸಂಕೇತವಿದೆಯೆಂದು ಉಪಪಾದಿಸಲಹುದು. ವ್ಯಂಗ್ಯಾರ್ಥವು ಹುಟ್ಟುವಹಾಗೆ ಪದಸಂಯೋಜನದಲ್ಲಿ ಆನಂದವುಂಟಾಗುವುದೆಂಬ ಸಂಗತಿಯನ್ನು ಹಿಂದೆ ಅನುವಾದ ಮಾಡಿರುವ ಪದ್ಯಗಳಿಂದ ತಿಳಿದುಕೊಳ್ಳಬಹುದು. ಕಾವ್ಯಜ್ಞರು ವ್ಯಂಗ್ಯವಿಲ್ಲದ ಕಾವ್ಯವನ್ನು ಕಾವ್ಯವೆಂದೇ ಎಣಿಸುವುದಿಲ್ಲ. ಅರ್ಥಚಮತ್ಕಾರ ಶಬ್ದಚಮತ್ಕಾರವಿದ್ದರೂ ವ್ಯಂಗ್ಯವಿಲ್ಲದ ಕಾವ್ಯವನ್ನು ಅಧಮಕಾವ್ಯವೆಂದೇ ಎಣಿಸುವರಾದುದರಿಂದ ವ್ಯಂಗ್ಯವು ಕಾವ್ಯಕ್ಕೆ ಜೀವದಂತೆ ಮುಖ್ಯವಾದುದೆಂದು ತಿಳಿಯಬೇಕು. ಅಂಥ ವ್ಯಂಗ್ಯವನ್ನು ಬಿಟ್ಟರೆ ಜೀವವಿಲ್ಲದ ಪುತ್ತಳಿಯಂತೆ ಕಾವ್ಯವು ಶೋಭಿಸದು. ಮತ್ತು

"ನಿಜದಿಂದಂ ಚಲ್ವಿಗೆ ವಿಬುಧ ।
ಜನಪ್ರಿಯೆಗಖಿಲಲೋಕವಿನುತಪ್ರಮದಾ ॥
ಗ್ರಜೆಗೆ ಕೃತಿಸತಿಗೆ ಶಬ್ದಾ ।
ರ್ಥಜಾತಮುಂತೆರಡು ತೆರದಲಂಕೃತಿಯಕ್ಕುಂ ॥"

ಎಂದು ನಾಗವರ್ಮನು ಹೇಳುವ ರೀತಿಯಲ್ಲಿ ಶಬ್ದಾರ್ಥಾಲಂಕಾರಗಳೆಂಬ ಅಲಂಕಾರಗಳಂ ಬಿಟ್ಟರೆ, "ಕೃತಿಸತಿಗೆ" ಶೋಭೆಯು ಕಡಮೆಯಾಗುವುದರಿಂದ ಅವುಗಳೂ ಅವಶ್ಯಕವಾಗಿ ಬೇಕು.

ಮತ್ತು ಆಹ್ಲಾದವೇ ಕಾವ್ಯತ್ವಸಿದ್ಧಿಗೆ ನಿಸ್ಸಂದೇಹವಾಗಿ ಮುಖ್ಯಕಾರಣವಾಗಿರಲಾಗಿ ಅಲಂಕಾರಭಿನ್ನವಾದ, ರಸಭಿನ್ನವಾದ, ವ್ಯಂಗ್ಯಭಿನ್ನವಾದ, ವಿಸ್ಮಯಜನಕವಾದ ಕೆಲಕೆಲವು ಇತರ ಚಮತ್ಕಾರಗಳನ್ನು ಕವಿಗಳು ಕಲ್ಪಿಸುವರು. ಎಂದೂ ನೋಡದ ವಸ್ತುವನ್ನು ನೋಡಿದರೂ, ಎಂದೂ ಕೇಳದ ಸಂಗತಿಯನ್ನು ಕೇಳಿದರೂ ಬುದ್ಧಿಯು ಹಿಗ್ಗಿ ಯಾವುದೋ ಒಂದು ವಿಧವಾದ ಆನಂದವನ್ನು ಕೊಡುತ್ತದೆ. ಅದರಿಂದ ವಿಸ್ಮಯಜನಕವಾದ ಆ ವಸ್ತುವು ಬಹುಕಾಲ ಮನಸ್ಸಿನಲ್ಲಿ ಸಿರವಾಗಿ ನಿಲ್ಲುತ್ತದೆ; ಅಲ್ಲದೆ ಅದು ಸ್ಮರಣೆಗೆ ಬಂದಾಗಲೆಲ್ಲಾ ಆ ಪ್ರಥಮ ಸಾಕ್ಷಾತ್ಕಾರದಲ್ಲಿ ಉಂಟಾದ ಆನಂದವನ್ನು ಪುನಃ ಪುನಃ ಕೊಡುತ್ತಲೇ ಇರುವುದು. ಆದುದರಿಂದ ಕವಿಗಳು ಯಾವುದು ಲೋಕದಲ್ಲಿ ಸಹಜವಾಗಿ ಸಂಭವಿಸದೋ ಅದು ಸಂಭವಿಸಿದಂತೆಯೂ, ಒಂದು ಕಾರಣದಿಂದ ಉಂಟಾದ ಸಿತಿಯನ್ನು ಕಾರಣಾಂತರದಿಂದ ಉಂಟಾ

ದಂತೆಯೂ, ಅನ್ಯನಿಯತವಾದ ಧರ್ಮವನ್ನು ಅನ್ಯತ್ರ ನಿಯತವಾದಂತೆಯೂ ವರ್ಣಿಸುವರು. ಅದರಿಂದ ವಿಸ್ಮಯವು ಜನಿಸುವುದು. ಆ ವಿಸ್ಮಯವೇ ಸಂತೋಷಜನಕವು. ಇಂಥ ವರ್ಣನೆಗಳು ಕಾವ್ಯಾಕಾಶಕ್ಕೆ ನಕ್ಷತ್ರಗಳಂತೆ ಶೋಭಾವಹಗಳಾಗಿರುವುವು. ಆದುದರಿಂದ ಕವಿಗಳು ಇಂಥವುಗಳನ್ನು ವಿಶೇಷವಾಗಿ ಅಲ್ಲಲ್ಲಿ ಉಪಯೋಗಿಸುವರು. ಈ ತೆರದ ವರ್ಣನೆಗಳೇ ಕವಿಗಳ ಪ್ರತಿಭಾಶಕ್ತಿದ್ಯೋತಕಗಳಾಗಿರುವಲ್ಲಿ ಸಂದೇಹವೇ ಇಲ್ಲ. ಹೇಗೆಂದರೆ? ಉದಾಹರಣೆಯಿಂದ ನಿರೂಪಿಸುವೆನು.

ಕವಿರಾಜಕುಂಜರನು ಫಲಭಾರದಿಂದ ಬಗ್ಗಿದ ಬತ್ತದ ಪೈರನ್ನು

ಮಡುಗಳೊಳೆ ನೀಳ್ದ ನೀರ್ಗ |
ನ್ನಡಿಯೊಳ್ ನಗೆಮೊಗದ ಚೆಲ್ವನವಲೋಕಿಪವೋ ||
ಲಿಡಿದಡರೆ ಕೊಂಡ ಫಲದಿಂ |
ಕಡುಬಾಗಿದುವರಸ ಗಂಧಶಾಲಿವನಂಗಳ್ || ೧

ಕಾಲ್ವಿಡಿದು ಕೆಳಗೆ ಪೊಸನೆ |
ಯ್ದಿಲ್ಪೂಗಳ್ ಬಾಯನಾಂತವೋಲಿರೆ ಕಂಪಂ ||
ಸಾಲ್ವನಿತುಗಲುಗುಳ್ದಪುವೆನೆ |
ಚೆಲ್ವಿಂ ಬಾಗಿದುವು ನೋಡಿ ಕಲಮುವನಂಗಳ್ || ೨

ಈ ರೀತಿಯಲ್ಲಿ ವರ್ಣಿಸಿರುವನು. ಇಲ್ಲಿ ಸಹಜವಾದ ಕಾರಣವನ್ನು ಮರೆಯಿಸಿ ಕಾರಣಾಂತರವನ್ನು ಅರೋಪಿಸಿ ಹೇಳಿರುವುದೇ ವಿಸ್ಮಯಹೇತುವು.

ಮತ್ತು ಆ ಕವಿಯೇ

ಬಲ್ಗಿಳಿಗಳ್ ಬಳಲ್ದು ತೆನೆಗಳ್ ತೊನೆಯುತ್ತಿರೆ ಪಾಯ್ದು ಪಾಯ್ದು ಪಾ |
ಲ್ಗೆಲ್ಗಳನಗ್ರತುಂಡದೊಳೆ ಖಂಡಿಸೆ ಗಲ್ಗಲನೊಕ್ಕ ಪಾಲ ತಂ ||
ಡಲ್ಗಳಿನಾವಗಂ ಮಡಿಯ ನೀರ್ ಕಡುವೆಳ್ಪಿನೊಳೊಂದೆ ಪದ್ಮಜಂ |
ಪಾಲ್ಗಳ ಪೊಯ್ದು ಪೊಯ್ದು ಬಳೆಯಿಪ್ಪವೊಲಿರ್ದುವು ನೆಲ್ಲ ಗರ್ದೆಗಳ್ || ೩

ಎಂಬ ಪದ್ಯದಲ್ಲಿಯೂ, ಮತ್ತು ಕೊಳದ ವರ್ಣನೆಯಲ್ಲಿ ಪ್ರವೃತ್ತವಾದ

ತಂಬಿಯ ಬಣ್ಣಮುಂ ಕರಿಯ ನೆಯ್ದಿಲ ಬಣ್ಣಮುಮಂಚೆವಿಂಡ ತ |
ಳ್ತಿಬೆಳರ್ವಣ್ಣಮುಂ ಬಿಳಿಯ ಕಂಜದ ಬಣ್ಣಮುಮೊಂದಳುಂಬಮುಂ ||
ತುಳುಮುಮಾಗೆ, ತಿಂಬಿದುದು ಕಳ್ತಲೆಗಂ ಶಶಿಕಾಂತಿಗಳ್ಗಮಾ |
ಅಂಚಂಡವಿಾಜಗದೊಳಿಲ್ಲದ ಕೂಟಮನುಂಟು ಮಾಳ್ಪವೋಲ್ || ೪

ಸ್ಮಿತನೀಲೋತ್ಪಲಪುಂಜದಿಂ ವಿಮಲತಾಸೌರಭ್ಯದಿಂ ದರ್ಪಣಾ ।
ಕೃತಿಯಿಂದೊಪ್ಪುವ ತತ್ಸರೋಜವನದೊಳ್ ಪೋ ಪುಟ್ಟಿದಂ ರೋಹಿಣೀ ॥
ಪತಿಯಂತಲ್ಲದೊಡಾಮುದಾಳಿಕಳಭಶ್ಯಾಮಾಂಕಮಾಸ್ವಚ್ಛದೀ ।
ಧಿತಿಯಾವೃತ್ತತೆ ಚಂದ್ರಮಂಗೆ ಪಿರಿದುಂ ಪೇಳೆತ್ತಣಿಂದಾದುದೋ ॥ ೪

ಎಂಬೀ ಪದ್ಯಗಳಲ್ಲಿಯೂ ಆಶ್ಚರ್ಯಕರವಾದ ರೀತಿಯಲ್ಲಿ ವಿಷಯವನ್ನು ನಿರೂಪಿಸಿ ಪಾಠಕರ ಮನಸ್ಸನ್ನು ಹೇಗೆ ವಶಮಾಡಿರುವನು ?

ಅಭಿನವಪಂಪನು ಆಂಜನೇಯನಿಂದ ಮಾಡಲ್ಪಟ್ಟ ಅಶೋಕವನದ ನಾಶವನ್ನು ವರ್ಣಿಸಿರುವ ಪ್ರಕಾರವು :—

ನೆಲನುಳ್ಳಂತೆವೊಲಾಗೆ ಕಿಳ್ತು ಬನಮಂ, ಮಾರಾಂತರುರ್ಬೆರ್ದಸೃ ।
ಗ್ಜಲದಿಂ ತಾಯ್ವೆದೆಗೂಡಿ, ಬಿತ್ತೆ ಪೆಣನಂ, ಬೇರೊಂದು ಶೌರ್ಯಾಂಕುರಂ ॥
ತಲೆದೋರಿತ್ತದು ಕೊರ್ವಿ ಕೀರ್ತಿಲತೆಯಾಯ್ತಾವಲ್ಲಿಯಿಂದಂಬರ ।
ಸ್ಥಲಮಂ ಮುದ್ರಿಸಿ ರಾವಣಾಂಗವುಳಲಂ ತಂದಂ ಮರುನ್ನಂದನಂ ॥ ೫

ಮಧುರನ ಧರ್ಮನಾಥಪುರಾಣದಲ್ಲಿ ರಾಜ್ಯಾಭಿಷೇಕ ಪ್ರಕರಣದಲ್ಲಿ—

ಪರಿರಂಭಂಗೆಯ್ವೊಡೊಂದಲ್ಲದೆ ಕರಮೆರಡಿಲ್ಲೋವೊ ದಿಗ್ದಂತಿಗೊಲ್ದಾ ।
ದರದಿಂ ಬಾಯ್ಗೂಡಲಿಚ್ಛೈಸೊಡೆ ಸುಡು ಪಲವುಂ ನಂಜುವಾಯ್ ಪನ್ನಗೇಂದ್ರಂ॥
ಗಿರದಾನೋರಂತೆ ಬೆಂಬತ್ತೆಯುಮೆರ್ದೆಗುಡದೆಗ್ಗಾಯ್ತು ಕೂರ್ಮಂಗೆನುತ್ತು ।
ರ್ವರೆ ಬಿಟ್ಟಾಮೂವರಂ ಭೂವರನ ಭೂಜದೊಳಿರ್ಪಳ್ ಮನೋರಾಗದಿಂದಂ ॥ ೬

ಈ ಪದ್ಯವು ಬಂದಿರುವುದು. ಇಲ್ಲಿ ಉರ್ವರೆಯು " ಮನೋರಾಗದಿಂದಂ " ಭೂವರನ ಭುಜವನ್ನು ಆಶ್ರಯಿಸಲು ನಿರೂಪಿಸಿರುವ ಕಾರಣವು ವಿಸ್ಮಯಜನಕವಾಗಿಲ್ಲವೆ?

ಮತ್ತು ರೇಚಾಂಕನ ಕೀರ್ತಿಕಾಂತೆಯು—

ತಿರಿಕಲ್ಲಾಡುವಳಷ್ಟಶೈಲಕುಲಮಂ, ದಿಗ್ದಂತಿದಂತಂಗಳೊಳ್ ।
ನೆರೆ ಕೆಯ್ಯಂ ತೊನೆದಾಡುವಳ್, ಮುಗಿಲ ಪೂವಂ ಸೂಡುವಳ್, ತಾರೆಯುಂ ॥
ತಿರಿವಳ್ ಮುತ್ತುಗಳೆಂದು, ಚಂದ್ರರವಿಯುಂ ಕಂಚೋಲೆಯೆಂದಿಕ್ಕುವಳ್, ।
ನಿರಿಯಂ ಸುತ್ತುವಳೇಳು ವಾರ್ಧಿಚಯಮಂ, ಶ್ರೀಕೀರ್ತಿ ರೇಚಾಂಕನಾ ॥ ೭

ಎಂದು ಈ ರೀತಿಯಲ್ಲಿ ಮಾಡುತ್ತಿದ್ದಳೆಂದು ವರ್ಣಿಸಿ ಕವಿಯು " ರಸಿಕರ ಪೊಸಬಗೆಗಿಂಪಂ ಪೊಸಯಿಸುವ " ನಲ್ಲವೆ!

ಮತ್ತು, ಲೀಲಾವತೀಪ್ರಬಂಧದಲ್ಲಿ ಕೊಟ್ಟಿರುವ ಪಕ್ಷಿಗಳ ಅನುರಾಗ ಪ್ರಕಾರ ವಿಷಯಕವಾದ ಈ ವರ್ಣನೆಯಲ್ಲಿ ಮನೋರಂಜಕವಾದ ಸಾಮಗ್ರಿಯೇನಿರುವುದೋ ನೋಡೋಣ.

" ವ|| ಅಂತು ವಿರಹಿಜನಕ್ಕೆ ವಿಳಯಾನಳನಂತಿರೊಗೆದ ಮೃಗಧರಮಯೂಖಮಾಲೆಯಿಂ ಮದನಾಗ್ನಿಜ್ವಲೆಗೆತ್ತು ನೋಡಲಂಜಿ ಕಣ್ ಕೋರೈಸಿದಂತೆ ಕಾಂತಾಚಿಂತಾಬ್ಧಿಮಗ್ನಚಿತ್ತನರಸಂ ನಿದ್ರಾನಿಮಿಾಲಿತನಯನನಪ್ಪುದುಂ, ಮಕರಂದಂ ನೆಲಕಿಳಿಪಿದ ಮಕರಂದದಂತೆ ಕೆಲದ ಪಲ್ಲವಪ್ರಸರದೊಳ್ ಪಟ್ಟೆರ್ಪುದುಮಾಗಳಾಬಾಳಚೂತದ ಸೆಳೆಗೊಂಬಿನ ತೊಳಪ ತಳಿರ ತೂಗುಂದೊಟ್ಟಿಲೊಳ್ ವಿನೋದವಶದಿಂ ವಸಿಯಿಸಿರ್ಪ ವಸಂತದೋಹಳೆಯೆಂಬ ಶಾರಿಕೆ ನಿಜಚಿತ್ತಪ್ರಿಯನಪ್ಪ ಚೂತಪ್ರಿಯನೆಂಬ ಶುಕಂ ಪೊಳ್ತು ಪೋಗೆಯುಂ ಬಾರದಿರೆ,

ಗಿಡುಗಂ ಕೊಂದುದೊ ಬೇಡರಿಟ್ಟ ಬಲೆಯೊಳ್ ಮೇಣ್ ಬಿಳ್ದನೋ ಪಕ್ಕವೇ
ನುಡಿದತ್ತೋ ಪಿಡಿದನ್ಯಶಾರಿಕೆ ರತವ್ಯಾಪಾರದೊಳ್ ಪೊಯ್ದಳೋ ||
ತಡೆದಂ ಮತ್ಪ್ರಿಯನೆಂದು ನೊಂದು ತಳಿರ್ಗಳ್ ನಾಂಬನ್ನೆಗಂ ದುಃಖದಿಂ |
ಗಡ ಕೀರಪ್ರಿಯಕಾಂತೆ ಸುಯ್ದು ಸುರಿದಳ್ ಭೋರೆಂದು ಬಾಷ್ಪಾಂಬುವಂ || ೧ ||

ಗೂಡಿನ ಸುತ್ತಲುಂ ಸುಳಿಗುಮಾಲಿಸುಗುಂ ಸಲೆ ಬರ್ಪ ಬಟ್ಟೆಯಂ |
ನೋಡುಗುಮಳ್ಗು ಮೇಳ್ಗು ಮೊಳಗಂ ಪುಗುಗುಂ ತಳಿರೊಳ್ ಪೊರಳ್ಗುಮಿ ||
ರ್ಪೋಡಿರೆ ಬಿಟ್ಟ ಚಂಚು ಬಿಸುಸುಯ್ದೆಳಮಾವಿನ ಪಲ್ಲವಂಗಳಂ |
ಚಾಡಿಸುಗುಂ ಮನಂಮರುಗಿ ಶಾರಿಕೆ ಬಾರದೊಡಾತ್ಮವಲ್ಲಭಂ || ೨ ||

ವ|| ಅಂತು ಮಮ್ಮಲ ಮರುಗುತಿರ್ಪನ್ನೆಗಂ,

ಕೊರಲೊಳ್ ಕಲ್ಹಾರಮಿಂಬಾಗಿರೆ ಕುಸುಮರಜೋರಂಜಿತಂ ಚಂಚು ಚೆಲ್ವಾ|
ಗಿರೆ ಚಂಚತ್ಪಕ್ಷಜಾಳಂ ಮಳಯಜರಸದೊಳ್ ನಾಂದು ಬೆಳ್ಪಿಂ ಬೆಡಂಗಾ ||
ಗಿರೆ ಬೇಗಂ ಕೊಂಡು ದಾಳಿಂಬದ ಪೊಸಗುಡುಕಂ ಶಾರಿಕಾಕಾಂತೆಗಾಗಳ್ |
ಹರಣಂ ಬರ್ಪಂತೆ ಬಂದತ್ತಪಗತಸಹಜಾಕಾರಮಾರಾಜಕೀರಂ || ೩ ||

ಪಿರಿದುಂ ಪಚ್ಚೆಲೆದೊಂಗಲಂ ಪುಡುಕಿ ಸುಯ್ಯುತ್ತಿರ್ಕುಮೋ ಮುಗ್ಧೆ ಮೈ |
ಗರೆದಾನಿರ್ದನೆಗೆತ್ತನಂಗಶಿಖಿಯಿಂ ಪಕ್ಷಾಳಿಗಳ್ ಪೊತ್ತೆ ಸೀ ||
ಕರಿವೋಗಿರ್ಕುಮೊ ಗೂಡಿನಿನ್ನೆಲಕೆ ಪೋಣ್ದೆಬ್ಬಿರ್ಕುಮೋ ಬಟ್ಟೆಯಂ |
ಭರದಿಂ ನೋಡುತುಮಿರ್ಕುಮೋ ಮರುಗಿ ಮತ್ಪ್ರಾಣೇಶೆ ಮಿಕ್ಕಾಸೆಯಿಂ || ೪ ||

ವ॥ ಎನುತುಂ ಬಂದಾಶುಕಂ ಸೋಂಕಲೊಡನೆ,

ಶಾರಿಕೆ ಕನಲ್ದು ನೋಡಿ ಚ ।
ಕೋರಂಗೆತ್ತೊ್ತದೆದು ಚಂಚುವಿಂ ನೂಂಕುವುದುಂ ॥
ಕೀರಂ ಕಾಲ್ವಿಡಿದೊಯ್ಕನೆ ।
ಸಾರ ಸರಂದೋರಿ ಚೆಲ್ಲವಾಡಿತ್ತಾಗಳ್ ॥ ೫ ॥

ಅರಿದು ಶುಕಪ್ರಿಯಕಾಮಿನಿ ।
ಗರಿ ಗದಗದ ನಡುಗೆ ಪಿಡಿಗೆ ಪೊಣ್ಮಿದ ಮುನಿಸಿಂ ॥
ಪೆರಗುಗುಡೆ ಕೀರಕಾಮುಕ ।
ನೆರಗಿದನಿನಿಯಳ ಪದಕ್ಕೆ ಸಂಭ್ರಮದಿಂದಂ ॥ ೬ ॥

ವ॥ ಎರಗಲೊಡನೆ,

ತನು ತನಿಗೆತ್ತಿ ಚಂಚು ಮಿಡುಕುತ್ತಿರೆ ಪೊತ್ತಿಳಗೊಂಬನುಳ್ಳುಗುರ್ ।
ಸೊನೆವಿಡೆ ತಾಗಿ ಸೂಗುರಿಸೆ ಕಂಠದ ತುಪ್ಪುಳಪಾಂಗಕಾಂತಿ ಕೆಂ ॥
ಪಿನ ಪಸರಕ್ಕೆ ಪಕ್ಕುಗುಡೆ ಪಕ್ಕದಿನೊತ್ತುತೆ ಮೀರಿ ಪಾಯ್ವ ಕ ।
ಣ್ಬನಿಗಳೆ ನಾಗಕೇಸರಿಗೆ ಸಾರಿಗೆ ಸಾರಿಗೆಯಾಯ್ತು ಕೋಪದಿಂ ॥ ೭ ॥

ಪದೆಪಿನ್ನೇತರ್ಕೆ ಕಾಲ್ನೊಂದಪುದು ತೊಲಗಿದೇಂ ಬಲ್ಮೆಯೇ ಬಂದು ಸೌಭಾ ।
ಗ್ಯದ ಕಂಪಂ ಬೀರಬೇಕಾವರಿಯುವೆ ಪೊಸತೇ ನಿನ್ನ ನಾಯಾಟವಿಂ ಸಾ ॥
ಲ್ವುದು ಸಾಲ್ಗಂತಿದುರ್ಗದಕ್ಕುಂ ಶುಕಸತಿ ಪಳಿಗುಂ ಪೋಗು ನಿನ್ನಾಕೆ ಪೇಳ್ ನಿ ।
ನ್ನದು ತಪ್ಪೇಂ ಸೂರುಳುಂಟಾಂ ಮುಳಿದೊಡೆ ಬಿಡು ನೀಂ ಬೇಡ ಮಿಥ್ಯಾಪ್ರಮಾಣಂ॥

ವ॥ ಎಂದಿವು ಮೊದಲಾಗಿ ನೊಂದು ನುಡಿದ ಶಾರಿಕೆಯ ಈರ್ಷ್ಯಾಳಾಪಂಗಳ ನರಸನಾಲಿಸಿ ಮಕರಂದನಂ ಮೆಲ್ಲನೆತ್ತಿ ಕಿವಿಯಿತ್ತು ಕೇಳುತ್ತುಮಿರ್ಪುದುಂ ಶುಕ ನಿಂತೆಂದಂ :—

ಕಾರಣಮಿಂ ಪೆರತುಳ್ಳೊಡೆ ।
ಶಾರಿಕೆ ನಿನ್ನಾಣೆಯೆನ್ನನಾಳ್ದತಿಲಲಿತಾ ॥
ಕಾರೆಗೆ ವಾಸವದತ್ತೆಗೆ ।
ಮಾರನಿನಳಲಾಗೆ ತಳರಲರಿಯದೆ ತಡೆದೆಂ ॥ ೮ ॥

ಶಿಶಿರೋಪಚಾರಮಾದೊಡೆ ।
ಕುಶೇಶಯಾಶಯದೊಳಾಯ್ದು ಕೊಯ್ದುಂ ಕೊರಲೊಳ್ ॥

ಶಶಿಮುಖಿಯರ್ ಸುತ್ತಿದೊಡಾಂ ।
ವಿಶದಸರೋರುಹದ ಪೂವನಡಕುತ್ತಿರ್ದಂ ॥೧೦॥
ತರುಣಿ ಪರಿಪರಿದು ಕುಸುಮಾ ।
ಕರಂಗಳಂ ತಿರಿದು ಮುರಿದು ತರುತಿರ್ದಂ ತ ॥
ಣ್ಣೆರಲರಸಿ ನಿಲ್ಗರಿಯುನಾಂ ।
ಹರಿಚಂದನರಸದೊಳದ್ದಿ ಬೀಸುತ್ತಿರ್ದಂ ॥೧೧॥

ವ॥ ಎಂದು ಕಾಲ ಮೇಲೆ ಕವಿದು ಕೆಡೆದಂದದೊಳ್ ಕಡುಮುಳಿಸೆಂಬ ಕೆಸರಂ ಮೆಲ್ನುಡಿಗಳೆಂಬ ತಿಳಿನೀರ್ಗಳಿಂ ತೊಳೆದು ಕಳೆದ ಕಾದಲನ ಪೆಡದಲೆಯ ತುಪ್ಪುಳಂ ವಸಂತದೋಹಳೆ ಚಂಚುಪುಟದಿಂ ಪಿಡಿದು ನೆಗಪುವುದುಮನಂತರಂ,

ಗರಿಯೆಲ್ಲಂ ಪುಳಕಂಗಳಾಗೆ ಕಡುಪಿಂ ಪಾಯ್ದಪ್ಪಿ ನುಣ್ದುಪ್ಪುಳಂ ।
ಪರಿದೀಡಾಡಿ ಬಹುಪ್ರಕಾರದಳಸಂ ತೋರುತ್ತೆ ತುಂಡಾಗ್ರದಿಂ ॥
ದಿರಿದೊಂದೊಂದರ ಗಲ್ಲಮಂ ಪದಕೆ ಪತ್ತುತ್ತಿರ್ಪ ಬಾಯಿತ್ತು ಮೆ ।
ಯ್ಮರೆದೇಂ ಕಾಯ್ದು ಕಡಂಗಿ ಕೀರಮಿಥುನಂ ಕೂಡಿತ್ತೊ ಕಾದಲ್ಮೆಯಿಂ॥೧೨॥"

ಪಕ್ಷಿಗಳಲ್ಲಿ ಇಂಥ ಕಾಮುಕವ್ಯಾಪಾರಗಳು ಎಂದೂ ಸಂಭವಿಸಲಾರವು. ಆದರೂ ಸಂಭವಿಸಿರುವಂತೆ ಕವಿಯು ಇಲ್ಲಿ ನಿರೂಪಿಸಿರುವನು ; ಆದರಲ್ಲಿಯೂ ಪಕ್ಷಿಜಾತಿಗೆ ತಕ್ಕಂತೆ ಅಲ್ಲಲ್ಲಿ ಸ್ವಲ್ಪಸ್ವಲ್ಪ ಮಾರ್ಪಾಡುಮಾಡಿ ಹೇಳಿರುವುದು ಪಕ್ಷಿಜಾತಿಗಳಿಗೂ ಇವು ಸಹಜವೆಂಬ ನಂಬಿಕೆಯನ್ನು ಪಾಠಕರಲ್ಲಿ ಹುಟ್ಟಿಸುವುದಕ್ಕೋಸ್ಕರವೆಂದು ತಿಳಿಯಬೇಕು. ಪಕ್ಷಿಗಳಲ್ಲಿಯೂ ಅನುರಾಗವುಂಟು. ಆ ಅನುರಾಗವನ್ನು ಕವಿಗಳು ಕಾವ್ಯಗಳಲ್ಲಿ ಅನೇಕ ಕಡೆ ವರ್ಣಿಸಿರುವರು ; ನಾವೂ ನೋಡಿರುತ್ತೇವೆ. ಕವಿಯು ಇಲ್ಲಿಮಾತ್ರ ಹಾಗೆ ವರ್ಣಿಸಲಿಲ್ಲ. ಆತನ ಆಶಯವು ಬೇರೆಯೇ ಇರಬೇಕು. ನಾಯಕನ ಮನಸ್ಸಿನಲ್ಲಿ ಆಗ ಏನು ಓಡುತ್ತಿದ್ದಿರಬಹುದೋ ಅದನ್ನು ಪಾಠಕರಿಗೆ ತಿಳಿಸಲು ಹೀಗೆ ವರ್ಣಿಸಿರಬಹುದು. ಅದಕ್ಕಾಗಿಯೇ "ಕಾಂತಾಚಿಂತಾಬ್ಧಿಮಗ್ನಚಿತ್ತನರಸಂ" ಎಂಬ ಅವಕಾಶಿಕೆಯನ್ನು ಕೊಟ್ಟನೆಂದು ತೋರುತ್ತದೆ. ಆಕಾಲಕ್ಕೆ ಆ ದೇಶಕ್ಕೆ ಅನುಗುಣವಾದ ವರ್ಣನೆಯಿಂದ ತಿಳಿಸುವುದರಲ್ಲಿ ಔಚಿತ್ಯವುಂಟೆಂಬುದು ತಿಳಿದಿದೆಯಷ್ಟೆ. ರಾತ್ರಿಯಲ್ಲಿ, ವಿಶೇಷವಾಗಿ ಬೆಳದಿಂಗಳಲ್ಲಿ, ಪಕ್ಷಿಗಳು ಹಾರಾಡುತ್ತ ಚಿಲಿಪಿಲಿಗುಟ್ಟುತ್ತ ಮರದಿಂದ ಮರವನ್ನು ಸೇರುವುದನ್ನು ನೋಡಿರುತ್ತೇವೆ. ಆ ಕಾಲದಲ್ಲಿ ಅವುಗಳಿಗೆ ಸಹಜವಾದ ವ್ಯಾಪಾರವನ್ನು ಹೇಳುತ್ತ ಬಂದಿದ್ದನಾದರೆ

ನಾಯಕನ ಮನಸ್ಸ್ಥಿತಿಯು ತಿಳಿವೃತ್ತಿರಲಿಲ್ಲ. ಆದುದರಿಂದ ಕವಿಯು ಮಾನುಷಸಜಾತೀಯವಾದ ರತಿವ್ಯಾಪಾರವನ್ನು ಅವುಗಳಲ್ಲಿ ಆರೋಪಿಸಿರುವನು. ಇದೂ ಅಲ್ಲದೆ ಆ ವ್ಯಾಪಾರವನ್ನು ಕಥಾನಾಯಕನೊಡನೆ ಪಾಠಕರೂ ನೋಡಿ ವಿಸ್ಮಿತರಾಗಬೇಕೆಂಬ ಮತ್ತೊಂದು ಉದ್ದೇಶವೂ ಕವಿಗಿದ್ದಿರಬಹುದು. ಪಕ್ಷಿಗಳು ಹೆಣ್ಣು ಗಂಡು ಜತೆ ಜತೆಯಾಗಿ ಕುಳಿತುಕೊಳ್ಳುವುದು, ಕಚ್ಚಾಡುವುದು, ಗುಡುಕು ಕೊಡುವುದು- ಇವು ಮೊದಲಾದುವು ಸಹಜವಾಗಿಯೇ ಸಂತೋಷಕರವಲ್ಲವೆ. ಹೀಗಿರಲು ಈ ರೀತಿಯಾಗಿ ಅವುಗಳ ಅನುರಾಗವನ್ನು ವರ್ಣಿಸಿದರೆ ಆನಂದವು ಮಿತಿಮೀರುವುದರಲ್ಲಿ ಸಂದೇಹವೇನು? ಈ ಅನುರಾಗಪ್ರಕಾರವನ್ನು ನಂಬುವಷ್ಟು ಯಾರೂ ಹುಚ್ಚರಲ್ಲ. ಆದಮಾತ್ರಕ್ಕೆ ಪಕ್ಷಿಗಳಲ್ಲಿ ಅನುರಾಗವಿಲ್ಲವೋ ಎಂದರೆ, ಇಲ್ಲದೆ ಇಲ್ಲ. ಈ ರೀತಿಯಾಗಿ ಮಾತ್ರವಿಲ್ಲ. ಆದರೂ ಇಲ್ಲಿ ಆನಂದ ಹೆಚ್ಚಾಗುವುದಕ್ಕೆ ಕಾರಣವೇನೆಂದರೆ, ಲೋಕದಲ್ಲಿ ಸಹಜವಾಗಿ ಯಾವುದು ಸಂಭವಿಸದೋ ಅದು ಸಂಭವಿಸುವಂತೆ ವರ್ಣಿಸಲ್ಪಟ್ಟರೂ ಒಂದರ ಧರ್ಮವು ಮತ್ತೊಂದರಲ್ಲಿ ಆರೋಪಿಸಲ್ಪಟ್ಟರೂ ವಿಸ್ಮಯವುಂಟಾಗುವುದು ಸಹಜ. ಪಕ್ಷಿಗಳ ವ್ಯಾಪಾರವರ್ಣನೆ ಸಹಜವಾಗಿಯೇ ಆನಂದದಾಯಕವು; ಆ ಆನಂದವು ರತಿವ್ಯಾಪಾರವರ್ಣನೆಯಾದುದರಿಂದ ಇಲ್ಲಿ ವೃದಿ ಹೊಂದಿತು. ಆ ಆನಂದವು ಅಸಂಭಾವ್ಯವಾದುದು ಸಂಭಾವ್ಯವಾದಂತೆ ವರ್ಣಿಸಲ್ಪಟ್ಟಿತಾದುದರಿಂದ ಮಿತಿಮೀರಿತು. ಅದಂತಿರಲಿ. ಈ ರೀತಿಯ ವರ್ಣನೆಯನ್ನು ರಸಾಭಾಸವೆಂದು ರಸಜ್ಞರು ಏಕೆ ಕರೆವರು? ರಸದಂತೆ ಕಾಣಿಸಿಕೊಳ್ಳುವುದೇ ಹೊರತು, ನಿಜವಾಗಿಯೂ ರಸ ಹುಟ್ಟದಾದುದರಿಂದ ಇದನ್ನು ರಸಾಭಾಸವೆಂದು ಹೇಳಿದರು. ರಸಾಭಾಸವೆಂದು ಹೇಳಿದ ಮಾತ್ರದಿಂದಲೇ ಆನಂದವಿಲ್ಲವೆಂದು ಹೇಳುವುದಕ್ಕಾಗುವುದಿಲ್ಲ. ಆನಂದವೇನೋ ಉಂಟಾಗುತ್ತದೆ. ರಸದಿಂದ ಉಂಟಾಗುವಷ್ಟು (ಎಂದರೆ ಏವಂ ವಿಧವಾದ ರಸವ್ಯಾಪಾರವನ್ನು ದುಷ್ಯಂತ ಶಕುಂತಳೆಯರಲ್ಲಿ ಆರೋಪಣೆ ಮಾಡಿ ಹೇಳಿದ್ದರೆ ಎಷ್ಟೋ ಅಷ್ಟು) ಆನಂದವು ಇಲ್ಲಿ ಉಂಟಾಗುವುದಿಲ್ಲ. ಆದುದರಿಂದಲೇ ಇಂಥವುಗಳು ವಿಸ್ಮಯಜನಕವಾದುವುಗಳೆಂದು ಹಿಂದೆ ನಿರೂಪಿಸಲ್ಪಟ್ಟುವು.

ಈ ರೀತಿಯಾದ ವಿಸ್ಮಯಜನಕವಾದ ವರ್ಣನೆಗಳನ್ನು ಆಲಂಕಾರಿಕರು ಅಲಂಪ್ರಭೇದಗಳೆಂದೇ ಗಣಿಸುವರು. ಆದರೂ ಅವುಗಳನ್ನು ನಾನು ಇಲ್ಲಿ ಬೇರೆಯಾಗಿಯೇ ನಿರೂಪಿಸಿದೆನು. ಏಕೆಂದರೆ— ಇಂಥವುಗಳು ಅಲಂಕಾರದಲ್ಲಿ ಅಡಗಿದುವುಗಳೆಂದು ಹೇಳುವುದು ನನಗೆ ಸಮ್ಮತವಿಲ್ಲ, ಆಲಂಕಾರಿಕರಾದರೋ, ಭಾವ

ವನ್ನೂ ವ್ಯಂಗ್ಯವನ್ನೂ ರಸವನ್ನೂ ಅಲಂಕಾರಗಳಲ್ಲಿಯೇ ಅಂತರ್ಭಾವ ಮಾಡುವಂತೆ ಇವುಗಳನ್ನೂ ಸೇರಿಸುವರು. ಇದಕ್ಕೆ ಅಲಂಕಾರವೇ ಕಾವ್ಯದಲ್ಲಿ ಸರ್ವಸ್ವವೆಂಬ ತಮ್ಮ ಉದ್ದೇಶವನ್ನು ಸ್ಥಿರಪಡಿಸುವುದೇ ಕಾರಣವೆಂದು ತೋರುತ್ತದೆ. ಅಲ್ಲದೆ "ಕೃತಿಸತಿಗೆ ಶಬ್ದಾರ್ಥ ಜಾತಮುಂತೆರಡು ತೆರದಲಂಕೃತಿಯುಕ್ಕುಂ" ಎಂಬ ಅವರ ಅಭಿಪ್ರಾಯದ ಪ್ರಕಾರವೇ ಅಲಂಕಾರಗಳೆಂಬವು ಹೊರಗಣ ಶೋಭಾವಹವಾಗಿರಬೇಕು. ಈ ಕಾರಣದಿಂದಲಾಗಲಿ, ಅಥವಾ ಅವುಗಳನ್ನು ಅಲಂಕಾರ ವಿಶೇಷವೆಂದು ಒಪ್ಪಿಕೊಂಡರೂ ಅವುಗಳ ಪ್ರಾಚುರ್ಯವನ್ನೂ ಪ್ರಾಧಾನ್ಯವನ್ನೂ ಸ್ಥಿರಪಡಿಸುವ ಕಾರಣದಿಂದಲಾಗಲಿ ಬೇರೆಯಾಗಿ ನಿರೂಪಿಸುವುದರಲ್ಲಿ ಪ್ರಯೋಜನ ವಿಲ್ಲದೆ ಇಲ್ಲ.

ಇನ್ನೂ ಅಲ್ಲದೆ ಉಕ್ತಿಭಂಗಿಯನ್ನು ಆಶ್ರಯಿಸುವುದರಲ್ಲಿ ಪ್ರಯೋಜನವುಂಟೋ ಇಲ್ಲವೋ ವಿಚಾರಿಸೋಣ? ಅಭಿಪ್ರಾಯವನ್ನು ನೆಟ್ಟನೆಟ್ಟಗೆ ಕವಲಿಲ್ಲದೆ ತಿಳಿಸುವುದಕ್ಕಿಂತ ರಂಜಕವಾಗುವ ರೀತಿಯಲ್ಲಿ ತಿರುಗಿಸಿ ತಿರುಗಿಸಿ ಹೇಳುವುದರಲ್ಲಿ ಹೆಚ್ಚು ಪ್ರಯೋಜನವು ಕಂಡುಬರುತ್ತದೆ. ಮನಸ್ಸು ಸ್ವಲ್ಪಹೊತ್ತು ಸಂತೋಷದೊಡನೆ ವಿಷಯದಲ್ಲಿ ನಿಲ್ಲುವುದರಿಂದ ವಿಷಯವು ಚಿರಸ್ಥಾಯಿಯಾಗುವುದು. ಉಕ್ತಿಭಂಗಿಯನ್ನಾಶ್ರಯಿಸದಿದ್ದರೆ ಅಭಿಪ್ರಾಯವು ಉತ್ತೇಜಕವಾಗದು. ಆದುದರಿಂದಲೇ ಕವಿಗಳು ಉಕ್ತಿಭಂಗಿಯನ್ನಾಶ್ರಯಿಸಿಯೇ ವಿಷಯಗಳನ್ನು ತಿಳಿಸುವುದರಲ್ಲಿ ಯತ್ನಿಸುವರು.

ಉದಾಹರಣೆಗಾಗಿ,—

(1) ತಿಳಿದವನಿಗೆ ಹೇಳಬೇಕೆ, ಎಂಬ ಅರ್ಥವನ್ನು ಲೀಲಾವತಿಯಲ್ಲಿ

ವರವಿದ್ಯಾರಾಜವಿದ್ಯಾ।
ವಿರಂಚನೆನಿಸಿರ್ಪ ನಿನಗೆ ನೀತಿಯು ಮಾತಂ॥
ವಿರಚಿಸಿ ಪೇಳ್ವುದು ತುಂಬಿಗೆ।
ಪರಿಮಳಮಂ ಕೊಂಡು ಕೊನೆದು ಪೇಳ್ವವೊಲಕ್ಕುಂ॥ ೧

ಎಂದು ತಿಳಿಸುವನು. ಇಲ್ಲಿ ಪರಿಮಳದ ಸ್ವರೂಪವನ್ನು ಸಹಜವಾಗಿ ತಿಳಿಯುವ ಶಕ್ತಿಯುಳ್ಳ ಆ ವಿಷಯದಲ್ಲಿ ಉಪಾಧ್ಯಾಯನಂತಿರುವ ದುಂಬಿಗೆ ಪರಿಮಳಸ್ವರೂಪವನ್ನು ಅಷ್ಟು ಚೆನ್ನಾಗಿ ತಿಳಿಯದ ಆ ವಿಷಯದಲ್ಲಿ ವಿದ್ಯಾರ್ಥಿದಶೆಯಲ್ಲಿರುವ ನಾವೂ ಉಪದೇಶಮಾಡುವುದಕ್ಕೆ ಹೊರಟಂತಾಯಿತೆನ್ನುವುದೇ ಚಮತ್ಕಾರವು.

(2) ಮತ್ತು ಸ್ತ್ರೀವ್ಯಾಮೋಹವೆಂಬುದು ಮನುಷ್ಯನ ಧರ್ಮಬುದ್ಧಿಯನ್ನು ಹೋಗಿಸಿ, ವಿವೇಕವನ್ನು ತೊಲಗಿಸಿ, ಕೇಡಿಗೆ ಕೂಡುವುದಾದುದರಿಂದ, ವಿವೇಕಿಯಾದವನು ಸ್ತ್ರೀವ್ಯಾಮೋಹವೆಂಬ ಪಾಶಕ್ಕೆ ಸಿಕ್ಕಬೀಳದೆ, ದಮಸಮೇತನಾಗಿರಬೇಕೆಂಬ ಅಭಿಪ್ರಾಯವನ್ನು ಒಬ್ಬ ಕವಿಯು ಹೀಗೆ ನಿರೂಪಿಸಿರುವನು.

[ ಕವಿಕುಂಜರಲೀಲಾವತಿ, ಆಶ್ವಾಸ, ೪. ]

ಉದಯಿಪ ನೇಸರಿಂ ಕಿಡದ ಕತ್ತಲೆ ಕಿತ್ತಲಗಿಂ ಕರುತ್ತು ಕು ।
ತ್ತದ ಕಲಿವೇನೆಯುಂತಕನ ಬಾರಿಗೆ ಬಾರದ ಸಾವು ಕಳ್ಳನು ॥
ಣ್ಣದ ಕಡುಸೊರ್ಕು ಕಿಚ್ಚುನುರಿ ಪತ್ತದೆ ಪೊತ್ತುವ ಬೇಗೆ ಪಾವು ತಿ ।
ನ್ನದ ತನಿನಂಜು ತನ್ನಿಯರೊಳಾದಳುಪಿಂ ಪೆರತುಂಟೆ ಲೋಕದೊಳ್ ॥ ೧

ಒದವಿದ ಪೆಂಪನೊಲ್ಲದೊಡೆ ನೀತಿಯನೊಲ್ಲದೊಡೋತ ಸೈಪನೊ ।
ಲ್ಲದೊಡೆ ಜಸಕ್ಕೆ ಜವ್ವನಮನೊಲ್ಲದೊಡಾಯತಿಗಾದ ಪೆರ್ಚನೊ ॥
ಲ್ಲದೊಡೆ ವಿವೇಕಸಂಪದಮನೊಲ್ಲದೊಡೊಲ್ವರ ಪೇಳ್ದ ಮಾತನೊ ।
ಲ್ಲದೊಡೆ ಕುಲಕ್ರಮೋನ್ನತಿಯನೊಲ್ಲದೊಡೊಲ್ವುದು ಪೆಣ್ಗೆ ಮಾನವಂ ॥ ೨

ಅತನು ಗಡಾ ಭಟಂಗೆ ನನೆವಿಲ್ಗಡ ಪೂವೆ ಸರಲ್ಗಡಂ ಹಿಮ ।
ದ್ಯುತಿ ಗಡ ಬಂದ ಮಾವು ಗಡ ತೆಂಬೆಲರುಂ ಗಡ ತುಂಬಿಗಳ್ ಗಡಂ ॥
ಲತೆ ಗಡ ಸೈನಿಕಂ ಗಡಮಮಂಗೆ ಗಡಕ್ಕಟ ಸೋಲ್ತು ತಾಂ ಗಡು ।
ದ್ಧತರುಮನಿಕ್ಕುವಂ ಗಡ ನೃಪಂ ಗಡ ಪೇಳಿದು ಕೇಳತಕ್ಕುದೇ ॥ ೩

ಅವಿವೇಕಂ ಮೃಗತೃಷ್ಣೆವೋಲ್ ಪೊಳೆವಿನಂ ಗಾಂಭೀರ್ಯವಾರಾಶಿ ಬ ।
ತ್ತುವಿನಂ ಧೈರ್ಯಧರಾಧರಂ ಬಿರಿವಿನಂ ವಿದ್ಯಾವನಶ್ರೇಣಿ ಪೊ ॥

---

ಟಿಪ್ಪಣಿ—೧. ಉದಯಿಪ ... ಕತ್ತಲೆ = ಸೂರ್ಯತೇಜಸ್ಸಿನಿಂದಲೂ ನಾಶವಾಗದ ಅಂಧಕಾರವನ್ನು ಉಂಟುಮಾಡುತ್ತದೆ, ಎಂದರೆ ಇದಕ್ಕೆ ಪ್ರತೀಕಾರವೇ ಇಲ್ಲವೆಂಬ ತಾತ್ಪರ್ಯ; ಇತ್ಯಾದಿ. ಕಲಿವೇನೆ = ಹೆಚ್ಚಾದ ಬೇನೆ. ತಿನ್ನದ = ಕಡಿಯದ.

೨. ಓತ ಸೈಪು = ಸಂಪಾದಿಸಿದ ಪುಣ್ಯ. ಪೆಣ್ಗೆ ಒಲ್ವೊಡೆ, ಮೇಲೆ ಹೇಳಿದ ಸುಗುಣಗಳೆಲ್ಲವೂ ನಾಶವಾಗುವುದೆಂದು ಅಭಿಪ್ರಾಯ.

೩. ಬಂದ ಮಾವು = ಫಲಿತರಸಾಲ. ಇಲ್ಲಿ ಕೊಟ್ಟಿರುವ ಹೇತುಗಳಲ್ಲಿ ಅಸಮಗ್ರತೆಯಿದ್ದರೂ ಕಾರ್ಯೋತ್ಪತ್ತಿಯಾಯಿತೆಂದು ನಿರೂಪಿಸುವುದೇ ಚಮತ್ಕಾರ. ಕಾಮಪರವಶನಾದವನು ಕವಡೆಗೂ ಕಡೆ ಎಂದು ತಾತ್ಪರ್ಯ.

ತ್ತುವಿನಂ ತಪ್ತಶರೀರಸೂರ್ಯಮಣಿಯಿಂ ಜ್ವಾಲಾಕಲಾಪಂಗಳು ।
ಣ್ಮುವಿನಂ ಪೊಣ್ಮಿದುದೀಜಗತ್ತ್ರಯದೊಳಂ ಕಾಮೋಗ್ರಘರ್ಮಾಗಮಂ ॥ ೧

ಅದನದಿರದೊದವಿ ಬೇಗಂ ।
ಬೆದರಿಸುವೊಡೆ ದಮಪಯೋಧರಾಗಮಮೆ ವಲಂ ॥
ಬೆದರಿಪುದದ್ಧರಿಂ ನಯಕೋ ।
ವಿದನೆನಿಪಂ ದಮಸಮೇತನಾಗಲೆವೇಳ್ಕುಂ ॥ ೨

(3) ಪರ್ವತದ ಔನ್ನತ್ಯವನ್ನು ಚಂದ್ರಪ್ರಭಪುರಾಣದಲ್ಲಿ ಕವಿಯು ಹೀಗೆ ವರ್ಣಿಸಿರುತ್ತಾನೆ:—

ಅನಗಚೂಳದೊಳ್ ಶಬರಬಾಲಕಿಯರ್ ವಿಧುಬಿಂಬದಲ್ಲಿ ತ ।
ವ್ಮಾನನಮಂ ನಿರೀಕ್ಷಿಸಿ ಮುದಾಂಬುಲಲಾಮಮನುಯ್ದು ಬಿಂಬಮು ॥
ಧ್ಯಾನನದಲ್ಲಿ ಬಿತ್ತರಿಸೆ ಮೌಗ್ಧ್ಯದೊಳಾಯ್ತು ತದಂಕಮೆಂಬಿನಿ ।
ನ್ಮಾನರಿಯೆಂ ವಲಂ ನೆರೆಯೆ ಬಿಚ್ಚಳಿಸಲ್ಕದರುಚ್ಚವೃತ್ತಿಯುಂ ॥ ೩

ಇಲ್ಲಿ ಕವಿಯು ಶಬರಬಾಲಕಿಯರಿಗೆ ಮೌಗ್ಧ್ಯವನ್ನು ಹೇಳಿ, ಅವರು ತಿಳಿಯದೆ ಚಂದ್ರಬಿಂಬದಲ್ಲಿ ಪ್ರತಿಫಲಿಸಿದ ತಮ್ಮ ಮುಖವನ್ನು ತಮ್ಮ ನಿಜವಾದ ಮುಖವೆಂದೇ ತಿಳಿದು, ತಾವು ಹಣೆಗೆ ಇಟ್ಟುಕೊಳ್ಳುವ ಸಾದನ್ನು ಆ ಹಣೆಗೆ ಇಟ್ಟರೆಂದು ಹೇಳಿ, ಚಂದ್ರನು ಅವರ ಕೈಯ್ಯ ಕನ್ನಡಿಯಾದನೆಂದು ವರ್ಣಿಸಿರುವುದರ ಮೂಲಕ ಪರ್ವತದ ಔನ್ನತ್ಯವನ್ನು ಹೇಳಿರುವುದೇ ಉಕ್ತಿಚಮತ್ಕಾರವು.

(4) ಮತ್ತು ನಗರೋಪವನದ ಸೊಂಪನ್ನು ಮಲ್ಲಿನಾಥಪುರಾಣದಲ್ಲಿ—

ಎಳನೀರಿಂ ನಾರಿಕೇಳಂ ಬಳೆಯಿಸೆ ಕದಳೀಷಂಡಮಂ, ತುಂಬಿಯುಂ ಪೂ ।
ಗೊಳದಿಂ ಪೂಗದ್ರುಮಂ ಬಳ್ಸೆರೆವಿಡಿಯೆ, ಮರಾಳಂಗಳಂ ಪದ್ಮಷಂಡಂ ॥
ನಳಿನೀಕಾಂಡಂಗಳಿಂ ಕೊರ್ಬಿಸೆ, ಕನರ್ಗೊನರಿಂ ಬಾಳಚೂತದ್ರುಮಂ ಚಾ ।
ಪಳಮಂ ಪುಂಸ್ಕೋಕಿಲಕ್ಕೋಲಗಿಸೆ ಸೊಗಯಿಕುಂ ತತ್ಪುರೋದ್ಯಾನಷಂಡಂ॥ ೪

ಎಂದು ಕವಿಯು ವರ್ಣಿಸಿರುವನು. ಇಲ್ಲಿ ಉಕ್ತಿಭಂಗಿಯು ಚಾರುತಾಹೇತುವಾಗಿದೆ.

---

**ಟಿಪ್ಪಣಿ—೧. ಇಲ್ಲಿ ಕವಿಯು ಸ್ತ್ರೀವ್ಯಾಮೋಹದ ಉಲ್ಬಣಾವಸ್ಥೆಯನ್ನು ಅಲಂಕಾರಮೂಲಕ ನಿರೂಪಿಸಿರುತ್ತಾನೆ; ಈ ಅಲಂಕಾರವು ಉಕ್ತಿಚಮತ್ಕಾರದಿಂದ ಉಜ್ಜೀವಿತವಾಗಿದೆ.**

**೨. ಅದಂ+ಅದಿರದೆ (ಹೆದರದೆ). ಪಯೋಧರ=ಮೇಘ.**

**೪. ಈ ಪದ್ಯದಲ್ಲಿ ಉಪವನಕ್ಕೆ ಶೋಭಾದಾಯಕವಾದ ವೃಕ್ಷಗಳ ಕೊಳಗಳ ಪಕ್ಷಿಗಳ ಸಮೃದ್ಧಿಯು ವರ್ಣಿತವಾಗಿದೆ.**

(5) ಮತ್ತು ಕಿನ್ನರದಂಪತಿಗಳನ್ನು ಹಿಂದಟ್ಟುವ ರಾಜನ ತ್ವರಾತಿಶಯವನ್ನು ತೋರಿಸಲು, ಕಾದಂಬರಿಯಲ್ಲಿ—

ಪಿಡಿದಪನೀಗಳೀಪಿಡಿಯುಲೆಯ್ದಿದನಾಪಿಡಿದಪ್ಪನೀಗಳಾ ।
ಪಿಡಿದನೆ ಕಿನ್ನರದ್ವಯಮನೆಂಬಿನೆಗಂ ಬಳಿಸಂದು ತನ್ನ ಸಂ ॥
ಗಡದವರುಂ ಪರಿಗ್ರಹಮುಮೆಯ್ತರಲಾರದೆ ಪಿಂದೆ ನಿಲ್ವಿನಂ ।
ಕಡುಪಿನೊಳಂದು ಬಿಟ್ಟನತಿಶೀಘ್ರದೆ ವಾಜಿಯನಾನೃಪೋತ್ತಮಂ ॥ ೧

ಎಂದು ಹೇಳಿರುವುದು.

(೬) ಮತ್ತು ನಾಯಿಕಾಸೌಂದರ್ಯವು ಮಿತ್ರವಿಂದಾಗೋವಿಂದನಾಟಕದಲ್ಲಿ—

ಅರಲಿಚನಿವಳಾನನಹಿಮ ।
ಕರನಂ ವಿರಚಿಸೆ ಬಳಿಕ್ಕೆ ಮುಗುಳಾದುದು ತಾ ॥
ಮರೆಯುದರೊತ್ತುವ ಮೊನೆಯೊಳ್ ।
ಪಿರಿದಾಯುಸಗೊಂಡು ಮುಂಡಿಸಿರ್ಕುಂ ಸತ್ಯಂ ॥ ೨

ಹೀಗೆ ವರ್ಣಿಸಲ್ಪಟ್ಟಿರುವುದು. ಈ ರೀತಿಯಾದ ಸಂದರ್ಭ ಕಲ್ಪನೆಯೇ ಉಕ್ತಿ ಚಮತ್ಕಾರವು.

ಮತ್ತು ಪಂಪರಾಮಾಯಣದಲ್ಲಿ—

ಕೆಡಿಸಿದನೇಕೆ ತಾವರೆಯನೀಮೊಗಮುಂ ಪಡೆದೇಕೆ ನೆಯ್ದಿಲಂ ।
ಕೆಡಿಸಿದನೀತೆರಂಬೊಳೆವ ಕಣ್ಬೊಣರಂ ಪಡೆದೇಕೆ ತುಂಬಿಯಂ ॥
ಕೆಡಿಸಿದನೀವಿನೀಳಕುಟಿಲಾಳಕಮುಂ ಪಡೆದೇಕೆ ಪದ್ಮಜಂ ।
ಕೆಡಿಸಿದನೀಕೆಯುಂ ಪಡೆದು ಜಂಗಮಕಲ್ಪಲತಾವಿಳಾಸಮುಂ ॥ ೩

ಎಂದು ವರ್ಣಿಸಿರುವುದರಲ್ಲಿ ಉಕ್ತಿಚಮತ್ಕಾರವಿಲ್ಲವೆ ಆಲೋಚಿಸಿ ನೋಡಿ.

ಮೇಲೆ ಅನುವಾದ ಮಾಡಿದ ಪದ್ಯಗಳಲ್ಲಿರುವ ಚಮತ್ಕಾರವು ಅಲಂಕಾರ ಮಿಶ್ರವಾಗಿಯೇ ಇದೆ. ಆದರಿಂದ ಉಕ್ತಿಭಂಗಿಯನ್ನು ಅಲಂಕಾರವೆಂದೇ ಗಣಿಸ ಕೂಡದು. ಅಲಂಕಾರದಲ್ಲಿ ಉಕ್ತಿಭಂಗಿಯಿದ್ದರೂ, ಉಕ್ತಿಭಂಗಿಯಲ್ಲಿ ಅಲಂಕಾರ ವಿದ್ದರೂ ಉಕ್ತಿಭಂಗಿಗೂ ಅಲಂಕಾರಕ್ಕೂ ಐಕ್ಯವನ್ನು ಹೇಳಕೂಡದು. ಅಲಂ ಕಾರವಿಲ್ಲದ ಉಕ್ತಿಭಂಗಿಯೂ ಇರಬಹುದು. ಉಕ್ತಿಭಂಗಿಯಿಲ್ಲದ ಅಲಂಕಾರವೂ

---

ಟಿ—೨. ಇವಳ ಮುಖಚಂದ್ರನ ಕಾಂತಿಯಿಂದ ಅರಲಿಚನ (=ಬ್ರಹ್ಮನ) ಆಸನವಾದ ಅಚೇತನವಾದ ತಾವರೆಯೂ ಕೂಡ ಮುಕುಳಿತವಾಯಿತೆಂದು ಕವಿಯ ಭಾವ.

ಇರಬಹುದು. ಆದುದರಿಂದ ಉಕ್ತಿಭಂಗಿಯನ್ನು ಅಲಂಕಾರಭಿನ್ನವಾಗಿ ಗಣಿಸುವುದು ಒಳ್ಳೆಯದು. ಅಲಂಕಾರಕ್ಕೆ “ ಚಮತ್ಕೃತಿಜನಕತ್ವಂ ” ಎಂಬ ಲಕ್ಷಣವನು ಹೇಳುವ ಪಕ್ಷದಲ್ಲಿ, ಉಕ್ತಿಭಂಗಿಯನ್ನು ವ್ಯಂಗ್ಯಾದಿಗಳಂತೆ ಅಲಂಕಾರದ ಪ್ರಭೇದವಾಗಿ ಸೇರಿಸಬೇಕಾಗುವುದು ; “ ಅಲಂಕೃತಿತ್ವಂ ” ಎಂಬ ಲಕ್ಷಣವನ್ನು ಕೊಡುವ ಪಕ್ಷದಲ್ಲಿ ಅಲಂಕಾರ ಭಿನ್ನವಾಗಿಯೇ ಗಣಿಸಬೇಕಾಗುವುದು. ಏವಂಚ ಉಕ್ತಿಭಂಗಿಯಲ್ಲಿ ಅಲಂಕಾರವಿದ್ದೇ ಇರಬೇಕೆಂಬ ನಿಯಮವಿಲ್ಲ; ಅಲಂಕಾರವಿಲ್ಲದ ಉಕ್ತಿಚಮತ್ಕಾರವೂ ಉಂಟು. ಉದಾಹರಣೆ :—

(1) ಬೆರಲಂ ಮಿಡಿಯಿಪ ಪುಳಕಾಂ।
ಕುರಮಂ ಪುಟ್ಟಿಸುವ ನೋಡೆ ತಲೆದೂಗಿಪ ಸುಂ॥
ದರಮೆನಿಪ ಕುಸುರಿವೆಸದಿಂ।
ದರಮನೆ ಮಾಳ್ಪುದು ಮಯಂಗಮತಿವಿಸ್ಮಯಮಂ ॥ ೧ ॥

( ಮಲ್ಲಿನಾಥಪುರಾಣಂ )

ಇದು ಅರಮನೆಯ ಸೌಂದರ್ಯವನ್ನು ವರ್ಣಿಸುವ ಪದ್ಯ. ಇದರ ಪೂರ್ವಾರ್ಧದಲ್ಲಿ ಯಾವ ಅಲಂಕಾರವೂ ತೋರಿಬರುವುದಿಲ್ಲ. ಆದರೂ ಉಕ್ತಿಚಮತ್ಕಾರವಿರುವುದು.

(2) ಅನ್ಯೋದಾಹರಣ—ಜಗನ್ನಾಥವಿಜಯದಲ್ಲಿ ಬಾಲಕೇಳೀವರ್ಣನೆ—

ಶಕಟವಿಮರ್ದಿ ನೀಂ ಮುಸಲಿ ಬಾರದ ಮುಂ ಕುಡಿ ಸಮ್ಮ ಹೇಮಘಂ।
ಟಿಕೆ ಘಣಿಲೆಂಬ ನಂದಿನಿಯ ಪಾಲಿದೆ ನೀಂ ಕುಡಿಯಲ್ಕೆ ನಿನ ಚೆಂ॥
ಡಿಕೆ ಬಳೆದಪ್ಪುದೆಂದಬಲೆ ನಂಬಿಸೆ ಪಾಲ್ಗುಡಿದೀಗಳೆಂಬ ಚೆಂ।
ಡಿಕೆಯೆನಿತುದ್ದವಾದುದೆನುತುಂ ಬೆಸಗೊಳ್ವ ಮುಕುಂದನೊಪ್ಪಿದಂ॥ ೨॥

ಇಲ್ಲಿ ಬಾಲಕೇಳಿಯ ನಿರೂಪಣಪ್ರಕಾರದಲ್ಲಿ ಏನೋ ಚಮತ್ಕಾರ ಕಂಡುಬಂದು

---

ಟಿಪ್ಪಣಿ—೧. ಮಿಡಿಯಿಪ, ಪುಟ್ಟಿಸುವ, ತಲೆದೂಗಿಪ, ಎನಿಪ ಎಂಬ ಕೃದಂತಗಳು ಕುಸುರಿವೆಸವೆಂಬುದನ್ನು ವಿಶೇಷಿಸುತ್ತವೆ. ಕುಸುರಿವೆಸ = ಕುಸುರಿ, ಸಣ್ಣ ಹೀಚು ಕಾಯಿಗಳಂತೆ ಮಾಡಿರುವ, + ಬೆಸ, ಕೆಲಸ. ಇಲ್ಲಿ ಬಾಹ್ಯಚೇಷ್ಟೆಗಳಿಂದ ವಿಸ್ಮಯಾವಿರ್ಭಾವವನ್ನು ಸೂಚಿಸಿರುವುದೇ ಉಕ್ತಿಚಮತ್ಕಾರ.

೨. ಹೇಮಘಂಟಿಕೆ ಘಣಿಲೆಂಬ = ಯಾವ ಧೇನುವಿನ ಕತ್ತಿನಲ್ಲಿರುವ ಚಿನ್ನದ ಸಣ್ಣ ಗಂಟೆಯು ಘಣಿಲ್ ಘಣಿಲೆಂದು ಶಬ್ದಿಸುತ್ತದೆಯೋ ಆ ನಂದಿನೀಧೇನುವಿನ. ಚೆಂಡಿಕೆ = ಜುಟ್ಟು.

ಮನಸ್ಸಿಗೆ ಇಂಪಾಗಿದೆ. ಪದ್ಯೈಕದೇಶದಲ್ಲಿ ಅಲಂಕಾರವನ್ನು ನಿರೂಪಿಸಬಹುದಾದರೂ ಆಪಾತತಃ ಯಾವ ಅಲಂಕಾರವನ್ನೂ ನಿರೂಪಿಸುವುದಕ್ಕಾಗುವುದಿಲ್ಲ.

(3) ಮತ್ತು ಶಿಶಿರಋತುವರ್ಣನೆಯಲ್ಲಿ ಪ್ರವೃತ್ತವಾಗಿರುವ ಈ ಪದ್ಯವನ್ನು ನೋಡಿ.

ತಳಿರೊಳ್ ಮುಚ್ಚಿಟ್ಟ ಕೂಸಂ ತೆಗೆದು ಶಬರಿ ನಿಶ್ಚೇಷ್ಟಮಾಗಿರ್ಪುದಂ ಕ।
ಣ್ಗಳ ನೀರಂ ತೀವಿ ಬೇಗಂ ತೊಡೆದು ಹಿಮಕಣಾನೀಕಮಂ ತೆಂಕುದಾಣಂ॥
ಗಳನಂಟಂಟಲ್ಲಿಯುಂ ಕಾಣದೆ ಹರಣಮನತ್ಯುಷ್ಣಮಂ ಸುಯ್ಯೆ ಸುಯ್ಯಿಂ।
ದಳೆ ಕೂಸೆಚ್ಚತ್ತು ಕಾರ್ಕಾಳೆಸೆ ತೊರೆದ ಕುಚಾಗ್ರಂಗಳಂ ನೀಡುತಿರ್ದಳ್॥

(ಕವಿಕುಂಜಲೀಲಾವತಿ)

ಈ ಪದ್ಯವನ್ನು ನೋಡುವಲ್ಲಿ ಉಕ್ತಿಚಮತ್ಕಾರದಿಂದಲೇ ಆನಂದ ಹುಟ್ಟಿತೆಂದು ಗೊತ್ತಾಗುವುದು. ಶಿಶಿರ ಋತುವಿನಲ್ಲಿ ಚಳಿಯು ಹೆಚ್ಚಿಗೆಯನ್ನು ತಿಳಿಯಿಸಬೇಕಾಗಿ, ಈ ರೀತಿಯು ಅಸಂಭವವಾದ ಸಂದರ್ಭವನ್ನು ಕವಿಯು ಕಲ್ಪಿಸಿರುವನು. ಶಬರಿಯು ಬೇಡಿತಿಯಾದುದರಿಂದ ಶೀತಕಾಲದಲ್ಲಿ ತಳಿರನ್ನು ಮುಚ್ಚುವುದರಿಂದ ಬೆಚ್ಚಗಾಗುವುದಿಲ್ಲ, ಚಳಿಯೇ ಹೆಚ್ಚುವುದೆಂದು ತಿಳಿವಷ್ಟು ಅರಿಯದವಳಾಗಿದ್ದಳು. ಅವಳು ಮಗುವಿನಲ್ಲಿ ಉಸಿರಾಡುವ ಸ್ಥಲಗಳಲ್ಲಿ ಚಲನ ಕಾಣದೆ ಅದು ಸತ್ತುಹೋಯಿತೆಂದು ನಂಬಿ ದುಃಖದಿಂದ ನಿಟ್ಟುಸಿರನ್ನು ಬಿಡಲು, ಆ ಉಸಿರಿನ ಶಾಖದಿಂದ ಕೂಸೆಚ್ಚತ್ತು ಅಳುವುದಕ್ಕೆ ತೊಡಗಿತೆಂದು ಕವಿಯು ಹೇಳಿರುವನು. ಶೀತಕಾಲದಲ್ಲಿ ಶೀತದಿಂದ ಕೈಕಾಲುಗಳು ಬೆರತು ಸ್ವಾಧೀನ ತಪ್ಪಿಹೋಗುವುವು, ಶಾಖದಿಂದ ಪುನಃ ಸ್ವಾಧೀನಕ್ಕೆ ಬರುವುವೆಂಬ ಲೋಕಾನುಭವವನ್ನು ಚಮತ್ಕಾರವಾಗಿಯೂ ವಕ್ರವಾಗಿಯೂ ತಿಳಿಸಿರುವನು.

ಈ ಪದ್ಯದಲ್ಲಿಯೂ ಹಿಂದಣ ಪದ್ಯದಲ್ಲಿರುವಂತೆ ಅಲಂಕಾರವೂ ವ್ಯಂಗ್ಯವೂ ಕಂಡುಬಂದರೂ, ನಿರೂಪಣ ಕ್ರಮದಲ್ಲಿ ಉಕ್ತಿಚಮತ್ಕಾರವಿಲ್ಲದೆ ಇಲ್ಲ.

ಮತ್ತೊಂದುದಾಹರಣ—

(4) ಗಂಡನನೊರ್ವಳೂರ್ವಶಿಗೆ ಗಂಗೆಗೆ ಗೋಪಿಗೆ ಕೊಟ್ಟರೆಂದೊಡಾ।
ಪೆಂಡಿರ ರೂಪುಮಂ ಸೊಬಗುಮಂ ಭವಮಂ ಪೆಸರ್ಗೊಳ್ವುದೇ ಮನಂ॥
ಗೊಂಡಳನಂಗನಂ ರತಿಯೆನಲ್ ಚದುರೆತ್ತಣದಾಕೆಗೆಂದು ಕ।
ಣ್ಕೊಂಡ ವಿಲಾಸದಿಂ ನಗುವುದಲ್ಲಿಯ ವಾರವಿಲಾಸಿನೀಜನಂ॥೩॥

(ಮಲ್ಲಿನಾಥಪುರಾಣಂ)

ಈ ಪದ್ಯವು ವಾರನಾರಿಯರ ಸೌಂದರ್ಯಾತಿಶಯವನ್ನು ವರ್ಣಿಸುವುದು. ಇಲ್ಲಿ ಉಕ್ತಿಚಮತ್ಕಾರವೇ ಮುಖ್ಯಸಂಗತಿ. ಇಲ್ಲಿ ಕವಿಯು ತನ್ನ ಆಶಯವನ್ನು ನೆಟ್ಟಗೆ ಸ್ಪಷ್ಟವಾಗಿ ಹೇಳಿಲ್ಲ, ಮರೆಸಿಯೇ ಹೇಳಿರುವನು. ಹೇಳಿರುವ ರೀತಿಯು ಆಹ್ಲಾದಜನಕವಾಗಿದೆ. ಇಲ್ಲಿ ವ್ಯಂಗ್ಯವೂ ಇದೆ. ಆ ವ್ಯಂಗ್ಯಕ್ಕೆ ಉಕ್ತಿಭಂಗಿಯು ಆಶ್ರಯ ಕೊಟ್ಟಿದೆ. ಇವು ಒಂದೊಂದೇ ಆಹ್ಲಾದಜನಕವು. ಅವೆರಡೂ ಸೇರಿರುವಾಗ ಸುಖಾತಿಶಯಕ್ಕೇನುಕಡಮೆ? ಒಬ್ಬಳು ಗಂಡನನ್ನು ಊರ್ವಶಿಗೂ, ಒಬ್ಬಳು ಗಂಗೆಗೂ, ಒಬ್ಬಳು ಗೋಪಿಗೂ ಕೊಟ್ಟರು ಎಂದರೆ, ಅವರ ಸೌಂದರ್ಯ ಸೌಭಾಗ್ಯಾಭಿಜಾತ್ಯಗಳನ್ನು ಏನೆನುತ ಹೊಗಳುವುದು? ರತಿಯೇ ಶರೀರವಿಲ್ಲದ ಅನಂಗನನ್ನು ಒಪ್ಪಿ ಪತಿಯನ್ನಾಗಿ ವರಿಸಿದಳೆಂದರೆ, ಅವಳ ಚಾತುರ್ಯವೆಷ್ಟರದು? ಎಂದು ಆ ಪುರದ ವೇಶ್ಯಾಸ್ತ್ರೀಯರು, ತಮ್ಮ ವಿಲಾಸಗರ್ವದಿಂದ ನಗುತ್ತಿದ್ದರು—ಎಂದು ಪದ್ಯಾರ್ಥ. ಮಹಾರೂಪವತಿಯಾದ ಶಚೀದೇವಿಯೇ ಪತ್ನಿಯಾಗಿರುವಾಗ ಇಂದ್ರನು ಊರ್ವಶಿಯಲ್ಲಿ ಅನುರಕ್ತನಾದರೆ ಅವಳ ರೂಪದಲ್ಲಿ ಅತಿಶಯವೇನು? ಪರ್ವತರಾಜನ ಮಗಳಾದ ಗೌರಿಯು ಇರುವಾಗಲೇ ಅರ್ಧನಾರೀಶ್ವರನಾದ ಈಶ್ವರನೂ ಕೂಡ ಗಂಗೆಯನ್ನು ತಲೆಯಲ್ಲಿ ಮರೆಸಿಟ್ಟುಕೊಂಡು ಲಾಲಿಸುತ್ತಿದ್ದನಾದರೆ, ಪಾರ್ವತಿಯು ಸೌಭಾಗ್ಯದಲ್ಲಿ ಅತಿಶಯವೇನು? ಕ್ಷೀರಸಾಗರೋದವಳಾದ ಲಕ್ಷ್ಮಿಯನ್ನೂ ಲಕ್ಷ್ಯಮಾಡದೆ, ಶ್ರೀ ಕೃಷ್ಣನು ಒಬ್ಬ ಗೊಲ್ಲಗಿತಿಯಲ್ಲಿ ಅನುರಕ್ತನಾದರೆ, ಅವಳ ಹುಟ್ಟಿನಲ್ಲಿ ಮಹಿಮೆಯೇನು? ಐಹಿಕ ಸುಖವನ್ನು ಅನುಭವಿಸಲು ಅನಂಗನನ್ನು ಪತಿಯಾಗಿ ವರಿಸಿದ ರತಿಯು ಚಾತುರ್ಯವು ಒಂದು ಚಾತುರ್ಯವೇ? ತಮ್ಮಲ್ಲಿ ಅನುರಕ್ತರಾಗಿ ಬಂದವರಾದರೋ ಹಾಗಲ್ಲ; ತಮ್ಮನ್ನು ಎಂದೆಂದಿಗೂ ಬಿಟ್ಟುಹೋಗರು. ತಮ್ಮ ವಿಲಾಸವಂಥದು—ಎಂದು ಮೆರೆಯುತ್ತಿದ್ದರೆಂದು ಪದ್ಯಾಭಿಪ್ರಾಯ. ಈ ವಾರವಿಲಾಸಿನಿಯರು ಶಚೀ ಗೌರೀ ಲಕ್ಷ್ಮೀ ರತಿಗಳಿಗಿಂತಲೂ ಮೇಲಾಗಿದ್ದರೆಂದು ವಾಚ್ಯಾರ್ಥ.

ಹೀಗಿರಲು ಉಕ್ತಿಭಂಗಿಯನ್ನಂಗೀಕರಿಸದೆ ಅಭಿಪ್ರಾಯವನ್ನು ಸಾಮಾನ್ಯವಾದ ರೀತಿಯಲ್ಲಿ ತಿಳಿಸಿದರೆ ಅಭಿಪ್ರಾಯವು ಮನಸ್ಸಿನಲ್ಲಿ ಅಷ್ಟು ಚೆನ್ನಾಗಿ ಹಿಡಿಯುವುದಿಲ್ಲ. ಮರೆಸಿ ಮರೆಸಿ ಅಭಿಪ್ರಾಯವನ್ನು ತಿಳಿಸುವುದರಲ್ಲಿ ಹೆಚ್ಚಾದ ಫಲವು ಕಂಡುಬರುವುದು. ಅಭಿಪ್ರಾಯವು ತಿಳಿದಂತಾಗಬೇಕು, ಆದರೆ ತಿಳಿಯಬಾರದು. ಬಹುಕಾಲ ಬುದ್ಧಿಗೆ ಕೆಲಸ ಕೊಟ್ಟರೇನೆ ಅಭಿಪ್ರಾಯವು ತಿಳಿಯಬೇಕು. ಹೀಗೆ ಹೇಳುವುದರಲ್ಲಿ ಅಭಿಪ್ರಾಯವು ಮನಸ್ಸಿನಲ್ಲಿ ಖಚಿತವಾಗಿ ಸುಖಾಧಿಕ್ಯವನ್ನು ಕೊಡು

ವುದು. ಶ್ರಮಪಟ್ಟು ಸಂಪಾದಿಸಿದ ವಸ್ತುವಿನಲ್ಲಿ ಅಭಿಮಾನ ಹೆಚ್ಚು. ಅದರಲ್ಲಿ ಸುಖವೂ ಹೆಚ್ಚು. ಆದುದರಿಂದ ಕವಿಗಳು ಕ್ರಿಯಾಗೋಪನ, ಕರ್ತೃಗೋಪನ, ವಕ್ರೋಕ್ತಿ, ಯಮಕ, ಗತಪ್ರತ್ಯಾಗತ, ಅಂತರ್ಲಾಪಿ, ಬಹಿರ್ಲಾಪಿ ಇತ್ಯಾದಿಗಳನ್ನುಳ್ಳ ಪದ್ಯಗಳನ್ನು ಬರೆದು ಅಲ್ಲಲ್ಲಿ ಸಂದರ್ಭಾನುಸಾರ ಉಚಿತ ಸ್ಥಳಗಳಲ್ಲಿ ಸೇರಿಸುವರು. ಅಂಥವುಗಳಲ್ಲಿ ಆನಂದವು ಹೆಚ್ಚಾಗುವುದರಲ್ಲಿ ಸಂಶಯವಿಲ್ಲ. ಅಂಥವುಗಳು ಉಪ್ಪಿನಕಾಯಿಯಂತೆ ಭುಜಿಸುವಾಗ ರೋಚಕವಾಗದೆ ಇರವು. ಮಕ್ಕಳು ಮೊದಲಾಗಿ ಎಲ್ಲರಿಗೂ ಒಗಟುಗಳಲ್ಲಿ ಇದಕ್ಕೋಸ್ಕರಲೇ ಆಶೆ ಹೆಚ್ಚು. ಸಮಸ್ಯೆಗಳೂ ಈ ತೆರದ ವರ್ಣನೆಗಳೇ ಆಗಿರುವುವು.

ಲಯಬದ್ಧವಾಗುವ ಹಾಗೆ ಪದಗಳನ್ನು ಸೇರಿಸುತ್ತ ಬಂದರೆ ಹಿತವುಂಟಾಗುವುದು. ಆಕಡೆ ಸಂಗೀತವು ಸಾಹಿತ್ಯಕ್ಕೆ ಸಹಾಯಮಾಡಿರುವುದು. ಒಂದೊಂದೇ ಹಿತಜನಕವಾಗಿರುವಾಗ ಅವೆರಡೂ ಒಂದುಕಡೆ ಸೇರಿಬಂದರೆ ಆನಂದವು ಹೆಚ್ಚದೆ ಇರುತ್ತದೆಯೋ ? ಪ್ರಾಯಶಃ ಕಾವ್ಯಗಳು ಛಂದೋಬದ್ಧವಾಗಿಯೇ ಇರುವುವು. ಛಂದಸ್ಸು ಲಯವನ್ನಾಶ್ರಯಿಸಿರುವುದು. ಆದುದರಿಂದ ಶ್ರೇಷ್ಠವಾದ ಅಭಿಪ್ರಾಯಗಳನ್ನು ಛಂದೋಬದ್ಧವಾಗಿಯೂ ಇಲ್ಲವೆ ಷಾಡುಂಗಬ್ಬವಾಗಿಯೂ ಇಲ್ಲವೇ ರಗಳೆಗಳಾಗಿಯೂ ಕವಿಗಳು ಬರೆವರು. ಪ್ರಾಸಬದ್ಧವಾಗಿಯೂ, ಲಯಬದ್ಧವಾಗಿಯೂ, ಹಾಡುವುದಕ್ಕೆ ಹಿತವಾಗುವಂತೆ ಮೃದುಶೈಲಿಯುಳ್ಳದಾಗಿಯೂ, ಉತ್ತಮವಾದ ಅಭಿಪ್ರಾಯವುಳ್ಳದಾಗಿಯೂ, ಇರುವ ಕಾವ್ಯವು ಸರ್ವೋತ್ತಮವಾದ ಕಾವ್ಯವೆಂಬುದು ಘಂಟಾಘೋಷವಾಗಿದೆ.

ಪದ್ಯಾಕ್ಷರಗಳು ಪದ್ಮ, ಖಡ್ಗ, ಮುರಜ, ಚಕ್ರಾದ್ಯಾಕಾರಗಳಾಗಿ ವಿನ್ಯಾಸ ಹೊಂದುವುವಾಗಿದ್ದರೆ, ಬಂಧವೆಂದು ಹೆಸರು. ಅವುಗಳು ವಿಸ್ಮಯ ಜನಕಗಳೆಂದು ಹೇಳಬೇಕಾಗಿಯೇ ಇಲ್ಲ. ಆಕಡೆ ರೂಪಸೌಂದರ್ಯವು ಸಾಹಿತ್ಯಕ್ಕೆ ಸಹಾಯ ಮಾಡಿದೆ. ಹೀಗಿರಲು ನಾಮೋದ್ಧಾರ, ವಿಷಯೋದ್ಧಾರವಾಗುವ ಬಂಧವು ಚಿತ್ರಕವಿತೆಯಲ್ಲಿ ಅತ್ಯುತ್ತಮವಾಗಿ ಪಾಮರಪ್ರಾಜ್ಞತಾರತಮ್ಯವಿಲ್ಲದೆ ಎಲ್ಲರ ಶ್ಲಾಘನೆಗೆ ಪಾತ್ರವಾಗಿಯೂ ಇರುವುದರಲ್ಲಿ ಏನತಿಶಯವು ?

ಹೀಗಿರುವುದರಿಂದ ಕವಿಗಳು ಸಾಧ್ಯವಾದಮಟ್ಟಿಗೆ ಇವುಗಳನ್ನೆಲ್ಲಾ ತರುವುದರಲ್ಲಿ ಯತ್ನಿಸುವರು. ಇವೂ ಒಂದು ವಿಧವಾದ ಸಂಕೇತವು.

ಲೋಕದ ವಸ್ತುಗಳ ಸಹಜವಾದ ಸ್ಥಿತಿಗೂ, ಕಾವ್ಯಗಳಲ್ಲಿ ಕವಿಗಳಿಂದ ನಿರೂಪಿತವಾಗುವ ಅದೇ ವಸ್ತುಗಳ ಸ್ಥಿತಿಗೂ, ಬಹಳ ವ್ಯತ್ಯಾಸವು ಕಂಡು ಬರುತ್ತದೆ. ಆ ವ್ಯತ್ಯಾಸವು ಸಹಜವು; ಆರೋಪಿತವಾದುದಲ್ಲ. ಅಂಥ ವ್ಯತ್ಯಾಸವು ಸ್ವಭಾವವಾಗಿಯೇ ಆಗಬೇಕು. ಇದ್ದುದನ್ನು ಇದ್ದಹಾಗೆಯೇ ತಿಳಿಯಿಸಬೇಕೆಂದು ಯತ್ನಿಸಿದರೂ ಆ ವ್ಯತ್ಯಾಸವನ್ನು ಬಿಟ್ಟು ಹೇಳಲಾಗುವುದಿಲ್ಲ. ಹೀಗಿರಲು ಆ ವ್ಯತ್ಯಾಸವೆಂಥದೆಂಬುದನ್ನು ತಿಳಿಯಲೇ ಬೇಕು. ಆ ವ್ಯತ್ಯಾಸವು ತಿಳಿಯದಿದ್ದರೆ, ಕಾವ್ಯದ ಮಹಿಮೆಯೇ ತಿಳಿಯದೆ ಹೋದಂತಾಗುವುದು. ಆ ವ್ಯತ್ಯಾಸವನ್ನು ನಾಲಗೆಯು ತಿಳಿಸಲಾರದು; ಅನುಭವವೇ ತಿಳಿಸಬೇಕು. ಬೆಟ್ಟವನ್ನು ದೂರದಿಂದ ನೋಡುವುದಕ್ಕೂ ಹತ್ತಿರದಿಂದ ನೋಡುವುದಕ್ಕೂ ವ್ಯತ್ಯಾಸವಿದೆ. ಒಂದು ಪದಾರ್ಥವನ್ನು ಹಾಗೆಯೇ ನೋಡುವುದಕ್ಕೂ ಅದರ ಪ್ರತಿಫಲನವನ್ನು ಕನ್ನಡಿಯಲ್ಲಿ ನೋಡುವುದಕ್ಕೂ ವ್ಯತ್ಯಾಸವಿದೆ. ಅದೇವಿಧವಾದ ವ್ಯತ್ಯಾಸವು ವಸ್ತುಸ್ಥಿತಿಗೂ ಕಾವ್ಯದ ವರ್ಣನೆಗೂ ಉಂಟು. "ದೂರದ ಬೆಟ್ಟ ನುಣ್ಣಗೆ" ಎಂಬ ಗಾದೆಯಲ್ಲಿರುವ "ನುಣ್ಣಗೆ" ಎಂಬ ಪದವು ದೂರದಲ್ಲಿ ನೋಡುವುದರ ಅತಿಶಯವನ್ನು ಸೂಚಿಸುವುದು. ಬೆಟ್ಟವನ್ನು ಹತ್ತಿರದಲ್ಲಿ ನೋಡಿದಾಗ ಅದರಲ್ಲಿರುವ ಬಂಡೆಗಳೂ, ಮುಳ್ಳುಗಿಡಗಳೂ, ಹಳ್ಳತಿಟ್ಟುಗಳೂ, ಹಂಚಿಕಡ್ಡಿಯ ಪೊದರುಗಳೂ ಇನ್ನೂ ಇಂಥ ಮನಸ್ಸಿಗೆ ಮೋಹಕವಾಗದ ಪದಾರ್ಥಗಳೇ ಕಂಡುಬರುವುವು. ಆದುದರಿಂದಾಗ ಬೆಟ್ಟವು ಅಷ್ಟು ಆಹ್ಲಾದಕರವಾಗಿರುವುದಿಲ್ಲ. ದೂರದಿಂದ ನೋಡಿದಾಗಲೋ ಆ ನೀರಸವಾದ ಪದಾರ್ಥಗಳೇ ಒಂದಕ್ಕೊಂದು ಶೋಭಾದಾಯಕಗಳಾಗಿ ಬೆಟ್ಟದ ಸಮುದಾಯ ಶೋಭೆಗೆ ಕಾರಣವಾಗುವುವು. ಅದುದರಿಂದಲೇ ಬೆಟ್ಟವು ಆಹ್ಲಾದಕವಾಗಿ ಆಗುವುದು. ಅಥವಾ, ದೂರದೃಷ್ಟಿಯೆಂಬ ಪದಾರ್ಥದಿಂದ ಸ್ವಭಾವತಃ ಒರಟೊರಟಾಗಿ, ಗಾತ್ರದಲ್ಲಿ ಹೆಚು ಕಡಮೆಯುಳ್ಳವುಗಳಾಗಿ, ಮೋಹವನ್ನುಂಟುಮಾಡುವ ಗುಣಲೇಶವನ್ನೂ ಹೊಂದದ, ಬಂಡೆ ಮೊದಲಾದ ಪದಾರ್ಥಗಳೂ ಕೂಡ ನುಣುಪಾಗಿಯೂ, ಪರಸ್ಪರ ಶೋಭಾದಾಯಕವಾಗಿ ಒಟ್ಟಿಗೆ ರಮಣೀಯವಾಗಿಯೂ, ಥಳಥಳ್ಯವುಳ್ಳವುಗಳಾಗಿಯೂ ಮಾಡಲ್ಪಡುವುದೇ ಬೆಟ್ಟದ ಆಹ್ಲಾದಕತ್ವಕ್ಕೆ ಕಾರಣವಾಗಿರಬಹುದು. ಹೀಗೆಯೇ ಕನ್ನಡಿಯ ಚೌಕಟ್ಟಿನಲ್ಲಿಟ್ಟ ಚಿತ್ರಪಟವೂ ಕನ್ನಡಿಯ ತೇಜಸ್ಸಿನಿಂದ ಸೌಂದರ್ಯದ ಹೆಚ್ಚಿಗೆಯನ್ನು ಹೊಂದುವುದು. ಬರಿಯ ಚಿತ್ರಪಟದಲ್ಲಿಯಾದರೋ ಬಣ್ಣದಲ್ಲಿ ಹೆಚ್ಚುಕಡಮೆ, ಹುಳುಕು, ಕೊಳೆ, ಚಿತ್ತು, ಭಾವದಲ್ಲಿ ಓರೆ

ಮುಂತಾದುವು, ಚೆನ್ನಾಗಿ ಕಾಣಬರುವುವು. ಅಂಥ ದೋಷಗಳು ಕನ್ನಡಿಯ ಮೂಲಕವಾಗಿ ನೋಡಿದ ಚಿತ್ರಪಟದಲ್ಲಿ ಪ್ರಾಯಶಃ ಕಂಡುಬರುವುದಿಲ್ಲ. ಕನ್ನಡಿಗೆ ಆ ಚಿತ್ರದಲ್ಲಿ ಇದ್ದ ದೋಷಗಳನ್ನು ತನ್ನ ತೇಜಸ್ಸಿನಿಂದ ಮರಸಿ ತನ್ನ ಥಾಳಥಳ್ಯವನ್ನು ಕೊಟ್ಟು ಅದರ ಶೋಭೆಯನ್ನು ಹೆಚ್ಚಿಸುವುದು ಗುಣವಾಗಿದೆ. ಇದನ್ನು ಕಂಡಲ್ಲವೆ ಜನಗಳು ಗೊಂಬೆ, ಚಿತ್ರಪಟ, ಕಾಗದದ ಹೂ, ಇಂಥ ಅತಿಶಯಪದಾರ್ಥಗಳನ್ನು ಕನ್ನಡಿಯ ಪೆಟ್ಟಿಗೆಯಲ್ಲಿಟ್ಟು ನೋಡುವರು; ಇಲ್ಲವೇ ಅವುಗಳ ಪ್ರತಿಫಲನವು ಬೀಳುವಹಾಗೆ ಕನ್ನಡಿಗಳನ್ನು ಎದುರುಬದರು ಕಟ್ಟುವರು. ಕನ್ನಡಿಯ ಮೂಲಕ ನೋಡುವುದರಲ್ಲಿ ಸಂತೋಷ ಹೆಚ್ಚುತ್ತದೆ, ಎಂಬ ವಿಷಯವು ಎಲ್ಲರಿಗೂ ತಿಳಿದೇ ಇದೆ. ಇದಕ್ಕಾಗಿಯೇ ದೇವಸ್ಥಾನಗಳಲ್ಲಿಯೂ ರಾಜಾಸ್ಥಾನಗಳಲ್ಲಿಯೂ ದೊಡ್ಡ ದೊಡ್ಡ ನಿಲುಗನ್ನಡಿಗಳನ್ನು ಕಟ್ಟುವರು.

ಒಂದು ವಸ್ತುವನ್ನು ಕನ್ನಡಿಯ ಮೂಲಕ ನೋಡುವುದರಲ್ಲಿಯೂ, ಬಿಟ್ಟವನ್ನು ದೂರದಲ್ಲಿ ನೋಡುವುದರಲ್ಲಿಯೂ ಹೇಗೋಹಾಗೆಯೇ ಲೋಕದ ವಸ್ತುಗಳ ಸ್ಥಿತಿಯನ್ನು ಕಾವ್ಯವೆಂಬ “ಶಬ್ದಮುಕುರ” ದಲ್ಲಿ ನೋಡುವುದರಲ್ಲಿ ಸೌಮ್ಯತೆಯೂ ಆನಂದವೂ ಹೆಚ್ಚುವುವು. ಲೋಕದಲ್ಲಿ ವಸ್ತುಗಳ ಸಹಜವಾದ ಸ್ಥಿತಿಗಳು ಮನಸ್ಸನ್ನು ಕಾವ್ಯಮುಕುರದಲ್ಲಿ ಪ್ರತಿಫಲಿತವಾದಾಗ ಸೆಳೆಯುವಷ್ಟು ಸಹಜವಾಗಿ ಸೆಳೆಯಲಾರವು. ಹಾಗೆಂದರೆ, ವಸ್ತುವನ್ನು ಪ್ರತ್ಯಕ್ಷವಾಗಿ ನೋಡುವುದಕ್ಕಿಂತ ಕಾವ್ಯದ ಮೂಲಕ ಪರಿಚಯಮಾಡಿದರೆ ಅದರ ಸೌಮ್ಯತೆಯೂ ಆಹ್ಲಾದವೂ ಹೆಚ್ಚುವುವೆಂದು ಹೇಳಿದಹಾಗಾಯಿತು. ಗಿರಿ, ನದಿ, ತೋಟ, ಕಣಿವೆ, ನಾರಂಗ-ಮೊದಲಾದ ಮನೋಹರವಾದ ಪದಾರ್ಥಗಳನ್ನು ಪದೇಪದೇ ಸಾಕ್ಷಾತ್ತಾಗಿ ನೋಡುವ ಅನುಕೂಲ್ಯವಿದ್ದವರೂ ಕೂಡ ಅವನ್ನು ಬಿಟ್ಟು ಕಾವ್ಯಮೂಲಕವಾಗಿಯೇ ಸಾಕ್ಷಾತ್ಕಾರ ಮಾಡಿಕೊಳ್ಳಲು ಯತ್ನಿಸುತ್ತಿರುವುದೇ ಇದಕ್ಕೆ ಸಾಕಾದ ನಿದರ್ಶಕವಾಗಿದೆ. ಜಲಪಾತವನ್ನೂ ಕೂಡ ಎರಡಾವೃತ್ತಿ ನೋಡಿದರೆ ಮೂರನೆಯಾವೃತ್ತಿ ನೋಡಬೇಕೆಂಬ ಆಶೆ ಬಹುಶಃ ಹುಟ್ಟುವುದಿಲ್ಲ. ಕಾವ್ಯರಸಜ್ಞನಿಗೆ ಆ ಜಲಪಾತದ ವರ್ಣನೆಯನ್ನು ಓದುವುದರಲ್ಲಿ ತೃಪ್ತಿಯೇ ಉಂಟಾಗುವುದಿಲ್ಲ; ಪದೇಪದೇ ಓದುತ್ತಲೇ ಇರುವನು. ವಾಲ್ಮೀಕಿ ಕೃತವಾದ ಶ್ರೀ ರಾಮಾಯಣದಲ್ಲಿರುವ ಪಂಚವಟೀವರ್ಣನೆಯು ಯಾವ ರಸಜ್ಞನಿಗೆತಾನೆ ಬೇಸರಿಕೆಯನ್ನುಂಟುಮಾಡೀತು? ಇಪ್ಪತ್ತನೆಯ ಸಲ ಓದುವಾಗಲೂ “ನವಂ ನವಮಿವಾಭಾತಿ” ಎನ್ನುವಹಾಗೆ ಹೊಸ

ಹೊಸದಾಗಿಯೇ ಕಂಡುಬರುವುದೇಹೊರತು ಹಿಂದೆ ಅನುಭವಿಸಿದುದೆಂಬ ಅಭಿಪ್ರಾಯವೂ ಅದರಲ್ಲಿ ಬೇಸರಿಕೆಯೂ ಹುಟ್ಟುವುದಿಲ್ಲ. ಇದೇ ಅವುಗಳಿಗಿರುವ ವ್ಯತ್ಯಾಸವು. ಸನಿದರ್ಶಕವಾಗಿ ವಿಷಯಗಳನ್ನು ನಿರೂಪಿಸಿದರಲ್ಲದೆ ವಿಷಯವು ಹೃದ್ಯವಾಗದು ಎಂದು ಶಾಸ್ತ್ರಕಾರರು ಹೇಳುವುದರಿಂದ ಈ ಕೆಳಗಿನ ಉದಾಹರಣೆಗಳನ್ನು ಕೊಟ್ಟಿರುವೆನು.

ಚಂದ್ರಪ್ರಭಪುರಾಣದಲ್ಲಿ ಬಾಲಲೀಲೆಯ ವರ್ಣನೆ:—

೧. "ಅನಿಮಿತ್ತಂ ಪನೆಗಳ್ ಪಳಚ್ಚನೆಸೆವನ್ನಂ ಮಂದಹಾಸಪ್ರಕಾ।
ಶನಮಂ ಮುದ್ದುಮೊಗಕ್ಕೆ ತಂದು ಪರಿತಂದಪ್ಪಪ್ಪೆನುತ್ತಪ್ಪಿ ಪಿಂ॥
ದನೆ ಪೋಕ್ಕೊಯ್ಯನಡಂಗಿ ದಾಯೆಸುತೆ ಮತ್ತೆಯ್ತಂದು ಮುಂಡಾಡಿ ಭೂ।
ಪನುಮಂ ದೇವಿಯುಮಂ ಪ್ರಮೋದರಸದೊಳ್ಳೋಂಕಾಡಿಪಂ ನಂದನಂ॥"

ಇಲ್ಲಿ ಹೇಳಿರುವ ಸಂದರ್ಭವು ನಮ್ಮಲ್ಲಿ ಅನೇಕರಿಗೆ ಅನುಭವಕ್ಕೆ ಬಂದಿದೆ. ಅನುಭವಿಸಿದ ವೇಳೆಯಲ್ಲಿ ಇಷ್ಟು ಆನಂದವು ಉಂಟಾಯಿತೆ ಹೇಳಿ? ಖಂಡಿತವಾಗಿ ಉಂಟಾಗಲಿಲ್ಲ. ಏಕೆ? ಆಗ ನಾವು ಸುಖವನ್ನು ಅನುಭವಿಸದೆ ಇಲ್ಲ. ಅನುಭವಿಸುತ್ತೇವೆ. ಆದರೂ ಅನುಭವಿಸುತ್ತೇವೆಂಬ ಜ್ಞಾನವು ಆಗ ನಮಗೆ ಇರುವುದಿಲ್ಲ; ಅತ್ತಕಡೆ ನಮ್ಮ ಗಮನವೂ ಇರುವುದಿಲ್ಲ. ಈಗಲಾದರೋ ಕವಿಗಳು ನಿರೂಪಿಸುವುದರ ಮೂಲಕ ನಮ್ಮ ಆ ಅನುಭವವನ್ನು ಪುನಃ ಮನಸ್ಸಿಗೆ ತರುವರು; ಆದರಿಂದ ಸುಖವು ಸ್ಮರಣೆಗೆ ಬರುವುದು. ಆ ಸ್ಮರಣೆಯಲ್ಲಿ ಅನುಭವಿಸುತ್ತೇವೆ ಎಂಬ ಜ್ಞಾನವೂ ಸೇರಿರುವುದು. ಆದುದರಿಂದ ಆ ಸ್ಮರಣೆಯು ಆ ಆನಂದವನ್ನು ಹೆಚ್ಚಿಸುವುದು. ವಸ್ತುವಿನ ಸಾಕ್ಷಾದನುಭವವೇಳೆಗಿಂತ ಸ್ಮರಣಾನುಭವವೇಳೆಯು ಅತಿಶಯಾನಂದದಾಯಕವೆಂದು ಎಲ್ಲರೂ ಹೇಳುವರು. ನಾವೇ ಇಂಥ ಮಕ್ಕಳಾಟಿಕೆಯನ್ನು ನೋಡಿದರೂ ಇಷ್ಟು ಆನಂದವುಂಟಾಗಲಾರದು. ಕವಿಗಳ ಸಾಮರ್ಥ್ಯವೇ ಇದು. ಕವಿಗಳು ಅಂಥ ಸಂದರ್ಭವನ್ನೇ ಜೋಡಿಸಿ ಶಬ್ದಮುಕುರದಲ್ಲಿ ನಮ್ಮ ಎದುರಿಗೆ ನಿಲ್ಲಿಸುವರು. ಲೋಕಪರಿಚಯವೆಳ್ಳಷ್ಟೂ ಇಲ್ಲದವನಿಗೆ ಕಾವ್ಯವು ಕಿವುಡನಿಗೆ ಕಿನ್ನರಿಯಂತೆ, ಗೂಗೆಗೆ ಸೂರ್ಯನಂತೆ ವ್ಯರ್ಥವು. ಕುರುಡನು ಚಿತ್ರಪಟವನ್ನು ಹಾಗೆಯೇ ನೋಡುವುದಕ್ಕೂ ಕನ್ನಡಿಯ ಚೌಕಟ್ಟಿನಲ್ಲಿ ಇಟ್ಟು ನೋಡುವುದಕ್ಕೂ ಭೇದವನ್ನು ಎಂದೂ ಅರಿಯನು. ಹಾಗೆಯೇ ಸುಖತಾರತಮ್ಯಜ್ಞಾನವಿಲ್ಲದವನು ಕಾವ್ಯದ ಸೊಗಸನ್ನು ಎಂದಿಗೂ ಅರಿಯಲಾರನು. ಅದಿರಲಿ. ಸ ।ರಾಮಾಯಣದಲ್ಲಿನ ಈ ಎಮ್ಮೆಯ ಮುಂದೆಯ ವರ್ಣನೆಯನ್ನು ಓದಿ ನೆ

೨. " ಪಸುರ್ವುಲ್ಲಂ ಮೇದು ಸಂದೊಂದೆಡೆಯೊಳಮೊಡಲಿಂಬಿಲ್ಲೆನಲ್ ಕೊರ್ಬಿಕೆಚ್ಚಲ್।
ಕುಸಿವನ್ನಂ ಬೀಗಿ ಪಾಲಂಪಿರಿವಡೆ ಮೊಲೆಯಿಂ ವತ್ಸಪೀತಾವಶೇಷಂ ॥
ಪೊಸಗಾರೊಳ್ತೂರಲೊಳ್ ಕಣ್ಣರೆಮುಗುಳ್ದಿರೆ ಸೃಕ್ವಂಗಳಿಂ ಸೂಸೆ ಫೇನ!
ಪ್ರಸರಂ ಮೆಲ್ಕೊತ್ತುತುಂ ನಿಂದುದು ವನಮಹಿಷೀವೃಂದಮಾನಂದದಿಂದಂ ॥

ಇಲ್ಲಿ ವರ್ಣಿಸಿರುವಂತೆ ಕಾಡಲ್ಲಿ ತೂರಲ ಮಳೆಯಲ್ಲಿ ಮೆಲುಕುಹಾಕುತ್ತಿರುವ ಮಹಿಷೀವೃಂದವನ್ನು ಸಾಕ್ಷಾತ್ತಾಗಿ ನೋಡದಿದ್ದರೂ, ಇಲ್ಲಿ ಕವಿಯು ಶಬ್ದಶಕ್ತಿಯಿಂದ ಸಾಕ್ಷಾತ್ತಾಗಿ ನೋಡಿದುದಕ್ಕಿಂತ ಹೆಚ್ಚಾದ ಅನುಭವವನ್ನು ಹೊಂದಿ ಆನಂದಪಡಬಹುದು. ಶಬ್ದಕ್ಕೆ ತನ್ನಿಂದ ವಾಚ್ಯವಾದ ವಸ್ತುವನ್ನು ಮನಸ್ಸಿನ ಮುಂದೆ ತಂದು ನಿಲ್ಲಿಸುವ ಶಕ್ತಿಯೊಂದುಂಟು. ಅದೇ ಶಬ್ದಶಕ್ತಿ ಎನ್ನುವುದು. ಇಲ್ಲಿ ಶಬ್ದಶಕ್ತಿಯ ಸಾಮರ್ಥ್ಯದಿಂದ ಸಾಕ್ಷಾತ್ತಾಗಿ ನೋಡಿದ ಅನುಭವವು ಉಂಟಾಯಿತು. ಇಂಥದರ ಸಾಕ್ಷಾದನುಭವವು ಎಲ್ಲರಿಗೂ ಉಂಟಾಗುವುದೆ? ಒಬ್ಬಿಬ್ಬರಿಗಾದರೇ ಅದೇ ಹೆಚ್ಚು. ಅಂಥ ಅನುಭವ ಸುಖವನ್ನೂ ಕೂಡ ಕವಿಯು ತನ್ನ ಪ್ರಭಾವದಿಂದ ಎಲ್ಲರಿಗೂ ದಾನ ಮಾಡಿರುವನು. ಇದೇ ಕವಿಗಳ ಮೇಲ್ಮೆ. ಆದರೆ ನೋಡದಿದ್ದರೂ ನೀವು ಹೇಳುವಂತೆ ಆ ಅನುಭವವು ಶಬ್ದಶಕ್ತಿಯಿಂದುಂಟಾಗುತ್ತದೆಯೆ? ಎಂದರೆ—ನಾವು ಮಳೆಯು ತೂರುತ್ತಿರುವಾಗ ಎಮ್ಮೆಗಳು ಕತ್ತೆತ್ತಿಕೊಂಡು ಮೆಲುಕು ಹಾಕುತ್ತ ನಿಂತಿರುವುದನ್ನು ನೋಡಿರುತ್ತೇವೆ. ಕಾಡನ್ನೂ ನೋಡಿರುತ್ತೇವೆ. ಅವುಗಳ ಏಕತ್ರ ಸಮಾಗಮವನ್ನು ಮಾತ್ರ ಪದ್ಯದಲ್ಲಿ ಹೇಳಿರುವಂತೆ ನೋಡಿಲ್ಲ. ಆದರೂ ಕವಿಶಬ್ದಶಕ್ತಿಯಿಂದ ಅನನುಭೂತವಾದ ಅಂಥ ಸಂದರ್ಭದ ಪ್ರತಿಫಲನವು ಮನೋಭಿತ್ತಿಯಲ್ಲಿ ಉಂಟಾಗುವುದು. ಇದೇ ಶಬ್ದದ ಶಕ್ತಿಯು. ಆದಕಾರಣ ಅಂಥದರ ಅನುಭವಸುಖವು ಉಂಟಾಗುವುದರಲ್ಲಿ ಯಾವ ಕೊರತೆಯೂ ಇಲ್ಲ?

೩. ಅನ್ಯೋದಾಹರಣ—ಕಾಳಿದಾಸನು ಶಾಕುಂತಲನಾಟಕದಲ್ಲಿ ದುಷ್ಯಂತ ಮಹಾರಾಜನು ಮೃಗವನ್ನು ಬೆನ್ನಟ್ಟುವ ವೇಗವನ್ನು ವರ್ಣಿಸುವ ಪದ್ಯವು. ಇದೇ ಅದರ ಭಾಷಾಂತರವು :—

ಆವುದು ನೋಳ್ಕೆ ಸೂಕ್ಷ್ಮಮದೆ ವಿಸ್ತೃತಮಪ್ಪುದು ಮಧ್ಯದಲ್ಲಿ ತಾ।
ನಾವುದು ಭಿನ್ನವಾಗಿರುವುದಂತದೆ ಜೋಡಿಸಿದಂತೆ ತೋರ್ಪುದೈ ॥
ಆವುದು ವಕ್ರಮಿರ್ಪುದದೆ ತಾಂ ಋಜುವಾಗುತೆ ಕಣ್ಣಿದೆನ್ನ ಕ।
ಣ್ಣಾವುದುವಿ [illegible] ಕ್ಷಣಂ ರಥವೇಗದೆ ಪಾರ್ಶ್ವದಲ್ಲಿಯಾಂ ॥

ಮತ್ತು ಶಸ್ತ್ರಪಾತದಿಂದ ತಪ್ಪಿಸಿಕೊಳ್ಳಲು ಓಡಿಹೋಗುವ ಒಂದು ಜಿಂಕೆಯ ಸ್ಥಿತಿಯನ್ನು ವರ್ಣಿಸುವ ಅದೇ ಗ್ರಂಥದ ಮತ್ತೊಂದು ಪದ್ಯದ ಭಾಷಾಂತರ:—

ಕೊರಲಂ ತಾಂ ಕೊಂಕುಗೆಯ್ಯುತ್ತಡಿಗಡಿಗೊಡನೈತರ್ಪ ತೇರಲ್ಲಣಂ ನ ।
ಟ್ಟಿರೆ ನೋಟಂ ಬಾಣಪಾತಕ್ಕಗಿದಿರುಕಿಸುತುಂ ಪೃಷ್ಠಮಂ ಮಾರ್ಗದೊಳ್ ತೀ ॥
ವಿರೆ ನೀಡುಂ ಬಾಯಿಯಿಂದ ಸ್ರವುದುದಿರ್ವರೆಮೆಲ್ಲಿರ್ದ ದರ್ಭಾಂಕುರಂಗಳ್ ।
ಧರೆಯಲ್ಲೋರೊರ್ಮೆ ಕಾಲಿಟ್ಟಹಹ! ನಿರುಕಿಸ್ಸೆ ಬಾನೊಳೇ ಪಾರಿ ಪೋಕುಂ ॥

ಮತ್ತು ಆ ಮೃಗದ ಹಿಂದೆ ಓಡುವ ರಥದ ಕುದುರೆಗಳನ್ನು ವರ್ಣಿಸುವ ಪದ್ಯದ ಭಾಷಾಂತರ:—

ನಡೆ ಮಿಡುಕದ ಚಮರದ, ನೀ ।
ಳ್ದೊಡಲೆತ್ತಿದ ಕಿವಿಯ, ತಮ್ಮ ಪದರಜಮುಂ ಪಾ ॥
ಯ್ದೊಡೆ ಸಿಲ್ಕದಶ್ವಗಳ್ ಧೀಂ ।
ಕಿಡುವುವು ತನ್ಮೃಗಜವಾಸಹಿಷ್ಣುಗಳೆಂಬೋಲ್ ॥

ಈ ಪದ್ಯಗಳಿಂದ ಪಾಠಕರಿಗೆ ಆನಂದವು ಸಾಕ್ಷಾತ್ತಾಗಿ ವರ್ಣಿತವಾದ ವಿಷಯಗಳನ್ನು ಅನುಭವಿಸುವಕಾಲದಲ್ಲಿ ಉಂಟಾದುದಕ್ಕಿಂತಲೂ ಅತಿಶಯಿತವೆಂಬುದು ತಿಳಿಯಬರುವುದು. ಮೊದಲನೆಯ ಪದ್ಯದ ಅನುಭವವು ರೈಲುಗಾಡಿಯ ಪ್ರಯಾಣಮಾಡಿದವರಿಗೆಲ್ಲ ಅನುಭವಕ್ಕೆ ಬಂದಿದೆ. ಎರಡನೆಯ ಪದ್ಯದಲ್ಲಿ ಹೇಳಿರುವ ವರ್ಣಿತಾಂಶಗಳು ಒಟ್ಟಿಗೆ ಒಂದೇಕಡೆಯಲ್ಲಿ ಅನುಭವಕ್ಕೆ ಬಾರದಿದ್ದರೂ ಅವುಗಳಲ್ಲಿ ಕೆಲಕೆಲವು ಬೇರೆಬೇರೆಯಾಗಿ ಅನುಭವಕ್ಕೆ ಬಂದಿವೆ. ಮೃಗವು ಕೊರಲಂ ಕೊಂಕುಗೆಯ್ಯುತ್ತ ಅಡಿಗಡಿಗೆ ಭೀತಿಯಿಂದ ಹಿಂತಿರುಗಿ ನೋಡುವುದನ್ನೂ, ಬಾಣ ಅಥವಾ ಕಲ್ಲು ಇವುಗಳ ಪಾತಕ್ಕೆ ಅಗಿದು ಪೃಷ್ಠವಂ ಇರುಕಿಸುವುದನ್ನೂ, ಬಾಯಿಂದ ನೊರೆಗಳು ಸ್ರವಿಸುತ್ತಿರುವುದನ್ನೂ, ದರ್ಭಾಂಕುರಗಳು ಕಟಬಾಯಿಂದ ಜೋಲುಬೀಳುತ್ತಿರುವಹಾಗೆ ಮೆಲುಕುಹಾಕುತ್ತಿರುವುದನ್ನೂ ಬೇರೆ ಬೇರೆ ನೋಡಿ ಆನಂದಪಟ್ಟಿರುತ್ತೇವೆ. ಒಂದೇ ಪ್ರಾಣಿಯಲ್ಲಿ ಅವನ್ನು ನೋಡದಿದ್ದವರಿಗೂ ಈ ವರ್ಣನೆಯಿಂದ ಸಾಕ್ಷಾತ್ಪರಿಚಯದ ಆನಂದವು ಹುಟ್ಟುವುದು. ಮೂರನೆಯ ಪದ್ಯದಲ್ಲಿವರ್ಣಿತವಾದ ಸಂಗತಿಯನ್ನು ನೋಡಿ ಅನುಭವಿಸದೆ ಇರುವರೇ ಇಲ್ಲ. ಕುದುರೆ ಜೂಜಿನಲ್ಲಿ ಕುದುರೆಯು ಅತಿವೇಗವಾಗಿ ಓಡುವುದನ್ನು ~ [illegible]ರುತಾನೇ ನೋಡಿಲ್ಲ. ಆದರೂ ಈ ಪದ್ಯಗಳನ್ನು ಓದಿದಾಗ ಉಂಟಾ[illegible]ವು ಆಗ ಉಂಟಾಯಿತೆ,

ಹೇಳಿ ? ಹೀಗೆ ಸಾಕ್ಷಾದನುಭವವರ್ಣನೆಗಿಂತ ಆನಂದವು ಅತಿಶಯವಾಗಲು ಕಾರಣವೇನು, ಆಲೋಚಿಸಬೇಕಲ್ಲವೆ? ಇಂಥ ವರ್ಣ್ಯಗಳನ್ನು ನಾವು ನೋಡದೇ ಇಲ್ಲ. ಆದರೂ ಕವಿಗಳು ನಿರೂಪಿಸುವ ಕ್ರಮದಲ್ಲಿ ಬೇರೆ ನಾವು ನೋಡುವುದಿಲ್ಲ. ಏಕಾಕಾರವಾಗಿ ಒಟ್ಟಿಗೆ ನೋಡುತ್ತೇವೆಯೋ ಹೊರತು ನಮ್ಮ ಮನಸ್ಸನ್ನು ಅಪಹರಿಸತಕ್ಕ ಅವುಗಳಲ್ಲಿರುವ ಪ್ರಭೇದಗಳನ್ನು ಮಾತ್ರ ನೋಡುವುದಿಲ್ಲ. ನೋಡಿದರೂ ನಮ್ಮ ಕಣ್ಣಿಗೆ ಅವು ಬೀಳುವುದಿಲ್ಲ. ಏಕೆ? ಕವಿಯ ಕಣ್ಣನ್ನು ನಾವು ಪಡೆದಿಲ್ಲ. ಕವಿಯು ಶಬ್ದಮುಕುರದಲ್ಲಿ ಅದರ ಪ್ರತಿಫಲನವನ್ನು ತೋರಿಸುವಾಗ, ತನ್ನ ಕಣ್ಣನ್ನು ನಮಗೆ ಕೊಟ್ಟೇ ತೋರಿಸುವನು. ಆಗ ಹಿಂದೆ ಕಾಣದ ಪ್ರಭೇದಗಳನ್ನು ಸಾಕ್ಷಾತ್ತಾಗಿ ಕಂಡು, " ಆಹಾ! ಎಂಥ ಅತಿಶಯವಾದುದು!" ಎಂದು ಆನಂದಪಡುವೆವು. ಈ ವಿಷಯವನ್ನು ಸ್ಥಿರಪಡಿಸುವುದಕ್ಕೆ ಮತ್ತೊಂದು ಉದಾಹರಣೆಯನ್ನು ಕೊಡುತ್ತೇನೆ. ಅದು ಒಂದು ವನದ ಚಿತ್ರಪಟದ ವರ್ಣನೆಯಾಗಿರುವುದು. ಅಲ್ಲಿ ರಾಜನು ಆನಂದಪಟ್ಟ ಪ್ರಕಾರವನ್ನೂ ಕವಿಯು ಚೆನ್ನಾಗಿ ನಿರೂಪಿಸಿರುವನು. ಆರೀತಿಯ ನಿರೂಪಣದಲ್ಲಿ ನಾವೂ ಆ ರಾಜನಂತೆ ಮನಶ್ಚಕ್ಷುವಿನಿಂದ ನೋಡಿ ಅನುಭವಿಸಬೇಕೆಂಬುದೇ ಕವಿಯ ಉದ್ದೇಶ.

ಮಲ್ಲಿನಾಥಪುರಾಣ. ಆಶ್ವಾಸ. ೫. ೩೨–೪೦.

೪. ವಚನ॥ (ಅದರ) ಸಮುದಾಯಶೋಭೆ ಲೋಚನಾಕೃಷ್ಟಿಯಂ ಪುಟ್ಟಿಸೆ, ಬಳ್ಳಿಮಾವಿನ ಪಂಚಪಲ್ಲವದ ಪಲವುಂ ಬಣ್ಣದ ಚೆರಕೆಯುಮಂ ಅಸುಕೆಯ ಪೊಸದಳಿರಿಂಗುಲಿಕದಗ್ಗೆಯುಮಂ ಕೊಸಗಿನೆಸಳ ಪೊಂಬಣ್ಣಮುಮಂ ವಸಂತದೂತಿಯ ಕಪೋಲಕಾಂತಿಯುಮಂ ಸುರಹೊನ್ನೆಯ ತಿಲಕದರಲ ಬೆಳ್ಪುಮಂ ದವನದ ತಮಾಲವನದ ಕರ್ಪುಮಂ ಪುರುಗದ ಮಯಿಂದವಾಳೆಯ ಪಸುರ್ಪುಮಂ ವಿವಿಧತರುಲತಾಗುಲ್ಮಜಾತಿಯ ಜಾತಿವ್ಯಕ್ತಿಯುಮಂ ಬೇರೆವೇರೆ ಭಾವಿಸಿ ನೋಡಿ,

ತಿರಿದು ಕೊಳಲ್ಕೆ ಬಂದ ಪುವು ಕೆಂದಳಿರಂ ಗಿಳಿ ತಾಮ್ರತುಂಡದಿಂ।
ದಿರಿದಪುದಾಮ್ರಗೊಳ್ಮಿಡಿಗಳಂ ಬಿಸಕಾಂಡಮನಂಚೆ ಚಂಚುವಿಂ॥
ಕಿರಿಕಿರಿದಾಗಿ ಕರ್ಚಿ ಕುಡುಕಂ ಮರಿಗಿತ್ತಪ್ಪವೆಂಬ ಬಲ್ಮೆ ಕ।
ಣ್ದೆರೆದವೊಲಿರ್ದ ಚಿತ್ರಕನ ಚಿತ್ರದ ಚಿತ್ರವಿಧಕ್ಕೆ ಮೆಚ್ಚಿದಂ॥೧॥

---

ಟೀಕು—ಗದ್ಯ. ... ಅಗ್ಗೆ = ಕೆಂಪುಬಣ್ಣ. ಜಾತಿವ್ಯಕ್ತಿ = ಅದರ ಜಾತಿಯನ್ನು ತೋರಿಸ

ತೆರೆ ಕರೆಗಣ್ಮಿದಪ್ಪುವಿಸೆ ತಣ್ಣೆಲರಿಂ, ತಡಿಯೊಳ್ ರಥಾಂಗವಿಾ ।
ನೆರೆವುವೆ, ರಾಜಹಂಸಚರಣಾಹತಿಯಿಂ ಜಳಬುದ್ಬುದಂಗಳುಂ ॥
ನೊರೆಗಳುಮಿಾತೆರಳ್ದಪುವೆ, ಹೇಮಸರೋರುಹಕುಟ್ಮಳಂಗಳೀ ।
ಬಿರಿವುವೆ ಪೋಲೆ ಪೂಗೊಳನನಿಂತಜನುಂ ಬರೆಯಲ್ಕೆ ಬಲ್ಲನೇ ॥ ೨ ॥

ಅಲರ್ವಂತಿರ್ದುವು ಕುಟ್ಮಲಂಗಳವರೊಳ್ಬಂಡುಂಡು ಪೆಣ್ದುಂಬಿಗಳ್ ।
ನಲಿವಂತಿರ್ದುವು, ಕೋರಕಂ ಪೊರೆಸಡಿಲ್ವಂತಿರ್ದುವೊಳ್ವಂತೆ ಕೋ ॥
ಗಿಲೆವಿಂಡಿರ್ದುವು ದಿಟ್ಟಿ ನಟ್ಟುದೆನೆ ವರ್ಣವ್ಯಕ್ತಿಯಿಂ ವೃಕ್ಷಗು ।
ಲ್ಮಲತಾಜಾತಿಗಳಿರ್ದುವಿಂತು ಬರೆಯಲ್ ಪೇಳಾರ್ಗಮೇಂ ತೀರ್ಗುಮೇ ॥೩॥

ಬಟ್ಟಿದುವಾದ ಕಣ್ಣ ಕರಿಯಾಲಿಯ ಸುತ್ತಣ ಸಣ್ಣ ಬೆಳ್ಪು ನೇ ।
ರ್ವಟ್ಟುದು ಕರ್ಬುರಚ್ಛವಿಯ ಚಂಚು ಮನಂಗೊಳಿಸಿತ್ತು ಮೆಯ್ಯ ಬೆ ॥
ಳ್ಪಿಟ್ಟಳವಾಯ್ತು ಕಾಲ್ಗಳರಿದಾಳದ ಮೇಗಣ ಕೆಂಪಿನಗ್ಗಮಿಂ ।
ದಿಟ್ಟಿಗೆ ಬಂದುದಾರ್ ಬರೆವರಿಂತಳವಟ್ಟಿರೆ ರಾಜಹಂಸನಂ ॥ ೪ ॥

ಇಂಗುಳಿಕದಗ್ಗಮಿಂ ನಯ ।
ನಂಗಳ್ ಕಾಡಿಗೆಯ ತೊಡೆಪದಿಂ ರಂಜಿಸೆ ಸ ॥
ರ್ವಾಂಗಂ ಮುದ್ಗಶ್ಯಾಮತ ।
ರಂಗಿತಪುಷ್ಟಂಸಪುಷ್ಟ ನೀಪರಪುಷ್ಟಂ ॥ ೫ ॥

ಕುಡಿದಳಿರನುಗುರ ಮೊನೆಯೊಳ್ ।
ಪಿಡಿದುದು ನತಚಂಚು ನೀಡಿ ಗಳಕಂದಳಮಂ ॥
ಮಡಗೆದರಿ ನವಾಮ್ರದ ಪೂ ।
ಮಿಡಿಯುಂ ಕರ್ದುಕಿದುದು ಪರಭೃತಂ ಪರಭೃತದಿಂ ॥ ೬ ॥

ಪೊಸತಲರ್ದ ವಕುಳರಸದೊಳ್ ।
ಮುಸುಂಬು ಮುಳುಗುವಿನಮೆರ್ ... ಡೆರಕೆಗಳಂ ॥
ಪಸರಿಸಿ ಕಂಪನಲಂಪಿಂ ...
ದುಸಿರ್ದುಸಿರ್ದ ... ಮುಳುಗುವಿನಂ ॥ ೭ ॥

---

೧. ಕಣ್ದೆರೆದಪ್ರೋಲಿಗೆ ... ವಿಗ್ರಹಕ್ಕೆ ದೃಷ್ಟಿ
ಕೊಟ್ಟುಹೊರತ ... ನೆ.

ವ॥ ಎಂದವರ ಜಾತಿಕ್ರಿಯಾರೂಪಪರಿಣತೆಯುಂ ಪರಿಭಾವಿಸಿ,

ಗಿಳಿ ಋಜ್ವಾಗತದಿಂದಮರ್ಧಋಜುವಿಂದಂ ಕೋಕಿಳಂ ಸಾಚಿಯಿಂ ।
ಕಳಹಂಸೀಕಳಭಂ ರಥಾಂಗಮಿಥುನಂ ದ್ವ್ಯರ್ಧಾಕ್ಷಿಯಿಂ ಬರ್ಹಿಮಂ ॥
ಡಳಿ ಪಾರ್ಶ್ವಾಗತದಿಂದದೇಂ ಪಡೆದುವೋ ಪಂಚಾಂಡಕವ್ಯಕ್ತಿ ಕ ।
ಣ್ಗೊಳಿ ಕಂದರ್ಪನ ಬಾಣಪಂಚಕದವೋಲ್ ಚಿತ್ತಕ್ಕತಿಕ್ಷೋಭಮಂ ॥ ೮ ॥

ವ॥ ಎಂದವನತಿಪ್ರೀತಿಯಿಂದವಳೋಕಿಸುತ್ತುಮಾಕಳಿಕೆಯಿಂ ಮನಂ ಕಳಿಕೆಗರ್ಚಿದ ಕೋಗಿಲೆಯುಂತೆ ನಲಿದುದೀಕಂಟಕದಿಂ ಕಂತುರಾಜ್ಯಂ ನಿಷ್ಕಂಟಕಮಾದುದೀತ್ರಿಭಂಗದಿಂ ಚೀರಘಟ್ಟಿಗೆ ಮಾನಭಂಗಮುಂ ಪುಟ್ಟಿಸಿದುದೀಶಿಶುನಿರೀಕ್ಷಣದಿಂ ಬಂಜೆ ಶಿಶುನಿರೀಕ್ಷಣಂಬಡೆದಂತೆ ಮನಮುಲರ್ಚಿದುದೀಸಕಳದಿಂ ಸಕಳಸಾಮ್ರಾಜ್ಯಸುಖಂ ಪರಮಾಣುಪ್ರಾಯಮಾದುದೀಸ್ವಸ್ತಿಕದಿಂ ಕರ್ಪೂರಶಲಾಕೆಯುಂ ನಯನಪುತ್ರಿಕಾಸ್ವಸ್ತಿಕಮೆನಿಸಿದುದೀವರ್ಧಮಾನಂ ನಯನಾನಂದವರ್ಧಮಾನಮಾದುದೀಸರ್ವತೋಭದ್ರಂ ಸರ್ವತೋಭದ್ರಮೆಂಬ ವಾಕ್ಯಾರ್ಥಮನನ್ವರ್ಥಂಮಾಡಿದುದೆನುತ್ತುಮಾರುಂ ತೆರದ ಮೊದಲ ಬಣ್ಣಮುಮನವನೋರೊಂದರೊಳ್ಬೆರಸುವ ಪರಿಣತಿಯುಮನನಿಲಕಂ ಪತ್ರಕಂ ಬಿಂದುಕಂ ಧೂಮ್ರಾವರ್ತಕಮುದ್ವರ್ತನಂ ಚಿತ್ರಪ್ರವರ್ತನಮೆಂಬಾರುಂ ತೆರದಕ್ಕೆಯುಮಂ ಚಿತ್ರಚಿತ್ರಾರ್ಧಚಿತ್ರಾಭಾಸಮೆಂಬ ಮೂರುಂ ಪ್ರಕಾರಮುಮಂ ರಸಚಿತ್ರ ಧೂಳೀಚಿತ್ರಮೋಜೆಯುಮಂ ಶ್ರುತಿವಿದ್ಧಮಾತ್ಮವಿದ್ಧಂ ಪರವಿದ್ಧಮೆಂಬ ವಿದ್ಧಪದ್ಧತಿಯುಮಂ ಲಾಕ್ಷಾರಸರೇಖಾಶುದ್ಧಿಯುಮಂ ನೇತ್ರಕ್ಕಂ ಸೂತ್ರಕ್ಕಮಳವಡಿಸಿದ ದೇಶೀಯುಮುಮಪ್ಪ ಭಂಗಿಯುಮಂ ಮೃದುರೇಖಾವಿಳಾಸಮುಮಂ ಪರಿಭಾವಿಸಿ ನೋಡಿ ವಜ್ರಕುಂಡಳದ ಕಾಂತಿ ತಳತಳಿಸೆ ತಲೆಯುಂ ತೂಗಿ ॥

ಅಕಟ! ರೇಖೆಯಿನಪ್ಪ ವರ್ಣದ ಮಿಶ್ರವರ್ಣದೊಳಾದ ಕೌ ।
ತುಕಮೆ ವೃಕ್ಷಲ[illegible] ಿಯೊಳೋಜೆಯುಂ ಗೆಡೆಗೊಂಡ ಚಿ ॥

ಟೀಕು—೮. [illegible]ುಜು, ಸಾಚಿ, ದ್ವ್ಯರ್ಧಾಕ್ಷಿ, ಪಾರ್ಶ್ವಾ
ಗತ—ಎಂಬುವು ದೃ[illegible] ಪಂಚಂಡಾಕವ್ಯಕ್ತಿ ಎನ್ನುವುದು.
ಗದ್ಯ— ಚಿ[illegible] ೇವತೆಗಳ ಚಿತ್ರಗಾರನ
ಹೆಸರು. ಸಕಳ, [illegible] ವು, ಅವುಗಳ
ಭೇದವನ್ನು ನಿರೂಪಿ[illegible]

ತ್ರಿಕನ ಭಾವಮೆ ಪತ್ರಭಂಗದ ಭಂಗಿಯೇ ಮುಝುಭಾವುಲಾ।
ಕಿಕಮಮಮಾನುಷಮೆಂದು ಕಂಟಕಿತಾಂಗನಾದನಿಳಾಧಿಪಂ ॥ ”

ಇಲ್ಲಿ ಚಿತ್ರಪಟದ ಸೌಂದರ್ಯವನ್ನು ಹೇಳಲಿ, ಆ ಚಿತ್ರಪಟದ ದರ್ಶನದಲ್ಲಿ ಉಂಟಾದ ಆನಂದದ ಪ್ರಕಾರವನ್ನು ತಿಳಿಸಲಿ, ಆ ಚಿತ್ರಪಟವನ್ನು ಸಾಕ್ಷಾತ್ತಾಗಿ ನೋಡದಿದ್ದರೂ, ಅದರ ಸೌಂದರ್ಯದಲ್ಲಿ ಮಗ್ನರಾಗಿ ಆ ರಾಜನೊಡನೆ ನಾವೂ ಆನಂದಪಡುವಂತೆ ಮಾಡಿದ ಕವಿಯ ಸಾಮರ್ಥ್ಯವನ್ನು ನಿರೂಪಿಸಲಿ—ಎಂದರೆ; “ವೃಕ್ಷಲತಾದಿ ಜಾತಿಯೊಳೋಜೆಯಂ ಗೆಡೆಗೊಂಡ ಚಿತ್ರಿಕನ ಭಾವವೂ,” “ಆರ್ಯ ಮೋಹನಮುಂ ಮಾಳ್ಪೀಚಮತ್ಕಾರಮುಂ ಬಲ್ಲ” ಕವಿಹೃದಯವೂ, “ಕವಿವೃಷಭ ಶುಭದಸ್ವಭಾವಸರಸಪ್ರಬಂಧಬಂಧುರಗುಣಸೌರಭಮುಂ ಪೊತ್ತೆಸಗುವ” ವಾಗಿಭವವೂ ಅತ್ಯವಶ್ಯಕವಾಗಿ ಬೇಕು. ಅಂಥ ಹೃದಯವೂ, ಅಂಥ ಕಣ್ಣೂ, ಅಂಥ ನಾಲಗೆಯೂ ನಮಗಿಲ್ಲದಿರುವುದರಿಂದಲೇ ಒಂದು ವೇಳೆ ಸಾಕ್ಷಾತ್ತಾಗಿ ನೋಡಿದ್ದರೂ ಈ ರೀತಿಯಲ್ಲಿ ನಾವೂ ಆದಂದಪಡಲಾರೆವು, ಇತರರನ್ನೂ ಆನಂದಪಡಿಸಲಾರೆವು. ನಮ್ಮ ಶಕ್ತಿಯಂತೂ, ಆ ಚಿತ್ರಪಟವನ್ನು ಸಭಾಸದರ ಕೈಯಲ್ಲಿ ಕೊಟ್ಟಾಗ ಅವರು ನೋಡಿ “ಹರ್ಷಸುಧಾರಸ ವರ್ಷದೊಳೆ ನಾಂದು, ಎಮೆಯಿಕ್ಕಲ್ಮರೆತು ಪುಳಕಮುನಾನಂದಾಶ್ರುಪೂರಮುಂ ತಳೆದು, ಸಂಭ್ರಮದಿಂ ಬೆರಲಂ ಮಿಡಿದು ಉತ್ತಮಾಂಗಮುಂ ತೂಗುತ್ತ,”

“ಬಿಚ್ಚಳಿಸಲ್ಕೆ ನಾಲಗೆಗಳೆಯ್ದುವೆನಲ್ ಬನಮುಂ ವಿಲೋಕನ।
ಕ್ಕಚ್ಚರಿಯುಪ್ಪಿನಂ ಬರೆದ ಚಿತ್ರಿಕನಾವನೊ!”

ಎಂದು ಹೇಳಿದಂತೆ, ಹೇಳಿ ಪೂರೈಸುವುದರಲ್ಲಿಯೇ ನಿಲ್ಲುವುದು ಹೊರತು ಪ್ರಕಾರ ಪ್ರಕಾರವಾಗಿ ನಿರೂಪಿಸಿ ಹರ್ಷೋದ್ರೇಕವನ್ನು ಉಂಟುಮಾಡಲಾರದು. ಇಂಥ ಚಿತ್ರಪಟವುಂಟೋ ಇಲ್ಲವೋ ಮೊದಲು ಆಲೋಚಿಸಬೇಕಾಗಿದೆ. ಇಂಥದನ್ನು ನಾವು ಬೇರೆ ನೋಡಿಲ್ಲ. ಆದರೂ “ರೂಪೋಚ್ಚಯೇನ ಮನಸಾ ಕೃತಾನು?” ಎನ್ನುವಂತೆ, ಕವಿಯು ತನ್ನ ಮನಸ್ಸಿನಲ್ಲಿಯೇ ಜನಿತವಾದ, ಆದಕಾರಣ ಅಲ್ಲೇ ತೋರಿ ಅಡಗುವ ಇಂಥ ಚಿತ್ರಪಟವನ್ನು ಶಬ್ದಮುಕುರದಲ್ಲಿ ನೆಲೆಗೊಳಿಸಿ ನಮ್ಮಿಂದಲೂ ನೋಡಿ ಅನುಭವಿಸುವಂತೆ ಮಾಡಿರುವನು. ಇಂಥ ಸಾಮರ್ಥ್ಯವನ್ನು ಮತ್ತೆಲ್ಲಿಯಾದರೂ ಕಾಣುತ್ತೇವೆಯೇ? ಆದುದರಿಂದಲೇ ಕವಿಯೇ ಪುರುಷಶ್ರೇಷ್ಠನೆಂದು ಹೇಳುವವರ ಮಾತನ್ನು ಒಪ್ಪಿಕೊಳ್ಳಬೇಕು.

ಮತ್ತು ಮೇಲಿನ ಅನುವಾದದಲ್ಲಿ "ಬಂದವುವು," "ಇತ್ತವುವು" "ಕರೆಗ ಣ್ಮಿದವು ವಿವೆ" "ಈಬಿರಿವುವೆ" "ಊಳ್ವಂತಿರ್ದುವು" ಎಂಬ ಪ್ರಯೋಗದ ಸ್ವಾರಸ್ಯವನ್ನು ಆಲೋಚಿಸಿರಿ. ರಾಜಹಂಸಪರಪುಷ್ಟಗಳ ವರ್ಣನೆಯು ಎಷ್ಟು ಆಹ್ಲಾದಕವಾಗಿದೆ. ಮಧುಪವು ಮಧುವನ್ನು ಹೀರುವ ರೀತಿಯೂ, ಪರಭೃತವು ಪೂಮಿಡಿಯುಂ ಕರ್ದುಕುವ ಕ್ರಮವೂ, ಗಿಳಿ ಕೋಕಿಲ ಚಕ್ರವಾಕ ಹಂಸೆ ನವಿಲು ಇವುಗಳಿಗೆ ನೋಟ ಕೊಟ್ಟಿರುವ ಸೊಗಸೂ, ಕವಿಯು ಹೇಳುವಂತೆ, ಯಾರ "ಚಿತ್ತಕ್ಕೆ ಕ್ಷೋಭವನ್ನು" ಉಂಟುಮಾಡುವುದಿಲ್ಲ. ಕವಿಯು ಪ್ರೇಕ್ಷಕರ ಆನಂದಾತಿಶಯವನ್ನು, "ಎಂದವಸೆ ಪ್ರೀತಿಯಿಂದೆ" ಇತ್ಯಾದಿ, "ವಾಕ್ಯಾರ್ಥಮನನ್ವರ್ಥಂ ಮಾಡಿದುದು" ಇತ್ಯಂತವಾದ ವಾಕ್ಯಗಳಿಂದ ವರ್ಣಿಸಿ ತೋರಿಸಿರುವುದು, ಅತನೇ ಹೇಳುವಂತೆ, "ತಲೆಯುಂ ತೂಗಿಸುವುದಿಲ್ಲವೆ?" ಅದು ಹಾಗಿರಲಿ. ಮನುಷ್ಯನಿಗೆ ಅತ್ಯಾನಂದವುಂಟಾದರೆ, ನಾನಾವಿಧವಾದ ವಿಕಾರಗಳುಂಟಾಗುವುವು. ಅನೇಕರು ಹುಚ್ಚರಂತೆ ಆಡಲೂ ಮಾಡಲೂ ತೊಡಗುವರು; ಮನಸ್ವೀ ಗಳಹುವರು, ಮನಸ್ವೀ ಕುಣಿವರು. ಅತ್ಯಾನಂದವೆಂಬುದು ಮನುಷ್ಯನನ್ನು ಸುಮ್ಮನಿರಗೊಳಿಸದು. ಅತಿದುಃಖವೂ ಹಾಗೆಯೇ; ಅದರ ಕಾರ್ಯಗಳೂ ಅಂಥವೇ. ಸುಖದುಃಖೋದ್ರೇಕಗಳ ಪ್ರಸರಣಕ್ಕೆ ಅವಕಾಶವನ್ನು ಕೊಡಲೇಬೇಕು. ಹಾಗೆ ಕೊಡದೆ ಬಿಟ್ಟರೆ ಅನರ್ಥಗಳು ಸಂಭವಿಸುವುವೆಂದೆಲ್ಲರೂ ಬಲ್ಲರು. ಸುಖವನ್ನು ವೃದ್ಧಿಗೊಳಿಸಲು ಅದರ ಉದ್ರೇಕದ ಪ್ರಸರಣಕ್ಕೆ ಅವಕಾಶವನ್ನು ಕೊಟ್ಟು, ಅದು ಹೋಗುವ ದಾರಿಯಲ್ಲಿಯೇ ಬಿಡಬೇಕಲ್ಲದೆ ಬೇರೆ ಉಪಾಯವಿಲ್ಲ. ದುಃಖವು ಉನ್ಮತ್ತಕವಾದಾಗ ಅತ್ತತ್ತು ಪ್ರಲಾಪಿಸಿಯೇ ಅದು ಕಡಮೆಯಾಗಬೇಕು. ಇದು ಲೋಕಾನುಭವಸಿದ್ಧವು. ಆದುದರಿಂದ ಸುಖವನ್ನು ಹೆಚ್ಚಿಸಲೂ, ದುಃಖವನ್ನು ತಗ್ಗಿಸಲೂ ಆಯಾ ಅನುಭವ ಪ್ರಕಾರ ಪ್ರಭೇಧಗಳನ್ನು ವಿವರಿಸಿ ನಿರೂಪಿಸುವುದರ ಆವಶ್ಯಕತೆಯು. ಹಾಗೆ ವಿವರಿಸದೆ ಬಿಟ್ಟರೆ, ಆಯಾ ಅನುಭವದ ಸ್ವರೂಪವು ಪಾಠಕರಲ್ಲಿ ಉಂಟಾಗಲಾರದು. ಮತ್ತು ಅನೇಕ ವೇಳೆ ನಮ್ಮ ಅನುಭವವೇ ನಮಗೆ ತಿಳಿಯದೆ ಹೋಗುವುದುಂಟು; ಹೀಗಿರುವಾಗ ಅದರ ಇಯತ್ತೆಯನ್ನು ಹೇಗೆ ನಿರೂಪಿಸಲಾಪೆವು? ಕವಿಗಳು ಸಮರ್ಥರಾದುದರಿಂದ ಅಂಥ ಅನುಭವವನ್ನೇ ನಿರೂಪಿಸಿ ಹೇಳುವರು. ಅವರ ವರ್ಣನಾಪ್ರಕಾರವನ್ನು ಓದಿದಾಗ, ಹಿಂದೆ ಅನುಭೂತವಾದ ವಿಷಯವು ಸ್ಪಷ್ಟವಾಗಿ ಸ್ಮರಣೆಗೆ ಬರುವುದು; ಅದರಿಂದ "ಆನಂದವು ಮಂಡೆಯುಂ ಮಿಸುರಿ ಪೊರೆದು ಪೋಗುವುದು." ಅಲ್ಲದೆ ಆ

ನಿರೂಪಣಪ್ರಕಾರವು ನಮ್ಮ ಅನುಭವಕ್ಕೆ ಒತ್ತಿ ಬರುವುದಾದುದರಿಂದ, ಕವಿಯ ಸಾಮರ್ಥ್ಯಜ್ಞಾನವು ಸ್ಫುರಿಸುವುದು. ಹೀಗಿರುವುದರಿಂದ ಕವಿಯು ತನ್ನಂತೆ ಲೋಕವನ್ನು ಯಥಾವತ್ತಾಗಿ ಪರಿಚಯಮಾಡಿ ಅನುಭವಿಸುವ ಸಾಮರ್ಥ್ಯವಿಲ್ಲದ ನಮ್ಮಂಥವರಿಗೂ ತನ್ನ ಕಣ್ಮನಗಳನ್ನು ಕೊಟ್ಟು ತನ್ನಂತೆ ಅನುಭವಿಸುವಹಾಗೆ ಮಾಡುತ್ತಾನೆಂಬುದಕ್ಕೆ ಈ ವರ್ಣನೆಯು ಒಂದು ಒಳ್ಳೆಯ ದೃಷ್ಟಾಂತವಾಗಿದೆ.

೫. ಮತ್ತೊಂದು ಉದಾಹರಣೆ--

ಗದಾಯುದ್ಧದಲ್ಲಿ ಕರ್ಣನ ಕಳೇಬರವನ್ನು ನೋಡಿ ದುರ್ಯೋಧನನು ಅತ್ತ ಪ್ರಕಾರವನ್ನು ಕವಿಯು ಈರೀತಿ ವರ್ಣಿಸುವನು :—

ಕರಿತುರಗನರಕಳೇಬರ ।
ಕರಾಳಸಂಘಟ್ಟದಲ್ಲಿ ಬರೆವರೆ ಕಂಡಂ ॥
ನರಕರವಿಮುಕ್ತಶರಜ ।
ರ್ಜರಿತಾಂಗನನಂಗರಾಜನಂ ಕುರುರಾಜಂ ॥ ೧॥

ನೆಗಪಿ ವರೂಥಮುಂ ವಸುಧೆ ನುಂಗಿದುದಂ, ಸಮಪಾದದಾಸನಂ।
ಬಗೆಗೊಳೆ, ತನ್ನ ಮುಂ ತೆಗೆದ ಮುಷ್ಟಿಯೆ ದಕ್ಷಿಣಕರ್ಣಮೂಲದೊಳ್ ॥
ಸೊಗಯಿಸೆ, ಪಾಳಿಯಂ ನೆರಪದಾಳ್ದನ ಕಜ್ಜಮನೊಕ್ಕು ಸತ್ತರಂ ।
ನಗುವವೊಲಿರ್ದನಂಗಪತಿ ನೆಮ್ಮಿ ನಿಜೋನ್ನತಕೇತುದಂಡಮಂ ॥ ೨॥

ಅಂತಿರ್ದ ದಿನಕರತನೂಜನಂ ರಾಜರಾಜಂ ನೋಡಿ ಬಾಷ್ಪವಾರಿಧಾರಾಪೂರಿತಲೋಚನನುಂ ಮನ್ಯೂದ್ಗತಕಂಠನುಮಸಹ್ಯಶೋಕಾನಲದಹ್ಯಮಾನಾಂತಃಕರಣನುಮಾಗಿ,

ಆನುಂ ದುಶ್ಶಾಸನನುಂ ।
ನೀನುಂ ಮೂವರೆ ದಲಾತನುಂ ಕಳಿದ ಬಳಿ ॥
ಕ್ಕಾನುಂ ನೀನೆ ದಲೀಗಳ್ ।
ನೀನುಂ ಮಗುಳ್ದಿತ್ತವೋದೆಯಂಗಾಧಿಪತೀ ॥ ೩ ॥

ನಿನ್ನ ಮಗಂ ವೃಷಸೇನಂ ।
ತನ್ನ ಮಗಂ ಸತ್ತನಣ್ಣ ಲಕ್ಷ್ಮಣನುಂ ನೀ ॥
ನೆನ್ನಂ ಸಂತೈಸುವುದಾಂ ।
ನಿನ್ನಂ ಸಂತೈಸೆ ಬಂದೆನಂಗಾಧಿಪತೀ ॥ ೪॥

ಅರಿಯೆನಿದಂ ನಿನ್ನಿಂದಿನ ।
ತೆರನಂ ನೀನೆನಗೆಯೇಕೆ ಮುಳಿದಿರ್ಪೆಯೋ ಮೇಣ್ ॥
ಪುರುಮಾತುಗುಡದೆ ರವಿಸುತ ।
ಮರವಿಂದಿರ್ದಪೆಯೊ ಮೇಣ್ ಬಳಲ್ದಿರ್ದಪೆಯೋ ॥ ೫ ॥

ನಿನ್ನ ಕೆಳೆಯುಂ ಸುಯೋಧನ ।
ನನ್ನೋಡದೆ ನುಡಿಯದಪ್ಪಿಕೊಳ್ಳದೆ ಬೆಸನೇ ॥
ನೆನ್ನದೆ ಜೀಯೆನ್ನದೆ ದೇ ।
ವೆನ್ನದೆಯೇಕೆಯುಸಿರದಿರ್ಪೆಯಂಗಾಧಿಪತೀ ॥ ೬ ॥

ಅನೃತಂ ಲೋಭಂ ಭಯಮುಂ ।
ಬನಿತುಂ ನೀನಿರ್ದ ನಾಡೊಳಿರ್ಕುಮೆ ರವಿನಂ ॥
ದನ ಸತ್ಯಚಾಗಮುಗ್ರ್ಮಂ ।
ಜನಿತರ್ಕಂ ನೀನೆ ಮೊತ್ತಮೊದಲಿಗನಾದೈ ॥ ೭ ॥

ಆನರಿವೆಂ ಪೃಥೆಯರಿವಳ್ ।
ದಾನವರಿಪುವರಿವನರ್ಕನರಿವಂ ದಿವ್ಯ ॥
ಜ್ಞಾನಿ ಸಹದೇವನರಿವಂ ।
ನೀನಾರ್ಗೆಂದಾರುಮರಿಯರಂಗಾಧಿಪತೀ ॥ ೮ ॥

ಒಡವುಟ್ಟಿದನೆಂದರಿದೊಡೆ ।
ಕುಡುಗುಂ ರಾಜ್ಯಮನೆ ಧರ್ಮತನಯುಂ ನಿನಗಾಂ ॥
ಕುಡಲಾರ್ಕೆನಿಲ್ಲ ರಾಜ್ಯ ।
ಕ್ಕೊಡೆಯನನರಿಯುತ್ತುಮಿರ್ದೆನಂಗಾಧಿಪತೀ ॥ ೯ ॥

ನೀನುಳ್ಳೊಡುಂಟು ರಾಜ್ಯಂ ।
ನೀನುಳ್ಳೊಡೆ ಪಟ್ಟಮುಂಟು ಬೆಳ್ಗೊಡೆಯುಂಟೈ ॥
ನೀನುಳ್ಳೊಡುಂಟು ಪೀಳಿಗೆ ।
ನೀನಿಲ್ಲದಿವೆಲ್ಲಮೊಳವೆ ಅಂಗಾಧಿಪತೀ ॥ ೧೦ ॥

ವಸುವಂ ದ್ವಿಜನ್ಮದಾನದೆ ।
ಪೊಸಜವ್ವನಮುಂ ಸ್ವದಾರಸಂತೋಷದೆ ನಿ ॥

ನ್ನುಸುವಂ ಪತಿಕಾರ್ಯದೆ ವ ।
ರ್ಜಿಸಿದೈ ನಿನ್ನನ್ನನಾವನಂಗಾಧಿಪತೀ ॥ ೧೧ ॥
ಹರಿ ಬೇಡೆ ಕವಚಮಂ ನೀ ।
ನಿರದಿತ್ತೈ. ಕೊಂತಿ ಜೇಡೆ ಬಿಗಡದೆ ಕೊಟ್ಟೈ ॥
ಹರಿಗಣೆಯುಂ ನಿನಗೆಣೆ ಕಸ ।
ವರಗಲಿ ಮೆಯ್ಗಲಿಯುಮಾವನಂಗಾಧಿಪತೀ ॥ ೧೨ ॥
ಸಮನದೊಳಮೆರ್ದೆಯೊಳಂ ನಿ ।
ನ್ನಯ ರೂಪಿರ್ದಪುದು ನಿನ್ನ ಮಾತಿರ್ದಪುದೆ ॥
ನ್ನಯ ಕಿವಿಯೊಳಗಿನನಂದನ ।
ವಿಯೋಗಮೆಂತಾದುದರಿಯೆನಂಗಾಧಿಪತೀ ॥ ೧೩ ॥
ನಿನ್ನನೆ ಕೊಂದ ಕಿರೀಟಿಯು ।
ಮೆನ್ನನುಜನನಿಕ್ಕಿ ಕೊಂದ ಭೀಮನುಮೊಳನಾ ॥
ನಿನ್ನುಮೊಳೆಂ ಗಡ ನಾಲದೆ ।
ನಿನ್ನಯ ಕೂರ್ಮೆಗಮಃದೆನ್ನ ಸೌಧರ್ಮಿಕೆಗಂ ॥ ೧೪ ॥

. . . . . . . . . . . . . . . . .

ಇನಸುತನಿರವಂ ದುಶ್ಶಾ ।
ಸನನಿರವಂ ಕಂಡುಮಿನ್ನುಮೆನ್ನಸುವಿದು ನೆ ॥
ಟ್ಟನೆ ಪೋದುದಿಲ್ಲ ಕಲ್ಲಿರ್ದ ।
ತನಧಿಂದೆನ್ನಂತು ಬರ್ದನಾವನುಮೊಳನೇ ॥ ೧೫ ॥
ಸೂನುಗಳಳಿವಂ ಪ್ರಿಯುಮಿ ।
ತ್ರಾನುಜರಳಿವಂ ವಿಧಾತ್ರ ನೀಂ ಕಾಣಿಸಿಯು ॥
ನ್ನೇನಂ ಕಾಣಿಸಲಿರ್ದಪೆ ।
ನೀನೆನ್ನಂ ಪಾಪಕರ್ಮನಂ ನಿರ್ಗುಣಿಯುಂ ॥ ೧೬ ॥

. . . . . . . . . . . . . . . . .

ಆರೊಡನೆ ನುಡಿವೆನಳ್ತಿಯೊ ।
ಳಾರೊಡನೋಲಗದೊಳಿರ್ಪೆನಾರೊಡನೆ ಸಮಂ ॥
ತಾರೋಗಿಪೆನೇರುವೆನಾ ।
ನಾರೊಡನೆನ್ನಣುಗರಿಲ್ಲದಿಭವಾಜಿಗಳಂ ॥ ೧೭

ಕೆಳೆಯುಂಗಾಯ್ತುಸುಮೋಕ್ಷಮಾಗದೆನಗಂ ಬಾಷ್ಪಾಂಬುಮೋಕ್ಷಂ, ಧರಾ।
ತಳಮಂ ಕೊಟ್ಟನಿವಂ, ಜಳಾಂಜಳಿಯುಮಂ ನಾಂ ಕೊಟ್ಟೆನಿಲ್ಲನ್ಯಮಂ ॥
ಡಳಮಂ ಸುಟ್ಟನಿವಂ ಪ್ರಕೋಪಶಿಖಿಯಿಂದಾನೀತನಂ ಸತ್ಕ್ರಿಯಾ।
ನಳನಿಂ ಸುಟ್ಟೆನುಮಿಲ್ಲ, ಮತ್ಪ್ರಿಯತಮಂ ಕರ್ಣಂಗಿದೇಂ ಕೂರ್ತೆನೋ ॥

ಈ ವರ್ಣನೆಯನ್ನು ಓದುವವರ ಕಣ್ಣಿನಲ್ಲಿ ನೀರು ಬಾರದೆ ಇರುವದಿಲ್ಲ. ಅನೇಕರು ಅತ್ತಿರುವರು. ಈ ವರ್ಣನೆಯನ್ನು ಓದುವ ಕಾಲದಲ್ಲಿ, ಮಹಾಧೀರನಾದ ದುರ್ಯೋಧನನಿಗೂ ಇಂಥಸ್ಥಿತಿಯು ಬರಬಹುದೇ ಎಂದು ತೋರುತ್ತದೆ. ಎಂಥ ಧೀರರಾದರೂ ದುಃಖಕ್ಕೆ ಒಳಗಾಗದೆ ಇರರು ಎಂದೂ ತಿಳಿದು ಬರುತ್ತದೆ. ಕವಿಯು ಇಲ್ಲಿ ನಮ್ಮನ್ನು ದುರ್ಯೋಧನನ ಸ್ಥಿತಿಯಲ್ಲಿ ತಂದಿಟ್ಟು ನಮ್ಮ ಕಣ್ಣಿನಲ್ಲಿಯೂ ನೀರು ಬರುವಂತೆ ಮಾಡಿರುವುದು ಅತಿಶಯವೇ ಸರಿ. ಆ ನಿರೂಪಣ ಪ್ರಕಾರವು ನಮ್ಮ ಅನುಭವಕ್ಕನುಸರಿಸಿ ಬರುವುದು. ಅದರಿಂದ ದುಃಖವು ಇಮ್ಮಡಿಯಾಗುವುದು. ದುರ್ಯೋಧನನನ್ನು ನಾವು ನೋಡಲಿಲ್ಲ. ಅವನು ಅತ್ತದ್ದನ್ನೂ ನೋಡಲಿಲ್ಲ. ಆದರೂ ಹೀಗೆಯೇ ದುರ್ಯೋಧನನು ಅತ್ತನೆಂಬ ನಂಬಿಕೆಯು ಹುಟ್ಟುವುದು. ಅದರ ಮೇಲೆ ನಮ್ಮ ನಮ್ಮ ಅನುಭವಕ್ಕೆ ಸದೃಶವಾಗಿಯೇ ದುರ್ಯೋಧನನ ಸ್ಥಿತಿಯನ್ನು ನಿರೂಪಿಸಿ ಹೇಳಿರುವುದರಿಂದ, "ಆಹ! ನಮ್ಮ ಅನುಭವವೇ ಬಿಚ್ಚಿ ತೋರಿಸಲ್ಪಟ್ಟಿತು. ನಮ್ಮ ಅನುಭವವು, ಎಷ್ಟೆಷ್ಟು ನೆನಸಿಕೊಂಡರೂ ಮಿಂಚಿನಂತೆ ತೋರಿ ಅಡಗಿಹೋಗುತ್ತಿದ್ದಿತು. ಅಂಥದುದನ್ನೂ ಕವಿಯು ಹೇಗೆ ನಿರೂಪಿಸಿರುವನು, ನೋಡಿದೆಯಾ?" ಎಂಬದಾಗಿ, ಕವಿಯಲ್ಲಿ ಗೌರವವು ಉಂಟಾಗುವುದು. ಇದಿರಲಿ. ಕರ್ಣನ ಸಾವಿನಲ್ಲಿ ಅಳುತ್ತಿದ್ದ ದುರ್ಯೋಧನನ್ನು ನೋಡಿದ್ದಲ್ಲಿ ದುಃಖವೇ ಉಂಟಾಗುತ್ತಿದ್ದಿತು; ಆದರ ಸ್ಮರಣದಲ್ಲಿಯೂ ದುಃಖವೇ ಉಂಟಾಗುತ್ತಿದ್ದಿತು. ಈ ವರ್ಣನೆಯಲ್ಲಾದರೋ ಓದುವಾಗಲೂ ಸ್ಮರಣೆಗೆ ತಂದುಕೊಂಡಾಗಲೂ ಮೊದಲು ದುಃಖಹುಟ್ಟಿದರೂ ಕೂಡಲೇ ಸಂತೋಷ ಹುಟ್ಟುತ್ತದೆ. ಪುತ್ರಮಿತ್ರಕಳತ್ರಾದಿಗಳ ಮರಣದಲ್ಲಿ ದುಃಖಪಡುತ್ತಿರುವವರನ್ನು ಸಂತೋಷದೊಡನೆ ಯಾರೂ ನೋಡಲಪೇಕ್ಷಿಸುವುದಿಲ್ಲ. ಈ ವರ್ಣನೆಯ ವಿಷಯವು ಮಾತ್ರ ಹಾಗಲ್ಲ. ಓದುವಾಗ ದುಃಖ ಹುಟ್ಟುತ್ತಿದ್ದರೂ ಪದೇಪದೇ ಓದಬೇಕೆನ್ನಿಸುತ್ತದೆ. ಆ ದುರ್ಯೋಧನನ ದುಃಖವು ಶೋಕರಸವಾಗಿ ಪರಿಣಮಿಸುವುದೇ ಇದಕ್ಕೆ ಕಾರಣವು. ಅದು ದುಃಖದ ಪ್ರಕಾರವೇ ಆಗಿದ್ದ ಪಕ್ಷದಲ್ಲಿ ಪದೇಪದೇ ಓದಲು ನಮ್ಮ ಮನಸ್ಸು ಎಳೆಯಲ್ಪಡುತ್ತಿರಲಿಲ್ಲ.

ಆದುದರಿಂದ ಈ ವರ್ಣನೆಯು ಸುಖೋದರ್ಕವಾದ ದುಃಖವಾಗಿಯೇ ಪರಿಣಮಿಸ ಬೇಕು. ಅದಕ್ಕಾಗಿಯೇ ರಸಜ್ಞರು ಈ ವಿಧವಾದ ಅನುಭವವನ್ನು "ಶೋಕರಸ" ವೆನ್ನುವರು. ಇದೇ ಈ ಪ್ರಕಾರಕವಾದ ಲೋಕದ ಸ್ಥಿತಿಗೂ ಅದರ ವರ್ಣನಾಸ್ಥಿತಿ ಗೂ ಇರುವ ಬೇಧವು. ಈರೀತಿಯಲ್ಲಿಯೇ ಇತರ ರಸಗಳಿಗೂ ಅವುಗಳ ವರ್ಣ ನೆಗೂ ಭೇದವನ್ನು ಊಹಿಸಿಕೊಳ್ಳಬಹುದು.

ಮತ್ತು ಈ ವರ್ಣನೆಯಲ್ಲಿ ಕವಿಯು ಕರ್ಣನ ಅತಿಶಯವಾದ ಗುಣಸಾಮರ್ಥ್ಯ ಗಳನ್ನು ಎಷ್ಟು ಚೆನ್ನಾಗಿ ಸ್ವಲ್ಪ ಮಾತಿನಿಂದ ವಿವರಿಸಿರುವನು! ಆತನ ಗುಣಗಳ ರಾಶಿಯಲ್ಲಿ ಅಮೂಲ್ಯವಾದ ಗುಣರತ್ನಗಳನ್ನು ಎತ್ತಿ ನಮಗೆ ಶಬ್ದಮುಕುರವೆಂಬ ತಟ್ಟೆಯಲ್ಲಿಟ್ಟು ತೋರಿಸುತ್ತಿದ್ದಾನೆ. ಇದರಿಂದ ಆತನಂತೆ ನಾವೂ ಆಗಬೇಕೆಂಬ ಉತ್ಸಾಹವು ನಮ್ಮ ಹೃದಯದಲ್ಲಿ ನೆಡಲ್ಪಟ್ಟದ್ದಾಯಿತು.

೬. ಚಂದ್ರನ ಉದಯಾಸ್ತಮಯಗಳನ್ನು ನಾವು ಅನುಭವಿಸದೆ ಇಲ್ಲ. ಕವಿ ಗಳು ನಿರೂಪಿಸುವಂಥ ಅನುಭವವು ಮೊದಲು ನಮಗುಂಟಾಗುತ್ತದೆಯೇ, ಓದಿದ ಮೇಲೆ ಆ ಅನುಭವವು ನಮಗೆ ಹುಟ್ಟುವುದಿಲ್ಲವೇ, ವಿಚಾರಿಸೋಣ.

—ಚಂದ್ರೋದಯ ವರ್ಣನೆ.—

ದಾಂಗುಡಿವಿಟ್ಟು ದಳ್ಳಿಸುವ ಕೆಂದಳದಿಂದೊಸೆದೆತ್ತಿ ಲಕ್ಷ್ಮಿ ಕಾ।
ಮಂಗೆ ಮಗಂಗೆ ಶೈಶವನಿರೀಕ್ಷಣಕೇಳಿಗೆ ನೇತ್ರಸೂತ್ರದಿಂ॥
ದಿಂಗಡಲೆಂಬ ಸಜ್ಜಿವನೆಯೊಳ್ ತೆರೆದೊಟ್ಟಿಲ ಮೇಲೆ ಕೆಂಬರ।
ಲ್ದಿಂಗಣಿಗಟ್ಟಿದಂತುದಯಶೈಲಶಿಖಂಡದೊಳಿಂದುಮಂಡಲಂ॥
ನವಸಂಧ್ಯಾರಾಗಂ ಪಿಂ।
ಗುವುದುಂ ಮದನಂಗೆ ವಜ್ರಖೇಟಕಮಂ ಕೆಂ।
ಗವಸಣಿಗೆಗಳೆದು ರತಿ ನೀ।
ಡುವಂತೆ ತಳತಳಿಸಿದತ್ತು ಹಿಮಕರಬಿಂಬಂ॥

—ಚಂದ್ರಾಸ್ತಮಯ ವರ್ಣನೆ.—

ತೊಡರೆ ಮೀನ್ ಮೃಗಲಾಂಛನಧೀವರಂ।
ತಡಿಗೆ ಬಿಸಿದ ಜಾಲಮನೊತ್ತಿ ತಂ॥
ದಡಸಿ ಬಾಂಗೆರೆಯೊಳ್ ತೆಗೆವಂತೆವೋ।
ಳುಡುಗಿವಂದುವು ತಣ್ಗದಿರೋಳಿಗಳ್॥ (ಲೀಲಾವತಿ).

ಈ ಪದ್ಯಗಳನ್ನು ಪಠಿಸಿದ ಮೇಲೆ ಏನೋ ಒಂದು ವಿಧವಾದ ಸಂತೋಷವು ಜನಿಸಿ ಎದೆಯು ಹಿಗ್ಗಿದಂತಾಗುದಿಲ್ಲವೆ? ನಿತ್ಯವೂ ನೋಡುತ್ತಿದ್ದರೂ ಇಂಥ ಅನುಭವವು ನಮ್ಮಲ್ಲೆಂದೂ ಹುಟ್ಟಲಿಲ್ಲ. ಚಂದ್ರನು ತೊಟ್ಟಿಲಮೇಲೆ ಕಟ್ಟಿದ ತಿಂಗಣಿಯೆಂಬ ಭಾವವೂ ಸಾಮಾನ್ಯರ ಒಳಗಣ್ಣಿಗೆ ಗೋಚರಿಸುವುದಿಲ್ಲ. ಅಸ್ತಮಯಕಾಲದಲ್ಲಿ ಚಂದ್ರನಲ್ಲಿ ಧೀವರತ್ವಾರೋಪಮಾಡಿ; ಆ ಕಾಲದಲ್ಲಿ ನಕ್ಷತ್ರಗಳಿರುವ ಸ್ಥಿತಿಯನ್ನೂ ಚಂದ್ರಕಿರಣಗಳು ಅಧೋಮುಖವಾಗಿದ್ದುವು ಊರ್ಧ್ವಮುಖಗಳಾದುದನ್ನೂ ನೋಡಿ ಆಕಾಶವೆಂಬ ಕೆರೆಯಲ್ಲಿ ಬೀಸಿದ ಬಲೆಯಲ್ಲಿ ಸಿಕ್ಕಿಕೊಂಡ ಮೀನಿನಂತೆ ನಕ್ಷತ್ರಗಳನ್ನು ನಿರೂಪಣಮಾಡಿ, ಅವವುಗಳಿಗಿರುವ ಸಂಬಂಧವನ್ನು ಸಾಮಾನ್ಯವಾದ ಲೌಕಿಕ ದೃಷ್ಟಾಂತದಿಂದ ಸ್ಪಷ್ಟಪಡಿಸಿರುವುದು ಅತಿಶಯವಾದ ಕವಿಸಾಮರ್ಥ್ಯಕ್ಕೆ ನಿದರ್ಶಕವಲ್ಲವೆ? ಪರಿಚಯ ಮಾಡಿದ ಬಳಿಕ ಇವುಗಳು ಕವಿಯ ಭಾವವನ್ನು ನಮ್ಮ ಹೃದಯದಲ್ಲಿ ಹುಟ್ಟಿಸಿ ಅವನು ಪಟ್ಟ ಆನಂದವನ್ನು ನಾವೂ ಪಡುವಂತೆ ಅವಕಾಶದಾನವನ್ನು ಮಾಡುವುದರಲ್ಲಿ ಸಂದೇಹವೇ ಇಲ್ಲ. ರಸಜ್ಞರು ಅನುಭವಿಸಿರುವರು.

ಹಿಂದೆ ಈ ಗ್ರಂಥದಲ್ಲಿ ೭೪ನೆಯ ಪುಟದಲ್ಲಿ ಉದಾಹೃತವಾದ "ಹರಿದಶ್ವಂ" "ಭವಬದ್ಧ" ಎಂಬ ಪದ್ಯಗಳಲ್ಲಿ ವರ್ಣಿತವಾದ ಸೂರ್ಯನ ಉದಯಾಸ್ತಮಯವರ್ಣನೆಗಳು ಈ ರೀತಿಯಾದ ವರ್ಣನೆಗಳೇ ಆಗಿದ್ದರೂ ಅವುಗಳಲ್ಲಿ ಮತ್ತೊಂದು ವಿಶೇಷವುಂಟು. ಭೂತಗಳಲ್ಲಿ ಉಂಟಾಗುವ ವ್ಯತ್ಯಾಸವು ಸ್ಪಷ್ಟವಾಗಿಯೂ ಆನಂದದಾಯಕವಾಗಿಯೂ ಇರುವುದಿಲ್ಲ. ಪತಿಪತ್ನೀನ್ಯಾಯ ರಾಜಭೃತ್ಯನ್ಯಾಯಗಳಿಂದ ನಿರೂಪಿಸಿದರೇನೆ ಸರಸವಾಗಿಯೂ ಸ್ಪಷ್ಟವಾಗಿಯೂ ನೋಡಬೇಕೆಂಬ ಕುತೂಹಲವನ್ನು ಹುಟ್ಟಿಸತಕ್ಕದಾಗಿಯೂ ಆಗುವುದು. ಮತ್ತು ಉದಯಕಾಲದಲ್ಲಿ ಸೂರ್ಯನ ವೈಭವವನ್ನು ಅಸ್ತಮಯದಲ್ಲಿ ಅವನ ದುರ್ದಶೆಯನ್ನೂ ಇಷ್ಟು ಚೆನ್ನಾಗಿ ಅನ್ಯಥಾ ನಿರೂಪಿಸಲಾಗುವುದಿಲ್ಲ.

8. ಮತ್ತು ಚಂದ್ರಿಕೆಯಲ್ಲಿ ಹೂವಿನ ಅಂಗಡಿಯನ್ನು ಹೊಕ್ಕಾಗ ನಮಗೆ ಇಂಥ ಅನುಭವವೆಂದಿಗಾದರೂ ಉಂಟಾಗುವುದೆ?

" ನೆನೆದರ ಚಿತ್ತಮುಂ ನೆರೆಯೆ ಕಮ್ಮನೆ ಸೋಲ್ಪರ ಕಂಣ ಬೆಳ್ಪು ಕ।
ಮ್ಮನೆ ಮಿಗೆ ಮಾತನಾಡುವರ ಮೆಲ್ನುಡಿ ಕಮ್ಮನೆ ಮೆಯ್ಗಳಯ್ದೆ ಕ॥
ಮ್ಮನೆ ದೆಸೆ ಕೂಡೆ ಕಮ್ಮನೆ ಕರಂ ನವಕೌಮುದಿ ಕಮ್ಮನಾಗೆ ಕಂ।
ಪಿನ ಪೊನಲೆತ್ತಲುಂ ಪರಿವ ಪೂವಿನ ಸಂತೆಯನೆಯ್ದಿದಂ ನೃಪಂ॥

" ಆ ತಣ್ಣೆಲರೆಂಬ ಕಂಪಿನ ಕಡಲ ನೀಸಿದಂ."

(ಲೀಲಾವತಿ.)

೯. ಕವಿಗಳು ಕಾವ್ಯದಲ್ಲಿ ನಿರೂಪಿಸುವಂತೆ ಪ್ರೇಮಾನುರಾಗಾದಿಗಳನ್ನು ಜನಗಳಲ್ಲಿ ನೋಡುವುದು ಅಪೂರ್ವ. ಕಾವ್ಯಗಳಲ್ಲಿ ನಿರೂಪಿಸುವ ಶೃಂಗಾರಾದಿ ರಸಗಳಿಗೂ ನಮ್ಮ ಅನುಭವದಲ್ಲಿರುವ ಶೃಂಗಾರಾದಿಗಳಿಗೂ ಅರ್ಥಾರ್ಥ ಸಂಬಂಧವಿಲ್ಲ. ಹೇಗೆಂದರೆ?--

ಉದಾಹರಣೆ.

೧. ತುಡಿಸುವುದೇಕೆ ನಿಲ್ಲ ಪಲವುಂ ಬಳೆಯುಂ ಬಳೆಗಾರ ನಿನ್ನ ಕಾ।
ಲ್ವಿಡಿದಪೆನಿತ್ತಪೆಂ ನಿನಗೆ ಬೇಡಿತನೆನ್ನಿನಿಯುಂ ಕನಲ್ದು ಪೋ ॥
ದೊಡೆ ಬಳೆ ಕೈಗಳಿಂದಿಳಿದು ಜೋಳ್ವವು ಬರ್ಪುದುಮಾಗಳಂತೆ ಕೇ।
ಳೊಡೆವುವು ಸನ್ನಿ ನಿನ್ನ ಬಳೆಯುಂ ಬಳೆದೊಟ್ಟರನಣ್ಣ ಕಾಣಿರೇ ॥
(ಲೀಲಾವತಿ).

ಈ ಪದ್ಯದಲ್ಲಿ ಪತಿಯು ವಿಶ್ಲೇಷದಲ್ಲಿ ನಾಯುಕಿಯು ಕರಗಿ ಕೃಶವಾಗುವುದನ್ನೂ ಸಂಶ್ಲೇಷದಲ್ಲಿ ಹಿಗ್ಗಿ ಉಬ್ಬುವುದನ್ನೂ ಕವಿಯು ಪ್ರಕಾರಾಂತರವಾಗಿ ವರ್ಣಿಸಿರುತ್ತಾನೆ.

೨. † ॥ ರಾಗ—ಕುರಂಜಿ ॥ ತಾಳ—ರೂಪಕ ॥

ಇನಿಯನ ಬಗೆಗಳನೆಣಿಸದ ಮುನ್ನ । ತನುಮನವೊಂದಾಗಿ ತಲ್ಲಣಿಸುತಿದೆ। ಮುನಿವುದೆತ್ತಣದಿನ್ನು ಮೋಡಿಯೆತ್ತಣದು। ಮನವ ಬೈತಿಟ್ಟು ಮಾರ್ಮಲೆವುದೆತ್ತಣದು। ಮೊನೆದೋರ್ಪುದೆತ್ತಣದು। ಮೂದಲೆಯೆತ್ತಣದು। ತೊನೆವುದೆತ್ತಣದಿನ್ನು ದೂರ್ವುದೆತ್ತಣದು। ಅನುಮಾನವೆತ್ತಣದು। ಅಳವೆತ್ತಣದು। ಅನುವನಾರಯ್ವೆನೆಂಬಾಸೆಯೆತ್ತಣದು ॥ ಪಲ್ಲವಿ ॥

ಚರಣ॥ ಇದೆ ಬಂದನರಸನೆಂಬೀನುಡಿಗೇಳಿ। ಬಿದೆಬೇಟದೊಳು ಪೆಂಪು ಗೊಂಡುರ್ಬಿ । ಸೊದೆಯುಂಡವೊಲು ಗಾಳಿ ಸೊಂಕಿದವೊಲು । ಬೆದರುವಡೆದವೊಲು ಬೆರ್ಚಿದವೊಲು। ಮದವೇಱಿದವೊಲು ಮರುಳಾದವೊಲು । ಹದವಿೂಱಿದವೊಲು ಹರವಸಗೊಂಡವೊಲು । ಮದನಮಂತ್ರಾವೇಶ ಮಡಲಿಟ್ಟವೊಲು ಮುದದ। ಮುನ್ನೀರೊಳು ಮುಳುಗಿ ತೇಲುತಿದೆ ॥ ೧ ॥

---

†. ಈ ಕೀರ್ತನೆಯಲ್ಲಿ ಒಬ್ಬ ಗೋಪಿಯು ಶ್ರೀ ಕೃಷ್ಣನ ವಿರಹದಿಂದುಂಟಾದ ತನ್ನ ವೃತ್ತಾಂತವನ್ನು ತನ್ನ ಕೆಳದಿಯಲ್ಲಿ ಈ ರೀತಿ ತಿಳಿಸುವಳು.

ಬಱಸುಡಿಯುತೆನ್ನ ಪ್ರಾಣವಲ್ಲಭನ । ಕುಱಿತು ನೋಡದ ಮುನ್ನ ಕೊಱಗಿತೆನ್ನೊಡಲು । ಮಱೆತ್ತೊಱಗಿದವೊಲು ಮರವಟ್ಟವೊಲು । ಬೆಱಗುವಡೆದವೊಲು ಬೆಗಡುಗೊಂಡವೊಲು । ಅಱಿವುಗುಂದಿದವೊಲು ಅಳವಳಿದವೊಲು ತೆಱನಱಿಯದವೊಲು ದೆಸೆಗೆಟ್ಟವೊಲು । ಪರಿಪಡಸಿದವೊಲು ಪಾಡಳಿದವೊಲು । ತೊಱೆದನ್ಯಚಿಂತೆಯ ಸೊರ್ಕೇಱುತಿದೆ ॥ ೨ ॥

ಎಱೆಯ ಚಿಕ್ಕದೇವೇಂದ್ರನೆನ್ನ ಲಾಲಿಸಿದ ನೆರೆಸೊಗಸುಗಳೆನೆರ್ದೆವನ್ನೆಯೊಳು । ಸೆಱೆಸಿಕ್ಕಿದವೊಲು ಚಿತ್ರಿಸಿದವೊಲು । ಕರುವಿಟ್ಟೆಱೆದವೊಲು ಕಾಸಿ ಬೆಚ್ಚವೊಲು । ಸರಿಗೊಂಡವೊಲು ಸರಗೊಳಿಸಿದವೊಲು । ಕೊಱೆದು ಕೋದವೊಲೊಂದುಗೂಡಿದವೊಲು । ನಿಱುಗೆವಡೆದವೊಲು ನೆಲಸಿತೆಂಬವೊಲು । ತಱಿಸಂದಾನಂದದ ತನ್ಮಯವಾಗುತಿದೆ ॥ ೩ ॥ (ಗೀತಗೋಪಾಲಂ)

೩. ಮತ್ತು ಹಿಂದೆ ೧೯, ೨೦, ೨೪, ೬೯, ೭೦, ೭೧ ಪುಟಗಳಲ್ಲಿ ಉದಾಹೃತವಾದ ಪದ್ಯಗಳನ್ನು ನೋಡಿ. ಆಗ ಶೃಂಗಾರರಸವಿಷಯದಲ್ಲಿ ಕವಿವರ್ಣಿತವಾದ ಅನುಭವವು ಸಹಜವಾದುದಲ್ಲವೆಂದು ನೀವೇ ಹೇಳುತ್ತೀರಿ. ಈ ರೀತಿಯಲ್ಲಿಯೇ ರಸಗಳ ವಿಷಯದಲ್ಲಿಯೂ ಕವಿನಿರೂಪಣಪ್ರಕಾರವು ಲೋಕಸಹಜವಲ್ಲವೆಂದು ಇತರ ಉದಾಹರಣೆಗಳಿಂದ ಸಮರ್ಥಿಸಬಹುದು. ಗ್ರಂಥವಿಸ್ತರಭಯದಿಂದ ಇಲ್ಲಿಗೆ ಸಾಕುಮಾಡಿರುವೆನು. ಕವಿಪ್ರಪಂಚ ನಿರೂಪಿತವಾದ ಅನುಭವವು ಸ್ವಾಭಾವಿಕವಾಗಿ ಉಂಟಾಗದಿದ್ದರೂ, ಕವಿಗಳಲ್ಲಿ ಶಿಷ್ಯವೃತ್ತಿಯನ್ನು ಮಾಡಿದನಂತರದಲ್ಲಿಯಾದರೂ ಮಾನಸಿಕವಾಗಿ ಉಂಟಾಗುವುದಕ್ಕಡ್ಡಿಯಿಲ್ಲ. ಮೊದಲು ಮಾನಸಿಕವಾಗಿ ಉಂಟಾದ ಅನುಭವವು ಕ್ರಮೇಣ ಪರಿಚಯಬಲದಿಂದ ವಾಸ್ತವಿಕವಾಗಿ ಅನೇಕ ಕಡೆ ಪರಿಣಮಿಸುವುದುಂಟು. ಖಂಡಿತವಾಗಿಯೂ ಪರಿಣಮಿಸಲಾರದೆಂದು ಹೇಳುವುದಕ್ಕಾಗುವುದಿಲ್ಲ. ಶರೀರ ಮೂಲಕ ಹುಟ್ಟುವ ಸುಖಕ್ಕಿಂತ ಮಾನಸಮೂಲಕ ಹುಟ್ಟುವ ಸುಖವು ಅತಿಶಯಿತವಾಗಿರುವಂತೆ ಕಂಡು ಬರುವುದರಿಂದ ಕಾವ್ಯ ಸುಖವು ಇತರವಾದ ಐಹಿಕಸುಖಾಪೇಕ್ಷೆಯೂ ಅತ್ಯಾದರಣೀಯವೆಂದು ಇದರಿಂದ ಹೇಳಬಹುದು.

---

ಟೀಕು—೩. ಚಿಕ್ಕದೇವೇಂದ್ರ—ಇಲ್ಲಿ ಚಿಕದೇವರಾಜನಿಗೆ ಸ್ವಾಮಿಯಾದ ಶ್ರೀಕೃಷ್ಣನು ಎಂದರ್ಥ.

ಇಷ್ಟರವರೆಗೆ ಏನು ಹೇಳಿದಂತಾಯಿತು ? ಎಂದರೆ, ಲೋಕದಲ್ಲಿ ಸ್ವತಃ ಏವ ಯಾವುದು ಸರಸವಾಗಿದೆಯೋ ಅದು ಶಬ್ದಮುಕುರದಲ್ಲಿ ಪ್ರತಿಫಲಿತವಾದಾಗ ಸ್ಪೃಹಣೀಯತಮವಾಗಿ ಆಗುವುದು, ಎಂದು.

ಈ ರೀತಿಯಲ್ಲಿಯೇ ಘೋರವಾದ ವಸ್ತುವೂ ಕೂಡ ಕಾವ್ಯಮೂಲಕ ಪ್ರತ್ಯಕ್ಷವಾದರೆ ಸೌಮ್ಯತೆಯನ್ನು ಹೊಂದಿ ಸ್ಪೃಹಣೀಯವಾಗುವುದರಲ್ಲಿ ಸಂಶಯವಿಲ್ಲ. ಹೇಗೆ ಭೂದೇವತೆಯು ತನ್ನ ಶರೀರದಲ್ಲಿರುವ ಸೌಮ್ಯವಾದ ಪದಾರ್ಥಗಳನ್ನು ತೋರಿಸಿ ಜನರ ಕಣ್ಮನಗಳನ್ನು ಎಳೆವಳೋ, ಹಾಗೆಯೇ ಭಯಜನಕವಾದ ಪದಾರ್ಥಗಳನ್ನು ತೋರಿಸಿ ಹೆದರಿಸುವಳು. ಹುಲಿಯು ಹೊದರನ್ನೂ ಹಾವಿನ ಹುತ್ತನ್ನೂ ಮತ್ತು, ಪ್ರಾಣಿಗಳು ಪರಸ್ಪರ ವಧೆಮಾಡಿ ತಿಂದು ಜೀವಿಸುವುದನ್ನೂ ನೋಡಿದಾಗ ಯಾರು ತಾನೇ ಭೀತಿಪಡುವುದಿಲ್ಲ ? ಅಂಥವುಗಳನ್ನು ನೋಡಿ, ಭೀತಿಪಟ್ಟು ಅತ್ತ ಕಡೆಯಿಂದ ಓಡಿಹೋಗುವುದಿಲ್ಲ ? ಹೀಗಿರಲು ಅಂಥವುಗಳನ್ನು ನೋಡಲಾಶೆ ಯಾರಿಗೆ ತಾನೆ ಹುಟ್ಟುವುದು ? ಹಾಗೆ ಆಶೆ ಹುಟ್ಟಿದರೂ ಅಪಾಯ ಸಂಭವಿಸದಂತೆ ದೂರದಲ್ಲಿ ನಿಂತೇ ನೋಡಲು ಅಪೇಕ್ಷಿಸುವರು. ಸಾಕ್ಷಾತ್ತಾಗಿ ಯುದ್ಧವನ್ನೂ ವಧೆಯನ್ನೂ, ಅತ್ಯಂತ ಕ್ಷಾಮಪೀಡಿತರ ಅವಸ್ಥೆಯನ್ನೂ, ಹಡಗು ಕಲ್ಲೋಲವಾಲಾಭಿಹತವಾದ ಮುಳುಗಿ ಹೋಗುವಲ್ಲಿ ನಾವಿಕರ ಮತ್ತು ಪ್ರಯಾಣಿಕರ ಗಾಬರಿಯನ್ನೂ ಸಂಕಟವನ್ನೂ ನೋಡಲು ಯಾರಿಗೆ ಮನಸ್ಸು ಬರುವುದು ? ನೋಡಿದವರಿಗೂ ಕೂಡ ಅದು ನೆನಪಿಗೆ ಬಂದ ಕಾಲದಲ್ಲಿ ಸಂಕಟವನ್ನುಂಟುಮಾಡದೆ ಇರದು. ಇಂಥ ಅಹಿತವಾದ, ದುಃಖದಾಯಕವಾದ ಅವಸ್ಥಾವಿಶೇಷಗಳನ್ನು ಕವಿಯು ಕಾವ್ಯಮಾರ್ಗದಲ್ಲಿ ಪಾಠಕರ ಮನೋಭಿತ್ತಿಯಲ್ಲಿ ಚಿತ್ರಿಸಿದಾಗಲೋ ಎಂದರೆ ಆ ಭೀತಿಯೂ ಆ ದುಃಖವೂ ತೋರುವುದಿಲ್ಲ. ಆ ವರ್ಣನೆಯನ್ನು ನೆನೆಸಿಕೊಂಡಾಗಲೂ ದುಃಖ ಬರುವುದಿಲ್ಲ; ಓದುವಾಗಲೂ ಮನನ ಮಾಡುವಾಗಲೂ, ಆನಂದವೇ ಉಂಟಾಗುವುದು. ಅಲ್ಲದೆ ಪುನಃ ಪುನಃ ಓದಬೇಕೆಂಬ ಆಶೆಯೂ ಹುಟ್ಟುತ್ತಿರುವುದು. ಕಾಡಿನಲ್ಲಿ ಹುಲಿ ನೋಡಿ ಹೆದರುವವರೂ ಕೂಡ ಗೂಡಿನಲ್ಲಿ ಹುಲಿಯನ್ನು ನೋಡಿ ಸಂತೋಷಪಡುವಂತೆ ಸಹಜವಾಗಿ ಕ್ರೂರವಾದ ವಸ್ತುಗಳನ್ನು ನೋಡಲಪೇಕ್ಷಿಸದವರೂ ಕೂಡ ಶಬ್ದಮುಕುರದಲ್ಲಿ ಅವುಗಳನ್ನು ನೋಡಲಪೇಕ್ಷಿಸುವರು. ಆದುದರಿಂದ ಘೋರವಸ್ತುಗಳೂ ಕೂಡ ಕಾವ್ಯದಲ್ಲಿ ವರ್ಣಿತವಾದಾಗ ತಮ್ಮ ಕ್ರೌರ್ಯವನ್ನು ಕಳೆದುಕೊಳ್ಳುವುವಲ್ಲದೆ ಸೌಮ್ಯ ತೇಜಸ್ಸಿನಿಂದ ಕೂಡಿ ರಮ್ಯತೆಯನ್ನು

ಹೊಂದಿ ಕಂಗೊಳಿಸುವುವು.

ಈ ರೀತಿಯಲ್ಲಿಯೇ ಜುಗುಪ್ಸಿತವಾದ ವಿಷಯವೂ ಕಾವ್ಯಮೂಲಕವಾಗಿ ರಸಭಾವವನ್ನು ಹೊಂದುತ್ತವೆಂದು ತೋರಿಸಬಹುದು. ಇದಕ್ಕೆ ಕಾರಣವು ಸ್ಪಷ್ಟವಾಗಿದೆ. ಉದಾಹರಣೆ :—

— ಮಾಂಸಾಶಿಗಳ ಅಂಗಳದ ವರ್ಣನೆ. —

(ಚಿಕದೇವರಾಯ ವಂಶಾವಳಿ.)

ವಚನ॥ ಅವರ ಅಂಗಂಗಳಾವಗಂ ಕೊಯ್ದೆಡೆದುಗಿದ ಪಸಿದೊವಲ್ಗಳಿಂ, ಪಟಿಯಿಲುಗಳಿಂ, ಗಿಳಿಯ ತುಪ್ಪುಲ್ಗಳಿಂ, ಪಂದಿಯ ಪೆಯ್ನವಿರ್ಗಳಿಂ, ಮಾಂಸಮಂ ಸಂಸ್ಕರಿಸಲ್ಕೆಡೆವಿಡದಿಡಿದೆಯೊಳುದಿರ್ದರಿಸಿನಪುಡಿಗಳಿಂದೆಸೆವ ಪಂಚವರ್ಣದ ರಂಗವಲ್ಲಿಗಳಿಂ, ಇರ್ತರದೊಳ್ ಕಟ್ಟಿದ ನೇಣ್ಗಳೊಳ್ ನೇಲ್ದೊಣಗುವ ಕೆಂಗಂಡದ ಚಿಗುರ್ದೋರಣದಿಂ, ಕಿಱುಸರದೊಳ್ಕೋದು ಬಿಗಿದು ಜೋಲ್ವೆಳಮಿಾನ್ಗಳ ಸರದ ಮುತ್ತಿನ ಲಂಬಣಂಗಳಿಂ, ನಿಡುಗರುಳ ಪವಳದ ಸರಂಗಳಿಂ, ದೀಹವಕ್ಕಿಗಳಿಂಚರದ ಕೊಳಲ್ ವೊಗಬೀಣೆಗಳಿಂದರೆವರಿದೂರ್ವರ್ಗಂದಿಗಳ್ ಚೀರುವ ದನಿಯ ಬುರುಗುಗಳಿಂ, ಪುಂಜಗಳುಗ್ಗಡಣೆಯ ಕಾಳೆಗಳಿಂದರೆಗೊರಲನರಿವೆಮೆಯೊಳ್ ಪೊಡವಿಯನೊದೆವಾಡುಕುರಿಗಳ ಖುರಪುಟನಿನದದ ಮುರಜಂಗಳಿಂ, ಪುರಿದಿರಿಸಿದೀಚಲ್ವುಳು ಕೆಂಜಿಗಗಳ ಲಾಜಾಕ್ಷತೆಗಳಿಂ, ಪರಿದು ಕಿತ್ತ ಪೆರ್ಗಿಳಿಗಳ ನಿಡುಗರಿಗಳ ದರ್ಭೆಗಳಿಂದಾಮೆಯೋಡ ಕಪ್ಪರೆಯೊಳ್ತೀವಿದ ಬಸೆಯ ಹೋಮದ್ರವ್ಯದಿಂ, ಪೊಸನೆತ್ತರೋಕುಳಿಯಿಂ, ಪಾಪಕನ್ಯೆಯ ಮದುವೆಮನೆಯಂತಿರ್ಪುವು.

— ಸ್ಮಶಾನದ ವರ್ಣನೆ. —

(ಅರ್ಧನೇಮಿಪುರಾಣಂ)

ವಿಚಳದ್ಭೇತಾಳತಾಳಂ ಶಬರಭರವೃತಂ ಧೂಮವಲ್ಲೀವಿಕೀರ್ಣಂ ।
ಶುಚಿರಕ್ತಾಶೋಕಸಕ್ತಂ ಶ್ವಗಣಮೃಗಮಯಂ ಮುಗ್ಧಪೈಶಾಚಕೇಶ ॥
ಪ್ರಚಯಂ ದೀಪ್ರಾಗ್ನಿಭಾಗೋನ್ಮುಖಮಣಿಫಣಿಭೂತೋಗ್ರಮಾತಂಗಮುತ್ತುಂ ।
ಗಚಿತೋದ್ಯತ್ಕಾಷ್ಠಮಾಯಸ್ತ್ರಾಪಿತೃವನವನಮಾಯಿಸ್ತ್ರೋಷ್ಮಮಕ್ಯಂತಭೀಷ್ಮಂ ॥ ೧
ತೆರೆತೆರೆಗೊಂಡು ಬಾನ್ಗಡರ್ವ ಕರ್ವೊಗೆ ಕರ್ಗಿದ ನೀರ ಕೊರ್ವುವಂ ।
ತಿರೆ ವಿಚಳಚ್ಚಿತಾನಳಶಿಖಾವಳಿ ವಿದ್ರುಮವಲ್ಲಿ ಪರ್ವಷಂ ॥

ತಿರೆ ತಲೆಯೋಡಿನೊಳ್ ಪೊಳೆವ ಪಲ್ಗಳೆ ಸಿಪ್ಪಿನ ಮುತ್ತು ತೋರುವಂ ।
ತಿರೆ ಪರೆದಾಪರೇತವನಮಂಬುಧಿಯಂತಿರೆ ಭೀಕರಂ ಕರಂ ॥ ೨

ಪೊಗೆವ ಚಿತಾಗ್ನಿ ಪೊತ್ತುವ ಚಿತಾಗ್ನಿ ಪೊದಳ್ದ ಚಿತಾಗ್ನಿ ಬಾಂಬರಂ ।
ನೆಗೆವ ಚಿತಾಗ್ನಿ ನಂದುವ ಚಿತಾಗ್ನಿ ಕನಲ್ವ ಚಿತಾಗ್ನಿ ಗಾಳಿಯಿಂ ॥
ಮುಗುಳ್ವ ಚಿತಾಗ್ನಿ ಮುಗ್ಗುವ ಚಿತಾಗ್ನಿ ಕಳಲ್ವ ಚಿತಾಗ್ನಿಯು ।
ಲ್ಲಿಗಲ್ಲಿಗೆ ಪುದಿದಿರ್ದುವಾಮುಸಣದೊಳ್ ವಿಳಯಾಗ್ನಿಯ ಬಿಟ್ಟ ಬೀಡುವೋಲ್ ॥ ೩

ಉರಿದುದು ಚಿತಾಗ್ನಿ ನೆಲದಡಿ ।
ವರೆಗಂ ಬಾಂಬರೆಗಮವರ ಪೆಣನೈದುವವೋಲ್ ॥
ನರಕಂಬೊಕ್ಕರುವಂ ಸುರ ।
ಶರಣಂಬೊಕ್ಕರುಮನಳುರಲವ್ವಳಿಸುವವೋಲ್ ॥ ೪

ಮೇಲಣ ಅನುವಾದಗಳಲ್ಲಿ ಪ್ರಥಮದರಲ್ಲಿ ಕಣ್ಣನ್ನು ಕೋರೈಸುವ ಮನವನ್ನು ಹಿಂದಿರಿಗಿಸುವ ಮಾಂಸಾಹಾರಿಗಳ ಅಂಗಳವೂ ಕೂಡ ಸೌಮ್ಯವಾದ ಉಪಮಾನಬಲದಿಂದ ಆಹ್ಲಾದಕವಾಯಿತು. ದ್ವಿತೀಯದರಲ್ಲಿ ನೆನೆಸಿಕೊಂಡಮಾತ್ರದಲ್ಲಿಯೇ ಭೀತಿಯನ್ನೂ ಜುಗುಪ್ಸೆಯನ್ನೂ ಹುಟ್ಟಿಸುವ ಸ್ಮಶಾನಸ್ಥಿತಿಯೂ ನಿರೂಪಣಪ್ರಕಾರದಿಂದ ಹೃದ್ಯಂಗಮವಾಗಿ ಆಯಿತು. ಇವುಗಳ ಯಥಾವಸ್ಥಿತಿಯಾದರೋ ದರ್ಶನದಲ್ಲಿ ಜುಗುಪ್ಸೆಯನ್ನೂ ಪರಿಚಯದಲ್ಲಿ ಅನಾಸಕ್ತಿಯನ್ನೂ ಹುಟ್ಟಿಸುವಂಥದು.

ಈ ರೀತಿಯಲ್ಲಿಯೇ ನೀರಸವಾದ ವಿಷಯವೂ ಸರಸವಾಗಿ ಪರಿಣಮಿಸುವುದು.

ಉದಾಹರಣೆ :—

— ತುರುಪಟ್ಟಿಯ ವರ್ಣನೆ —

(೧) ಕರುವಂ ಬಿಡು ಕರೆ ತೊಳೆ ನೀ ।
ರೆರೆ ಕಂದಲನೊರಸಿ ತೊಳೆ ತಗುಳ್ದಿದೆವಾವಂ ॥
ತುರಿಸು ತಳೆಯಿಕ್ಕು ತಡೆಯದೆ ।
ಮುರುವಂ ಸುರಿಯೆಂಬ ಸರಮೆ ತುರುಗಾರ್ತಿಯರೊಳ್ ॥ ೧
ಅಡರ್ದು ವೊಲಗೊಡಗಳಡಸಿರೆ ।
ಮಡಗಳ್ ಪೊರವಾರ ಪೊರಗೆ ಕೆಡೆದಿರೆ ಕರೆಯಲ್ ॥

---

ಟೀಕು — ೪. ಅಳುರಲ್—ವ್ಯಾಪಿಸಲು, ಅವ್ವಳಿಸು—ದುತ್ತಿಸು.
೧. ತಳೆ—ಕತ್ತಿನಹಗ್ಗ.

ಪಡೆಯದೆ ಗಡಿಗೆಯನೊರ್ವಳ್ ।
ಬಿಡಂಗಿ ತುರುಗಾರ್ತಿ ಪತಿಯ ಕೈಯ್ಯೊಳ್ ಕೊಟ್ಟಳ್ ॥ ೨

( ಲೀಲಾವತಿ )

— ಹಸುವಿನ ಮಂದೆಯ ವರ್ಣನೆ. —

(೨) ಎಡಪಿ ಪರಲ್ಗಳಂ ದೆಸೆಗೆ ಬೀರ್ವುತೆ ಗೋವನ ಗಾಳಿಗೆದ್ದು ಪಿಂ ।
ದಡಸುತೆ ಕಂದಮಂ ನೆಗಪಿ ನೋಡುತೆ ಪಕ್ಕಮನಗ್ರವಾಲದಿಂ ॥
ತೊಡೆಯುತೆ ಕರ್ಣಮಂ ತಿರೆದು ತಿತ್ತಿರಿಗಾಳೆಯನಾಲಿಸುತ್ತೆ ಪಿಂ ।
ದೊಡೆಯದೆ ಕೂಡಿ ಬರ್ಪ ಪಲವಾಕಳನೀಕ್ಷಿಸಿದಂ ನರಾಧಿಪಂ ॥ ೩

ಬರಲಾರದೆ ಪೆರ್ಗೆಚ್ಚಲ ।
ಭರದಿಂದಂ ಪೆರಗು ಕುಸಿಯೆ ಪೊರೆಯುಂ ಕಳೆವಂ ॥
ತಿರೆ ಸೊರೆದ ತೋರಮೊಲೆಗಳ ।
ನಿರಿವಿಡುತುಂ ಬಂದವಂದು ಪಯುಗಳ್ ಪಲವುಂ ॥ ೪

ಕರು ಪೆರಗುಳಿದಿರೆ ಹೂಂಗುಡು ।
ತರಚುತ್ತುಂ ಮಗುಳ್ದು ಮೂಸುತುಂ ಪೊಲಸಂ ಮಾ ॥
ಸೊರೆಯುತಿರೆ ಪಿಂತೆ ಕೆಚ್ಚಲ ।
ನಿರುಂಕಿ ನಡೆತಂದುವಿಂದ ಪಯುಗಳ್ ಪಲವುಂ ॥ ೫

ಕಡುಗೊಬ್ಬಿದ ಕಡಸುಗಳಿಂ ।
ಕಡೆಯೊಳ್ ಬರುತಿರ್ದ ಧೇನು ಬಡವಾಗಿರ್ದುಂ ॥
ಬಿಡೆ ಕರಮೆಸೆದುದು ಚಾಗಿಯ ।
ಬಡತನಮುಂ ಖಳನ ಸಿರಿಯುನಗ್ಗಳಮಲ್ತೇ ॥ ೬

ಪೊಸನಸೆಯ ಸೊವಡನಾಘ್ರಾ ।
ಣಿಸಿ ಮಣಿಕದ ಮಿಡುಕುಗೆಜ್ಜೆಯೊಳ್ ಮೊಗವೆತ್ತು ॥
ತ್ತೆಸೆದುದು ವೃಷಮುರರನೇ ।
ಡಿಸುವವೊಲೇನುಂಟೆ ನಿಮಗವಿಾಸುಖಮೆನುತುಂ ॥ ೭

ಈಯೆರಡು ಉದಾಹರಣೆಗಳಲ್ಲಿ ವರ್ಣಿತವಾದ ವಿಷಯಗಳು ಅತಿ ಸಾಧಾರಣವಾದುವುಗಳು, ನಮ್ಮ ಮನಸ್ಸನ್ನು ಎಳೆಯುವಂಥವುಗಳಲ್ಲ. ಸಾಕ್ಷಾತ್ಪರಿಚಯ

ಟೀಕು—೪. ಪಯು= ಹಸು. ಇರಿವಿಡು—

ದಲ್ಲಿಯೂ ಯಾವ ವಿಧವಾದ ಸಂತೋಷವನ್ನು ಕೊಡುವುವಲ್ಲವು. ಆದರೂ ಸರಸವಾಗಿ ಕವಿವರ್ಣನಾಮೂಲಕವಾಗಿ ಬಂದಿರುವುದರಿಂದ ಪರಿಣಮಿಸಿ ಇರುವುವು.

ಗೋಹಾಡನ್ನು ಯಾರು ತಾನೇ ಓದಿಲ್ಲ. ಆದರಲ್ಲಿ ಇದ್ದುದನ್ನು ಇದ್ದಂತೆಯೇ ವರ್ಣಿಸಿದೆಯೇ ಹೊರತು ಮತ್ತೆಬೇರೆ ಚಮತ್ಕಾರವು ಕಾಣಬರುವುದಿಲ್ಲ. ಆದರೂ ಓದುವಾಗ ಸರಸವಾಗಿಯೇ ಕಂಡುಬರುವುದು. ಮಕ್ಕಳಾಟಿಕೆಯು ಇಂಥದಾದರೂ ಆನಂದಾತಿಶಯವನ್ನುಂಟುಮಾಡುವ ಮುಖ್ಯವರ್ಣನೆಯಾಗಿದೆ. ಶ್ರೀ ಕೃಷ್ಣನ ಬಾಲಲೀಲೆಯು ಎಂಥ ಯೋಗಿಗಳ ಮನಸ್ಸನ್ನೂ ಅಪಹರಿಸತಕ್ಕಂಥದಾಗಿದೆ. ಆನೆ, ಕುದುರೆ, ಸಿಂಹ, ನರಿ, ತೋಳ ಮೊದಲಾದ ವಿಷಯಗಳ ಸ್ವಭಾವೋಕ್ತಿಯೂ ಕೂಡ ಈ ವಿಚಾರವನ್ನು ದೃಢೀಕರಿಸುತ್ತದೆ. ಇದರಿಂದ ಸ್ವಭಾವೋಕ್ತಿ ವಿಷಯವು ನೀರಸವಾದುದೆಂದು ಹೇಳಿದಂತೆಯೇ ಆಯಿತೆಂದು ಆಕ್ಷೇಪಿಸಕೂಡದು. ಅತಿ ಪರಿಚಯದಿಂದ ನೀರಸವಾಗಿ ಆದರೂ, ವಾಗ್ರೂಪವಾದ ಅನುಕರಣವಿರುವುದರಿಂದ ಸರಸವಾಯಿತು ಎಂಬುದರಲ್ಲಿ ವಿವಾದವಿಲ್ಲ. ಆದಂತಿರಲಿ.

ಅನೇಕ ನೀರಸವಾದ ವಸ್ತುಗಳು ಬೇರೆಬೇರೆ ಇರುತ್ತಿರುವಾಗ ಯಾವ ಸೌಂದರ್ಯವೂ ತೋರುವುದಿಲ್ಲ. ಅವುಗಳನ್ನು ಸೇರಿಸುವುದರಲ್ಲಿ ಒಂದು ವಿಧವಾದ ಸೌಂದರ್ಯವು ಹುಟ್ಟುವುದು. ನಾನಾವರ್ಣದ ಗಾಜಿನ ಚೂರುಗಳು ಬೇರೆಬೇರೆ ಬಿದ್ದಿದ್ದರೆ ಮನೋಹರವಾಗಿಲ್ಲದಿದ್ದರೂ ಅವುಗಳನ್ನು ಚಕ್ರಾಕಾರವಾಗಿ ಆಗಲಿ, ಲತೆಯಹಾಗಾಗಲಿ, ಪುಷ್ಪದ ಆಕಾರವಾಗಿಯಾಗಲಿ, ಕ್ರಮಪಡಿಸಿ ಇಟ್ಟರೆ ಎಷ್ಟೋ ಮನೋಹರವಾಗುವುವು. ಪಾಚಿಯು ಅಸಹ್ಯವಾಗಿದ್ದರೂ ಕಮಲದ ಪಕ್ಕದಲ್ಲಿ ಸಹ್ಯವಾಗಿ ರಮ್ಯವಾಗುವುದು. ಮುಳ್ಳುಗಿಡದ ಮೇಲೆ ವಿಕಸಿತವಾದ ಪುಷ್ಪದಲ್ಲಿ ಹೆಚ್ಚಾದ ಸೌಂದರ್ಯವು ತೋರುವುದು. ಆ ಪುಷ್ಪವನ್ನು ಕೊಯ್ದು ಬೇರೆ ಇಟ್ಟರೆ ಅದರ ಸೌಂದರ್ಯವು ಕುಂದುವುದು. ತುರಾಯಿನಲ್ಲಿ ಜನಗಳು ಮೋಹಿಸುವುದಕ್ಕೆ ಇದೇ ಕಾರಣವಿರಬಹುದು. ವೀಣೆಯ ತಂತಿಗಳನ್ನು ಬೇರೆಬೇರೆ ಮೀಟಿದರೆ ಹಿತವಾದ ಧ್ವನಿಯು ಹುಟ್ಟುವುದಿಲ್ಲ. ರಾಗಗಳು ಹುಟ್ಟುವಂತೆ ಒಂದು ಕ್ರಮವನ್ನನುಸರಿಸಿ ಆ ಧ್ವನಿಗಳನ್ನು ಸೇರಿಸುವುದರಿಂದ ಆನಂದವು ಹುಟ್ಟುತ್ತದೆಯಷ್ಟೆ. ಮತ್ತು ಕಾಗೆಯ ಧ್ವನಿಯೂ ಜೀರುಂಡೆಯ ಧ್ವನಿಯೂ ಕಠೋರವಾಗಿದ್ದರೂ, ಮಟ್ಟಮಧ್ಯಾಹ್ನದಲ್ಲಿ ನಿಶ್ಶಬ್ದತೆಯು ಎಲ್ಲಿಯೂ ತಾನೇ ತಾನಾಗಿ ಆಳುತ್ತಿರುವಾಗ ತೋಟದ ಮಧ್ಯದಲ್ಲಿರುವವನಿಗೆ ಎಷ್ಟು ಆನಂದವನ್ನು ಕೊಡುತ್ತದೆಯೆಂಬುದು ವಾಚಾ ವರ್ಣಿಸಲಸಾಧ್ಯವು. ಹೀಗಿ

ರಲು ಯುಕ್ತಸಮ್ಮೇಳನದಿಂದ ಇತರ ಕಲೆಗಳಂತೆ ಕಾವ್ಯಕಲೆಯಲ್ಲಿಯೂ ಆನಂದ ಉಂಟೆಂಬುದು ವ್ಯಕ್ತ. ಕವಿಗಳು ನಿಪುಣರಾದುದರಿಂದ ಯಾವಯಾವ ವರ್ಣನೆಗಳನ್ನು ಹೇಗೆ ಹೇಗೆ ಸೇರಿಸಿದರೆ ಆನಂದವುಂಟಾಗುವುದೋ ಅಂಥಾ ರೀತಿಯಲ್ಲಿ ಸರಸಸರಸ, ಸರಸನೀರಸ, ನೀರಸನೀರಸ ವಿಷಯಗಳನ್ನು ಸೇರಿಸಿ ನಿರೂಪಿಸುವರು.

ಇದಲ್ಲದೆ ಹಾಲನ್ನು ಕುಡಿವಂತೆ ರಚಿಸಿದ ಬೆಕ್ಕಿನ ಬೊಂಬೆಯನ್ನು ನೋಡುವುದರಲ್ಲಿ ಉಂಟಾಗುವಷ್ಟು ಹರ್ಷ ನಿಜವಾಗಿ ಬೆಕ್ಕು ಹಾಲು ಕುಡಿವುದನ್ನು ನೋಡುವುದರಲ್ಲಿ ಉಂಟಾಗುವುದಿಲ್ಲ. ಕುಂಟನನ್ನು ನೋಡಿ ಯಾರೂ ನಗುವುದಿಲ್ಲ; ಕುಂಟನಂತೆ ನಟಿಸುವವನನ್ನು ನೋಡಿ ಎಲ್ಲರೂ ನಗುವರು. ಇದರಿಂದ ಅನುಕರಣದಲ್ಲಿ ಸಂತೋಷವು ಉಂಟೆಂದು ಗೊತ್ತಾಗುವುದು ಆದುದರಿಂದ ಕವಿಗಳು ವರ್ಣ್ಯಕ್ಕೆ ಸ್ವಭಾವಲ್ಲದ ವಿಷಯುವನ್ನು ಅದಕ್ಕೆ ಸ್ವಭಾವಸಿದ್ಧವಾದಂತೆ ನಿರೂಪಿಸುವರು. ಯಥಾ:-

ಕದಳೀಗರ್ಭದೆ ವಿರಚಿಸಿ ।
ಮದನಂ ಕುಪ್ಪಿಗೆಯನಲ್ಲಿ ಕುಳಿರ್ವಮರ್ದಂ ತೀ ॥
ವಿದನಡುಕಿಲಿಟ್ಟನವನೆನಿ ।
ಸಿದುವೆಸೆವಸಿತೇಕ್ಷುದಂಡಮಂಡಲಿ ಬನದೊಳ್ ॥

(ಮಲ್ಲಿನಾಥಪುರಾಣಂ)

ಈ ಪದ್ಯದಲ್ಲಿ ಕಬ್ಬಿಗೆ ಸಹಜವಲ್ಲದ ವಿಷಯವು ಅದಕ್ಕೆ ಸಹಜವೆಂಬಂತೆ ನಿರೂಪಿಸಲ್ಪಟ್ಟಿದೆ. ಇದು ವರ್ಣನಾವಿಷಯ. ಅನೇಕವೇಳೆ ಒಬ್ಬ ಪುರುಷನಿಂದ ಬೇರೆ ಪುರುಷನ ಮಾತನ್ನು ಹೇಳಿಸುವುದು ಇದಕ್ಕಾಗಿಯೇ. ರೂಪಕಾದಿಗಳಲ್ಲಿ ಆಹ್ಲಾದಕ್ಕೆ ಇದೂ ಒಂದು ಕಾರಣವಾಗಬಹುದು. ಆದುದರಿಂದ ಕಲಾಕೋವಿದರು ಎಂಥೆಂಥ ವಸ್ತುಗಳನ್ನು ಹೇಗೆ ಹೇಗೆ ತೋರಿಸಿದರೆ ಸಂತೋಷ ಹೆಚ್ಚುವುದೋ ಅಂಥಂಥವುಗಳನ್ನೇ ಆರಿಸಿಕೊಂಡು ಹಾಗೆಹಾಗೆಯೇ ತೋರಿಸುವರು. ಹಾಗೆ ತೋರಿಸದಿದ್ದರೆ ಅದು ಕಾವ್ಯವಾಗಲಾರದು. ಈ ವಿಷಯ ಹಾಗಿರಲಿ.

ಕವಿಗಳು ವಿಷಯವನ್ನು ನಿರೂಪಿಸುವ ಪ್ರಕಾರವನ್ನು ನೋಡೋಣ. ಅದು ಬೇರೆ ಒಂದು ಕ್ರಮವಾಗಿದೆ. ಪಾಠಕರಲ್ಲಿ ಉತ್ಸಾಹವನ್ನು ಹುಟ್ಟಿಸಿ ಅವರ ಚಿತ್ತವನ್ನು ಅಪಹರಿಸುವುದು. ಈ ವಿಷಯವನ್ನು ಹಿಂದೆ ಅನುವಾದ ಮಾಡಿರುವ ಕವಿವಾಕ್ಯಪ್ರಪಂಚವು ನಿದರ್ಶಿಸುವುದಾದರೂ ಒಂದೆರಡು ಉದಾಹರಣೆಗಳನ್ನು ಕೊಡುವುದರಲ್ಲಿ ಪ್ರಯೋಜನ ಕಾಣಬರುತ್ತದೆ.

ಮಲ್ಲಿನಾಥಪುರಾಣ, ಮಾವಿನ ಮರದ ವರ್ಣನೆ:—

ವ॥ (೧) ನಾನಾವಿಧವಾದ ಲತೆಗಳುಮನರಸನವಲೋಕಿಸುತ್ತಿರ್ಪುದುಂ,

ಆನಿರ್ದ ಬನದೊಳುಳಿದುವ ।
ನೇನಂ ನೃಪ ನೋಳ್ಪೆ ಬರ್ಪುದೆಂಬಂದದಿನಂ ॥
ದೇನುಲಿದುದೊ ಪಿಕಮಧುರ ।
ಧ್ವಾನದಿನಾರಕ್ತಕೋರಕಂ ಸಹಕಾರಂ ॥೧॥

ಆಗಳದಱ ಸಹಜಸೌಂದರ್ಯಮಂ ಸೌಂದರ್ಯಪುರಂದರನೆಮೆಯಿಕ್ಕದಲಂಪು ಪೊಂಪುಳಿವೋಗೆ ನೋಡಿ,

ಅಲರ್ಗೊಂಚಲ್ಗಳನೇರಿ ತುಂಬಿ ಮಧುಪಾನಕ್ರೀಡೆಯೊಳ್ ಸೊರ್ಕಿ ಮಂ ।
ಜುಳಮಂದ್ರಧ್ವನಿಯಿಂದಮೇಂ ಮೊರೆದುವೇ ವಾಚಂಯಮಂ ಸಂಯಮಂ ॥
ತೊಲಗಿತ್ತೇ ಕನರ್ಗರ್ಜಿ ಕೋಗಿಲೆಗೆ ಕಾಯಂ ಕರ್ಚಿ ಮೋಣ್ ನಾಟಕಂ ।
ನಲಿದತ್ತೇ ಗಿಳಿ ಚೂತವಲ್ಲದ ವೃಥಾಸ್ಥೂಲಾವನೀಜಾತದೊಳ್ ॥೨॥

ಎಂದು ಕೆಂದಳಿರ ಗೊಂದಣದೊಳುಲಿದು ಗಳಪುವರಗಿಳಿಯ ಕಳಕಳಮಂ ಕುಸುಮರಸಮಂ ಸವಿದು ಮೊರೆವ ಚಂಚರೀಕದಿಂಚರಮುಮಂ ಕಳಿಕೆಗರ್ಚಿದ ಕಷಾಯಕಂಠವಾದ ಕಳಕಂಠದಕುಂಠಕಂಠಮುಮಂ ಶ್ರುತಿಪಥಕ್ಕತಿಥಿಮಾಡಿ,

ಆಸದಳವಾಯ್ತು ರೂಪಮದಮುಗ್ಗಳವಾದುದು ಯೌವನೋದಯಂ ।
ಪೊಸಸಿರಿವಂತನಾಸಿರಿಯುಮಂ ಜನಕಂ ಮಧು ಕೊಟ್ಟನಿಂ ವಿಚಾ ॥
ರಿಸುಗುಮೆ ಚೂತನೊಲ್ದು ಪೊರೆಗುಂ ಗಿಳಿಯುಂ ಮುಖರಾಗಿಯುಂ ಮಧು ।
ವ್ಯಸನಿ ಮದಾಳಿಯುಂ ಸಹಜವಕ್ರವಚಸ್ವಿಯುಮನ್ಯಪುಷ್ಟನುಂ ॥೩॥

ಎಂದು ಮಾಕಂದಮಂ ವಕ್ರೋಕ್ತಿಯಿಂ ಪೊಗಳ್ದು ತಣಿಯದೆ ರಾಜಮಕರಧ್ವಜಂ ಸುಕರಕವಿರಾಜಮನೋಹರನ ಮೊಗಮಂ ನೋಳ್ಪುದುಂ;

---

ಟಿಪ್ಪಣಿ—೩. "ಯೌವನಂ ಧನಸಂಪತ್ತಿಃ ಪ್ರಭುತ್ವಮವಿವೇಕತಾ । ಏಕೈಕಮಪ್ಯನರ್ಥಾಯ ಕಿಮು ಯತ್ರ ಚತುಷ್ಟಯಂ ॥" ಎಂಬ ನೀತಿಯು ವ್ಯಂಗ್ಯಮರ್ಯಾದೆಯಿಂದ ಈ ಪದ್ಯದಲ್ಲಿ ಗಮ್ಯವಾಗುತ್ತದೆ. ವಿಚಾರಿಸುಗುಮೆ = ವಿಚಾರಿಸಬೇಕೇ ಏನು? ಎಂಬ ಕಾಕ್ವರ್ಥವು ಇದೆ. ವ್ಯಂಗ್ಯಪರ್ಯಾಯದಲ್ಲಿ ಮುಖರಾಗಿ ಎಂದರೆ ಇಚ್ಛಕವಾಡುವನು ಎಂದೂ, ಮಧುವ್ಯಸನಿ ಎಂದರೆ ಮದ್ಯಪಾಯಿಯೆಂದೂ, ಸಹಜವಕ್ರವಚಸ್ವಿ ಎಂದರೆ ಕುಯುಕ್ತಿಯ ಮಾತ ಆಡುವವನು ಎಂದೂ, ಅನ್ಯಪುಷ್ಟನು ಎಂದರೆ ತಬ್ಬಲಿ, ಅಥವಾ ಪೋಲಿ ಎಂದೂ ಅರ್ಥವಾಗುತ್ತದೆ.

ಪೂಮಿಡಿಯಿಂ ಕುಸುಮಸ್ತಬ ।
ಕಾಪೋದಕ್ಕೆಱಗಿದಳಿಯು ಬಳಗದಿಸಂದೇಂ ॥
ಮಾವ-ರದೆಳಗೊಂಬೆಸೆದುದೊ ।
ಕಾಮುನಯುಕಪಿಂಡಶೃಂಖಲಾದಂಡದವೋಲ್ ॥ ೪ ॥
ಪಸರಿಸಿ ಶಾಖಾಭುಜದೊಳ್ ।
ಮಿಸುಗುವ ನಖಪದಮನಧರಪಲ್ಲವಮುಮಂ ಖಂ ॥
ಡಿಸಿ ರಕ್ತತುಂಡನೇಂ ಪು ।
ಟ್ಟಿಸಿದ-ದೊ ಸಹಕಾರಲತಿಕೆಗಂಗಜಶರಮಂ ॥ ೫ ॥

ಎಂದು ಪೇೞ್ದಂ.

—ಲೀಲಾವತಿ, ಸೂರ್ಯಾಸ್ತಮಯ ವರ್ಣನೆ :—

(೨) ದಿನಪಂ ತಾಳ್ದಿದ ರಾಗಮಂ ತೊರೆಯುತುಂ ದೇಶಾಂತರಕ್ಕೈದೆ ಪ ।
ದ್ಮಿನಿ ತಾಂ ಬಿಟ್ಟಿರಲಳ್ಕಿ ತಾವರೆಮೊಗಂ ಕಂದುತ್ತಿರಲ್ ಸಂಜೆಯಿಂ ॥
ಬ ಸವಂ ವಲ್ಕಲಮಾಂತು ಭೃಂಗಪಟಲೀರುದ್ರಾಕ್ಷಮಾಲಾಸರಂ ।
ತನಗೊಪ್ಪಲ್ ತಪಮಾಚರಿಕ್ಕುಮುಪವನಂ ಸೇರಲ್ಕೆನಲ್ ತೋಱುಗುಂ ॥

—ಲೀಲಾವತಿ, ಗರ್ಭವರ್ಣನೆ : —

(೩) ಸೆಳೆನಡುವ ನುಡಿವಭರದಿಂ ।
ಬಳೆವಂತಿರೆ ಬಳೆಯೆ ಮೊಲೆಗಳವಱೊಳ್ ಚಲದಿಂ ॥
ಬಳೆವಂತು ಬಳೆಯೆ ನಡುವು ।
ಮ್ಮಳಿಸಿದವೋಲ್ ಕರ್ಗಿ ಕೋಡುವವಱ ಮೊಗಂಗಳ್ ॥ ೧ ॥
ಪ್ರಿಯನ ಮೊಗಕ್ಕೆ ನಾಣ್ಚಿಯೆ ಬೆಳರ್ಪವೊಲಾಯ್ತು ಮುಖೇಂದು ಮುಗ್ಧೆ ಮುಂ।
ಬಯಕೆಯೊಳಪ್ಪಲೀಯದಿರೆ ಕಾರ್ಶ್ಯದಿನಿಂ ಕುದಿದಿಟ್ಟ ಕೆಯ್ಯ ಬೆಂ ॥
ಕೆಯೊಳೆ ಕರಂಗಿದಂತಿಸೆದುದುತ್ಕುಚಚೂಚುಕಮೊಳ್ಪಸಿರ್ಗೆ ಮೆ ।
ಯ್ಮೆಯನಿಡೆ ಗರ್ಭಶೋಭೆ ಮುಳಿದಂತಿರೆ ಪೋಯ್ತುವಳಿಂ ವಳಿತ್ರಯಂ ॥ ೨ ॥

(೪) ಜಯನೃಪಕಾವ್ಯ, ಸುಲೋಚನಾದೇವಿಯ ಅವಯವ ಸೌಂದರ್ಯವರ್ಣನೆ :—

ನಾಸಿಕ—ಸಿರಿ ತನ್ನಯ ನಲ್ಮೆಯ ಶಯ್ಯಾಮಂ ।
ದಿರದೊಳಗದಿರದೆ ಚಂಪಾಳೀಕುಲ ।
ಘುರವಣೆಯಿಂ ಪುಗೆ ದೋಷಂ ಪೊರ್ದುಗುಮೆನುತದು ಪುಗದಂತೆ ।

ಭರದಿಂ ಕಾಪಿಕ್ಕಿದ ನವಚಂಪಕ ।
ದರೆಮುಗುಳಿದು ತಾನೆಂಬಂದದಿ ಬಂ ।
ಧುರಮಾದುದು ನಾಸಿಕಮಾಸರಸಿಜಸಲ್ಲಲಿತಾನನಗೆ ॥ ೧ ॥

ಕಿವಿ—ಉದಧಿಯುಣಿುಗಿಯುಗ್ರನ ಸತಿ ಶಾರದೆ ।
ಮದನಮುಹಿಸಿ ಮೆಯ್ಗಣ್ಣಿನ ಪಟ್ಟದ ।
ಸುದತಿಯುಗ್ರಿಮ್ಮಡಿಯಾದ್ಯೆಸಿರಿ ಪೊಸಗಾಡಿ ಚದುರು ಚೆಲ್ವು ॥
ವಿದಿತವಿಭವಮುಂಟೇಕೆಗೆನುತ ಮುಂ ।
ಜಿದಿ ಬರೆದಳಕಾಕ್ಷರಪಙ್ಕ್ತಿಯು ತುದಿ ।
ಮೊದಲೊಳಗೆಸೆವಾಶ್ರೀಕಾರಂಬೋಲು ಶ್ರುತಿಯೊಪ್ಪಿದುದವಳ ॥ ೩ ॥

ಹುಬ್ಬು—ಮಿಸುಗುವ ನಗೆಗಣ್ಣೆಂಬಂಬುಜಮಂ ।
ನೊಸಲೆಂಬೆಳವೆಜೆ ಬಾಧಿಸಲೆಸೆಉಬ್ಬುಂ ।
ಮುಸಕದಿ ಬಂದು ಪಿಡಿವ ಸಮಯಕೆ ಬಿಡು ಬಾಧಿಸಬೇಡೆನುತ ॥
ಕುಸುಮಶರಂ ತನ್ನೆಡಗೆಯ್ಯೆರಲೆಯು ।
ಪೊಸಕೋಡನದರ್ಕೆಡ್ಡಂ ಪಿಡಿದವೊ ।
ಲಸಿಯುಳ ಲಲಿತಭ್ರೂಲೇಖೆ ಕರಂ ಕಣ್ಗೆ ವಿರಾಜಿಸಿತು ॥

(೫) — ಮಲ್ಲಿನಾಥಪುರಾಣ, ಬೆಳ್ದಿಂಗಳ ವರ್ಣನೆ :—

ಕರ್ಪಿಲ್ಲದ ಕಾಡಿಗೆ ಕಂ ।
ದರ್ಪನ ಜಸಮಿರುಳ ತಣ್ಪಿಸಿಲ್ ಬೆಳತಿಗೆಮಿಂ ॥
ಚಿರ್ಪಿಲ್ಲದಿಂಗಡಲ್ಬಿಧು ।
ಸರ್ಪನ ಪೆರೆ ಜಲಕನಾಯ್ತು ಪೊಸಬೆಳ್ದಿಂಗಳ್ ॥

(೬) " ನಾಲಗೆವೆಳವರ್ " " ಬೆಳ್ಳಕ್ಕರಿಗರ್ " " ಮೂಗಕ್ಕೆ " ಇತ್ಯಾದಿ.

ಹೀಗೆ ಅನೇಕ ದೃಷ್ಟಾಂತಗಳನ್ನು ಕೊಡಬಹುದು. ಈ ಉದಾಹರಣೆಗಳನ್ನು ಚೆನ್ನಾಗಿ ಪರ್ಯಾಲೋಚಿಸಿ ನೋಡಿದರೆ ಕವಿ ವಾಕ್ಯಕ್ಕೂ ಇತರ ವಾಕ್ಯಕ್ಕೂ ಇರುವ ಭೇದವು ತಿಳಿದುಬರುವುದು. ಹೀಗಿರುವುದರಿಂದಲೇ ಕಾವ್ಯವನ್ನು ಕಲೆಗಳ ಗುಂಪಿನಲ್ಲಿ ಸೇರಿಸುವುದು. ಅನೇಕರು ಇದನ್ನು ಉತ್ತಮವಾದ ಕಲೆಯೆಂದು ಹೇಳುವುದಕ್ಕೆ ಇದೇ ಕಾರಣ. " ಕಾವ್ಯದಲ್ಲಿ ನಿರೂಪಿಸುವ ವಿಷಯವು ಲೋಕದಲ್ಲಿ ಸಹಜವಾಗಿರುವ ವಸ್ತುಸ್ಥಿತಿಯಹಾಗೆ ತೋರಬೇಕು ; ನಿಜವಾಗಿ ಸಹಜವಾದ

ವಸ್ತುಸ್ಥಿತಿಯೇ ಆಗಕೂಡದು. ಕಾವ್ಯವಿಷಯವು ಪ್ರಪಂಚದ ಪ್ರತಿಕೃತಿಯಾಗಿರುವುದರಿಂದ ಪ್ರಪಂಚಕ್ಕಿಂತ ಬೇರೆಯಾಗಿಯೇ ಇರಬೇಕು." ಎಂದು ಒಬ್ಬ ಕಾವ್ಯರಸಜ್ಞನು ಅಭಿಪ್ರಾಯಪಡುತ್ತಾನೆ. ಆದುದರಿಂದಲೇ ಉಪಮಾನ, ಉತ್ಪ್ರೇಕ್ಷೆ, ರೂಪಕ, ಅತಿಶಯೋಕ್ತಿ, ವಕ್ರೋಕ್ತಿ, ಪ್ರಾಸಯಮಕಾದಿ, ಅನುಕರಣ, ಮುಂತಾದುವುಗಳಲ್ಲಿ ಕವಿಗಳು ವಿಶೇಷವಾಗಿ ಕಾಲವನ್ನು ಕಳೆವರು.

ವಸ್ತುಗಳ ಸಹಜಸ್ಥಿತಿಗೂ, ವರ್ಣನಾಸ್ಥಿತಿಗೂ ಇರುವ ಭೇದವು ಇಂಥದೆಂದು ಸ್ವಲ್ಪಮಟ್ಟಿಗೆ ತಿಳಿಸಲಾಯಿತು. ವಿಶೇಷವಾಗಿ ಪರಿಚಯ ಮಾಡುತ್ತ ಬಂದರೆ, ಆ ವ್ಯತ್ಯಾಸವು ಇನ್ನೂ ಚೆನ್ನಾಗಿ ತಿಳಿದುಬರುವುದಲ್ಲದೆ,

" ದ್ರಾಕ್ಷಾ ಮ್ಲಾನಮುಖೀ ಜಾತಾ । ಶರ್ಕರಾಪ್ಯಶ್ಮತಾಂಗತಾ ॥
ಸುಭಾಷಿತರಸಸ್ಯಾಗ್ರೇ । ಸುಧಾಭೀತಾ ದಿವಂಗತಾ ॥" ಎಂಬ ಮರ್ಯಾದೆಯಲ್ಲಿ ಸುಭಾಷಿತದ ಮಾಧುರ್ಯಕ್ಕೆ ಯಾವುದೂ ಸರಿಹೋಲದು ಎಂಬ ನಿಶ್ಚಯವೂ ಹುಟ್ಟುತ್ತದೆ.

ಇದೇರೀತಿಯಲ್ಲಿ ಕಥೆಯವಿಷಯದಲ್ಲಿಯೂ ಲೋಕಸ್ಥಿತಿಗೂ ಕಾವ್ಯನಿರೂಪಣಸ್ಥಿತಿಗೂ ಭೇದವುಂಟೆಂಬುದನ್ನು ನಿರೂಪಿಸಬಹುದು, ಕಥೆಯೆಂದರೆ ಒಬ್ಬನ ಅಥವಾ ಅನೇಕರ ಜೀವದ್ದಶೆಯಲ್ಲಿ ನಡೆದ ವಿಷಯಗಳನ್ನು ಜೋಡಿಸಿ ಹೇಳುವಿಕೆ. ನಿಜವಾಗಿ ಒಬ್ಬನ ಜೀವಕಾಲದಲ್ಲಿ ನಡೆದುದಕ್ಕೂ, ಅದರ ಹೇಳುವಿಕೆಗೂ ಬಹು ಭೇದವಿದ್ದೇ ಇರುವುದು. ಉದ್ಗ್ರಂಥಗಳಲ್ಲಿ ನಿರೂಪಿತವಾದ ಮಹಾಪುರುಷರ ಚರಿತ್ರೆಯಿಂದ ಈ ಭೇದವನ್ನು ತಿಳಿದುಕೊಳ್ಳಬಹುದು. ಜೀವದ್ದಶೆಯಲ್ಲಿ ಒಬ್ಬ ಮಹಾರಾಜನ ಸಮೀಪವರ್ತಿಗಳಾಗಿ ಅವನ ನಡೆನುಡಿ ವ್ಯವಹಾರಗಳನ್ನು ನೋಡುತ್ತಿದ್ದ ಜನಗಳೂ ಕೂಡ ಆ ರಾಜನ ಗ್ರಂಥರೂಪವಾದ ಚರಿತ್ರೆಯಲ್ಲಿ ಅನೇಕವಾದ ಅತಿಶಯದ್ಯೋತಕವಾದ ಧರ್ಮಬೋಧವಾದ ಹೊಸಸಂಗತಿಗಳನ್ನು ಕಾಣುವರು. ಒಂದುಕಾಲದಲ್ಲಿ ಅತ್ಯಲ್ಪವಾಗಿ ಜನಗಳ ಗಮನಕ್ಕೆ ಬಾರದ ವಿಷಯವು ಕೊನೆಗೆ ಫಲಕಾಲದಲ್ಲಿ ಮಹತ್ತಾಗಿ ಪರಿಣಮಿಸಿ, ಆಕಸ್ಮಾತ್ತಾಗಿ ಸಂಭವಿಸಿದಂತೆ ಕಂಡುಬರುವುದುಂಟು. ಫಲದಿಂದ ಕಾರಣವು ಅನುಮೇಯವಾಗುವುದು ಬಹು

* ಟೀಕು—ಸುಭಾಷಿತರಸದ ಮಹಿಮೆಯನ್ನು ಕೇಳಿ ಹೆದರಿಕೊಂಡು ಮಧುರಪದಾರ್ಥಗಳೆಂದು ಹೆಸ್ರುಹೊಂದಿದ ದ್ರಾಕ್ಷೆಯು ಮುಖವುಳ್ಳದಾಯಿತು; ಸಕ್ಕರೆಯು ಕಲ್ಲಾಯಿತು; ಅಮೃತವು ದೂರದಲ್ಲಿರುವ ಸ್ವರ್ಗದಲ್ಲಿ ಅಡಗಿಕೊಂಡಿತು.

ಕಷ್ಟ. ಮಹತ್ತಾದ ಕಾರ್ಯಕ್ಕೆ ಅತ್ಯಲ್ಪವಾದ ಕಾರಣದ ನಿರೂಪಣವು ನಂಬಿಕೆಗೆ ವಿಷಯವಾಗುವುದಿಲ್ಲ. ಕಾರ್ಯಕಾರಣಗಳಿಗೆ ನಂಬಿಕೆಗೆ ಯೋಗ್ಯವಾಗುವಂತೆ ಸಂಗತಿಗಳನ್ನು ಕಲ್ಪಿಸಬೇಕಾಗಿ ಬರುವುದು. ಹೀಗಿರುವುದರಿಂದ ಕವಿಗಳು ನಂಬಿಕೆಗೆ ವಿಷಯವಾಗುವಂತೆ ಹೊಸಸಂಗತಿಗಳನ್ನು ಕಲ್ಪಿಸಿಯೋ, ಇಲ್ಲವೆ ನಡೆದ ಸಂಗತಿಗಳನ್ನೆಲ್ಲಾ ಕಾಲವ್ಯತ್ಯಕ್ರಮವನ್ನು ಲಕ್ಷ್ಯಕ್ಕೆ ತಾರದೆ ಜತೆಗೊಳಿಸಿಯೋ ನಿರೂಪಿಸುವರು. ಒಬ್ಬ ಪುರುಷನನ್ನು ವರ್ಣಿಸುವಾಗ ಅವನ ಸಹಜಸ್ಥಿತಿಯನ್ನು ಪ್ರಾಯಶಃ ತಿಳಿಸುವುದಿಲ್ಲ. ಹಾಗೆ ತಿಳಿಸುವುದು ಕವಿಗಳ ಉದ್ದೇಶವೆಂದು ತೋರುವುದಿಲ್ಲ. ಮಹಾಪುರುಷರ ವರ್ಣನೆಯಲ್ಲಿ ಲೋಕವು ಅವರಂತೆ ಆಗಲು ಯತ್ನಿಸಬೇಕೆಂಬುದೇ ಕವಿಗಳ ವರ್ಣನೆಗೆ ತಾತ್ಪರ್ಯವು. ಲೋಕಕಂಟಕರ ವರ್ಣನೆಯಲ್ಲಿ ಅವರ ದುರ್ಗುಣಗಳನ್ನು ಎಲ್ಲರೂ ಪರಿತ್ಯಾಗ ಮಾಡಬೇಕೆಂಬುದೇ ಕವಿಗಳ ಉದ್ದೇಶವು. ಸಾಮಾನ್ಯ ಪುರುಷರ ವರ್ಣನೆಯಲ್ಲಿ ಲೋಕಸ್ಥಿತಿಯನ್ನು ಬೋಧಿಸಬೇಕೆಂಬುದೇ ಅವರ ಉದ್ದೇಶವಾಗಿರಬಹುದು. ಈವಿಧವಾದ ಉದ್ದೇಶಕ್ಕನುಸಾರವಾಗಿ ನಡೆದ ಚರಿತ್ರ ಕಥೆಗಳನ್ನು ಅಲ್ಲಲ್ಲೇ ಸ್ವಲ್ಪ ಮಾರ್ಪಡಿಸಬೇಕಾಗಿ ಬರುವುದು. ಅಲ್ಲದೆ ತಿಳಿಸಬೇಕೆಂದಿದ್ದ ವಿಷಯಗಳನ್ನು ರತ್ನಗಳಿಗೆ ಒರತೆ ಕೊಟ್ಟು ತೋರಿಸುವಂತೆ, ಉತ್ತೇಜಕವಾದ ಸಂಗತಿಗಳಿಂದ ಉಪಷ್ಟಂಭಿಸಿ ತೋರಿಸಬೇಕಾಗುವುದು. ಹಾಗೆ ತೋರಿಸದಿದ್ದರೆ ಆ ವಿಷಯವು ಪಾಠಕರ ಮನಸ್ಸನ್ನು ಎಳೆಯಲಾರದೆ ಹೋಗುವುದು. ಉದ್ದಿಷ್ಟಪುರುಷನಲ್ಲಿರುವ ಸುಗುಣ ದುರ್ಗುಣಗಳೆಲ್ಲವನ್ನೂ ಸಾಕಲ್ಯವಾಗಿ ವರ್ಣಿಸಿ ಪ್ರಯೋಜನವಿಲ್ಲ. ಉದ್ದೇಶಕ್ಕೆ ಎಷ್ಟು ಬೇಕೋ ಅಷ್ಟೇ ಆರಿಸಿಕೊಂಡರೆ ಸಾಕಾಗಿರುವುದು. "ನ ನಿರ್ದೋಷಂ ನ ನಿರ್ಗುಣಂ" ಎಂಬಂತೆ ಎಲ್ಲಾ ಭಾಗದಲ್ಲಿಯೂ ಪೂರ್ಣನಾದ ಮನುಷ್ಯನು ಸಿಕ್ಕುವುದು ಅಪರೂಪ. ಒಬ್ಬ ಪುರುಷವನ್ನೇ ಸುಗುಣಿಯಾಗಿಯೂ ದುರ್ಗುಣಿಯಾಗಿಯೂ ತೋರಿಸಲು ಸಾಧ್ಯವು. ಒಬ್ಬನು ಸುಗುಣಿ, ಮಹಾಧರ್ಮಿಷ್ಠನು, ಎಂದರೆ ಅವನಲ್ಲಿ ದುರ್ಗುಣಗಳು ಇಲ್ಲವೇ ಇಲ್ಲವೆಂದರ್ಥವಲ್ಲ. ದುರ್ಗುಣಗಳು ಸುಗುಣಗಳಿಗಿಂತ ಬಹುಕಡಮೆಯಾಗಿದ್ದುವೆಂದರ್ಥ. ಹೀಗಿರಲು ಕವಿಗಳು ಯಾವ ಭಾಗದಲ್ಲಿ ಯಾವನನ್ನು ಹೇಗೆ ತೋರಿಸಲು ಇಷ್ಟಪಡುವರೋ, ಅವನಲ್ಲಿರುವ ಆ ಭಾಗವನ್ನೇ ಆರೀತಿಯಲ್ಲಿ ತೋರಿಸುವರು. ಉದಾಹರಣೆಗಾಗಿ—ಧರ್ಮರಾಜನನ್ನು ಮಹಾತ್ಮನೆಂದು ವರ್ಣಿಸಲು ಯತ್ನಿಸಿದ ಕವಿಯು ಗದಾಯುದ್ಧದಲ್ಲಿ ಹೀಗೆ ಹೇಳುವನು :—

ದಾನಂ ಪ್ರಿಯವಾಕ್ಸಹಿತಂ ।
ಜ್ಞಾನಮಗರ್ವಂ ಕ್ಷಮಾನ್ವಿತಂ ಶೌರ್ಯಮೆನಿ ॥
ಪ್ಪೀನುಡಿಯುನೆ ನುಡಿಯಿಸಿದುದು ।
ದಾನಂ ಜ್ಞಾನಂ ಕ್ಷಮಾಗುಣಂ ಧರ್ಮಜನಾ ॥

ಈ ಪದ್ಯದಲ್ಲಿ ಸರ್ವಕಾಲದಲ್ಲಿಯೂ ಸರ್ವಾವಸ್ಥೆಯುಲ್ಲಿಯೂ ಒಂದೇಸ್ಥಿತಿಯು ಲ್ಲಿರುವುದೆಂಬುದು ಲೋಕಾನುಭವವಿರೋಧವಾಗಿರುವುದರಿಂದ ಧರ್ಮರಾಯನು ಪ್ರಾಯಶಃ ಹೀಗಿದ್ದನೆಂಬುದು ಕವಿಯ ತಾತ್ಪರ್ಯವೇ ಹೊರತು ಮತ್ತೆಬೇರೆ ಅಲ್ಲ. "ಅಶ್ವತ್ಥಾಮೋ ಹತಃ ಕುಂಜರಃ" ಎಂಬ ವಾಕ್ಯವೂ, ರಾಜ್ಯಕಾಂಕ್ಷೆಯಿಂದಲೂ ಶತ್ರುನಿರಸನ ಬುದ್ಧಿಯಿಂದಲೂ ಯುದ್ಧ ಮಾಡಿದನೆಂಬುದೂ, ಇತ್ಯಾದ್ಯನೇಕವಾದ ಇಂಥ ವಿಷಯಗಳು ಕವಿಯ ತಾತ್ಪರ್ಯವನ್ನು ದೃಢೀಕರಿಸುವುವಾಗಿವೆ. ವೈಶ್ರವಣ ಮಹಾರಾಜನ ವಿಷಯವಾಗಿ ಮಲ್ಲಿನಾಥ ಪುರಾಣದಲ್ಲಿ—

ಅವಿರುದ್ಧಮಿದೆಂಬಿನಮನು !
ಭವಿಸುವನಿಂದ್ರಿಯಸುಖಂಗಳಂ ಪಡೆದುಂ ವಿಾ ॥
ರವು ತನ್ನನವೆಂಬನ್ನೆಗ ।
ಮವನೀಶ್ವರನಪ್ಪುಕೆಯ್ದನಿಂದ್ರಿಯಜಯಮಂ ॥

ಎಂಬದಾಗಿ ಪ್ರವೃತ್ತವಾದ ಕವಿವಾಕ್ಯಕ್ಕೆ ಸಂಕುಚಿತಾರ್ಥವನ್ನಲ್ಲದೆ ಸಂಪೂರ್ಣಾರ್ಥವನ್ನು ಕಲ್ಪಿಸಲಾದೀದೀತೆ? ಒಂದು ಪಕ್ಷೀವಿಯೋಗವೂ, ಒಂದು ಆಲದಮರವು ಗಾಳಿಯಿಂದ ಉರುಳಿ ನೆಲದಲ್ಲಿ ಬೀಳುವುದೂ ನಿರ್ವೇದಕಾರಣವಾಗಿ ಅನೇಕ ಗ್ರಂಥಗಳಲ್ಲಿ ಉಪಪಾದಿಸಲ್ಪಟ್ಟಿವೆ; ಇಂಥವನ್ನು ನಂಬುವುದಕ್ಕೆ ಆಗುತ್ತದೆಯೋ? ಲೋಕಾನುಭವಕ್ಕೆ ವಿರೋಧವಷ್ಟೆ. ಭೋಜಮಹಾರಾಜನು ಕವಿಗಳಿಗೆ ಸನ್ಮಾನ ಕೊಡುವಾಗ "ಅಕ್ಷರಲಕ್ಷಂ ದದೌ" ಎಂದು ಹೇಳಿದ ವಾಕ್ಯಕ್ಕೆ ಯಥಾವತ್ತಾಗಿ ಅರ್ಥವನ್ನು ಯಾವ ವಿವೇಕಿಯೂ ಹೇಳುವುದಿಲ್ಲ.

ಕೋಟಿಯ ಕೊನೆದೆನೆ ನೆಗೆದಿರಿ ।
ವಾಟಿಸೆ ಕುದುರೆಗಳನವರ ಕಾಲ್ ನಡುಮುಗಿಲೊಳ್ ॥
ನಾಟುತಿರೆ ದಿನಕರಂ ಬರ ।
ಲಾಟಿಸುವಂ ದಕ್ಷಿಣೋತ್ತರಾಯಣಯುಗದೊಳ್ ॥ "

ಎಂಬ ಕವಿವಾಕ್ಯವನ್ನು ಸತ್ಯವೆಂದು ನಂಬುವುದಕ್ಕಾದೀತೆ? ಇಂಥವುಗಳಿಗೆ

ಉದ್ದೇಶಾನುಗುಣವಾಗಿ ಅರ್ಥಕಲ್ಪನೆ ಮಾಡಬೇಕು. ಅದುಹಾಗಿರಲಿ. ಒಂದು ವೇಳೆ ಪ್ರಯತ್ನಪಟ್ಟಾದರೂ ವರ್ಣ್ಯವಸ್ತುಗಳ ಸಹಜವಾದ ಸ್ಥಿತಿಯನ್ನು ತಿಳಿಸುವುದಕ್ಕಾಗುವುದೆ ಎಂದರೆ, ಆಗಲಾರದೆಂದು ತೋರುತ್ತದೆ. ಬಹುಕಾಲಕ್ಕೆ ಹಿಂದೆ ಬಾಲ್ಯದಲ್ಲಿ ನೋಡಿದ ತೋಟವನ್ನು ಈಗ ನೋಡಿದರೆ ಅದು ಬಲುಚಿಕ್ಕದಾಗಿ ಹೇಗೆ ಹೇಗೋ ಕಂಡುಬರುತ್ತದೆ. ನಾವು ಹಿಂದೆ ಅಜ್ಜಿಯ ಮಡಿಲಲ್ಲಿ ಕುಳಿತುಕೊಂಡು ಅತ್ಯಾದರದೊಡನೆ ಕೇಳಿದ ಕಥೆಯನ್ನು ಈಗ ಓದಿದರೆ ಅಷ್ಟು ರುಚಿಸುವುದಿಲ್ಲ. ಹಿಂದೆ ಅನುಭವಿಸಿದ ವಸ್ತುವನ್ನು ಜ್ಞಾಪಿಸಿಕೊಂಡರೆ ಅದು ವಿಸ್ತೃತವಾಗಿ ಮಹಿಮೆಯೊಡನೆ ಕೂಡಿದುದಾಗಿಯೋ ಇಲ್ಲವೆ ಸಂಕುಚಿತವಾಗಿ ಸಾಮಾನ್ಯವಾದುದಾಗಿಯೋ ತೋರಿಬರುವುದಲ್ಲದೆ ಇದ್ದಂತೆ ಎಂದಿಗೂ ಕಾಣಬರುವುದಿಲ್ಲ. ಹಿಂದೆ ಕಳ್ಳರ ಕೈಗೆ ಸಿಕ್ಕಿ ಪಟ್ಟ ಕಷ್ಟವನ್ನು ಸಂಭವಿಸಿದಹಾಗೆಯೇ ಹೇಳುವುದಕ್ಕಾದೀತೇ ? ಇಲ್ಲ, ಸ್ವಲ್ಪ ಹೆಚ್ಚುಮಾಡಿಯೋ, ಇಲ್ಲ ಕಡಮೆಮಾಡಿಯೋ ಹೇಳಬೇಕು. ಏಕೆಂದರೆ ನಾವು ಪಟ್ಟ ಕಷ್ಟವನ್ನು ಕೇಳುವವನಿಗೆ ತಿಳಿವಂತೆ ಮಾಡಬೇಕಷ್ಟೆ. ಒಬ್ಬನು ಬದುಕಿರುವಾಗ ಅವನಿಂದ ಹೊಂದಿದ ಅಲ್ಪ ಸಹಾಯವು ಅವನ ಮರಣವಾರ್ತೆಯನ್ನು ಕೇಳಿದಾಗ ವಿಶೇಷವಾಗಿ ತೋರಿಬರುವುದು. ಈ ಅರ್ಥವನ್ನು ಅರವಿನಲ್ಲಿರುವ “ ಶೆತ್ತವರ್ ಶೆಂದಾಮರೈ ಕಣ್ಣರ್ ” ( ಎಂದರೆ ಸತ್ತವನು ಕೆಂದಾವರೆಯ ಕಣ್ಣುಳ್ಳವನು ) ಎಂಬ ಗಾದೆಯು ತಿಳಿಸುವುದು. ಅಲ್ಲದೆ ಅತ್ಯಭಿಮತವಾದ ವಸ್ತುವಿನಲ್ಲಿ ವಿಶೇಷವಾಗಿ ಪ್ರೇಮವಿರುವುದರಿಂದ, ಆ ಪ್ರೇಮವನ್ನು ವ್ಯಕ್ತಗೊಳಿಸುವ ವಾಕ್ಯವು ಸಹಜವಾಗಿ ಹೆಚ್ಚುವುದು. ಹೀಗೆ ಅತ್ಯಹಿತವಾದ ವಸ್ತುವಿನಲ್ಲಿ ವಿಶೇಷವಾಗಿ ದ್ವೇಷವಿರುವುದರಿಂದ, ಆ ದ್ವೇಷವನ್ನು ತೋರಿಸುವ ವಾಕ್ಯವು ಮಿತಿಮೀರುವುದು. ಹೀಗಿರಲು ನಾವು ಅನುಭವಿಸಿದ ರೋಗ ರುಜನ ಹರ್ಷ ಸಂತೋಷಗಳನ್ನು ನೆನಸಿಕೊಂಡಾಗಲೂ ವರ್ಣಿಸಿದಾಗಲೂ ಅವುಗಳ ಸಹಜಸ್ಥಿತಿಯು ಹೋಗಿ ವಿಪರೀತವಾಗಿ ಆಗುವಾಗ, ಮತ್ತೊಬ್ಬನ ವಿಷಯದಲ್ಲಿ ಅವುಗಳನ್ನು ವರ್ಣಿಸಲು ಹೊರಟ ಯತ್ನವು ಸಹಜಸ್ಥಿತಿಯನ್ನು ಮತ್ತಷ್ಟು ಮೀರಿಯೇ ಹೋಗಬೇಕು. ಹೀಗಿರುವಾಗ ಕವಿಗಳ ವರ್ಣನೆಯು ಯಥಾವಸ್ಥಿತಿನಿರೂಪಣವಾಗಿ ಹೇಗಾಗುವುದು ? ಈ ಹೆಚ್ಚುಕಡಮೆಯು ಅಭಿನಿವೇಶಾನುಗುಣವಾಗಿ ಉಂಟಾಗುವುದು. ಆದುದರಿಂದ ಪ್ರತಿಪಾದ್ಯ ಪುರುಷರ ವರ್ಣನೆಯಲ್ಲಿ ಅಭಿನಿವೇಶಾನುಗುಣವಾಗಿ ಪರಿಗ್ರಾಹ್ಯಾಂಶಗಳು ವ್ಯತ್ಯಸ್ತವಾಗಿ ವರ್ಣಿಸಲ್ಪಡಲೇ ಬೇಕು.

ಈ ವಿಧವಾದ ಸಂಕೇತವು ಉದಾರಚರಿತರ ಚರಿತ್ರೆಯಲ್ಲಿ ಅಲ್ಲದೆ ಕಾವ್ಯಾಂಗವಾದ ತೋಟ, ಕೊಳ, ಊರು, ಕೋಟೆ ಮೊದಲಾದ ವರ್ಣನೆಗಳಲ್ಲಿಯೂ ಬರುತ್ತದೆ. ಉದಾಹರಣೆ—

“ ಮಲ್ಲಿಗೆಯಲ್ಲದೆ ಸಂಪಗೆ ।
ಯಲ್ಲದೆ ದಾಳಿಂಬಮಲ್ಲದೊಪ್ಪುವ ಚೆಂದಂ ॥
ಗಲ್ಲದೆ ಮಾವಲ್ಲದೆ ಕೌಂ ।
ಗಲ್ಲದೆ ಗಿಡುಮರಗಳೆಂಬುವಿಲ್ಲಾ ನಾಡೊಳ್ ॥ ” (ಕಬ್ಬಿಗರ ಕಾವಂ)

ಮತ್ತು ಪುಟ ೮೩ ರಲ್ಲಿ ಉದಾಹೃತವಾದ ೪ ನೆಯ ಪದ್ಯವನ್ನು ನೋಡಿ. ಆಗ ಇಂಥ ವರ್ಣನೆಗಳಿಗೆ ಅವುಗಳ ಅತಿಶಯವೇ ಮುಖ್ಯತಾತ್ಪರ್ಯವೆಂದು ತಿಳಿಯುತ್ತೀರಿ.

ಇಷ್ಟು ಪರ್ಯಂತ ಕಥಾ ನಿರೂಪಣಪ್ರಕಾರದಲ್ಲಿರುವ ಸಂಕೇತವನ್ನು ಸಾಮಾನ್ಯವಾಗಿ ನಿರೂಪಿಸಲಾಯಿತು. ಇನ್ನು ಮುಂದೆ ಕಥೆಗಳಲ್ಲಿ ಸಂವಿಧಾನಗಳನ್ನು ಕಲ್ಪಿಸಿ ಜೋಡಿಸುವುದರಲ್ಲಿರುವ ಸಂಕೇತವನ್ನು ಕುರಿತು ಸ್ವಲ್ಪ ವಿಚಾರಮಾಡುತ್ತೇನೆ.

ಕಥೆಯು ಪ್ರಾಯಶಃ ಮೂರು ವಿಧವಾಗಿರುವುದು. (೧) ಐತಿಹಾಸಿಕ, (೨) ಕಲ್ಪಿತ, (೩) ಮಿಶ್ರವು ಎಂದು. ಐತಿಹಾಸಿಕವೆಂದರೆ—ರಾಮಾಯಣ, ಮಹಾಭಾರತ, ಮೊದಲಾದುವುಗಳಲ್ಲಿ ಹೇಳಲ್ಪಟ್ಟಿರುವ ಮಹಾಪುರುಷರ ಚರಿತ್ರೆಯು. “ ಇತಿ ಹ ಆಸ ”— ಎಂದರೆ ಹೀಗಲ್ಲವೆ ಪೂರ್ವದಲ್ಲಿ ನಡೆಯಿತು, ಎಂಬ ಇತಿಹಾಸ ಶಬ್ದವ್ಯುತ್ಪತ್ತಿಯನ್ನು ನೋಡಿ, ಐತಿಹಾಸಿಕ ಪುರುಷರ ಚರಿತ್ರೆಯು ಸತ್ಯವಾದುದೆಂದು ಎಲ್ಲರೂ ನಂಬುವರು. ಇದು ನಿಜವಾದ ಕಥೆ. ಕಲ್ಪಿತವೆಂದರೆ—ಕವಿಬುದ್ಧಿ ಕಲ್ಪಿತವಾದ ಕಥೆಯು. ಇದು ನಡೆದ ಕಥೆಯಲ್ಲ. ಯಾವುದೋ ಒಂದು ಉದ್ದೇಶದಿಂದ ಕಲ್ಪಿಸಿದ ಕಟ್ಟುಕಥೆ. ಇದನ್ನು ಯಾರೂ ನಂಬುವುದಿಲ್ಲ. ಮಿಶ್ರವೆಂದರೆ— ಉಭಯಾತ್ಮಕವಾದುದು. ನಿಜವಾದ ಕಥೆಯೊಡನೆ ಉದ್ದೇಶಕ್ಕೆ ಬೇಕಾದ ಕಲ್ಪಿತ ಸಂದರ್ಭಗಳನ್ನು ಮೇಳಿಸಿ ಹೇಳಿರುವ ಕಥೆ. ರಘುವಂಶ, ಕುಮಾರಸಂಭವ, ಕಿರಾತಾರ್ಜುನೀಯ—ಇವುಗಳನ್ನು ಐತಿಹಾಸಿಕವೆಂದೂ; ಕಾದಂಬರಿ, ದಶಕುಮಾರಚರಿತೆ, ಮಾಲತೀಮಾಧವ, ಮೇಘದೂತ-ಇವುಗಳನ್ನು ಕಲ್ಪಿತವೆಂದೂ; ಶಾಕುಂತಲ, ಉತ್ತರರಾಮಚರಿತೆ, ಉನ್ಮತ್ತರಾಘವ-ಇವುಗಳನ್ನು ಮಿಶ್ರವೆಂದೂ ಹೇಳಬಹುದು.

ಲೋಕದಲ್ಲಿ ಪ್ರತಿಯೊಂದು ಯತ್ನವೂ ಯಾವುದೋ ಒಂದು ಉದ್ದೇಶವನ್ನು

ಅನುಸರಿಸಿ ಹೋಗುವಂತೆ ಕವಿಕೃತಿಯೂ ಒಂದು ಉದ್ದೇಶವನ್ನು ಅನುಸರಿಸಿಯೇ ಇರುವುದು. ಕಾವ್ಯದಲ್ಲಿ ಸಂತೋಷಜನನ, ವಸ್ತುಸ್ಥಿತಿನಿರೂಪಣ, ಕೃತ್ಯಾಕೃತ್ಯ ವಿವೇಚನ, ಧರ್ಮಬೋಧೆ, ಉತ್ತರೋತ್ತರ ಶ್ರೇಯೋಭಿವೃದ್ಧ್ಯುಪಾಯನಿರೂಪಣ— ಇವೇ ಮೊದಲಾದ ಅನೇಕ ಉದ್ದೇಶಗಳು ಇದ್ದೇ ಇರುವುವು. ಚಿತ್ರವನ್ನು ಬರೆವುದಕ್ಕೆ ಭಿತ್ತಿಯನ್ನಾಶ್ರಯಿಸುವಂತೆ ಜನಗಳಿಗೆ ಸುಖದುಃಖನಿಮಿತ್ತಕವಾದ ಪ್ರವೃತ್ತಿನಿವೃತ್ತಿಗಳನ್ನೂ ಅವನ್ನು ತಿಳಿಸುವ ವಾಗ್ರೂಪ ಕ್ರಿಯಾದಿಗಳನ್ನೂ ಸುಲಭವಾಗಿ ನಿರೂಪಿಸುವುದಕ್ಕೋಸ್ಕರವೂ, "ಸುಖಂ ಮೇ ಭೂಯಾತ್" ಎಂಬುದಾಗಿ ಸಕಲ ಜಂತುಗಳ ಪ್ರವೃತ್ತಿಯು ಇರುವಾಗ, ಅಂಥ ಪ್ರವೃತ್ತಿಯು ಸ್ವೇತರ ದುಃಖ ನಿಮಿತ್ತವಾಗದಂತೆ ಸ್ವತಃ ಉಂಟಾಗುವ ಉಪಾಯವನ್ನು ತಿಳಿಸುವುದಕ್ಕೋಸ್ಕರವೂ ‡; ಅಸತ್ಪ್ರವೃತ್ತಿಯಲ್ಲಿ ಜುಗುಪ್ಸೆಯನ್ನೂ ಸತ್ಪ್ರವೃತ್ತಿಯಲ್ಲಿ ಅಭಿರುಚಿಯನ್ನೂ ಹುಟ್ಟಿಸುವುದಕ್ಕೋಸ್ಕರವೂ; ಲೋಕದಲ್ಲಿ ನಡೆವ ಕಾರ್ಯಗಳಿಗೆ ಕಾರಣಗಳನ್ನು ಅನುಮಾನಿಸುವ ಕ್ರಮವನ್ನು ಕಲಿಸಿಕೊಡುವುದಕ್ಕೋಸ್ಕರವೂ; ಮನಸ್ಸಿಗೆ ಮಾತ್ರ ಪ್ರತ್ಯಕ್ಷವಾಗುವ ಅಗಾಧವಾದ ವಿಷಯಗಳನ್ನು ಕಂಡು ನೋಡಿದಂತೆ ಸ್ಪಷ್ಟವಾಗಿ ತಿಳಿಸುವುದಕ್ಕೋಸ್ಕರವೂ; ಅತೀಂದ್ರಿಯವಾದ ವಿಷಯಗಳನ್ನು ಇಂದ್ರಿಗೋಚರವಾಗುವಂತೆ ಮಾಡುವುದಕ್ಕೋಸ್ಕರವೂ— ಒಂದು ಕಥೆಯನ್ನು ಆಶ್ರಯಿಸಿ ಕವಿಗಳು ಪ್ರವರ್ತಿಸುವರು. ಈ ಅಭಿಪ್ರಾಯಗಳಲ್ಲಿ ಕೆಲವನ್ನು ಮಾತ್ರ ಮಮ್ಮಟನು—

"ಕಾವ್ಯಂ ಯಶಸೇಽರ್ಥಕೃತೇ ವ್ಯವಹಾರವಿದೇ ಶಿವೇತರಕ್ಷತಯೇ।
ಸದ್ಯಃ ಪರನಿರ್ವೃತಯೇ ಕಾಂತಾಸಮ್ಮಿತತಯೋಪದೇಶಯುಜೇ॥"

ಎಂಬ ಶ್ಲೋಕದಲ್ಲಿ ಬೇರೆ ಪ್ರಕರಣದಲ್ಲಿ ಬೇರೆ ಉದ್ದೇಶದಿಂದ ಹೇಳಿರುತ್ತಾನೆ. ಇಲ್ಲಿ "ಕಾವ್ಯ" ಶಬ್ದದಿಂದ ವರ್ಣನಾದಿಗಳಲ್ಲ, ವರ್ಣನಾದಿಗಳೇ ಅಂಗವಾಗಿ ಉಳ್ಳ ಅಂಗಿಯಾದ ರಮಣೀಯವಾದ ಶಬ್ದಾರ್ಥಸಂದರ್ಭವೇ ಹೇಳಲ್ಪಡುವುದೆಂದು ತೋರುತ್ತದೆ, "ಯಶಸೇ" "ಅರ್ಥಕೃತೇ" ಎಂಬುವು ಗೌಣಪ್ರಯೋಜನಗಳೆಂದು ಭಾವಿಸಬೇಕಾಗಿದೆ.

‡ಯಾವ ಸುಖವನ್ನು ಅನುಭವಿಸಬೇಕಾದರೂ ಮತ್ತೊಬ್ಬನಿಗೆ ಕಷ್ಟಕೊಟ್ಟೇ ಅನುಭವಿಸಬೇಕು. ಕಾವ್ಯಸುಖವು ಮಾತ್ರ ಹಾಗಲ್ಲ. ಇತರರಿಗೆ ಕಷ್ಟಕೊಡದೆ ತಾನೇ ಅನುಭವಿಸತಕ್ಕುದು. ಸಂಗೀತ ಚಿತ್ರಕಲೆಗಳೂ ಇಂಥವೆ.

ಮೇಲೆ ಹೇಳಿದ ಈ ಕಾವ್ಯೋದ್ದೇಶಗಳು ಒಂದೇ ಕಥೆಯಲ್ಲಿ ಸಿದ್ಧಿಸುವುದೂ ಉಂಟು; ಸಿದ್ಧಿಸದೇ ಇರುವುದೂ ಉಂಟು. ಕವಿಯು ಆರಿಸಿ ಕೊಳ್ಳುವ ಕಥೆಯು ಆತನ ಉದ್ದೇಶವನ್ನು ತೋರಿಸತಕ್ಕುದಾಗಿರಬೇಕು. ಕಥೆಯೆಂಬ ಭಿತ್ತಿಯನ್ನು ಆಶ್ರಯಿಸಿಯಲ್ಲವೆ ಹೃದ್ಯವಾದ ಚಿತ್ರವನ್ನು ರಚಿಸಬೇಕು. ಕವಿಗಳು ತಮ್ಮ ಉದ್ದೇಶವನ್ನು ಚೆನ್ನಾಗಿ ತಿಳಿಯಪಡಿಸುವುದಕ್ಕೆ ಅನುಕೂಲವಾದ ಕಥೆಯು †ಇತಿಹಾಸಗಳಲ್ಲಿ ಸಿದ್ಧವಾಗಿದ್ದರೆ ಅವುಗಳನ್ನೇ ಆರಿಸಿಕೊಳ್ಳುವರು. ಅಂಥ ಕಥೆಗಳಲ್ಲಿ ಜನರಂಜನೆಯೂ ಜನವಿಶ್ವಾಸವೂ ಉಂಟೆಂದು ಬಲ್ಲರು. ರಾಮಕೃಷ್ಣಾದಿ ಮಹಾಪುರುಷರ ಚರಿತ್ರೆಗಳಲ್ಲಿ ಸಹಜವಾಗಿಯೇ ಪ್ರೇಮವೂ ವಿಶ್ವಾಸವೂ ಜನಗಳಿಗೆ ಇರುತ್ತವೆ ಯಾದುದರಿಂದ ಅಂಥ ಕಥೆಗಳು ಸತ್ಪ್ರವೃತ್ತಿಯನ್ನು ಉಂಟುಮಾಡುವುದರಲ್ಲಿ ವಿಶೇಷ ಸಹಾಯಮಾಡುವುವು. ಅಲ್ಲದೆ ಚರಿತ್ರಪುರುಷರ ಪ್ರೇಮಾನುರಾಗ ದುಃಖ ದ್ವೇಷಾದಿಗಳನ್ನು ವರ್ಣಿಸುವುದರಿಂದ ಪಾಠಕರಲ್ಲಿ ಸುಖದುಃಖಾದಿಗಳನ್ನು ಸುಲಭವಾಗಿ ಹುಟ್ಟಿಸಬಹುದು. ಈ ಸೌಕರ್ಯವು ಇತರ ಕಥೆಗಳಲ್ಲಿ ಇರುವುದಿಲ್ಲ. ಆದುದರಿಂದಲೇ ನಮ್ಮ ಭರತಖಂಡದಲ್ಲಿ ಹುಟ್ಟಿದ ಉತ್ತಮ ಕಾವ್ಯಗಳೆಂದು ಗಣಿಸಲ್ಪಡುವುವುಗಳೆಲ್ಲಾ ಐತಿಹಾಸಿಕ ಪುರುಷರ ಚರಿತ್ರೆಗಳನ್ನೇ ಅವಲಂಬಿಸಿ ಹುಟ್ಟಿರುವುವು. ಹೀಗೆಯೇ ಗ್ರೀಕ್, ಲ್ಯಾಟಿನ್, ಜರ್ಮನ್, ಇಂಗ್ಲೀಷ್ ಇವೇ ಮೊದಲಾದ ಪ್ರಸಿದ್ಧವಾದ ಅನ್ಯ ಭಾಷೆಗಳಲ್ಲಿಯೂ ಉದ್ಗ್ರಂಥಗಳು ಆಯಾದೇಶಗಳ ಐತಿಹಾಸಿಕ ಪುರುಷರ ಚರಿತ್ರೆಗಳನ್ನು ಆಶ್ರಯಿಸಿರುವುವು.

ಯಾವ ಐತಿಹಾಸಿಕ ಕಥೆಯಲ್ಲಿ ತಮ್ಮ ಉದಾರವಾದ ಉದ್ದೇಶವನ್ನು ಸಂಪೂರ್ಣವಾಗಿ ನೆರವೇರಿಸಿಕೊಳ್ಳಲಾಗುವುದಿಲ್ಲವೋ, ಅಲ್ಲಲ್ಲಿ ಅಲ್ಪಸ್ವಲ್ಪ ವ್ಯತ್ಯಾಸಮಾಡುವುದರ ಮೂಲಕ ತಮ್ಮ ಉದ್ದೇಶವನ್ನು ನೆರವೇರಿಸಿಕೊಳ್ಳಲಾಗುವುದೋ ಅಂಥ ಕಡೆ ಅಂಥಂಥ ಭೇದವನ್ನು ಕಲ್ಪಿಸಿ ಆ ಕಥೆಯನ್ನೇ ಆಶ್ರಯಿಸುವುದು ಮೇಲಲ್ಲವೆ. ಅಂಥ ವ್ಯತ್ಯಾಸ ಮಾಡುವುದರಲ್ಲಿ ಐತಿಹಾಸಿಕ ಕಥಾವಿಷಯಕವಾದ ನಂಬಿಕೆಯಲ್ಲಿ ಯಾವ ಕೊರತೆಯೂ ಉಂಟಾಗಲಾರದು. ಕಲ್ಪಿತ ಕಥೆಗಳಿಗಿಂತ ಕಾವ್ಯೋದ್ದೇಶಗಳನ್ನು ಇದರಲ್ಲಿ ಸುಕರವಾಗಿ ಪಡೆಯಬಹುದು. ಹೇಗೆಂದರೆ—ಉದಾಹರಣೆಗಾಗಿ ಪ್ರಸಿದ್ಧವಾದ ಶಾಕುಂತಲ ನಾಟಕಕಥೆಯನ್ನು ವಿಮರ್ಶೆಮಾಡಿ ನೋಡೋಣ.

---

†ಇತಿಹಾಸಗಳೆಂದು ಪ್ರಸಿದ್ಧವಾದ ರಾಮಾಯಣ, ಮಹಾಭಾರತಗಳನ್ನೂ, ಅಷ್ಟಾದಶಪುರಾಣ, ಉಪಪುರಾಣಗಳನ್ನೂ ಈ ಪದವು ತೋರಿಸುತ್ತದೆ.

ಇದಕ್ಕೆ ಮೂಲವಾದ ಮಹಾಭಾರತದ ಶಕುಂತಲೋಪಾಖ್ಯಾನಕ್ಕೂ ಈ ನಾಟಕದ ಕಥೆಗೂ ಬಹಳ ಭೇದವಿದೆ. ದುಷ್ಯಂತ ಮಹಾರಾಜನು ಬೇಟೆಗೆಂದು ಹೊರಟು, ಮಧ್ಯದಲ್ಲಿ ಸಂಧಿಸಿದ ಕಣ್ವಾಶ್ರಮವನ್ನು ಪ್ರವೇಶಿಸಿ, ಕಣ್ವಋಷಿಯ ಪರ್ಣಶಾಲೆಯಲ್ಲಿ ಶಕುಂತಲೆಯನ್ನು ಕಂಡು, ಅವಳ ಸೌಂದರ್ಯಕ್ಕೆ ಬೆರಗಾಗಿ, ಅಂತಃಕರಣಪ್ರವೃತ್ತಿಯನ್ನು ಪರೀಕ್ಷಿಸಿ, ಗಾಂಧರ್ವವಿವಾಹದಿಂದ ಅವಳನ್ನು ವರಿಸಿ, "ಸ್ವಲ್ಪ ದಿವಸದಲ್ಲಿಯೇ ನಿನ್ನನ್ನು ಕರೆಯಿಸಿಕೊಳ್ಳುವೆನು. ಮೃಗಯಾರ್ಥವಾಗಿ ಬಂದಿರುವೆನು." ಎಂದು ಮಾತು ಕೊಟ್ಟು, ತನ್ನ ರಾಜಧಾನಿಗೆ ಬಂದಹಾಗೆಯೂ; ಅಲ್ಲಿಂದ ಮುಂದೆ ಕೆಲವು ವರ್ಷಗಳಾದಮೇಲೆ ಶಕುಂತಲೆಯು ಕುಮಾರನಾದ ತನ್ನ ಮಗನನ್ನು ಕರೆದುಕೊಂಡು, ಕಣ್ವರ ಅಪ್ಪಣೆಯಪ್ರಕಾರ ಋಷಿಪುತ್ರರ ಜತೆಯಲ್ಲಿ ರಾಜಾಸ್ಥಾನಕ್ಕೆಬಂದು, ಅಲ್ಲಿ ರಾಜನನ್ನುನೋಡಿ, "ಈತನೇ ನಿನ್ನ ಪುತ್ರನು, ಕಣ್ವಾಶ್ರಮದಲ್ಲಿ ನನ್ನಲ್ಲಿ ಜನಿಸಿದವನು, ಈತನನ್ನು ಅಂಗೀಕರಿಸು" ಎಂದು ಹೇಳಿದಹಾಗೆಯೂ; ಆದಕ್ಕೆ ರಾಜನು "ಇದು ನೀಚಳಾದ ಸ್ತ್ರೀಯು ರಾಜನನ್ನು ಸೇರುವ ಉಪಾಯವು" ಎಂಬದಾಗಿ ಧಿಕ್ಕರಿಸಲು; ಆ ಮಾತಿಗೆ ಶಕುಂತಳೆಯು ಕಿಡಿಕಿಡಿಯಾಗಿ ಅವನಿಗೆ ಪತಿಪತ್ನಿಯರ ಸ್ವರೂಪ, ಸಂಬಂಧ, ಪ್ರೇಮಾನುರಾಗ, ಧರ್ಮಾಧರ್ಮ, ಸತ್ಯಾನೃತ ಇವುಗಳ ಸ್ವರೂಪವನ್ನು ವಿಶದಪಡಿಸಿ, "ನೀನೇ ಸತ್ಯವಂತನು, ನೀನೇ ಧರ್ಮಾಧರ್ಮಪ್ರವರ್ತಕನು, ನೀನೇ ಆಚಾರಶೀಲನು, ಎಂದು ನಟಿಸುತ್ತಿರುವೆ? ನೀನು ಹೇಳಿದುದು ಸುಳ್ಳೇ ಆದರೆ ನಿನ್ನ ತಲೆಯು ಸಹಸ್ರ ಹೋಳಾಗಿ ಬಿರಿಯಲಿ!" ಎಂದು ಶಾಪಕೊಡುವಷ್ಟರೊಳಗೆ, "ಈತನೇ ನಿನ್ನ ಪುತ್ರನು, ಈತನನ್ನು ಅಂಗೀಕರಿಸು"ಎಂದು ಹೊರಟ ಆಕಾಶವಾಣಿಯನ್ನು ಕೇಳಿ, ದುಷ್ಯಂತನು ಶಕುಂತಳೆಯನ್ನು ಕುರಿತು, "ಜನಪವಾದಕ್ಕೆ ಹೆದರಿ ಹೀಗೆ ಹೇಳಿದೆನೇ ಹೊರತು, ನಿನ್ನಲ್ಲಿ ಯಾವವಿಧವಾದ ಅಪನಂಬಿಕೆಯೂ ಇಲ್ಲವೆಂದು ಹೇಳಿ ಸಮಾಧಾನಗೊಳಿಸಿ ಪರಿಗ್ರಹಿಸಿದಹಾಗೆಯೂ ಮಹಾಭಾರತದಲ್ಲಿ ಕಥೆಯು ಇದೆ.

ದುರ್ವಾಸಶಾಪವು ಅಂಗುಳೀಯಕಪ್ರದಾನವೂ ಶಕ್ರತೀರ್ಥದಲ್ಲಿ ಆದರ ಭ್ರಂಶವೂ, ಮೇನಕೆಯು ಶಕುಂತಲೆಯನ್ನು ಕರೆದುಕೊಂಡು ಹೋಗುವುದೂ, ಅಂಗುಳೀಯಕ ದರ್ಶನದಿಂದ ದುಷ್ಯಂತನಿಗೆ ಶಕುಂತಲಾಸ್ಮರಣವೂ, ಇಂದ್ರಲೋಕ ಗಮನವೂ, ಬರುವ ಮಾರ್ಗದಲ್ಲಿ ಪುತ್ರದರ್ಶನಪೂರ್ವಕ ಶಕುಂತಲಾಸಂಗಮವೂ ಕವಿಯಿಂದ ಕಲ್ಪಿತವಾದ ಮುಖ್ಯಭೇದಗಳು. ಇವು ಕವಿಯ ಸಾಮರ್ಥ್ಯವನ್ನು ಚೆನ್ನಾಗಿ ತೋರಿಸುವುವು. ಹೇಗೆಂದರೆ:—

ಈ ನಾಟಕದಲ್ಲಿ ಧರ್ಮ, ಲೋಕ ವ್ಯವಹಾರ, ಇವನ್ನು ತಿಳಿಸುವುದಲ್ಲದೆ ಮನುಷ್ಯ ಸುಖಕ್ಕೆ ಕಾರಣಭೂತವಾದ ಅನುರಾಗ ಪ್ರಪಂಚವನ್ನು ತಿಳಿಸುವುದೇ ಕವಿಗೆ ಉದ್ದೇಶವಿರಬಹುದು. ಇಲ್ಲಿ ಮೊದಲು ರಸವನ್ನು ತಿಳಿಯಪಡಿಸುವ ಉದ್ದೇಶದಿಂದ ಕಥೆಯಲ್ಲಿ ಮಾಡಿರುವ ವ್ಯತ್ಯಾಸದ ಚಮತ್ಕಾರವನ್ನು ಯಥಾಮತಿ ವಿಚಾರಿಸೋಣ. ಈ ನಾಟಕದಲ್ಲಿ ಶೃಂಗಾರ ರಸವೇ ಪ್ರಧಾನವಾದುದು. ಭಾರತ ಕಥೆಯನ್ನು ಇದ್ದ ಹಾಗೆಯೇ ನಾಟಕರೂಪವಾಗಿ ಮಾಡಿದ್ದರೆ ಶೃಂಗಾರರಸವು ಮುಖ್ಯರಸವಾಗಲಾರದು. ಕರುಣರಸವೇ ಮುಖ್ಯರಸವಾಗುವುದು. ಅದೂ ಅಷ್ಟು ವಿಸ್ತೃತವಾಗಲಾರದು. ಆಕಸ್ಮಿಕವಾಗಿ ಶಕುಂತಲಾಸಂದರ್ಶನದಿಂದ ಶೃಂಗಾರರಸವು ಅಂಕುರಿತವಾದರೂ ಅದು ಎಲೆಬಿಟ್ಟು ಲತೆಯಾಗಿ ಫಲೋನ್ಮುಖವಾಗಿ ಆಗುವುದನ್ನು ತಿಳಿಸುವುದಕ್ಕೆ ಆ ಕಥೆಯಲ್ಲಿ ವಿಶೇಷವಾಗಿ ಯಾವ ಆಧಾರವೂ ಇಲ್ಲ. ಬಳಿಕ ಪುತ್ರನನ್ನು ಕರೆದುಕೊಂಡು ಶಕುಂತಲೆಯು ಪತಿಯನ್ನು ಕಂಡಾಗಲೂ ಅವನು ಧಿಕ್ಕರಿಸಿದಾಗಲೂ ಅವರವರ ವಾಗ್ವಾದದಲ್ಲಿಯೂ ಕರುಣರಸಕ್ಕೇ ಹೊರತು ಶೃಂಗಾರರಸದ ಉಪಚಯಕ್ಕೆ ಯಾವ ಅವಕಾಶವೂ ಇಲ್ಲ. ಮತ್ತು ಶಕುಂತಲೆಯ ದುಃಖವನ್ನು ನೋಡಿದರೆ ಪ್ರೇಕ್ಷಕರಲ್ಲಿ ದುಃಖಾವಿರ್ಭಾವವೂ, ಅವಳ ಕೋಪದಲ್ಲಿ ಕೋಪವೂ ಬರುವುವಲ್ಲದೆ ಸಾಧ್ವಿಯಾದ ಶಕುಂತಲೆಗೂ ಇಂಥ ದುರ್ದಶೆಯೊದಗಿತಲ್ಲಾ ಎಂಬ ದುಃಖವೂ ಉಂಟಾಗುವುದು. ಕೊನೆಗೆ ಆಕಾಶವಾಣಿಯಾದಾಗಲೂ ಕರುಣ ರಸವೇ ಹೊರತು ಶೃಂಗಾರ ರಸವಿಲ್ಲ. ಅವರು ಸುಖವಾಗಿ ಬಾಳುತ್ತಿದ್ದರು ಎಂಬುದರಲ್ಲಿ ಶೃಂಗಾರರಸವು ಹುಟ್ಟಿದರೂ ಅದು ಪ್ರಧಾನ ರಸವಾಗಲಾರದು. ಅದು ವೃಕ್ಷರೂಪವಾದ ಕರುಣ ರಸಕ್ಕೆ ಪಾತಿಯಂತಾಗುವುದು. ಆದುದರಿಂದ ಭಾರತ ಕಥೆಯಲ್ಲಿ ಆದ್ಯಂತಗಳಲ್ಲಿ ಶೃಂಗಾರರಸವು ಹುಟ್ಟಿದರೂ ಕರುಣ ರಸವೇ ಪ್ರಧಾನ ರಸವಾಗುತ್ತದೆ. ಆ ಕರುಣರಸವೂ ಕೂಡ ಪ್ರೇಕ್ಷಕರ ಹೃದಯದಲ್ಲಿ ನೆಲೆಗೊಂಡು ವೃದ್ಧಿಯಾಗಿ ಹೃದಯವನ್ನೆಲ್ಲಾ ಆಕ್ರಮಿಸಿಕೊಂಡು ಅದನ್ನು ಹಿಗ್ಗಿಸುವಂಥದಾಗಿ ಆಗುವುದಿಲ್ಲ. ಆದುದರಿಂದ ಕವಿಯು ಕಥೆಗೆ ನೂತನವಾದ ಸಂದರ್ಭಗಳನ್ನು ತಂದು ಸೇರಿಸಿ ವಿಸ್ತರಿಸಿ ಆ ಮೂಲಕ ಶೃಂಗಾರರಸವು ಬಳೆದು ತಾನೇತಾನಾಗಿ ಎಲ್ಲಾಕಡೆಯಲ್ಲಿಯೂ ವ್ಯಾಪಿಸಿಕೊಳ್ಳುವಂತೆ ಮಾಡಿರುವನು. ಹೇಗೆಂದರೆ:—

ದುಷ್ಯಂತನು ಕಣ್ವಾಶ್ರಮವನ್ನು ಪ್ರವೇಶಿಸುವ ಕಾಲದಲ್ಲಿ ಅನುಸೂಯಾ ಪ್ರಿಯಂವದೆಗಳೊಡನೆ ಶಕುಂತಲೆಯು ವೃಕ್ಷಕ್ಕೆ ನೀರೆರೆಯುವ ಹಾಗೆ ಬಂದು ಸಂಗತಿ

ಯನ್ನು ತೀದನು. ಅವರವರ ಸ್ವೈರಾಲಾಪಗಳನ್ನೂ ಆಟವಾಡುವುದನ್ನೂ ಅವರಿಗೆ ತಿಳಿಯದಂತೆ ನೋಡಲು ಅವಕಾಶವು ದುಷ್ಯಂತನಿಗೆ ದೊರಕಿತು. ಆಗ ಶೃಂಗಾರ ರಸದ ಬೀಜವು ಪ್ರೇಕ್ಷಕರ ಹೃದಯದಲ್ಲಿ ನೆಡಲ್ಪಟ್ಟಿತು. ಬಳಿಕ ದುಷ್ಯಂತನು ಅವರ ಸಮೀಪಕ್ಕೆ ಹೋಗುವುದಕ್ಕೆ ಸಂಗತಿಯನ್ನು ಕಲ್ಪಿಸಿರುವುದೊಂದೇ ಕಾಳಿದಾ ಸನ ಅತಿಶಯವನ್ನು ತೋರಿಸುವುದಕ್ಕೆ ಸಾಕಾಗಿರುವುದು.

ದುಷ್ಯಂತನಿಗೂ ಶಕುಂತಲೆಗೂ ಅನುರಾಗವು ಪರಸ್ಪರಾವಲೋಕನ ಸಂಭಾ ಷಣ ಮೊದಲಾದ ವ್ಯಾಪಾರಗಳಿಂದ ಅಭಿವೃದ್ಧವಾಗಲಾಗಿ, ಆ ಶೃಂಗಾರರಸದ ಬೀ ಜಕ್ಕೆ ಉದ್ಭೇದಾವಕಾಶವು ಕೊಡಲ್ಪಟ್ಟಿತು. ಆಕಡೆ ಕವಿಯು ಮಹಾಭಾರತದ ಕಥೆಯಲ್ಲಿರುವ ಸಂಗತಿಯನ್ನು ಹೆಚ್ಚಾಗಿ ವಿಸ್ತರಿಸಿ ಪ್ರೇಕ್ಷಕರಲ್ಲಿ ಆನಂದಪಾರವಶ್ಯ ವನ್ನು ಹುಟ್ಟಿಸುವನು. ಅದರ ಪ್ರಕಾರವು ರಸಿಕರ ಹೃದಯಕ್ಕೇನೆ ವೇದ್ಯವಾಗು ವುದು.

ಹೀಗೆ ಶೃಂಗಾರರಸಬೀಜಕ್ಕೆ ಉದ್ಭೇದಕಾಲವು ಒದಗಿದರೂ ಮೊಳಕೆಯು ಈಚೆಗೆ ಹೊರಟು ಎಲೆಗಳು ಕಾಣಿಸಿಕೊಂಡು ಸಸ್ಯವಾಗುವುದಕ್ಕೆ ಸ್ವಲ್ಪಕಾಲ ಬೇಕು. ಆ ಕಾಲದಲ್ಲಿ ಅದರ ಉಪಚಯ ಪ್ರಕಾರವು ಸಾವಕಾಶವಾಗಿ ಆಗುವುದು. ಮತ್ತು ಎಲೆಗಳು ವಿಸ್ತರಿಸಿ ಶಾಖೆಗಳಾಗಿ ಕಾಣಿಸಿಕೊಂಡು ಪುಷ್ಪೋನ್ಮುಖವಾಗಿ ಆ ಗುವುದಕ್ಕೆ ಇನ್ನೂ ಕಾಲಬೇಕು. ಮತ್ತು ಲೋಕದಲ್ಲಿ ಇಬ್ಬರಿಗೆ ಅನುರಾಗವು ಉಂ ಟಾದಮೇಲೆ ಆ ಅನುರಾಗವು ಅಭಿವೃದ್ಧವಾಗುವುದಕ್ಕೆ ಪರಸ್ಪರ ವಿಶ್ಲೇಷವೇ ಕಾರ ಣವೆಂಬುದನ್ನು ಅನೇಕಕಡೆ ನಾವು ಪರಿಚಯ ಮಾಡಿ ಇರುತ್ತೇವೆ. ಈ ಕಾರಣ ಕ್ಕಾಗಿ ಕವಿಯು ಸೇನಾಜನಗಳ ಆರ್ಭಟೆಯಿಂದಲೂ ಬೇಟೆಗಾರರ ತೊಂದರೆಯಿಂ ದಲೂ ಅರಣ್ಯಗಜವು ಆಶ್ರಮವನ್ನು ಪ್ರವೇಶಿಸಿತೆಂಬ ಸಂವಿಧಾನವನ್ನು ಕಲ್ಪಿಸಿ ಶಕುಂತಲಾದುಷ್ಯಂತರನ್ನು ಬೇರೆಬೇರೆ ಮಾಡಿರುವನು.

ಬಳಿಕ ದೈವಯೋಗದಿಂದ ಉದ್ಯಾನದಲ್ಲಿ ಯಾದೃಚ್ಛಿಕವಾಗಿ ಇವರಿಬ್ಬರಿಗೂ ಗೃಷ್ಟಿ ಬಂಧವು ಹುಟ್ಟಿ ಅದೇ ಕಾರಣವಾಗಿ ವಿರಹತಾಪವುಂಟಾಯಿತೆಂದು ಹೇಳಿರು ವನು. ದುಷ್ಯಂತನು ಅವಳನ್ನು ಬಿಟ್ಟು ಧರಿಸುವುದಕ್ಕೆ ಆಗದೆ ತನ್ನ ಮಿತ್ರನೊಡನೆ ಅವಳ ಶೀಲ ಸೌಂದರ್ಯಾದಿಗಳನ್ನು ವರ್ಣಿಸಿ ಹೇಳುತ್ತ ತನ್ಮೂಲಕವಾಗಿ ಸ್ವಲ್ಪ ವಿರ ಹತಾಪವನ್ನು ಕಡಮೆ ಮಾಡಿಕೊಳ್ಳಲು ಯತ್ನಿಸುವನು. ಹಾಗೆಯೇ ಶಕುಂತಲೆಯೂ ಕೂಡ ಸಖಿಯರೊಡನೆ ಕೂಡಿ ವಿಹರಿಸುತಿದ್ದರೂ ಅಂತಸ್ತಾಪ ಹೆಚ್ಚಿ ಅದರಿಂದ

ಕೊರಗುತ್ತಿರುವಳು. ಶಕುಂತಲೆಯ ಶರೀರವೆಲ್ಲಾ ಕೃಶವಾಗಿ ಹೋಗುತ್ತಿರುವುದನ್ನು ಕಂಡು ಅವಳ ಸಖಿಗಳು ಇದು ಮನ್ಮಥತಾಪವೇ ಎಂದು ನಿಶ್ಚೈಸಿ ಮಾಲಿನೀತೀರದಲ್ಲಿ ಲತಾಗೃಹದಲ್ಲಿ ಶೈತ್ಯೋಪಚಾರಗಳನ್ನು ಮಾಡತೊಡಗುವರು. ಈ ಮಧ್ಯೇ ದುಷ್ಯಂತನು ತನ್ನ ಪರಿವಾರವನ್ನೆಲ್ಲಾ ಕಳುಹಿಸಿಬಿಟ್ಟು ಹೇಗಾದರೂ ಶಕುಂತಲೆಯನ್ನು ತಿರಿಗಿ ನೋಡಿಯೇತೀರಬೇಕೆಂಬ ಉತ್ಕಂಠೆಯಿಂದ ಹೊರಟು ಇಂಥ ಮಧ್ಯಾಹ್ನವೇಳೆಯಲ್ಲಿ ತನ್ನಂತೆ ಶಕುಂತಲೆಯೂ ಕೂಡ "ಕಾಮೀ ಸ್ವತಾಂ ಪಶ್ಯತಿ" ಎಂಬ ಮರ್ಯಾದೆಯಲ್ಲಿ ವಿರಹತಾಪಕ್ಕೆ ಈಡಾಗಿ ಮಾಲಿನೀತೀರದಲ್ಲೇ ಇರುವಳೆಂಬ ಊಹೆಯಿಂದ ನದೀ ತೀರದಲ್ಲೇ ಹುಡುಕುತ್ತ ಬರುವನು.

ಯಾದೃಚ್ಛಿಕವಾಗಿ ಶಕುಂತಲೆಯು ಇರುವ ಲತಾಗೃಹದ ಸಮೀಪಕ್ಕೆ ಇವರಿಗೆ ದೃಷ್ಟಿಬಂಧವನ್ನು ಹುಟ್ಟಿಸಿದ ದೈವವೇ ಇವನನ್ನು ತಂದು ಬಿಡುವುದು. ಆ ಕಾಲದಲ್ಲಿ ಪರಸ್ಪರ ಸಖಿಗಳಲ್ಲಿ ಉಂಟಾಗುವ ಸಂವಾದವೂ ಆ ಸಂವಾದವನ್ನು ಕೇಳಿ ದುಷ್ಯಂತನ ಮನಸ್ಸಿನಲ್ಲಿ ಪ್ರೀತಿರಸದ ಉಕ್ಕುವಿಕೆಯೂ ಆ ಶೃಂಗಾರರಸವೆಂಬ ಸಸ್ಯದಲ್ಲಿ ಪಲ್ಲವ ಪತ್ರಗಳ ವಿಕಾಸರೂಪವಾಗಿರುವುದು. ಆ ಕಾಲಕ್ಕೆ ಸರಿಯಾಗಿ ಶಕುಂತಲೆಯು ತನ್ನ ಇಷ್ಟನನ್ನು ಸೇರುವ ಉಪಾಯವನ್ನು ಸಖಿಗಳಿಂದ ತಿಳಿದು ಶುಕೋದರಸುಕುಮಾರವಾದ ನಳಿನೀಪತ್ರದಲ್ಲಿ ನಖಗಳಿಂದ ತನ್ನ ಅನುರಾಗವನ್ನೂ ದುಷ್ಯಂತನ ಉಪೇಕ್ಷೆಯನ್ನೂ ಕ್ರೌರ್ಯವನ್ನೂ ವ್ಯಕ್ತಪಡಿಸುವ ಒಂದು ಪದ್ಯವನ್ನು ಗುರುತುಹಚ್ಚುವಳು. ಈ ಸಂದರ್ಭವು ಆ ಶೃಂಗಾರರಸವೆಂಬ ಸಸ್ಯದಲ್ಲಿ ಹುಟ್ಟಿದ ಕೋರಕವಾಗಿರುವುದು. ಈ ನೆಪದಿಂದ ಶಕುಂತಲಾ ದುಷ್ಯಂತರಿಗೆ ಸಮಾಗಮವನ್ನು ಕಲ್ಪಿಸಿರುವುದು ಕವಿಯ ಮಹತ್ತ್ವವನ್ನು ತೋರಿಸುವುದು.

ಬಳಿಕ ಶಕುಂತಲೆಯ ಉಸಿರ್ಗೆಳದಿಯರು ಜಿಂಕೆಯ ಮರಿಯನ್ನು ಅದರ ತಾಯಿಯೊಡನೆ ಸೇರಿಸುವ ವ್ಯಾಜದಿಂದ ಅನ್ಯಪರರಾಗಿ ಹೋಗುವರು. ಇದೇ ಆ ಸಸ್ಯದಲ್ಲಿ ಮೊಗ್ಗಿನ ವಿಕಾಸ ಕಾಲವು. ಬಳಿಕ ಸಖಿಗಳು ಅನ್ಯಪರರಾದುದೇ ಕಾರಣವಾಗಿ ಅವರಿಗೆ ಸಂಶ್ಲೇಷವು ಪ್ರವೃತ್ತವಾಗುವುದು.

ಬಳಿಕ ಈ ರೀತಿಯಲ್ಲಿ ಪರಸ್ಪರ ದೃಷ್ಟಿಬಂಧಪೂರ್ವಕವಾಗಿ ಅನುರಾಗವನ್ನು ಹುಟ್ಟಿಸಿ ಸಂಶ್ಲೇಷ ಪರ್ಯಂತವಾಗಿ ಮಾಡಿದ ಹೊರತು ತೀರದೆಂದು ಸಂಕಲ್ಪಿಸಿದ ದೈವವೇ ರಸವು ಉನ್ಮಸ್ತವಾಗಿರುವಾಗ ಇವರನ್ನು ಹೀಗೆ ಬಿಟ್ಟಲ್ಲಿ ಇವರಿಗೆ ಕೇಡು ಸಂಭವಿಸದೆ ಇರದೆಂದು ಯೋಚಿಸಿ, ಇವರನ್ನು ಬೇರೆ ಮಾಡುವುದೆಂದು ಳಿತಿಯ

ಬೇಕು. ಇದಲ್ಲದೆ ಶೃಂಗಾರರಸದಲ್ಲಿ ಪುಷ್ಪೋದ್ಗಮವುಂಟಾಗಿ, ಆ ಪುಷ್ಪವು ಫಲರೂಪವಾಗಿ ಪರಿಣಮಿಸಿ ಪಕ್ವವಾಗಿ ಆಸ್ವಾದಿಸುವ ಸ್ಥಿತಿಗೆ ಬರುವತನಕ ವರ್ಣಿಸದೇ ಬಿಟ್ಟಲ್ಲಿ ಆ ಶೃಗಾರರಸದ ಸಾರಸ್ವ ತಿಳಿಯದೇ ಹೋಗುವುದರಿಂದ, ಕವಿಯು ಆ ಸಂಶ್ಲೇಷವನ್ನು ವಿಶ್ಲೇಷಾಂತವಾಗಿ ಮಾಡಿರಬಹುದೆಂಬುದಾಗಿ ತೋರುತ್ತದೆ. ಅಲ್ಲದೆ ಕಥೆಯನ್ನು ಇಲ್ಲಿಗೆ ನಿಲ್ಲಿಸಿದ್ದರೆ ರಸಪರಾಕಾಷ್ಠೆಯನ್ನು ತಿಳಿಯಲವಕಾಶವೇ ಇಲ್ಲದೆ ಹೋಗುವುದು. ಆದುದರಿಂದ ಕವಿಯು ಕಥೆಯನ್ನು ಇಲ್ಲಿ ನಿಲ್ಲಿಸದೆ ಮುಂದುವರಿಸಿರುವನು.

ಇಲ್ಲಿಂದ ಮುಂದಕ್ಕೆ ಮಹಾಭಾರತದ ಶಕುಂತಲೋಪಾಖ್ಯಾನಕ್ಕೂ ಈ ಕಥೆಗೂ ಸಂಬಂಧವೇ ಇಲ್ಲ. ಇದು ಬೇರೆಯಾಗಿಯೇ ಇರುವುದು. ಈಕಡೆ ಕವಿಯು ತನ್ನ ಸಾಮರ್ಥ್ಯವನ್ನು ನಾನಾಪ್ರಕಾರದಲ್ಲಿ ತೋರಿಸಿರುವನು.

ಶಕುಂತಲೆಯು ಗರ್ಭವತಿಯಾಗಿ ಪತಿಯ ಸಾನ್ನಿಧ್ಯವನ್ನು ಸೇರಿ ತಿರಸ್ಕೃತಳಾಗಿ ತಾಯಿಯಾದ ಮೇನಕೆಯನ್ನು ಸೇರುವವರೆಗೂ ಕಲ್ಪಿಸಿದ ಸಂದರ್ಭದಲ್ಲಿ ತೋರಿಸಿರುವ ಸಾಮರ್ಥ್ಯವನ್ನೂ ಲೋಕಪರಿಚಯವನ್ನೂ ತದ್ವಾರಾ ಪ್ರೇಕ್ಷಕರ ಹೃದಯವನ್ನು ಆನಂದರಸದಲ್ಲಿ ತೋಯಿಸುವ ಪ್ರಕಾರವನ್ನೂ ವರ್ಣಿಸಿ ತಿಳಿಯಪಡಿಸಬೇಕಾದರೆ ಕಾಳಿದಾಸನೇ ಬರಬೇಕು. ಆಯಾ ಸುಖವನ್ನು ಬೇರೆಬೇರೆ ರೀತಿಯಲ್ಲಿ ತಿಳಿಸುವುದು ಕಾಳಿದಾಸನಿಗೂ ಅಸಾಧ್ಯವೆಂದೇ ತೋರಿ ಬರುತ್ತದೆ. ಆ ಭಾಗದ ಸೊಹವು ಎಷ್ಟೆಷ್ಟುಸಲ ಪರಿಚಯಿಸಿದರೂ ಆರಿ ಹೋಗುವಂಥದಲ್ಲ; ಹೊಸಹೊಸದಾದ ಅಮೃತವಾಗಿಯೇ ಕಂಡು ಬರುವುದು. ಈ ಭಾಗದಲ್ಲಿ ಕರುಣಾದಿ ರಸಗಳು ಶೃಂಗಾರರಸಕ್ಕೆ ಉತ್ತೇಜಕವಾಗಿ ನಿರೂಪಿಸಲ್ಪಟ್ಟು ಆ ಶೃಂಗಾರರಸವನ್ನು ಚೆನ್ನಾಗಿ ಎತ್ತಿ ತೋರಿಸುವುವು.

ಅದಲ್ಲದೆ ದುರ್ವಾಸನ ಶಾಪವನ್ನು ಕಲ್ಪಿಸಿರುವುದರಲ್ಲಿ ಕವಿಗೆ ಅನೇಕ ಉದ್ದೇಶವಿರುವಂತೆ ತೋರುತ್ತದೆ. ಶಕುಂತಲೆಯ ವಿರಹತಾಪದ ಆಧಿಕ್ಯವನ್ನೂ ಅದರಿಂದ ಅವಳ ಅನುರಾಗದ ಪರಾಕಾಷ್ಠೆಯನ್ನೂ ತೋರಿಸಿ ಇತರರಸಗಳನ್ನು ಅಂಗರಸಗಳಾಗಿ ವರ್ಣಿಸಬೇಕಾಗಿರುವುದರಿಂದಲೂ, ಶಕುಂತಲೆಯನ್ನು ನೋಡಿದಾಗ ದುಷ್ಯಂತನಿಗೆ ವಿಸ್ಮೃತಿಯುಂಟಾದಂತೆ ಹೇಳಬೇಕಾಗಿರುವದರಿಂದಲೂ, ಹಾಗೆ ವಿಸ್ಮೃತಿಯುಂಟಾಗದಿದ್ದರೆ ಕರುಣರಸಕ್ಕೇನೆ ಪ್ರಾಧಾನ್ಯವುಂಟಾಗುವುದರಿಂದಲೂ, ಮಹಾಭಾರತದಲ್ಲಿ ಹೇಳಿರುವಂತೆ ದುಷ್ಯಂತನು ತಿಳಿದೂ ತಿಳಿಯದಂತೆ ನಟಿಸುವುದರಲ್ಲಿ ರಸಪುಷ್ಟಿ

ಗೆ ಕುಂದಕ ಬರುವುದರಿಂದಲೂ ಕವಿಯು ದುರ್ವಾಸಶಾಪವನ್ನು ಕಲ್ಪಿಸಿ ಇದ್ದಾನೆಂದು ತೋರುತ್ತದೆ.

ಬಳಿಕ ಆ ದುರ್ವಾಸಶಾಪದ ವೈಭವವನ್ನು ತಿಳಿಸಲು ದುಷ್ಯಂತನು ಸಂಗೀತವನ್ನು ಕೇಳುವುದರಲ್ಲಿ ಅನುರಕ್ತನಾಗಿ ಆ ಶ್ರವಣದಿಂದ ವಿರಹವನ್ನು ಅನುಭವಿಸುತ್ತಿದ್ದರೂ ಆ ವಿರಹದ ಕಾರಣವನ್ನು ತಿಳಿಯದೆ ಇದ್ದನೆಂಬ ಒಂದು ಸಂಗಿತಿಯನ್ನು ಕಲ್ಪಿಸಿ ತನ್ನ ಮಹಾಕವಿತ್ವವನ್ನು ಪ್ರದರ್ಶನ ಮಾಡಿಕೊಂಡಿರುವನು. ಅದೆಂತೆಂದರೆ :—

ನಾಯಿಕಾನಾಯಕರಲ್ಲಿ ಸದೃಶ ಸ್ಥಿತಿಯು ಇರದಿದ್ದರೆ ಎಂದರೆ ಒಂದು ಕಡೆ ಉತ್ಕಂಠೆಯೂ ಮತ್ತೊಂದುಕಡೆ ಉಪೇಕ್ಷೆಯೂ ಇದ್ದಲ್ಲಿ ರಸಸ್ಫೂರ್ತಿ ಯಾಗುವದಿಲ್ಲ. ದುಷ್ಯಂತನಲ್ಲಿ ಶಾಪದಿಂದಲುಪೇಕ್ಷೆ ಉಂಟಾಯಿತೆಂದು ಹೇಳದೆ ಬೇರೆ ರೀತಿಯಲ್ಲಿ ಹೇಳಿದ್ದರೆ ಪ್ರೇಕ್ಷಕರಲ್ಲಿ ತಾದಾತ್ಮ್ಯದಿಂದ ಆವಿರ್ಭೂತವಾಗುತ್ತಿರುವ ರಸವು ನಷ್ಟವಾಗಿ ಹೋಗುತ್ತಿದ್ದಿತು. ಶಾಪನಿಮಿತ್ತವಾಗಿ ವಿಸ್ಮೃತಿ ಉಂಟಾಯಿತೆಂದು ಹೇಳಿದರೆ ಪ್ರೇಕ್ಷಕರಲ್ಲಿ ಉಂಟಾದ ರಸವು ಹೆಚ್ಚುವುದು. ಶಕುಂತಲಾದುಷ್ಯಂತರ ಪರಸ್ಪರ ಅವಲೋಕನ, ಸಂಭಾಷಣ, ತಿರಸ್ಕಾರ, ಪೂರ್ವವಿಹಾರರಹಸ್ಯಖ್ಯಾಪನ, ಮೊದಲಾದುವುಗಳ ವರ್ಣನೆಯಲ್ಲಿ ಪಾಠಕರಿಗೆ ಒಂದುಕಡೆ ಪಶ್ಚಾತ್ತಾಪವು ಮತ್ತೊಂದುಕಡೆ ಶೋಕವೂ ಉಂಟಾಗುವುವು. ಹಾಗೆ ವಿಸ್ಮೃತಿಯು ಶಾಪನಿಮಿತ್ತಕವಾದುದೆಂದು ಹೇಳದಿದ್ದರೆ ದುಷ್ಯಂತನ ವಿಷಯದಲ್ಲಿ ಆಗ್ರಹವೂ ಅದರಿಂದ ರಸಾಭಾಸವೂ ಉಂಟಾಗುತ್ತಿದ್ದಿತು.

ಬಳಿಕ ನಾಟಕಕಥೆಯಲ್ಲಿ ಎರಡು ಸಂದರ್ಭವನ್ನು ಕಲ್ಪಿಸಿರುವನು. ಸ್ಮೃತಿಯುಂಟಾಗುವುದಕ್ಕೋಸ್ಕರ ಅಂಗುಳೀಯಕದಾನವನ್ನು ಇವರ ಪ್ರಥಮದರ್ಶನಾವಸರದಲ್ಲಿಯೇ ಅನುರಾಗವಿಲಾಸವನ್ನು ತೋರಿಸುವ ನಿಮಿತ್ತವಾಗಿ ಯೋಜಿಸಿ, ಶಕ್ರತೀರ್ಥದಲ್ಲಿ ಅದು ನಳಿವಿ ಹೋದಹಾಗೆಯೂ ಅದರ ದರ್ಶನದಿಂದ ಶಕುಂತಲಾಸ್ಮೃತಿಯುಂಟಾದಹಾಗೆಯೂ ಕಲ್ಪಿಸಿರುವುದು ಕವಿಯ ಅನ್ಯಾದೃಶಶಕ್ತಿಯನ್ನು ತೋರಿಸುವುದು. ಈ ಸಂದರ್ಭವು ಲೋಕದ ಸ್ಥಿತಿಗೆ ಸರಿಯಾಗಿರುವುದರಿಂದ ಪ್ರೇಕ್ಷಕರಲ್ಲಿ ಕಲ್ಪಿತವಾದ ಸಂಗತಿಯೆಂದು ತೋರದೆ ಇರುವುದು ಆಶ್ಚರ್ಯವಲ್ಲ.

ಮೇನಕೆಯು ಶಕುಂತಲೆಯನ್ನು ಕರೆದುಕೊಂಡು ಹೋದ ಸಂವಿಧಾನವೂ ಅತಿಶಯವಾದ ಸಂವಿಧಾನವೇ ಆಗಿರುವುದು. ವಿಶ್ವಾಮಿತ್ರರಿಂದ ಜನಿಸಿ ಕಣ್ವ

ಋಷಿಗಳ ಪೋಷಣೆಯಲ್ಲಿ ಬಳೆದು ರಾಜರ್ಷಿಯಾದ ದುಷ್ಯಂತನ ಪಾಣಿಗ್ರಹಣವನ್ನು ಮಾಡಿ ಭರತನನ್ನು ಗರ್ಭದಲ್ಲಿ ಧರಿಸಿದ ಶಕುಂತಲೆಯು ಮಾರೀಚಾಶ್ರಮವನ್ನು ಸೇರಿ ಅಲ್ಲಿ ಹೆತ್ತಂತೆ ಹೇಳದಿದ್ದರೆ ಅವಳ ಯೋಗ್ಯತೆಗೂ ಅಭಿಜಾತ್ಯಕ್ಕೂ ಭರತನ ಅತಿಶಯಕ್ಕೂ ಕುಂದಕವು ಬರುತ್ತಿದ್ದಿತು. ಕಥೆಯಲ್ಲಿ ರಸಪುಷ್ಟಿಯಾಗುವುದಕ್ಕೋಸ್ಕರ ಶಾಪೋಪಹತನಾದ ಪತಿಯು ಶಕುಂತಲೆಯನ್ನು ತಿರಸ್ಕರಿಸಿದಂತೆಯೂ, ಆಮೇಲೆಯೂ ಗೌತಮಿ ಶಾರ್ಙ್ಗರವ ಶಾರದ್ವತರು ಶಕುಂತಲೆಯನ್ನು ಗದರಿಸಿಕೊಂಡು ಅಲ್ಲೇ ಬಿಟ್ಟುಹೋದಂತೆಯೂ, ಗತ್ಯಂತರವಿಲ್ಲದೆ ಶಕುಂತಲೆಗೆ ರಾಜಪುರೋಹಿತನ ಮನೆಯಲ್ಲಿ ಹೆರಬೇಕಾಗಿ ಬಂದಂತೆಯೂ ಕವಿಯು ಸಂದರ್ಭವನ್ನು ತಂದಿರುವನು. ಅಂಥ ಸಂದರ್ಭವನ್ನೂ ಕೂಡ ಕಥೋತ್ಕರ್ಷಕ್ಕೆ ಸಾಧನವಾಗುವಂತೆ ತಿರಿಗಿಸುವುದು ಕಾಳಿದಾಸನಲ್ಲದಿದ್ದರೆ ಸಾಧ್ಯವಾಗುತ್ತಿರಲಿಲ್ಲ.

ಅನಂತರ ಅಂಗುಳೀಯಕದರ್ಶನವೇ ಕಾರಣವಾಗಿ ದುಷ್ಯಂತನಿಗೆ ಶಕುಂತಲಾಸ್ಮೃತಿಯುಂಟಾಗಿ, ತನ್ಮೂಲಕ ವಿಶ್ಲೇಷದುಃಖವು ಪ್ರವೃತ್ತವಾಗಿ, ತಾನು ಮಾಡಿದ ತಿರಸ್ಕಾರದಲ್ಲಿ ತಾನೇ ಸಂಕಟಪಡುತ್ತ ಹಿಂದೆ ಆಕಾಲದಲ್ಲಿ ತಾನು ಆಡಿದ ನಿಷ್ಠುರೋಕ್ತಿಯನ್ನೂ ಅದಕ್ಕೆ ಶಕುಂತಲೆಯು ತನ್ನನ್ನು ಕುರಿತು ಹೇಳಿದ ಮಾತನ್ನೂ ನೆನೆನೆನೆದುಕೊಂಡು ವಿಶೇಷವಾಗಿ ದುಃಖಪಡುತ್ತಿದ್ದನು ಎಂಬ ಸಂದರ್ಭವನ್ನು ತಂದಿರುವನು. ಇದರ ತಾತ್ಪರ್ಯವನ್ನು ಹಿಂದೆ ಸಂಗ್ರಹವಾಗಿ ನಿರೂಪಿಸಿದೆನು.

ಬಳಿಕ ಪ್ರವೃತ್ತವಾದ ಸಂದರ್ಭವು ಇನ್ನೂ ಆಶ್ಚರ್ಯಕರವಾದುದು. ಮಾತಲಿಯು ವಿದೂಷಕನ ಕತ್ತನ್ನು ಕಿವಿಚಿ, ತನ್ಮೂಲಕ ದುಷ್ಯಂತನನ್ನು ಕಾಣಿಸಿಕೊಂಡು, ಆತನನ್ನು ಇಂದ್ರನ ರಥದಲ್ಲಿ ಕುಳ್ಳಿರಿಸಿಕೊಂಡು ದೇವಶತ್ರುವಾದ ಕಾಲನೇಮಿ ಸಂಹಾರಾರ್ಥವಾಗಿ ಸ್ವರ್ಗಕ್ಕೆ ಕರೆದುಕೊಂಡುಹೋದಹಾಗೆ ಕವಿಯು ಹೇಳಿರುವನು. ಇದಕ್ಕೆ ಕಾರಣವೇನಂದರೆ:— ದುರ್ವಾಸಶಾಪನಿಮಿತ್ತಕವಾಗಿ ಅರಿಹೋಗಿದ್ದ ಶೃಂಗಾರರಸವು ಅಂಗುಳೀಯಕ ದರ್ಶನದ್ವಾರಾ ಪುನಃ ಕಾಣಿಸಿಕೊಂಡು, ಸ್ವಕೃತಾಪರಾಧಸ್ಮೃತಿಪೂರ್ವಕ ಶೋಕರಸವಾಗಿ ಪರಿಣಮಿಸಿತು. ಇಲ್ಲಿ ಅದಕ್ಕಾಗಿ ವೀರರಸವನ್ನು ತರಬೇಕು. ವೀರರಸವನ್ನು ತರಲು ಕರುಣ ರಸವನ್ನು ತಪ್ಪಿಸಬೇಕು. ಅದಕ್ಕಾಗಿ ವಿದೂಷಕನ ಹಿಂಸೆಯನ್ನೂ ಆ ಮೂಲಕ ದುಷ್ಯಂತನಿಗೆ ಕೋಪವನ್ನು ವರ್ಣಿಸಿದನೆಂದು ತೋರುತ್ತದೆ. ಕವಿಯೂ ಕೂಡ, "ಕಿಂ ನಿಮಿತ್ತಾದಪಿ ಮನಸ್ಸಂತಾಪಾದಾಯುಷ್ಮಾನ್ ವಿಕ್ಲಬೋದೃಷ್ಟಃ। ಪಶ್ಚಾತ್ಕೋಪಯಿತುಂ ತಥಾ

ಕೃತವಾನಸ್ಮಿ'' ಎಂದು ಮಾತಲಿಯಿಂದ ಹೇಳಿಸುತ್ತಾನೆ. ಇದಲ್ಲದೆ ಮಾನುಷ ಸಂಚಾರಾನರ್ಹವಾದ ಮಾರೀಚಾಶ್ರಮಕ್ಕೆ ಹೋಗದಿದ್ದರೆ ದುಷ್ಯಂತನಿಗೆ ಶಕುಂತಲಾಸಮಾಗಮವುಂಟಾಗುವುದು ಹೇಗೆ? ಮಾರೀಚಾಶ್ರಮಕ್ಕೆ ಹೋಗಲು ಪ್ರಬಲವಾದ ಕಾರಣವಾಗಬೇಕು. ಅದು ಮನುಷ್ಯರು ಹೋಗತಕ್ಕ ಆಶ್ರಮವಲ್ಲ. ದೇವತೆಗಳುಮಾತ್ರವೇ ಸಂಚರಿಸುವ ಆಶ್ರಮವು. ಆದುದರಿಂದ ದೇವತಾಕಾರ್ಯವನ್ನು ಪೂರ್ತಿಮಾಡಿ ಇಂದ್ರವಿಮಾನದಲ್ಲಿ ಕುಳಿತು ಸ್ವರ್ಗದಿಂದ ತನ್ನ ರಾಜಧಾನಿಗೆ ಹಿಂದಿರಿಗಿ ಬರುವಾಗ ಮಧ್ಯೇ ಸಂಧಿಸಿದ ಮಾರೀಚಾಶ್ರಮವನ್ನು ಪ್ರವೇಶಿಸಿದಂತೆ ವರ್ಣಿಸಿದನೆಂದು ತೋರುತ್ತದೆ.

ಮಾರೀಚಾಶ್ರಮದಲ್ಲಿ ಶಕುಂತಲಾಸಮಾಗಮಕ್ಕೆ ಭರತನನ್ನು ಮುಂದೆ ತಂದಿರುವುದು ಕವಿಯ ಶಕ್ತಿಯನ್ನು ವಿಶೇಷವಾಗಿ ತೋರಿಸುತ್ತದೆ. ಅದರಲ್ಲಿಯೂ ದುಷ್ಯನ್ತನಿರುವ ಸಲಕ್ಕೆ ಶಕುಂತಲೆಯೇ ಬಂದಂತೆಮಾಡಿದ ಚಮತ್ಕಾರವು ಕವಿಯು ಕಾಳಿದಾಸನೇ ಎಂಬುದನ್ನು ಸ್ಥಿರಪಡಿಸುವುದು. ಸಾಮಾನ್ಯರಾದ ಕವಿಗಳಿಗೆ ಇಂಥ ಸಂದರ್ಭವನ್ನು ತಿಳಿಸಿ ದೀರ್ಘಕಾಲದಿಂದ ವಿರಹಿತರಾಗಿ ಆ ಸ್ಥಿತಿಯಲ್ಲಿದ್ದ ನಾಯಿಕಾನಾಯಕರನ್ನು ಕೊಟ್ಟು ಇವರ ಸಮಾಗಮವನ್ನು ನಿರೂಪಿಸಿರಿ ಎಂಬದಾಗಿ ಕೇಳಿದ್ದರೆ, ಆಗ ಆ ಸಮಾಗಮದ ನಿರ್ವಾಹಕಷ್ಟವೂ, ಅಂಥ ಕಷ್ಟಸಂಗತಿಯನ್ನು ಎಷ್ಟು ಸುಲಭವಾಗಿ ಪ್ರಯಾಸವೆಳ್ಳಷ್ಟೂ ತೋರದಂತೆ ಕಾಳಿದಾಸನು ಮಾಡಿದ ನಿರ್ವಾಣದಲ್ಲಿ ಆಶ್ಚರ್ಯವೂ ತಿಳಿದು ಬರುವುದು. ಈ ಸಂದರ್ಭದ ಮಹಿಮೆಯಲ್ಲಿ ಮತ್ತೊಂದನ್ನು ಆಲೋಚಿಸಬೇಕಾಗಿದೆ. ದುಷ್ಯಂತನು ಶಕುಂತಳೆಯನ್ನು ಕಠೋರವಾಕ್ಯವನ್ನಾಡಿ ದೂಷಿಸಿ ತಿರಸ್ಕರಿಸಿರುವನು. ಶಕುಂತಲೆಯು ವಿನಯದ ಎಲ್ಲೆಯನ್ನು ಮೀರದೆ ತನ್ನ ವಿವಾಹವಿಷಯದಲ್ಲಿ ವಿಶ್ವಾಸ ಹುಟ್ಟಿಸಲು ನಾನಾಪ್ರಕಾರದಲ್ಲಿ ಯತ್ನಿಸಿ ಅತಿಕಠಿನವಾದ ಕಲ್ಲಿಂತಿರುವ ಅತನ ಹೃದಯವನ್ನು ಕಂಡು ನಿರಾಶಳಾಗಿ ಹೋಗಿರುವಳು. ಈ ವಿಧವಾದ ಇವರ ಮನೋವೃತ್ತಿಯನ್ನು ಆಲೋಚಿಸುವಲ್ಲಿ ಆ ಸಮಾಗಮದಲ್ಲಿ ಇನ್ನೂ ಶ್ರಮಾಧಿಕ್ಯವು ತೋರಿಬರುವುದು. ಸಿಂಹದ ಮರಿಯೊಡನೆ ಆಟವಾಡುತ್ತಿದ್ದ ಭರತನನ್ನು ಅನ್ಯತ್ರದತ್ತಮನನಾಗಿ ಮಾಡಲು ದಾದಿಯರು ಆಡಿದ''ಶಕುಂತಲಾವಣ್ಣಂಪೆಕ್ಕ'' ಎಂಬ ಎರಡು ಅರ್ಥಕೊಡುವ ಮಾತಿನಿಂದ ಕಲ್ಪಿಸಿದ ಅನ್ಯಕವಿಕಲನಾಸಾಧ್ಯವಾದ ಈ ಸಮಾಗಮಸಂದರ್ಭವು ಕವಿಗಳಲ್ಲಿ ಕಾಳಿದಾಸನೇ ಶ್ರೇಷ್ಠನೆಂದು ನಿಸ್ಸಂದೇಹವಾಗಿ ತೋರಿಸುತ್ತದೆ.

ಈ ಸಮಾಗಮ ಸಂದರ್ಭವು ಹಿಂದೆ ಹೇಳುತ್ತಾ ಬರುತ್ತಿದ್ದ ಶೃಂಗಾರರಸವೆಂಬ ಸಸ್ಯದಲ್ಲಿ ಹುಟ್ಟಿದ ಫಲಕ್ಕೆ ಆಸ್ವಾದನ ಸಮಯವು. ಈಗ ಪ್ರೇಕ್ಷಕರಲ್ಲಿ ಆ ರಸಕ್ಕೆ ಪರಿಪೂರ್ತಿಯುಂಟಾಯಿತೆಂದು ಹೇಳಬಹುದು. ಹಿಂದೆ ಎರಡನೆಯ ಅವೃತ್ತಿ ಪ್ರವೃತ್ತವಾದ ಸಂಶ್ಲೇಷವನ್ನು ವಿಶ್ಲೇಷಾಂತವಾಗಿ ಮಾಡಿದ ಹಾಗೆಯೇ ಈಗಲೂ ಪ್ರವೃತ್ತವಾದ ಸಂಶ್ಲೇಷವನ್ನು ವಿಶ್ಲೇಷಾಂತವಾಗಿ ಮಾಡಕೂಡದು. ಹಾಗೆ ಮಾಡಿದ್ದಲ್ಲಿ ಕಳಿತ ಹಣ್ಣು ಭುಜಿಸದೆ ಮಡಗಿದ್ದಲ್ಲಿ ಹೇಗೆ ಕೊಳೆತು ಇಲ್ಲವೆ ಒಣಗಿ ಹೋಗುತ್ತದೆಯೋ, ಹಾಗೆಯೇ ವ್ಯರ್ಥವಾಗಿ ಹೋಗುವುದು. ಆದುದರಿಂದ ಕವಿಯು ಕಥೆಯನ್ನು ಇಲ್ಲಿಗೆ ಪೂರ್ತಿಮಾಡಿದನೆಂದು ತೋರುತ್ತದೆ.

ಶಾಕುಂತಲನಾಟಕದಲ್ಲಿ ಈ ರೀತಿಯಾಗಿ ಕಥೆಯಲ್ಲಿ ವ್ಯತ್ಯಾಸಮಾಡಿರುವುದು ನಾಯಿಕಾನಾಯಕರ ಗುಣೋತ್ಕರ್ಷಕ್ಕಾಗಿಯೂ ಎಂಬದಾಗಿ ಹೇಳಬಹುದು. ಹೇಗೆಂದರೆ:—

ಮೃಗಯಾವಿನೋದದಲ್ಲಿ ಹೊರಟು, ಕಣ್ವಾಶ್ರಮದಲ್ಲಿ ಆಕಸ್ಮಿಕವಾಗಿ ಶಕುಂತಲೆಯನ್ನು ಕಂಡು, ಅವಳ ಸೌಂದರ್ಯಕ್ಕೆ ಬೆರಗಾಗಿ, ಕಾಮ ಪಾರವಶ್ಯತೆಯಿಂದ ಅವಳೊಡನೆ ಗಾಂಧರ್ವವಿವಾಹವಾಗಿ, ಶೀಘ್ರದಲ್ಲಿಯೇ ರಾಜಧಾನಿಗೆ ಕರೆಸಿಕೊಳ್ಳುವೆನೆಂದು ಮಾತುಕೊಟ್ಟು ರಾಜಧಾನಿಗೆ ಬಂದಮೇಲೆ ಪ್ರತಿಜ್ಞಾಹಾನಿಯನ್ನು ಪರ್ಯಾಲೋಚಿಸದೆ, ಅಂತಃಪುರ ಸ್ತ್ರೀಯರ ಭಯದಿಂದಲೋ ಇಲ್ಲವೆ ಕಣ್ಣೆದುರಿಗೆ ಇಲ್ಲದಿದ್ದುದರಿಂದಲೋ ಅವಳನ್ನು ಕರೆಯಿಸಿಕೊಳ್ಳದೆ, ಬಳಿಕ ಅವಳೇ ಬಂದು ಎದುರಲ್ಲಿ ನಿಂತು ಸದೃಷ್ಟಾಂತವಾಗಿ ಪತ್ನಿಯೆಂದು ನಿರೂಪಿಸಿದರೂ ತಿಳಿಯದವನಂತೆ ನಟಿಸಿದ ಮಹಾಭಾರತದ ದುಷ್ಯಂತನಿಗೂ ನಮ್ಮ ಈ ನಾಟಕದ ದುಷ್ಯಂತನಿಗೂ ತಾರತಮ್ಯವಿಲ್ಲವೆ, ಆಲೋಚಿಸಿ ನೋಡಿ? ಕಣ್ವಾಶ್ರಮದಲ್ಲಿ ಪುತ್ರರತ್ನವನ್ನು ಹಡೆದು, ಯುವರಾಜನಾಗುವುದಕ್ಕೆ ಯೋಗ್ಯನಾದಮೇಲೆ ಆತನ ಜತೆಯಲ್ಲಿ ಹೊರಟು, ಪತಿಯ ಸನ್ನಿಧಾನವನ್ನು ಸೇರಿ, ನಿರ್ಘೃಣನಾದ ಪತಿಯಿಂದ ತೇಜೋವಧೆಯನ್ನು ಹೊಂದಿ, ಕುಪಿತಳಾಗಿ ಶಾಪಕೊಡಲು ಸಿದ್ಧಳಾದ ಆ ಶಕುಂತಳೆಗೂ ಕಾಳಿದಾಸನ ಶಕುಂತಳೆಗೂ ಎಷ್ಟೋ ಅಂತರವುಂಟು.

ಪ್ರಸಿದ್ಧವಾದ ಉತ್ತರರಾಮಚರಿತ್ರೆಯಿಂದಲೂ ಸಿದ್ಧವಾದ ಕಥೆಯಲ್ಲಿ ಉಪಚಯಾಪಚಯಮಾಡುವುದರ ಮೂಲಕ ಕವಿಗಳು ತಮ್ಮ ಇಷ್ಟವನ್ನು ನೆರವೇರಿಸಿಕೊಳ್ಳುತ್ತಾರೆಂಬುದನ್ನು ಸ್ಥಿರಪಡಿಸಬಹುದು. ಭವಭೂತಿಯು ಪೂರ್ವರಾಮಚರಿತ ಕಥೆಯನ್ನು ಸಂಗ್ರಹವಾಗಿ ನಿರೂಪಿಸಲೋಸುಗ ಪ್ರಥಮದಲ್ಲಿ ಚಿತ್ರಪಠ

ದರ್ಶನವನ್ನೂ, ವಾತ್ಸಲ್ಯಪ್ರಭೇದಗಳನ್ನು ತೋರಿಸಲು ವಾಲ್ಮೀಕಿಯ ಆಶ್ರಮದಲ್ಲಿಯೇ ರಾಮಮಾತೃಗಳೂ, ಜನಕನೂ ಅವನ ಪತ್ನಿಯೂ ಇದ್ದಂತೆಯೂ, ವಿರಹದ ಪರಕಾಷ್ಠೆಯನ್ನು ನಿರೂಪಿಸಲು ಸೀತೆಯು ಲವಕುಶರನ್ನು ಪಾತಾಳದಲ್ಲಿ ಹೆತ್ತಂತೆಯೂ, ಗಂಗಾಯಮುನೆಯರ ವರಪ್ರಭಾವದಿಂದ ರಾಮನಿಗೆ ಅದೃಶ್ಯಳಾಗಿ ಅವಳು ಆತನ ಅಂಗಸ್ಪರ್ಶಾದಿಗಳನ್ನು ಮಾಡಿದಂತೆಯೂ, ಇವೇ ಮೊದಲಾದ ಅನೇಕ ಹೊಸ ಸಂದರ್ಭಗಳನ್ನು ಕವಿಯು ಸಂಗತಿಗೊಳಿಸಿದ್ದಾನೆ. ಈ ರೀತಿಯಲ್ಲಿ ಕಥೆಯನ್ನು ವಿಸ್ತರಿಸಿದುದನ್ನು ನೋಡಿಯಲ್ಲವೆ "ಉತ್ತರೇರಾಮಚರಿತೇಭವಭೂತಿರ್ವಿಶಿಷ್ಯತೇ" ಎಂಬದಾಗಿ ಕಾವ್ಯರಸಜ್ಞರೆಲ್ಲರೂ ಏಕವಾಕ್ಯತೆಯಿಂದ ಹೇಳುತ್ತಿರುವರು. ಶಾಕುಂತಳನಾಟಕದಂತೆ ಇದರ ಸ್ವಾರಸ್ಯವನ್ನು ಹೇಳುತ್ತ ಹೋದರೆ ಗ್ರಂಥವು ವಿಸ್ತಾರವಾಗುವುದೆಂಬ ಭೀತಿಯಿಂದ ಇಲ್ಲಿಗೆ ನಿಲ್ಲಿಸಿದೆನು.

ಸಿದ್ಧವಾದ ಕಥೆಗಳಿಂದ ಉದ್ದೇಶವು ಸಾಂಗವಾಗಿ ಸಾಗದಿದ್ದರೆ ಕವಿಗಳು ನೂತನ ಸಂದರ್ಭಗಳಿಂದ ಕಥೆಯನ್ನು ಪೋಷಿಸಿಕೊಳ್ಳುವರು. 'ಇದ್ದ ಕಥೆಯನ್ನು ನವೀನಸಂದರ್ಭದಿಂದ ಪೋಷಿಸಿಯೂ ತಮ್ಮ ಉದ್ದೇಶವು ಕೊನೆಗಾಣದೆಹೋದರೆ ನವೀನ ಕಥೆಗಳನ್ನು ನಿರ್ಮಿಸಿಕೊಳ್ಳುವರು. ಅಂಥ ಕಲ್ಪಿತ ಕಥೆಗಳಲ್ಲಿಯೂ ಸತ್ಯತ್ವ ಭ್ರಾಂತಿಯನ್ನು ಹುಟ್ಟಿಸಲು ನಾಯಕಾದಿ ಪುರುಷರುಗಳಿಗೆ ಚರಿತಪುರುಷರ ನಾಮಧೇಯಗಳನ್ನು ಕೊಡುವರು. ಅಲ್ಲದೆ ಚರಿತಪುರುಷರ ಜೀವದ್ದಶೆಯಲ್ಲಿ ಸಂಭವಿಸಿದ ಒಂದೆರಡು ನಿಜವಾದ ಸಂಗತಿಗಳನ್ನು ಸಂಗತಿಗೊಳಿಸುವರು. ಅಲ್ಲದೆ ಜನಗಳು ನಿಜವೆಂದು ನಂಬಿರುವ ಕಥಾಸಂದರ್ಭಗಳನ್ನು ಆಯ್ದು ತಕ್ಕ ಸ್ಥಲಗಳಲ್ಲಿ ಸೇರಿಸುವರು. ಈ ವಿಷಯಗಳನ್ನು ಕಲ್ಪಿತಕಥಾಗ್ರಂಥಗಳಾದ ಮೇಘದೂತ, ಪಂಚತಂತ್ರ, ಬೃಹತ್ಕಥಾಮಂಜರಿ, ಕಾದಂಬರಿ, ಮಾಲತೀಮಾಧವ ವಾಸವದತ್ತೆ ಮುಂತಾದ ಗ್ರಂಥಗಳಲ್ಲಿರುವ ಪ್ರಕರಣಗಳಿಂದ ದೃಷ್ಟಾಂತಿಸಬಹುದು.

ಏವಂವಿಧವಾದ ಕಲ್ಪಿತಕಥೆಗಳ ಉದ್ದೇಶವು ಮಹನೀಯವಾಗಿಯೂ ಅನೇಕವಾಗಿಯೂ ಇರುವುದರಿಂದ ಈ ಪೀಠಿಕಾಪ್ರಕರಣದಲ್ಲಿ ಅವುಗಳನ್ನು ವಿಸ್ತರಿಸಲು ಅವಕಾಶವಿಲ್ಲ. ಗ್ರಂಥಾವಲೋಕನದಿಂದ ಸ್ಪಷ್ಟವಾಗುವುವು. ಅವುಗಳಲ್ಲಿ ಮುಖ್ಯವಾದ ಒಂದೆರಡನ್ನು ಮಾತ್ರ ಇಲ್ಲಿ ಹೇಳುತ್ತೇನೆ. ಲೋಕದಲ್ಲಿ ಎಲ್ಲಿಯೂ ಎಂದಿಗೂ ಸಂಭವಿಸದ ಕೆಲವು ವಿಷಯಗಳ ಸ್ಥಿತಿಯನ್ನೂ, ಎಂದರೆ ಭೂತ ಭೇತಾಳ ಪಿಶಾಚಾದಿಗಳ ಕಥೆಗಳನ್ನೂ ಮೃಗಪಕ್ಷಿಗಳ ರಾಜ್ಯಭಾರ ಸಂಸಾರ ಕ್ರಮಗಳನ್ನೂ

ಗ್ರಂಥಗಳಲ್ಲಿ ವಿಶೇಷವಾಗಿ ಕವಿಗಳು ವರ್ಣಿಸುವರು. ನಿತ್ಯವೂ ಲೋಕಸ್ಥಿತಿಯನ್ನು ನೋಡಿನೋಡಿ, ಅವುಗಳ ವರ್ಣನೆಗಳನ್ನು ಕಾವ್ಯಮೂಲಕ ಪರಿಚಯ ಮಾಡಿಮಾಡಿ ಉಂಟಾದ ಬೇಸರಿಕೆಯನ್ನು ತಪ್ಪಿಸುವುದೇ ಇವಕ್ಕೆ ಪ್ರಯೋಜನವಾಗಿರಬಹುದೆಂದು ತೋರುತ್ತದೆ. ಇದಲ್ಲದೆ " ರತ್ನಹಾರೀತ್ಯಪಾರ್ಥಿವಃ " ಎಂಬ ನ್ಯಾಯಕ್ಕನುಸಾರವಾಗಿ ಅನೇಕ ರಮ್ಯವಸ್ತುಗಳನ್ನು ಭೋಗಿಸುವ ರಾಜರೂ ಶ್ರೀಮಂತರೂಕೂಡ ಜುಗುಪ್ಸಿತವಾಗಿಯೂ ಹೇಯವಾಗಿಯೂ ವಿಕಾರವಾಗಿಯೂ ಇರುವ ಅನೇಕ ಕ್ಷುದ್ರವಸ್ತುಗಳನ್ನು ನೋಡುವುದರಲ್ಲಿಯೂ ಕುರೂಪಿಗಳಾಗಿಯೂ ಅಂಗಹೀನರಾಗಿಯೂ ಇರುವ ಕೂನರನ್ನೂ ಆಳುಗಳನ್ನಾಗಿ ಇಟ್ಟುಕೊಳ್ಳುವುದರಲ್ಲಿಯೂ, ಕೊಕ್ಕರೆಯ ನಾಟ್ಯದಂತೆ ವಿಕಾರವಾಗಿ ಕುಣಿಯುವ ಕಾಡಕುರುಬರ ನಾಟ್ಯವನ್ನು ಕುಣಿಸುವುದರಲ್ಲಿಯೂ ಆಶೆಪಡುವಂತೆ ರಸಜ್ಞರು ಇಂಥ ವರ್ಣನೆಗಳಲ್ಲಿ ಆಶೆಪಡಬಹುದು. " ಪಿಂಡಖರ್ಜೂರದಲ್ಲಿ ಬೇಸರಪಟ್ಟು ಹುಳಿಹಣ್ಣನ್ನು " ತಿಂದು ಸುಖಿಸುವಂತೆ ಇಂಥ ವರ್ಣನೆಯನ್ನು ಅನುಭವಿಸಿ ಸುಖಿಸುವರೆಂದು ತೋರುತ್ತದೆ.

ಮತ್ತು ಕವಿಗಳು ತಮ್ಮ ಗ್ರಂಥಗಳಲ್ಲಿ * ಭೋಗಭೂಮಿಗಳನ್ನೂ, ಋಷ್ಯಾಶ್ರಮಗಳನ್ನೂ ವರ್ಣಿಸುವ ಪದ್ಧತಿಯುಂಟು. ಲೋಕದ ಸಹಜಸ್ಥಿತಿಯನ್ನು ವಿಚಾರಿಸಿದರೆ ದುಃಖಮಿಶ್ರವಿಲ್ಲದ ಸುಖವೇ ಇಲ್ಲ. ಮಾನಸಿಕ ಸುಖದಲ್ಲಿಯೂ ಅನೇಕ ವೇಳೆ ದುಃಖಮಿಶ್ರವಿಲ್ಲದೆ ಇಲ್ಲ. ಹೀಗಿರುವುದರಿಂದ ಕೇವಲ ಸುಖವನ್ನು ಹುಟ್ಟಿಸಲೂ ಮತ್ತು ಸುಖದ ಪರಾಕಾಷ್ಠೆಯನ್ನು ತೋರಿಸಲೂ, ಹೇಗೆ ಆದರೆ ನಮ್ಮ ಈ ಪ್ರಾಪಂಚಿಕ ಸುಖವು ಅದರ ಎಲ್ಲೆಯನ್ನು ಮುಟ್ಟಿತೆಂದು ಹೇಳಬಹುದೋ ಅಂಥ ಸ್ಥಿತಿಯನ್ನು ತೋರಿಸಲೂ-ಕವಿಗಳ ವರ್ಣನೆಯು ಹೀಗೆ ಹೊರಡುವುದೆಂದು ಹೇಳಲು ಬಹಳ ಅವಕಾಶವಿದೆ. ಇಂಥ ಕಥಾಕಲ್ಪನೆಯೂ ರಸಜ್ಞರ ಹೃದಯಕ್ಕೆ ಹಿತವಾಗಿಯೇ ಇರುವುದು.

ಪಾಠಕರು ಅಂಥ ಸುಖವನ್ನು ಆಸ್ವಾದಿಸಲೆಂಬದಾಗಿ ದುರ್ಗಸಿಂಹಕೃತವಾದ ಪಂಚತಂತ್ರದಲ್ಲಿರುವ ಋಷ್ಯಾಶ್ರಮವರ್ಣನೆಯನ್ನೂ, ಹಂಪದೇವಪಿರಚಿತವಾದ ಆದಿಪುರಾಣದಲ್ಲಿರುವ ಭೋಗಭೂಮಿಯ ಮಾಹಾತ್ಮ್ಯವನ್ನೂ ಇಲ್ಲಿ ಉದಾಹರಿಸುತ್ತೇನೆ.

—ಋಷ್ಯಾಶ್ರಮ—

ವ॥ ಪಥಶ್ರಾಂತನಾದ ನೃಪಂಗೆ ಪ್ರಾಣವಾಯು ಬರ್ಪಂತೆ ಹೋಮಧೂಪಿ

* ಭೋಗಭೂಮಿ ಎಂದರೆ ದುಃಖಮಿಶ್ರವಿಲ್ಲದ ಸುಖಸ್ಥಾನಗಳು.

ತದಿವ್ಯಗಂಧಾಮೃತಂಬೆರಸು,

ವಿದಳಿತ ಪುಷ್ಪಸೌರಭಮನಾವಗಮಿರ್ಕುಳಿಗೊಂಡು ಕೊಂಡು ಷ ।
ಟ್ಪದಪದಪದ್ಮಿನೀನಿವಹಶೈತ್ಯದೊಳೊಯ್ಯನೆ ಕೂಡಿಕೂಡಿ ಮಾ ॥
ಣದೆ ವಿವಿಧದ್ರುಮೋತ್ಕರದಿರುಂಬಿನೊಳಿಂಬೆನೆ ನಿಂದು ನಿಂದು ತೀ ।
ಡಿದುದಘಹಾರಣಂ ಪಥಪರಿಶ್ರಮವಾರಣನಾ ಸಮೀರಣಂ ॥

ಅಂತು ಬಂದ ಮಂದಮಾರುತನಿಂದಾಪ್ಯಾಯಿತಶರೀರನಾಗಿ, ತದ್ಗಂಧಪವಾಸನೆಯಿಂದಿದು ಋಷ್ಯಾಶ್ರಮಮೆಂದು ನಿಶ್ಚೈಸಿ, ತದಾಶ್ರಮಾಭಿಮುಖನಾಗಿ ಬರುತ್ತುಂ ಮಾಶ್ರಮಿಗಳ ಹೋಮಕಾರ್ಯಕ್ಕೆ ಕರೆವ ಕಾಮಧೇನುಗಳಂತೆ ಕರೆವ ಹೋಮಧೇನುಗಳಂ ಕಿಡಲೀಯದೆ ಕಾದು ಪಲಾಶಾಶ್ವತ್ಥೋದುಂಬರಾರ್ಕನ್ಯಗ್ರೋಧಶಮ್ಯಪಾಮಾರ್ಗಖದಿರಾದಿ ಶುಷ್ಕ ಸಮಿತ್ತುಗಳುಮಂ ಕುಶಾಸ್ವಲಾಯನ ವಿಶ್ವಾಮಿತ್ರಾದಿ ದೂರ್ವಾಂಕುರ ಪವಿತ್ರವಸ್ತುಗಳುಮಂ ಕೊಂಡು ಧೇನುಗಳಂ ಮುಂಕೊಂಡು ಬರ್ಪ ಶಿಷ್ಯಸಮೂಹಂಗಳುಮಂ, ಕುಂದಮುಚುಕುಂದಮಂದಾರೇಂದೀವರ ನಂದ್ಯಾವರ್ತತ್ರಿಸಂಧ್ಯಾಬಂಧೂಕ ಕದಂಬ ಕನಕಕರವೀರಕರ್ಣಿಕಾರ ಕುಮುದ ವಕುಳ ಕುರವಕ ಕಮಲ ತಿಲಕ ಚಂಪಕ ಪಾಟಲಿ ಪಾರಿಜಾತ ಜಾತಿ ಪುನ್ನಾಗ ಮಲ್ಲಿಕಾದ್ಯನೇಕಸುರಭಿಕುಸುಮಂಗಳಂ ಸಜ್ಜುಕಮಪ್ಪುವಂ ಪುಟ್ಟಿಯೊಳ್ ತೀವಿಕೊಂಡು ದಧಿಮಧುಘೃತಕ್ಷೀರ ಗೋಮಯಗೋಮೂತ್ರಂಗಳುಮಂ ಪುಣ್ಯತೀರ್ಥೋದಕಂಗಳುಮಂ ಕಲಶಂಗಳೊಳ್ ತೀವಿಕೊಂಡು ತಪೋಧನರ ದೇವತಾರಾಧನೆಗೆ ಕಾಲಾತಿಕ್ರಮಮಾಗಲೀಯದೆ ಧಾಳಾಧಾಳಿಯಲ್ಲಿ ಬರ್ಪ ಪರಿಚಾರಕರ ನೆರವಿಯುಮಂ, ಕಂಡವರ ಪಿಂದುಪಿಂದನೆ ಬಂದು ಮುನಿವನಮನೆಯ್ದುವುದುಮಾವ ನದೊಳಾವನಕ್ಕಿಕ್ಕಿದ ಬಾಳ್ವೇಲಿಯಂತೆ ರಸರಸಾಯನಂಗಳಂ ತೀವಿ ನೆರೆದ ಪೊಂಗಳಸಂಗಳಂತಪ್ಪ ನವಫಲಂಗಳಿಂ ನೆರೆದೊಪ್ಪುವ ಮಾತುಲುಂಗದ ಪೊದರುಗಳುಮನಾ ಪೊದರ ಮೊದಲೊಳೊದವಿ ಬೆಳೆದು ಬೇಗಿ ತಮ್ಮಿಂ ತಾವೆ ಬಿರಿದು ಬಿರಿವಟ್ಟು ಸುರಿವ ದಾಳಿಂಬದ ಪಣ್ಗಳ ತನಿರಸದ ಪರಿವೊನಲೆ ಪರಿನೀರಾಗೆಯುಂಕುರವೊತ್ತಿ ಬಳೆಯುತ್ತಿರ್ದ ಕರ್ಬಿನ ಮಡಲ್ಗಳುಮಂ, ಅಲ್ಲಿಂದೊಳಗೆ, ಕಲ್ಪವೃಕ್ಷದೊಳ್ವೆಕಲ್ಪಮಿಲ್ಲೆನಿಸಿ ಬೇರಿಂ ಕೊಟ್ಟು ತುದಿಗೊಂಬುವರಮೋರಂತೆ ನೇರಿದುವಾಗಿರ್ದಲೆಯಿಂ ತುರುಗಿ ಫಲವಾದ ಪನಸಿನ ಮರಂಗಳುಮಂ, ಭೂತಳಕ್ಕತಿಪ್ರೀತಿಕರಮಾಗಿ ಪೂತು ಪಣ್ತೊರಗಿದರನೇರಿಲ ಇಮ್ಮಾವಿನ ತೆಂಗಿನ ನಾರಂಗದ ಮರಂಗಳ್ ಮೊದಲಾಗಿ ಫಲಂ

ಗಳಂ ನೆರೆದೊಪ್ಪುವನೇಕ ವೃಕ್ಷಂಗಳುಮಂ, ಆ ಮರಂಗಳ ಶಾಖಾಗ್ರಂಗಳ ತಳಿರ ತುರುಗಲೊಳಿರ್ದು ಪಾಪರೂಪನಿದಂ ಪುಗಲ್ವೇಡೆಂಬಂತೆ ಪುಗಿಲ್ವುಗಿಲೆನುತಿರ್ಪ ಪುಷ್ಟ ಪರಪುಷ್ಟಂಗಳುಮಂ, ಮೃದುಮಧುರಗಂಭೀರರವದಿಂ ಸಾಮವೇದವನನುವಾದಂಗೆಯ್ವಂತಿರ್ಪ ಮಧುಕರಪ್ರಕರಮುಮಂ, ವೇದಾಂತಸಿದ್ಧಾಂತ ಪ್ರಮಾಣಶಾಸ್ತ್ರಂಗಳನೋದಿ ತರ್ಕಿಸುವ ಪಂಡಿತರ್ಕಳೊಡನೆ ತೊಡರ್ದು ನುಡಿದು ಸದುತ್ತರಂಗುಡುತಿರ್ಪ ಶುಕಶಾರಿಕಾನಿಕಾಯಂಗಳುಮಂ, ಪಂಚಾಗ್ನಿ ತಾಪತಪ್ತಮಾನಸರಪ್ಪ ತಪೋಧನಜನಕ್ಕೆ ತಪನತಾಪಮನಾಗಲೀಯದೆ ತಳಿರ್ದುರುಗಲಂ ಪೊತ್ತು ನಭದೊಳ್ ನಲಿದಾಡುವ ಸೋಗೆನವಿಲ್ಗಳ ಪಿಂಡುಗಳುಮಂ, ಅಗ್ನಿಹೋತ್ರೋಪಚರಣಪರಿಣತಾಂತಃಕರಣರಪ್ಪ ಆಹಿತಾಗ್ನಿಗಳ ಮೆಯ್ಯೊಳೊಗೆದ ಶ್ರಮಸ್ವೇದಬಿಂದುಗಳುಮಂ ತಂತಮ್ಮೆರಂಕೆಯ ಗಾಳಿಯೊಳಾರಿಸುತ್ತಿರ್ಪ ರಾಜಹಂಸೆಗಳುಮಂ, ದೇವತಾರಾಧನಂಗೆಯ್ವ ತಪೋಧನರ್ಗಿರದೆ ಗದ್ದುಗೆಗಳಂ ಕಟ್ಟಿ ಧೂಪದೀಪಂಗಳುಮಂ ಕೊಟ್ಟು ಪರಿಯುಷ್ಟಿಗೆಯ್ವ ಪಟುತರಮರ್ಕಟ ಸಮೂಹಂಗಳುಮಂ, ಕೃಚ್ಛ್ರಾತಿಕೃಚ್ಛ್ರ ಚಾಂದ್ರಾಯಣ ಸಾಂತಪನಾದಿ ಮಹಾತಪಂಗಳಿಂ ತಪ್ತರಾಗಿ ಕ್ಷೀಣಧಾತುಗಳಾಗಿಯುಂ ಮಾಣದೆ ನಡೆಪಾಡುತಿರ್ದೆಡಪಿ ಕೆಡೆವ ಜರತ್ತಾಪಸರ ಕೈಯಂ ಪಿಡಿದೊಯ್ಯನೆತ್ತುವ ಗೋಲಾಂಗೂಲಜಾಲಮುಮಂ, ಹೋಮಾಗ್ನಿಯಂ ನಂದಿಸಲುಂ ಕುಂದಿಸಲುಮೀಯದೆ ಶುಷ್ಕಸಾಧನಂಗಳಂ ಸಂಧಿಸುವ ಕರಿಕರೇಣುಗಳುಮಂ, ಸ್ನಾತಕ ವ್ರಾತಕ್ಕೆ ಶೌಚಕಾರ್ಯನಿಮಿತ್ತಂ ದರಿಯ ಮಣ್ಣಂ ಕೋಡೊಳೆತ್ತಿ ತಂದವರ ಮುಂದಿಕ್ಕುವ ಭದ್ರಗಜವ್ರಜಮುಮಂ, ತೀರ್ಥಸ್ನಾನಾರ್ಥಂ ಪರಸ್ಥಾನಂಗೆಯ್ವ ವಾನಪ್ರಸ್ಥಜನಂಗಳ ಧೌತವಸ್ತ್ರಪವಿತ್ರಾಕ್ಷಸೂತ್ರಂಗಳಂ ತಮ್ಮ ಕವಲ್ಗೊಂಬುಗಳೊಳ್ ಸೇರಿಸಿ ಕೊಂಡಿಂಬಿನೊಳವರೊಡನೆ ನಡೆವ ಸಾರಂಗಸಮೂಹಮುಮಂ, ಭಿಕ್ಷುಗಳ ಭೈಕ್ಷಂಗಳೊಳ್ ಮಕ್ಷಿಕಾಸಂಗತಿಯಾಗಲೀಯದೆ ತಮ್ಮ ಬಾಲಂಗಳೊಳ್ ಬೀಸುತ್ತುಂ ಪೋಪ ಚಮರೀಮೃಗಂಗಳುಮಂ, ಕಾಂತಾರಭೈಕ್ಷಾಹಾರಿಗಳಪ್ಪ ಭಿಕ್ಷುಗಳ್ಗೆ ವೃಕ್ಷರೂಪದೊಳಿರ್ದು ಭಿಕ್ಷಮನಿಕ್ಕುವ ಯಕ್ಷದೇವತೆಯರುಮಂ, ಯೋಗಾಭ್ಯಾಸಂಗೆಯ್ವ ಯೋಗೀಂದ್ರಬೃಂದಕ್ಕೆ ಯೋಗಾಸನಮಾಗಿ ಸುತ್ತುಗೊಂಡು ಬಿತ್ತರಂಗೆಯ್ವಂತಿರ್ದ ಭೋಗೀಂದ್ರವೃಂದಮುಮಂ, ಬಾಲಕರಂತೆ ಕಂದಮೂಲಫಲಂಗಳಂ ಪೆರರ್ ತಂದಿಕ್ಕೆ ತಿಂದಾನಂದಮನಸ್ಕರಾಗಿ ನಿಂದ ತಪೋಧನರುಮಂ, ಚಕ್ಷುಶ್ಶ್ರುತಿಗಳಂತೆ ವಾಯುಭಕ್ಷಕರಾಗಿರ್ದ ಮುಮುಕ್ಷುನಿಕರಮು

ಮಂ, ನೀರ್ಮಾನಸರಂತೆ ನೀರೊಳ್ ನೆಲಸಿರ್ದುದಕವಾಸಿಗಳುಮಂ, ಸಂಸಾರಸಾ
ರಮನೀಯುಂದದಿಂ ದಾಂಟುವುದೆಂದು ತೋರುವಂದದಿಂದ್ಥೊಂದೆ ಕಾಲೊಳ್ ನಿಂ
ರ್ದೇಕಪಾದವ್ರತಸ್ಥರುಮಂ, ಸಗ್ಗದ ಬಟ್ಟೆಯುಂ ಸುಟ್ಟಿ ತೋರುವಂತೆ ಕೈಯನೆತ್ತಿ
ನಿಂದೂರ್ಧ್ವಬಾಹುವ್ರತಿಗಳುಮಂ, ಪಸರಿಸಿದ ಕುಸುಮದೆಸಳ ಕಸವರಂ ದೆಸೆದೆಸೆ
ಮುಸುಳೆ ಮಲಯಾನಿಳಂ ಬೀಸಿ ಕಳೆಯೆ ತ್ರಿಕಾಲದೊಳಂ ಖಿಲ್ವಾಯಿತನಂತೆ ಗಂಗಾ
ಜಲವಂತಂದು ತಳಿವ ಬೆಳ್ಮುಗಿಲ್ಗಳುಮಂ, ಧರ್ಮಶಾಸ್ತ್ರ ವ್ಯಾಖ್ಯಾನಂಗೆಯ್ವ ಮು
ಮುಖ್ಯರಪಕ್ಕದೊಳಾಗಳುಮಗಲದ ಕರಿರುರುಹರಿಣಶಶಕಸಾರಂಗಮೆ ಮೊದಲಾ
ಮೃಗಂಗಳೊಡನೆ ಬದ್ಧವೈರಮಂ ಪತ್ತುವಿಟ್ಟು ಬಂದೊಂದನವುಂಕಿ ನೂಂಕಿ ಪತ್ತಿ
ಕಿವಿಯಿತ್ತೊರಲ್ದು ಕೇಳ್ವ ಸಿಂಹಶರಭಶಾರ್ದೂಲವ್ಯಾಳಾದಿ ಕ್ರೂರ ಮೃಗನಿವಹಮು
ಮಂ, ಕಂಡಾತಪೋಧನರ ತಪೋವನದ ತಪಃಪ್ರಭಾವಕ್ಕಮಲ್ಲಿಯ ಪಶುಮೃ
ಪಕ್ಷಿಜಾತಿಗಳ್ ಮೊದಲಾದ ಚರಾಚರಂಗಳ್ಗೆ ಪುಟ್ಟಿದುಪಶಮಾದಿಗುಣಕ್ಕಂ ಚೋದ್ಯ
ಬಟ್ಟಂ.

— ಭೋಗಭೂಮಿವರ್ಣನೆ —

ದರ್ಪಣಸಮತಳಮೆನೆ ಸಂ।
ಸರ್ಪದ್ರತ್ನಾಂಶುಜಾಳಜಟಿಳಿತಮೆನೆ ಕಂ।
ದರ್ಪಸುಖನಿಳಯಮೆನೆ ಸಂ
ತರ್ಪಣಕರಮಖಿಳಭೋಗಭೂಮಿವಿಭಾಗಂ॥ ॥೧॥

ವ॥ ಮತಮಲ್ಲಿ,

ಹಿಮಮೆಂದಾತಪಬಾಧೆಯೆಂದು ಮಳೆಯೆಂದಿಲ್ಲಾನೆಲಂ ಪಂಚರ
ತ್ನಮಯಂ ನಾಲ್ವೆರಲಲ್ಲದಾಗದೆಳವುಲ್ ನೀಲೋತ್ಪಲಾಬ್ಜಾಕರಾ।
ಳಿ ಮನಂಗೊಳ್ವದು ಮೆಲ್ಲನಲ್ಲಿ ಸುಳಿಗುಂ ಮಂದಾನಿಳಂ ನೀರ್ ಸುಧಾ
ಸಮಮುದ್ಯಾನವನಂ ಮದೋತ್ಕಪರಪುಷ್ಪೋದ್ದಾಮಕೋಳಾಪಳಂ॥ ॥೨॥

ಪಗಲಿರುಳೆಂಬ ಭೇದಮನಯಂ ಬಡವರ್ ಕಡುಬಲ್ಲಿದರ್ ವಿಷಾ
ಹಿಗಣಮನೇಕರೌದ್ರಮೃಗಜಾತಿಗಳಾಳರಸೆಂಬುದೊಂದು ದಂ।
ದುಗಮಳಿಪಾಯಿಲಂ ಮರುಕಮಾಮಯಮಪ್ಪಮೃತ್ಯುವೆಂಬಿವ
ಲ್ಲಿಗೆ ಪೊರಗೆಂದೊಡಿಂ ಸುಖಮನೇವೊಗಳ್ವಪ್ಪುದೊ ಭೋಗಭೂಮಿಯಾ ॥೩

ವ॥ ಮತ್ತಮಲ್ಲಿ,

ಮದ್ಯವಿಭೂಷಣ ವಸ್ತ್ರಾ ।
ತೋದ್ಯ ಸ್ರಗ್ಭವನ ಭಾಜನಾಶನದೀಪ ॥
ಪ್ರೋದ್ಯಜ್ಜ್ಯೋತಿಸ್ಥಿತಿಯೊಳ ।
ಮುದ್ಯೋತಿಸೆ ತುದಿಯೊಳಂಗಮಿಂತು ದಶಾಂಗಂ ॥ ॥೪॥

ವ॥ ಎನಿಸಿದ ಸಾನಾರತ್ನಮಯಂಗಳುಮಪ್ರತಿಹತಪ್ರಭಾದ್ಯೋತಿತದಿಙ್ಮುಖಂಗಳುಮಪ್ಪ ಕಲ್ಪವೃಕ್ಷಂಗಳ್ :—

ಕುಡಿದೊಡೆ ಸೋರ್ಕಿಸದವು ನಾ
ಣ್ಗೆಡಿಸದವು ಮನಕ್ಕಲಂಪನೀವುವು ರತಮಂ ।
ನಡೆಯಿಪುವೆನಿಸುವ ಮಧುಗಳ
ನೆಡೆಯುಡುಗದೆ ಕುಡುಗುಮುಚಿತಮದ್ಯಾಂಗಕುಜಂ ॥ ॥೫॥

ಮಕುಟಂ ಕೇಯೂರಂ ಕ
ರ್ಣಕುಂಡಲಂ ಕೊಪ್ಪು ಸರಿಗೆ ದುಸರಂ ಮುಣಿಮು ।
ದ್ರಿಕೆ ತಿಸರಮೆಂಬ ಭೂಷಾ
ನಿಕರಮನಾಭೂಷಣಾಂಗತರು ಕುಡುತಿರ್ಕುಂ ॥ ॥೬॥

ಪಳಿ ಚಿತ್ರಾವಳಿ ಜೋಗಂ
ಪಳಿಯುಂ ದೇವಾಂಗಮೆಂಬ ವಸನಂಗಳನೇಂ ।
ಘುಳಿಯಿಸುವುವೊ ಮುಡಿವಳ್ಳನ
ಪಳಿಯುತನನೆ ಪೋಲ್ತು ವಿಶದವಸನಾಂಗಕುಜಂ ॥ ॥೭॥

ಅತಿಮೃದುರವದಾಯಿಗಳಂ
ತತಘನಸುಷಿರಾವನದ್ಧವಾದ್ಯಂಗಳನೇಂ ।
ಮತಿಯುಱದೋಲಗಿಪುದೊ ದಂ
ಪತಿಗೆಂದುಮವಾರ್ಯವೀರ್ಯತೂರ್ಯಕ್ಷ್ಮಾಜಂ ॥ ॥೮॥

ಮಗಮಗಿಪ ಜಾದಿ ಪೊಂಗೇ
ದಗೆ ಮಲ್ಲಿಗೆಯೆಂಬ ಪಲವು ಪೂಮಾಲೆಗಳಂ ।
ಬಗೆಯುಱದೋಲಗಿಪುದು ಮಾ
ಲೆಗಾಱನಂ ಪೋಲ್ತುದಗ್ರಮಾಲ್ಯಮಹೀಜಂ ॥ ॥೯॥

ಹಾಟಕಭಿತ್ತಿಸಮನ್ವಿತ
ನಾಟಕಶಾಲೆಗಳ ವಿವಿಧಸ್[illegible]
ಡಾಟಮನೆ ಮೆ[illegible]
ಪಾಟ[illegible]ಮುಹಜಾತಂ ॥ ॥೧೦॥

[illegible]ನ
[illegible]ವಪ್ಪುವೆಂಬಂತೆ ಕನ ।
ತ್ಕನಕಮಣಿಖಚಿತಬಹುಭಾ
ಜನಂಗಳಂ ಭಾಜನಾಂಗತರು ಕುಡುತಿರ್ಕುಂ ॥ ॥೧೧॥

ಅಮರ್ದಿನ ಸವಿಯೊಳಗೀಸವಿ
ಸಮನೆನೆ ತೇಜೋಬಳಾಯುರಾರೋಗ್ಯಸಮೇ ।
ತಮನವ್ಯತಾನ್ನಮನೋಲ್ದೀ
ಗುಮಾಗಳುಂ ಭೋಜನಾಂಗಕಲ್ಪಾವನಿಜಂ ॥ ॥೧೨॥

ಅಘೊತ್ತುಂ ಮಣಿದೀಪಕ
ಳಾಪೋದ್ಯಜ್ಜ್ಯೋತಿಗಳ್ ದಿಶಾಮಂಡಲಮಂ ।
ವ್ಯಾಪಿಸುತಿರೆ ಸೊಗಯಿಸುವುವು
ದೀಪಾಂಗಜ್ಯೋತಿರಂಗ ಕಲ್ಪಕುಜಂಗಳ್ ॥ ॥೧೩॥

ನೀಡಿದ ಕೆಯ್ಗೆ ನೀಡಿರದೆ ಬೇಡಿದ ಭೋಗಮನೇನನಾದೊಡಂ
ನೀಡುವ ಕಲ್ಪವೃಕ್ಷನಿಕರಂಗಳೆ ಭೋಗದಲಂಪನಾವಗಂ ।
ಮಾಡೆ ಮನಂ ವಿನೋದರಸದೊಳ್ ತಡಮಾಡೆ ಮಗಳ್ದು ಮನ್ಮಥ
ಕ್ರೀಡೆಗೆ ನೋಡೆ ನಾಡೆ ಗುಱಿಯಪ್ಪುವು ದಂಪತಿ ಭೋಗಭೂಮಿಯೊಳ್ ॥೧೪॥

ತೊಲಗದ ಜವ್ವನಂ ತವದ ಮೆಚ್ಚು ಮರಲ್ಚುವ ನೋಟಮೞ್ತಿಯುಂ
ಸಲಿಸುವ ಭೋಗಮೊಲ್ದಗಲದೋಪರ ಕೂಟಮನಂಗರಾಗದೊಳ್ ।
ನಲಿವ ವಿನೋದಮಾದಮೆರ್ದೆಯೊಳ್ ತಡಮಾಡೆ ಸುಖಂಗಳೊಳ್ ಪಳಂ
ಚಲಿಪುದು ನಾಕಲೋಕಮುಮನೇನಿರದೀವುದೊ ಭೋಗಭೂತಳಂ ॥೧೫॥

ಈ ವರ್ಣನೆಯಲ್ಲಿ ಪ್ರತಿ ಪದ್ಯದಲ್ಲಿಯೂ ಯಾವುದು ಮನುಷ್ಯನ ಸುಖವನ್ನು ಹೆಚ್ಚಿಸುವುದೋ ಅಂಥದೊಂದನ್ನು ಹೇಳದೆ ಇಲ್ಲ. "ದೃಷ್ಟಂ ಕಿಮಪಿ ಲೋಕೇಸ್ಮಿನ್ನನಿರ್ದೋಷಂ ನ ನಿರ್ಗುಣಂ" ಎಂಬಂತೆ ಈ ಲೋಕದಲ್ಲಿ ದುಃಖ

ಮಿಶ್ರವಾಗದ ಸುಖವೇ ಇಲ್ಲ. ಈ ಭೋಗಭೂಮಿಯಲ್ಲಿ ಮಾತ್ರ ಹಾಗಲ್ಲ. ಹಿಮ, ಆತಪ, ವೃಷ್ಟಿ ಇವುಗಳ ಬಾಧೆಯಿಲ್ಲ. ಹುಲ್ಲು ನಾಲ್ಕೆರಳಿಗೆ ಹೆಚ್ಚಾಗಿ ಬೆಳೆಯದು. • ಮನೋಹರವಾದ ಕೊಳಗಳಿರುವುವು. ಅವುಗಳಲ್ಲಿ ನೀರು ಯಾವಾಗಲೂ ಅಮೃತಕ್ಕೆ ಸಮವಾಗಿ ಸಿಹಿಯಾಗಿರುವುದು. ಮಂದಾನಿಲವೇ ಯಾವಾಗಲೂ ಬೀಸುತ್ತಿರುವುದು. ಉದ್ಯಾನವು ಮದೋತ್ಕವರವೃಷ್ಟೋದ್ದಾಮಕೋಲಾಹಲ ದಿಂದ ಆನಂದದಾಯಕವಾಗಿರುವುದು. ಮತ್ತು ಅಲ್ಲಿ ಪಗಲಿರುಳೆಂಬ ಭೇದವಿಲ್ಲ. ಅಸೂಯಾದಿಗಳಿಗೆ ಕಾರಣವಾದ ಬಡವ ಹಣವಂತ, ಆಳು ಅರಸು, ಎಂಬ ತಾರ ತಮ್ಯವಿಲ್ಲ. ರೋಗ, ದುಃಖ, ಅಪಮೃತ್ಯು ಎಂಬಿವಿಲ್ಲ. ದುಷ್ಟಮೃಗಗಳ ಬಾಧೆ ಯಿಲ್ಲ. "ನಸುಖಾಲ್ಲಭ್ಯತೇ ಸುಖಂ" ಎಂಬಗಾಥಾರ್ಥವನ್ನು ಅಲ್ಲಿಯ ಕಲ್ಪವೃಕ್ಷ ಗಳು ಸುಳ್ಳುಮಾಡುತ್ತಿರುವುವು. ಸುಖವೂ ಸಾಧನವೇಳೆಯಲ್ಲಿ ದುಃಖವನ್ನು ಕೊಡುತ್ತಿರುವುದನ್ನು ಕಂಡು ಅಲ್ಲಿಯ ಕಲ್ಪವೃಕ್ಷಗಳು ಅರ್ಥಿಗಳ ಮನಸ್ಸನ್ನು ಅರಿತು ಇಷ್ಟಾರ್ಥವನ್ನು ಕೊಡುತ್ತಿರುವುವು. ಈ ವರ್ಣನೆಯು ಪಾಠಕರ ಹೃದಯ ದಲ್ಲಿ ಆನಂದರಸವನ್ನು ತುಂಬಿ ಅವರನ್ನು ಉನ್ಮತ್ತರಾಗಿಸದೆ ಇರದು.

ಈ ವರ್ಣನೆಯನ್ನು ಸ್ವಭಾವೋಕ್ತಿಯೆಂದು ಗಣಿಸುವುದಕ್ಕಾಗುವುದಿಲ್ಲ. ಇಂ ಥ ಭೋಗಭೂಮಿಯು ಇರುವುದೆಂದು ನಂಬುವುದಕ್ಕೆ ಪ್ರಾಯಶಃ ಮನಸ್ಸು ಒಡಂ ಬಡುವುದಿಲ್ಲ. ಇಂಥವುಗಳನ್ನು ಕವಿಯು ವಿಚಿತ್ರಸೃಷ್ಟಿಯೆಂದು ಹೇಳುವಲ್ಲಿ ಆವ ರ್ಣನೆಗೆ ಅತಿಶಯಕೊಟ್ಟಂತಾಗುವುದು; ಕವಿಶಕ್ತಿಯಲ್ಲಿ ಮಹಿಮೆ ಕಂಡುಬರು ವುದು. "ರವಿ ಕಾಣದುದನ್ನು ಕವಿ ಕಾಣುವನು" ಎಂಬ ಗಾದೆಗೆ ಇದೇ ನಿದ ರ್ಶನ. ಜಿನಮತಪ್ರವಿಷ್ಟನಾದ ನೇಮಿಚಂದ್ರನೂ ಕೂಡ ಹೀಗೆಯೇ ಅಭಿಪ್ರಾಯ ಪಡುವಂತಿದೆ.

ಕಟ್ಟುಗೆ ಕಟ್ಟದಿರ್ಕೆ ಕಡಲಂ ಕಪಿಸಂತತಿ ವಾಮನಕ್ರಮಂ
ಮುಟ್ಟುಗೆ ಮುಟ್ಟದಿರ್ಕೆ ಮುಗಿಲಂ ಹರನಂ ನರನಕ್ಕಿ ಗಂಟಲಂ।
ಮೆಟ್ಟುಗೆ ಮೆಟ್ಟದಿರ್ಕೆ ಕವಿಗಳ್ ಕೃತಿಬಂಧದೊಳಲ್ತೆ ಕಟ್ಟಿದರ್
ಮುಟ್ಟಿದರಿಕ್ಕಿ ಮೆಟ್ಟಿದರಿದೇನಳವಗ್ಗಳಮೋ ಕವೀಂದ್ರರಾ॥ ॥೧॥

• ಈಗಲೂ ಉದ್ಯಾನಗಳಲ್ಲಿ ಹುಲ್ಲನ್ನು ಸೌಂದರ್ಯಕ್ಕಾಗಿ ನಾಲ್ಕುಬೆರಳು ಉದ್ದ ಕ್ಕಿಂತ ಹೆಚ್ಚಾಗಿ ಬೆಳೆಯಿಸುವುದಿಲ್ಲ.

ಕ್ಷಿವಿಯಿಂದೀಂಟಿಸುವರ್ ಸಮಸ್ತರಸಮುಂ [illegible]
ಯ್ಯುವತ್ತೀಪ್ರೌಢಲತಾಗ್ರದೊಳ್ ಕ[illegible]ಲಪ ।
ಲ್ಲವಣಮುಂ ಪುಟ್ಟಪರಾವ್ಯವೆ[illegible]ಚಮತ್ಕಾರಮುಂ
ಕವಿಗಳ್ ಬಲ್ಲರ್[illegible]ನುಂ ಬಲ್ಲನೇ ॥ ॥೨॥

[illegible]ಂದು ಪಶುವೀಗುಂ ಕೋಳಿಮೆಂದೋಳಿಯೊಳ್
[illegible]ಮುಂ ಕೊಸರಿಪರ್ ಕಲ್ಲಲ್ಲಿ ನಾರೆತ್ತುವರ್ ।
[illegible]ಂ ಶೋ ಪುರುಳಾಗಿಪರ್ ಕಿವಿಗಳೊಳ್ ಪೀಯೂಷಮುಂ ಪಿಂಡಲು
ರ್ಗರೆಯೊಳ್ ಸಂದ ಕವಿಪ್ರವೇಕರೆ ವಲಂ ಬಲ್ಲರ್ ಪೆರರ್ ಬಲ್ಲರೇ ॥೩॥

(ಲೀಲಾವತಿ)

ಏವಂಚ ಕವಿಗಳು ಇದ್ದ ಕಥೆಯನ್ನು ವಿಸ್ತರಿಸಿಯೊ, ಮನಬಂದಂತೆ ಹೊಸ ಸಂವಿಧಾನವನ್ನು ಕಲ್ಪಿಸಿ ಸೇರಿಸುವುದರ ಮೂಲಕ ಆ ಇದ್ದ ಕಥೆಯನ್ನು ಮಾರ್ಪಡಿಸಿಯೊ, ಇಲ್ಲವೇ ತಮ್ಮ ಬುದ್ಧಿಯಿಂದಲೇ ವಿಚಿತ್ರವಾದ ಕಥೆಯನ್ನು ಕಲ್ಪಿಸಿಯೊ, ಮತ್ತು ವಿಚಿತ್ರವಾದ ಪ್ರಾಣಿಗಳು ಅವುಗಳ ವ್ಯಾಪಾರಗಳು ಕೇವಲ ಸುಖಸ್ಥಾನಗಳು ಪುಣ್ಯಾಶ್ರಮಗಳು ಇವೇ ಮೊದಲಾದುವನ್ನು ವರ್ಣಿಸಿ ಸೇರಿಸುವುದರಮೂಲಕ ಇದ್ದ ಕಥೆಯನ್ನಾಗಲಿ ಇಲ್ಲದ ಕಥೆಯನ್ನಾಗಲಿ ಪೋಷಿಸಿಯೊ ಈ ರೀತಿಯಲ್ಲಿ ತಮ್ಮ ಉದ್ದೇಶಗಳನ್ನು ನೆರವೇರಿಸಿಕೊಳ್ಳುವರು ಅದುಹಾಗಿರಲಿ.

ಕವಿಗಳು ವರ್ಣ್ಯವಸ್ತುಗಳನ್ನು ಸೇರಿಸುವ ಕ್ರಮವನ್ನು ನೋಡುತ್ತ ಬಂದರೆ ಒಂದು ವಿಧವಾದ ಸಂಕೇತವು ಇರುವಂತೆ ಕಂಡುಬರುತ್ತದೆ. ಈ ಸಂಕೇತವು ಲೋಕದಲ್ಲಿ ನಡೆಯುವ ದೇಶಕಾಲಸ್ಥಿತಿಗಳನ್ನು ಅನುಸರಿಸಿಯೇ ಇರುವುದು. ಉಪಮಾನೋತ್ಪ್ರೇಕ್ಷಾದಿಗಳ ಸೇರಿಸುವಿಕೆಯಲ್ಲಿರುವ ಸಂಕೇತವು ಹಿಂದೆ ನಿರೂಪಿತವಾಗಿದೆ. ಋತುಧರ್ಮಗಳ ವರ್ಣನೆಯಲ್ಲಿ ಆಯಾ ಋತುಗಳಿಗೆ ತಕ್ಕ ವಿಹಾರಾದಿಗಳು ವರ್ಣಿಸಲ್ಪಡುವುದಲ್ಲದೆ ಆ ವಿಹಾರಾದಿಗಳ ಸುಖವನ್ನು ಹೆಚ್ಚಿಸುವ ನದಿ ಪರ್ವತ ಆರಾಮ ಮೊದಲಾದುವುಗಳ ವರ್ಣನೆಯು ಕಲ್ಪಿಸಲ್ಪಡುವುದು. ವಸಂತಋತುವು ಶೃಂಗಾರೋದ್ದೀಪಕವಾದ ಕಾಲವಾದುದರಿಂದ ವೃಕ್ಷಗಳಲ್ಲಿ ಹೂ ನನೆ ತಳಿರುಗಳೂ, ಕೊಳಗಳಲ್ಲಿ ಪದ್ಮನೀಲೋತ್ಪಲಾದಿಗಳ ವಿಕಾಸವೂ ಪಕ್ಷಿಗಳ ವಿಹಾರವೂ ವರ್ಣಿಸಲ್ಪಡುವುವು. ಮತ್ತು ಮಾವಿನಮರಕ್ಕೆ ಇರುವಂತಿಗೆಯು ಸುತ್ತಿಕೊಂಡು ಪುಷ್ಪಿತವಾಗುವಂತೆಯೂ, ಮಾಮರದ ಚಿಗುರನ್ನು ತಿಂದು ಕೋಗಿಲೆಯು

ಕೂಗುತ್ತಿರುವಂತೆಯೂ, ಉತ್ತಮಸ್ತ್ರೀಯರ ಪಾದತಾಡನ ಆಲಿಂಗನ ಗಂಡೂಷ ಸ್ಪರ್ಶ ಆಲೋಕನ ಇವುಗಳಿಂದ ವೃಕ್ಷಗಳಲ್ಲಿ ಪಲ್ಲವ ಕೋರಕಪುಷ್ಪೋದ್ಗಮ ಗಳು ಉಂಟಾಗುವಂತೆಯೂ, ವರ್ಣಿಸಿ ಇತ್ಯಾದಿಯಾದ ಅಸಂಭವವಾದ ಸಂಗತಿಗ ಳನ್ನು ಕಲ್ಪಿಸಿ ಸೇರಿಸುವರು. ಹೀಗೆಯೇ ಇತರ ಋತುಗಳಲ್ಲಿ ಆಯಾ ಋತುಗ ಳಿಗೆ ಉಚಿತವಾದ ಧರ್ಮಗಳೊಂದಿಗೆ ಕವಿಸಂಕೇತೈಕಕಲ್ಪಿತವಾದ ಅನೇಕ ವರ್ಣ ನೆಗಳನ್ನು ಸೇರಿಸುವರು. ಈ ರೀತಿಯಲ್ಲಿಯೇ ಪ್ರತಾಪಾದಿಗಳನ್ನು ವರ್ಣಿಸು ವಾಗ ತನ್ನಿರೂಪಕವಾದ ಸಹಜಭಾವಗಳ ಜತೆಯಲ್ಲಿ ಕಲ್ಪಿತಭಾವಗಳನ್ನು ಸೇರಿ ಸುವರು. ಮತ್ತು ಪಾತ್ರಗಳ ಮನೋವೃತ್ತಿಯನ್ನನುಸರಿಸಿ ತದಭಿನಿವೇಶಾನುಗುಣ ವಾಗಿ ಅಚೇತನ ಪದಾರ್ಥಗಳಿಗೆ ಚೇತನತ್ವಾರೋಪಣವನ್ನು ಮಾಡುವರು. ಒಂದು ವೇಳೆ ಯುದ್ಧಭೂಮಿಯನ್ನು ಮದುವೆಯ ಮನೆಯಂತೆಯೂ ಒಂದುವೇಳೆ ಯಮ ನ ಬೀಡಿನಂತೆಯೂ ವರ್ಣಿಸುವರು. ವೀರನ ಖಡ್ಗವನ್ನು ಒಂದುವೇಳೆ ಸ್ತ್ರೀಯಂ ತೆಯೂ ಒಂದುವೇಳೆ ಕಾಳರಾತ್ರಿಯಂತೆಯೂ ಪ್ರಕರಣಾನುಗುಣವಾಗಿ ವರ್ಣಿ ಸುವರು. ವರ್ಣ್ಯವಸ್ತುಗಳ ವಿಷಯದಲ್ಲಿ ಚೇತನತ್ವಾದ್ಯಾರೋಪವೂ, ಅವುಗ ಳನ್ನು ನಿರೂಪಿಸಲು ಉಪಮೋತ್ಪ್ರೇಕ್ಷಾದಿಗಳನ್ನು ಸೇರಿಸುವುದೂ, ಆಯಾ ಪಾತ್ರ ಗಳ ಅವಸ್ಥೆಯನ್ನು ಅನುಸರಿಸಿಯೇ ಇರುವುವು. ಆಯಾ ಪಾತ್ರಗಳ ಮಾತು ಗಳೂ ಅವರು ಎತ್ತಿಕೊಳ್ಳುವ ವಿಷಯಗಳೂ ಅವರ ಅವಸ್ಥೆಯನ್ನನುಸರಿಸಿಯೇ ಇರುವುವು. ಈ ಮೂಲಕ ಪಾತ್ರಗಳ ಸಹವಾಸವನ್ನೂ ಯೋಗ್ಯತೆಯನ್ನೂ ಅನು ಮಾನಿಸಿ ತಿಳಿಸಲು ಪ್ರಯತ್ನಿಸುವರು. ಉದಾತ್ತನಾಯಕನ ಸಹವಾಸದಲ್ಲಿ ಅಲ್ಪ ಬುದ್ಧಿಯುಳ್ಳ ವಿದೂಷಕಾದಿಗಳ ಸಹವಾಸವನ್ನು ತಂದು ಆ ನಾಯಕನ ಉದಾತ್ತ ತ್ವಾದಿ ಗುಣಗಳಿಗೆ ಪರಭಾಗವನ್ನು ಉಂಟುಮಾಡುವರು. ಅಲ್ಲದೆ ಉತ್ಕರ್ಷಾಪಕರ್ಷ ಗಳನ್ನು ಸ್ಪಷ್ಟವಾಗಿ ಮಾತಿನಿಂದ ತಿಳಿಸದೆ ಸಂದರ್ಭಗಳಿಂದಲೂ ಇತರರ ವಾಕ್ಯ ಗಳಿಂದಲೂ ಅನುಮಾನಿಸಿ ತಿಳಿದುಕೊಳ್ಳುವಂತೆ ಮಾಡುವರು.

ಈ ವಿಧವಾದ ಸಂಕೇತವಲ್ಲದೆ ಅಲಂಕಾರ, ರಸ, ಭಾವ, ಕಥೆ, ಇವುಗಳನ್ನು ಸೇರಿಸುವುದರಲ್ಲಿಯೂ ಒಂದು ವಿಧವಾದ ಸಂಕೇತವು ಕಂಡುಬರುವುದು. ಆ ಸಂಕೇ ತವನ್ನು ಮಾತಿನಿಂದ ತಿಳಿಸುವುದು ಕಷ್ಟ. ಅನುಭವಿಸಿಯೇ ತಿಳಿಯಬೇಕು. ಆದರೂ ಯಥಾಶಕ್ತಿ ನಿರೂಪಣ ಮಾಡುವೆನು.

ಸುಖೋತ್ಪಾದನವಿಷಯದಲ್ಲಿ ಕಾವ್ಯಾಂಗಗಳಲ್ಲಿ ಒಂದುವಿಧವಾದ ತಾರತಮ್ಯ ವಿರುವುದು. ಕೆಲವು ವರ್ಣನೆಗಳು ಬುದ್ಧಿಯಲ್ಲಿಯೇ ನಿಂತು ಹೋಗುವುವು; ತಜ್ಜನ್ಯವಾದ ಸುಖವು ಪಾರಿಪ್ಲವವಾಗಿ ಮೇಲೆ ಮೇಲೆಯೇ ನಿಲ್ಲುವುದು. ಇನ್ನು ಕೆಲವು ವರ್ಣನೆಗಳು ಬುದ್ಧಿಯಿಂದ ಕೆಳಕ್ಕಿಳಿದು ಭಾವದವರೆಗೂ ಬರುವುವು; ಅಂಥವುಗಳ ಸುಖವು ಇನ್ನೂ ಸ್ವಲ್ಪ ಆಳವಾಗಿರುವುದು. ಮತ್ತೆ ಕೆಲವು ವರ್ಣನೆಗಳು ಇನ್ನೂ ಕೆಳಕ್ಕೆ ಇಳಿದು ಇನ್ನೂ ಆಳವಾದ ಸುಖವನ್ನು ಕೊಡುವುವು. ಇನ್ನು ಕೆಲವು ವರ್ಣನೆಗಳು ಹೃದಯವನ್ನು ಮುಟ್ಟಿ ರಸಾತ್ಮನಾಪರಿಣಮಿಸುವುವು; ಇಂಥವುಗಳ ಸುಖವು ಅತ್ಯಗಾಧವಾಗಿ ತಳವನ್ನು ಮುಟ್ಟಿರುವುದು. ಹೀಗೆ ಸುಖದಲ್ಲಿ ತಾರತಮ್ಯವು ವರ್ಣನೆಗಳಲ್ಲಿ ಕಂಡು ಬರುವುದು. ಉದಾಹರಣೆಗಾಗಿ—

ಮೊದಲನೆಯ ತರದುವು–ಉಪಮಾನೋತ್ಪ್ರೇಕ್ಷಾದಿ, ಪ್ರಾಸಯಮಕಾದಿ, ಶಬ್ದಚಿತ್ರ ಅರ್ಥಚಿತ್ರಾದಿಗಳೆಂಬ ಅಲಂಕಾರಗಳು ಇನ್ನುಕೆಲವು ವಿನೋದಾಶ್ರಯ ವಾದವುಗಳು, ವಕ್ರೋಕ್ತಿ, ವ್ಯಂಗ್ಯ, ಕಾಕು, ಕಟಕಿ ಇಂಥವುಗಳನ್ನು ಎರಡನೆಯ ಗುಂಪಿನಲ್ಲಿಯೂ; ಕೀರ್ತನೆಯನ್ನು ಮತ್ತು ರಸಾವಿರ್ಭಾವವನ್ನುಂಟುಮಾಡದೆ ರಸವನ್ನು ಹುಟ್ಟಿಸುವುದೋ ಎಂಬ ಅವಸ್ಥೆಗೆ ಬರುವ ವರ್ಣನೆಗಳನ್ನೂ ಮೂರನೆಯ ಗುಂಪಿನಲ್ಲಿಯೂ; ರಸಗಳನ್ನು ನಾಲ್ಕನೆಯ ಗುಂಪಿನಲ್ಲಿಯೂ ಸೇರಿಸಬಹುದು. ಸುಖದವಿಷಯದಲ್ಲಿ ಈ ವಿಧವಾದ ತಾರತಮ್ಯವಿರುವುದನ್ನು ಅನುಭವದಿಂದಲೇ ತಿಳಿಯ ಬೇಕೇ ಹೊರತು ಕಾರಣವನ್ನು ಹೇಳಿ ನಿರೂಪಿಸಲಾಗುವುದಿಲ್ಲ. ಬಹುವಾಗಿ ಉದಾಹರಣೆಗಳನ್ನು ಪರಾಮರ್ಶಿಸಿದ ಹೊರತು ಈ ವ್ಯತ್ಯಾಸವು ತಿಳಿದು ಬರುವುದಿಲ್ಲ. ಸುಖೋತ್ಪತ್ತಿವಿಷಯದಲ್ಲಿ ವರ್ಣನಾದಿಗಳಲ್ಲಿ ತಾರತಮ್ಯವುಂಟೆಂಬ ಅಭಿಪ್ರಾಯ ವನ್ನು ಮನಸ್ಸಿನಲ್ಲಿ ಇಟ್ಟುಕೊಂಡ ಬಳಿಕ ಹಿಂದೆ ಈ ಗ್ರಂಥದಲ್ಲಿಯೇ ಅನುವಾದ ಮಾಡಿರುವ ಪದ್ಯಗಳನ್ನಾಗಲಿ ಅಥವಾ ಬೇರೆ ಉದ್ಗ್ರಂಥದ ಪದ್ಯಗಳನ್ನಾಗಲಿ ಓದಿ ನೋಡಿದರೆ ಇಂಥದೊಂದು ಸಂಗತಿಯು ಉಂಟೆಂದು ಗೊತ್ತಾಗುವುದು. ವರ್ಣನೆಗಳಲ್ಲಿ ಈವಿಧವಾದ ವ್ಯತ್ಯಾಸವಿದೆಯೆಂಬುದನ್ನು ನಮ್ಮ ಶಾಸ್ತ್ರಕಾರರಲ್ಲಿ ಯಾರೂ ಐದಂಪರ್ಯೇಣ ವಿಚಾರಮಾಡಿ ಗ್ರಂಥವನ್ನು ಬರೆಯದೆ ಇದ್ದರೂ, ಇಂಥ ಒಂದು ವಿಷಯವಿದೆಯೆಂದು ತಿಳಿದಿದ್ದರೆಂದು ತೋರಿಬರುತ್ತದೆ. ಅಲ್ಲಲ್ಲೆ ವ್ಯಾಖ್ಯಾನಗಳಲ್ಲಿ 'ಇದು ಚಿತ್ರ' ಎಂಬುದಾಗಿಯೂ 'ಇದು ಭಾವ' ಎಂದೂ ಇದು 'ಹೃದಯ' ಎಂದೂ, ಇದು 'ರಸ' ಎಂದೂ ವ್ಯಾಖ್ಯಾನಕಾರರು ಬರೆದಿರುವರು.

ಇನ್ನೂ ಅಲ್ಲಲ್ಲಿ ' ಇದು ಚಮತ್ಕಾರ ' ' ಇದು ಸ್ವಾರಸ್ಯ ' ಎಂದೂ ' ಇದರಲ್ಲಿ ಸ್ಥಾಯಿಭಾವ ಹುಟ್ಟಲಿಲ್ಲವಾಗಿ ರಸವಾಗಲಿಲ್ಲ, ' ಎಂದೂ ಈರೀತಿ ಬರೆದಿರುವರು. ಗದಾಯುದ್ಧದಿಂದ ಈ ನಾಲ್ಕು ತೆರದ ವರ್ಣನೆಗಳಿಗೂ ಒಂದೊಂದು ಉತ್ತಮವಾದ ಉದಾಹರಣೆಯನ್ನು ಕೊಟ್ಟು ದಿಕ್ಪ್ರದರ್ಶನಮಾಡುವುದರಲ್ಲಿ ಪಾಠಕರಿಗೆ ಬೇಸರಿಕೆಯುಂಟಾಗಲಾರದೆಂದು ನಂಬುತ್ತೇನೆ.

(೧) ಅನಿಲತನೂಜನ ಸಿಂಹ
ಧ್ವನಿಯಂ ಕೇಳ್ದಳ್ಕಿ ತತ್ಸರೋವರದೆರ್ದೆ ಪ।
ವ್ವನೆ ಪಾರುವಂತೆ ಪಾರಿದು
ವನಾಕುಳಂ ಕೊಳದೊಳಿರ್ದ ತದ್ವಿಹಗಕುಳಂ ॥ ॥೧॥
ಅರೆಬೆಂದುವು ತಾವರೆ ಖಗ
ಮರೆಬೆಂದುವು ಭೀಮಕೋಪಶಿಖಿ ಮುಟ್ಟೆ ಸರೋ।
ವರದ ಮಳಲ್ಪುರಿಗಡಲೆಗೆ
ಪುರಿದ ಮಳಲ್ಕಾಯ್ಪು ತೆರದೆ ಕಾಯ್ದತ್ತತ್ತಂ ॥ ॥೨॥
ಬಂದಂ ಬಕಾಂತಕಂ ಪೋ
ಕೊಂದಂ ಬಕವೆಸರ್ಗೆ ಮುನಿದು ಸಮ್ಮುಮನಿನ್ನೆಂ।
ಬಂದದೊಳೆ ಪಾರಿ ಪೋದುವು
ನಿಂದಿರದುರವಣಿಸಿ ಬಕನಿಕಾಯಕಮದರೊಳ್ ॥ ॥೩॥
ಅಳದುರ್ಕೆಕೊಳೆ ಭೀಮಕೋಪಾ
ನಳನೆಸರ್ವೊಯ್ದಿಟ್ಟ ಜಲದವೋಲ್ಮರುಗಿದುದಾ।
ಕೊಳದ ಜಲಮೆಯ್ದೆ ಕಾಯ್ದಿಪ
ರೊಳೆ ಕೊಳ್ಕುದಿವಂತೆ ಕುದಿದುವನಿಮಿಷತತಿಗಳ್ ॥ ॥೪॥

ವ॥ ಅಂತು ಜಲಚರಜೀವರಾಶಿಗಳೆಲ್ಲಮುಸುಂಗೊಳೆ ಗೋಳುಂಡೆಗೊಳೆ ಕೊಳ್ಗುದಿಗೊಳೆ ಮಹೋತ್ತುಂಗಸಿಂಹನಾದಂಗೆಯ್ಯೆ

ಅರವಮುಂ ನಿರ್ಜಿತಕಂ
ಠೀರವರವಮುಂ ನಿರಸ್ತಘನರವಮುಂ ಕೋ।
ಪಾರುಣನೇತ್ರಂ ಕೇಳ್ದಾ
ನೀರೊಳಗಿರ್ದುಂ ಬೆಮರ್ತನುರಗಪತಾಕಂ ॥ ॥೫॥

೨. (ಧರ್ಮತನಯನ ಗುಣಗಳನ್ನು ಕೊಂಡಾಡಿ) ನುಡಿದ ಸಂಜಯನ ನುಡಿಗೆ ಫಣಿರಾಕೇತನಂ ಸಿಡಿಲ್ದು,

ಸ್ಥಿರಸತ್ಯವ್ರತಿಯೆಂದು ಧರ್ಮರುಚಿಯೆಂದಾಧರ್ಮಪುತ್ರಂ ದಯಾ
ಪರನೆಂದಲ್ಲರ ಪೇಳ್ದ ಮಾತು ಪುಸಿಯಾಯ್ತೀಕಾರ್ಮುಕಾಚಾರ್ಯನಂ ।
ಗುರುವಂ ಬ್ರಾಹ್ಮಣನಂ ತೊದಳ್ನುಡಿದು ಕೊಂದಾಗಳ್ ಸ್ಪೃಷಾಪಾತಕಂ
ಪರಮೆಂಬೀನುಡಿಯಿಂ ಪೃಥಾಪ್ರಿಯಸುತಂ ಪಾಪಕ್ಕೆ ಪಕ್ಕಾಗನೇ ॥ ॥೧॥

ತನಗೆ ಹತೋಽಶ್ವತ್ಥಾಮೋ
ಽಯೋನಲಕ್ಕುಮೆ ಯಮಪುರಕ್ಕೆ ಗುರು ಪೋಪೆಡೆಯೊಳ್ ।
ಶೌಕಕುಂಜರ ಎಂದೆಂದುಗುಮೆ
ಜನಪಂಜನೆಗರಿಯಲಾದುದಿಲ್ಲರಮಗನಂ ॥ ॥೨॥

ಈದೊರೆಯರಮಗನುಂ ಮೃಷ
ವಾದಂ ನೋಡೆಂದು ಧರ್ಮನಂ ಮೂದಲಿಸಲ್ ।
ಪೋದಂ ಪುತ್ರಸನರಸ
ಲ್ಪೋದನೆ ಯಮಪುರಕೆ ಮುಕ್ತಬಾಣಂ ದ್ರೋಣಂ ॥ ॥೩॥

ಕಳಶಜನನಿಂತು ಕೊಲಿಸಿದ
ಖಳನೆ ಗಡಂ ಧರ್ಮನಂದನಂ ಕ್ರೂರದಿನಂ ।
ಗಳ ಪೆಸರಂ ಮಱೆಯಿಸಿ ಮುಂ
ಗಳವಾರಂ ಕಡ್ಡವಾರಮೆಂಬಂತೆ ವಲಂ ॥ ॥೪॥

ಗುರುವಂ ಪ್ರೋಜ್ಝಿತಚಾಪನಂ ಪುಸಿದು ಕೊಂದಾಬೀರಮುಂ ಭೀಷ್ಮರಂ
ಶರಶಯ್ಯಾಗತರಂ ಕರುತ್ತು ಗುರಿಯೆಚ್ಚಾಪೊಚ್ಚರಂ ಕರ್ಣನಂ ।
ವಿರಥಜ್ಯಾಯುಧನೆನ್ನದೆಚ್ಚು ತವೆ ಕೊಂದಾಶೌರ್ಯಮುಂ ಪಾಂಡುಪು
ತ್ರರೆ ಬಲ್ಲರ್ ಮೆರೆಯಲ್ಕೆ ಸಾಹಸಧನಂ ದುಯೋರ್ಧನಂ ಬಲ್ಲನೇ ॥ ॥೫॥

ನೊಕಮಿರ್ಕಕ್ಕಟ ದರ್ಭಪಾಣಿ ಯಮಜಂ ದರ್ವೀಕರಂವಾಯುಪು
ತ್ರಕನುಂ ಜರ್ಜರಹಸ್ತನಿಂದ್ರತನಯಂ ದಸ್ರಾತ್ಮಜರ್ದಂಡಮು ।
ಷ್ಟಿಕರರ್ ಶಸ್ತ್ರವಿಡಂಬಮೇಽಪುದವರ್ಗಂ ಪಾಂಚಾಳಿಯುಂ ಗಂಧದಾ
ಯಕಿಯಾಗಿರ್ಪಿನಮಂದು ಮತ್ಸ್ಯಗೃಹದಿಂದೀನಿಗ್ರಹಂ ಪೊಲ್ಲದೇ ॥ ॥೬॥

೩. ದುರ್ಯೋಧನಂ (ದ್ರೋಣಾಶ್ವತ್ಥಾಮರ ವಿಷಯವಾಗಿ ಪರುಷಮಂ) ನುಡಿಯೆ ಸಂಜಯಂ ತನ್ನಂತರ್ಗತದೊಳ್

ಪಗೆ ಚಿತ್ರಾಂಗದನುಯ್ಯ
ಲ್ಲಗನದೊಳುರೆ ತನ್ನ ತಂದ ಬಾಂಧವಕೃತಮಂ।
ಬಗೆಯದಹಿತಮನೆ ಬಗೆದಂ
ಪುಗದಿರ್ಕುಮೆ ಪೋಗಿ ಕೌರವಂ ರೌರವಮಂ ॥ ॥೧॥

ಕಾರ್ಯಸಖಂ ಶಕುನಿ ಗಡಾ
ಶೌರ್ಯಸಖಂ ಸೂತಜಂ ಗಡಾ! ಭೀಷ್ಮಸದಾ।
ಚಾರ್ಯರ ನುಡಿ ತಪ್ಪುಗಡಮ
ನಾರ್ಯಂಗಹಿಕೇತನಂಗೆ ವಿಧಿವಿಳಸನದಿಂ ॥ ॥೨॥

ಗುರು ಕವಚಂ ಕರ್ಣಂ ಬಾ
ಹುರಕ್ಕೆ ಸುರಸಿಂಧುನಂದನಂ ಸೀಸಕವಮೂ।
ಗಿರಿ ಮೆಯ್ಗೆ ಮುಳಿಯಲಱಿಯದೆ
ಕುರುರಾಜನ ತೊಡೆಯನುಡಿವೆನೆಂದಂ ಭೀಮಂ ॥ ॥೩॥

ಧೃತರಾಷ್ಟ್ರಂ ದ್ರುಮಮಾದುದು
ಶತಶಾಖಂ ಪಂಚಶಾಖಮಾದುದು ಪಾಂಡು।
ಕ್ಷಿತಿರುಹಮಕ್ಷಯಮಾಯ್ತು
ದ್ವಿತೀಯಮಾಯ್ತೇಕಶಾಖಮಿವನಿಂದಾದ್ಯಂ ॥ ॥೪॥

೪. ಗಾಂಧಾರಿಯುಂ ಧೃತರಾಷ್ಟ್ರನುಂ ಶೋಕಾಕುಳೀಕೃತಚಿತ್ತರಾಗಿ ತಮ್ಮ ಮಗನನಾರಯ್ವಲುಂ ಮನಃಕ್ಷತಮನಾಱಿಸಲುಮೆಂದಱಸುತ್ತುಂ ಬಂದು,

ಪಡೆ ಪನ್ನೊಂದಕ್ಷೋಹಿಣಿ
ಗ್ಗೊಡೆಯನೆ ಮೂರ್ಧಾಭಿಷಿಕ್ತನ್ನೈ ಮೂಱುಂ ಬೆ।
ಳೊಡೆಯ ನಡುವಿರ್ಪ ನೀನಿ
ರ್ದೆಡೆಯುಮನೆಮಗಱಿಯದಂತುಟಾದುದೆ ಮಗನೇ ॥ ॥೧॥

ವ॥ ಎಂದು ಪಳಯಿಸುತ್ತುಂ ಬರ್ಪ ಗುರುಜನದ ಸರವಮಂ ಸಂಜಯನಱಿದು, —ದೇವಾ ನಿನ್ನಲ್ಲಿಗೆ ನಿಜಜನನೀಜನಕರಱಸುತ್ತುಂಬಂದರ್ ಎಂಬುದುಂ ಉದ್ಧೃತ ಗೋತ್ರಾಭಿಮುಖಂ ವಜ್ರಾಘಾತಮಾದಂತೆ ಸಿಗ್ಗಾಗಿ ತಲೆಯುಂ ಬಾಗಿ,

ಅರಿಭೂಪಾಲರನಿಕ್ಕಿ ಗೆಲ್ದೋಸಗೆಯಿಂ ತೂರ್ಯಸ್ವನಂ ಪೊಣ್ಮೆ ಸೋ ।
ದರರುಂ ಮಕ್ಕಳುಮಾಪ್ತರುಂ ಬೆರಸು ಬಂದಾನಂದದಿಂ ಕಾಣ್ಬೆನೆಂ ॥
ದಿರಲಿಂತಾಯ್ತು, ವಿಧಾತ್ರ! ಮದ್ಗುರುಗಳಂ ದುಃಖಾರ್ತರಂ ಶೋಕತ ।
ಪ್ತರರಂ ಮೆಯ್ಯೊಳೆ ಬೀಳ್ವದಶ್ರುಮುಖರಂ ಕಾಣ್ಬಂತುಟಂ ಮಾಡಿದೈ ॥ ॥೨॥

ಕಂದ ನಿಜಾನುಜರೆಲ್ಲಿದ ।
ರೆಂದೆನ್ನಂ ಜನನಿ ಬಂದು ಬೆಸಗೊಂಡೊಡದೇ ।
ನೆಂದು ಮಱುಮಾತುಗುಡುವೆಂ ।
ಕೊಂದರ್ ಕೌಂತೇಯರೆಂದು ಬಿನ್ನೈಸುವೆನೋ ॥ ॥೩॥

ಶೋಕಂ ಮಿಗೆ ಫಣಿರಾಜಪ ।
ತಾಕಂ ವಿಕಳಿತವಿವೇಕಶೂನ್ಯಂ ಬಾಷ್ಪೋ ॥
ದ್ರೇಕಂ ಹಾ! ದುಶ್ಶಾಸನ ।
ಹಾ! ಕರ್ಣಾ! ಯೆನುತುಮಂತೆ ಮೂರ್ಛೆಗೆ ಸಂದಂ ॥ ॥೪॥

ವ॥ ಅಂತು ಮೂರ್ಛಾಪ್ರಸಂಗನಾದ ಪನ್ನಗಪತಾಕಂಗೆ ಶಿಶಿರೋಪಚಾರ ಕ್ರಿಯೆಗಳಂ ಮಾಳ್ಪ ಸಂಜಯುನಿರವಂ ತತ್ಪರಿಜನಂ ಕಂಡು ಪೇಳೆ, ಗಾಂಧಾರಿ ಮನ ದೊಳಳ್ಕಿ ಬಳ್ಕಿ ನನೆಕೊನೆವೋಗಿ,

ಮೃಗಧರಕುಲಲಕ್ಷ್ಮೀವ ।
ಲ್ಲಿಗೆ ಪೆಱರಾರ್ ನೀನೆ ಮುನ್ನಡರ್ಪೆನಲಿರ್ದೈ ॥
ಮಗನೆ ಲಯಕಾಲಭೀಮೋ ।
ರಗನುರಗಪತಾಕ ನಿನ್ನುಮಂ ನುಂಗಿದನೇ ॥ ॥೫॥

ಎಮಗಂಧಯಷ್ಟಿಯಾಗಿ ।
ರ್ದ ಮಗನೆ ನೀನುಳ್ಳೊಡೆಲ್ಲಮೊಳವೆಂದಿರೆ ನಿ ॥
ನ್ನುಮನಿರಿಸದೆ ಕುರುವಂಶಾ ।
ನಿಮಿತ್ತರಿಪು ಪಾಶಪಾಣಿ ಸವಿನೋಡಿದನೇ ॥ ॥೬॥

ಗುರುಚರಣಂಗಳ್ಗೆಱಗದೆ ।
ಪರಕೆಯನಾದರದಿನಾಂತುಕೊಳ್ಳದೆ ಪೋನಂ ॥
ಬೆರಸಿರ್ಪುದು ನಿನಗುಚಿತಮೆ ।
ಗುರುವಿನಯಮನೇಕೆ ಮಱೆದೆ ಕುರುಕುಲತಿಲಕಾ ॥ ॥೭॥

ಮಡಿದೀದುಶ್ಶಾಸನನೇಂ ।
ನುಡಿಯಿಸುವನೊ ಕುರುನರೇಂದ್ರ ದುರ್ಮರ್ಷಣನೇಂ ॥
ನುಡಿಯಿಸುವನೊ ದುಷ್ಕರ್ಣಂ ।
ನುಡಿಯಿಸುವನೊ ನೀನುಮುಸಿರದಿರ್ದುದೆ ಮಗನೇ ॥ ॥ ೮ ॥

ಎಂದು ಗಾಂಧಾರಿ ವಿಪ್ರಲಾಪಂಗೆಯೆ ಧೃತರಾಷ್ಟ್ರಂ ಸಕಲರಾಷ್ಟ್ರರಾಜಕಿರೀಟಕೋಟಿತಾಡಿತಚರಣಾರವಿಂದ ದ್ವಂದ್ವನೆನಿಸಿದ ತನ್ನ ನಂದನನ ಕಾಲ ಮೇಲೆ ಕವಿದು ಬಿಳ್ದು,

ಹಾ! ಕುರುಕುಲಚೂಡಾಮಣಿ ।
ಹಾ! ಕುರುಕುಲಚಕ್ರವರ್ತಿ ಹಾ! ಸಕಲಧರಿ ॥
ಶ್ರೀಕಾಂತ ನಿನ್ನುಮಂ ಪರ ।
ಲೋಕಕ್ಕಟ್ಟಿದನೆ ಕಾಯ್ದು ಮಾಯ್ದು ವಿಧಾತ್ರಂ ॥ ॥ ೯ ॥

ಈ ಉದಾಹರಣೆಗಳಲ್ಲಿ ೧, ೨, ೩, ೪ ರಲ್ಲಿರುವ ವ್ಯತ್ಯಾಸವು ಹೃದಯೈಕವೇದ್ಯವಾಗತಕ್ಕದು. ಅನೇಕಾವೃತ್ತಿ ಪರಿಚಯಮಾಡಿ ಮನನಮಾಡಿದ ಹೊರತು ಅದು ತಿಳಿದುಬರುವ ಸಂಗತಿಯಾಗಿಲ್ಲ.

ಈ ವಿಧವಾದ ವರ್ಣನೆಗಳನ್ನು ಸರಿಯಾದ ಸ್ಥಳದಲ್ಲಿ ಸೇರಿಸುವುದು ಒಂದು ವಿಧವಾದ ಸಾಮರ್ಥ್ಯವೇ ಆಗಿದೆ. ನಾನಾವಿಧವಾದ ರತ್ನಗಳನ್ನು ಪರಸ್ಪರ ಶೋಭೆಗೆ ಕಾರಣವಾಗುವಂತೆ ಸೇರಿಸುವುದು ಅಕ್ಕಸಾಲೆಯ ಸಾಮರ್ಥ್ಯವನ್ನು ಹೇಗೆ ತೋರಿಸುವುದೋ ಹಾಗೆ ಅವುಗಳ ಸೇರಿಸುವಿಕೆಯು ಕವಿಯ ಸಾಮರ್ಥ್ಯವನ್ನು ತೋರಿಸುತ್ತದೆ. ಇತರ ಕಲೆಗಳಲ್ಲಿ ಯುಕ್ತಸಮ್ಮೇಳನವು ಆಯಾಕಲೆಗಳ ನೈಪುಣ್ಯವನ್ನು ತೋರಿಸುತ್ತದೆಯಷ್ಟೆ. ಕಾವ್ಯವೂ ಒಂದು ಉತ್ತಮವಾದ ಕಲೆಯಾದುದರಿಂದ ಅದರಲ್ಲಿಯೂ ಅಂಥ ಉಚಿತಸಮ್ಮೇಳನವು ಇರಬೇಕು. ಅದರಿಂದ ಕವಿಯ ನೈಪುಣ್ಯವು ತಿಳಿದುಬರಬೇಕು.

ಹಿಂದೆ ಅಲಂಕಾರಗಳನ್ನು ಹೇಗೆ ಸೇರಿಸಬೇಕೆಂದು ವಿಚಾರಮಾಡುವಾಗ ಸೂತ್ರಗಳನ್ನು ಹೇಳುವುದಕ್ಕಾಗುವುದಿಲ್ಲ, ಕಾವ್ಯಗಳನ್ನು ಓದಿ ಮನನ ಮಾಡಿಯೇ ತಿಳಿದುಕೊಳ್ಳಬೇಕೆಂದು ಹೇಳಿದನು. ಕಥಾಸಂದರ್ಭಗಳಲ್ಲಿಯೂ ಸಂಗತಿಗಳನ್ನು ತಂದು ಹೇಗೆ ಕಥೆಯನ್ನು ಪೋಷಿಸಬೇಕೆಂಬಲ್ಲಿ ಪ್ರಸಿದ್ಧವಾದ ಗ್ರಂಥಗಳನ್ನು ನೋಡಿಯೇ ಊಹಿಸಿ ತಿಳಿದುಕೊಳ್ಳಬೇಕೇ ಹೊರತು ಹೀಗೆಯೇ ಎಂದು ತಿಳಿಸಲಿಕ್ಕಾಗುವುದಿಲ್ಲವೆಂದೂ ಹೇಳಿದೆನು. ರಸದ ವಿಚಾರದಲ್ಲಿಯೂ ಕೂಡ ಇದು ಭಾವ, ಇದು ವಿಭಾವ, ಇದು ಅನುಭಾವ, ಎಂದು ರಸೋತ್ಪತ್ತಿಯಾದನಂತರ ಹೇಳಬಹುದೇ ಹೊರತು ಈ ರಸ ಹುಟ್ಟುವುದಕ್ಕೆ ಹೀಗೆಹೀಗೆಯೇ ವರ್ಣಿಸಬೇಕೆಂದು ಸೂತ್ರವಿಧಾನವನ್ನು ಮಾಡುವುದು ಕಷ್ಟ. ಕವಿಗಳು ತಾವ್ವತಾವೇ ಆಲೋಚಿಸಿ

ಕಲ್ಪಿಸಬೇಕಾದ ವಿಷಯಗಳಾಗಿರುವುವು. ಈ ಸಾಮರ್ಥ್ಯವೇ ಕವಿತ್ವವೆನ್ನುವುದು.

'ಬಾಣೋಚ್ಛಿಷ್ಟಂ ಜಗತ್ಸರ್ವಂ' ಎಂಬ ಲೋಕವಾರ್ತೆಯ ಪ್ರಕಾರ ಕಾದಂಬರಿಯು ಹುಟ್ಟಿದ ಮೇಲೆ ಮತ್ತಾವ ಗ್ರಂಥವೂ ಹುಟ್ಟಲೇ ಕೂಡದು. ಹಾಗೆ ಹುಟ್ಟಿದರೂ ಚರ್ವಿತಚರ್ವಣವಾಗಿಯೇ ಆಗಬೇಕು. ಬಾಣನು ಹೇಳದೇ ಇದ್ದುದನ್ನು ನೋಡಲೇ ಕೂಡದು. ಹಾಗಿರದೆ ಅನೇಕ ವಿಸ್ಮಯಜನಕವಾದ ಉತ್ಪ್ರೇಕ್ಷಾದಿಗಳನ್ನು ಅನೇಕಕಡೆ ನೋಡುತ್ತೇವೆ. ಒಂದೇ ರಾಮಾಯಣ ಮಹಾಭಾರತದ ಕಥೆಗಳ ಮೇಲೆ ಅನೇಕಗ್ರಂಥಗಳು ಹುಟ್ಟಿದ್ದರೂ ಅವುಗಳಲ್ಲಿ ಪರಸ್ಪರ ಭೇದವು ಕಂಡುಬರುತ್ತದೆ. ಆ ಭೇದವು ಸಮ್ಮೇಳನ ಭೇದದಿಂದಲೇ ಆಗಿದೆ. ಆದುದರಿಂದ ಅವು ಚಮತ್ಕಾರಜನಕವಾಗಿಯೂ ಇವೆ.

'ತ ಏವ ಪದವಿನ್ಯಾಸಾಃ ತಾ ಏವಾರ್ಥವಿಭೂತಯಃ।
ತಥಾಪಿ ನವ್ಯಂ ಭವತಿ ಕಾವ್ಯಂ ಗ್ರಥನಕೌಶಲಾತ್'॥"

ಎಂದು ಕಾವ್ಯರಸಜ್ಞರು ತಿಳಿಸುವರು. ಒಬ್ಬ ಹೂಣಕವಿಯು 'ಪ್ರಾಚೀನಕ್ರಮವು ನವೀನಕ್ರಮಕ್ಕೆ ಅವಕಾಶಕೊಟ್ಟು ಬದಲಾಯಿಸುತ್ತದೆಯೇ ಹೊರತು ಮತ್ತೆಬೇರೆ ಅಲ್ಲ' ಎಂದು ಹೇಳುತ್ತಾನೆ. ಮನುಷ್ಯನು ಎಂದೂ ಮನುಷ್ಯನೇ. ಬಹು ಪೂರ್ವದಲ್ಲಿ ಇದ್ದ ಮನುಷ್ಯನಿಗೂ ಈಗಿನ ಮನುಷ್ಯನಿಗೂ ಭೇದವು ದೇಶ ವ್ಯವಹಾರಗಳಲ್ಲಿ ಮಾತ್ರವೇ. ಪ್ರೇಮಾನುರಾಗ ಕೋಪ ತಾಪ ಮುಂತಾದವುಗಳು ಪೂರ್ವದಲ್ಲಿ ಇದ್ದಂತೆಯೇ ಈಗಲೂ ಇವೆ. ಅಂತರಸನ್ನಿವೇಶವು ಸರ್ವಕಾಲದಲ್ಲಿಯೂ ಏಕರೀತಿಯಾಗಿರುತ್ತದೆ. ಬಾಹ್ಯಸನ್ನಿವೇಶವು ಮಾತ್ರ ವ್ಯತ್ಯಸ್ತವಾಗುತ್ತದೆ. ಆಯಾಕಾಲಕ್ಕೆ ಆಯಾದೇಶಕ್ಕೆ ಆಯಾ ಅವಸ್ಥೆಗೆ ತಕ್ಕಂತೆ ಏಕರೂಪವಾದ ಅಂತರಸನ್ನಿವೇಶವನ್ನು ಭಿನ್ನವಾದ ಬಾಹ್ಯಾವಸ್ಥೆಯಿಂದ ತಿಳಿಸಬೇಕಾದ ಆವಶ್ಯಕತೆಯು ಹುಟ್ಟುವುದು. ಒಂದೇ ಅಳತೆಯಿಂದ ಎಲ್ಲವನ್ನೂ ಅಳೆಯಲಾಗುವುದಿಲ್ಲ. ತೂಕ ಒಂದೇ ಆದರೂ ಅಳತೆಮಾಡುವ ಕ್ರಮವು ಬೇರೆಯೇ ಇರಬೇಕು. ಪೂರ್ವಕಾಲದ ಬಾಹ್ಯಸನ್ನಿವೇಶದಿಂದ ಈಗಿನ ಅಂತರಸನ್ನಿವೇಶವನ್ನು ತಿಳಿಸಿದರೆ ಅದು ಈಗ ಯಾರಿಗೂ ಹಿತವಾಗಿರದು. ಆದುದರಿಂದಲೇ ಹೊಸಹೊಸತಾಗಿಯೇ ಗ್ರಂಥಗಳು ಹುಟ್ಟುತ್ತ ಬರುವುವು. ಇಂಥ ಸಂದರ್ಭದಲ್ಲಿಯೂ ಯುಕ್ತಸಮ್ಮೇಳನದಲ್ಲಿ ಅತಿಶಯವೂ ಅಂಥ ಸಮ್ಮೇಳನಕಾರರಲ್ಲಿ ಶಕ್ತಿ ತಾರತಮ್ಯವೂ ಕಂಡುಬರುವುವು. ಮತ್ತು ವ್ಯತ್ಯಸ್ತವಾಗದ ಬಾಹ್ಯಸನ್ನಿವೇಶವೂ ಕೆಲವು ಉಂಟು. ಅಂಥ

---

ಟೀಕು.—ಪದಗಳ ವಿನ್ಯಾಸಗಳು ಅವೇ ಆಗಿರುತ್ತವೆ. ಅರ್ಥಗಳ ಸಮೃದ್ಧಿಯೂ ಅದೇ ಆಗಿರುತ್ತದೆ. ಹಾಗಿದ್ದರೂ ಸೇರಿಸುವುದರಲ್ಲಿರುವ ಕೌಶಲದಿಂದ ಕಾವ್ಯವು ಹೊಸತು ಎನ್ನಿಸಿಕೊಳ್ಳುತ್ತದೆ.

ವುಗಳಲ್ಲಿಯೂ ಚಮತ್ಕಾರವು ಸಮ್ಮೀಳನದಿಂದ ಉಂಟಾಗುವುದು. ಆ ಚಮತ್ಕಾರವನ್ನು ವಿವರಿಸಿ ಹೇಳುವುದಕ್ಕಾಗುವುದಿಲ್ಲ. ಸುಖವನ್ನು ಕೊಡುವ ವಿಷಯವಾದುದರಿಂದ ಅದೂ ಅನುಭವೈಕವೇದ್ಯವಾದುದು. ಈ ಸಂದರ್ಭದಲ್ಲಿ ಕನ್ನಡ ವಚನಕಾದಂಬರಿಯಲ್ಲಿ ಮಹಾಶ್ವೇತೆಗೆ ಪುಂಡರೀಕನ ಪ್ರಥಮದರ್ಶನವಾದ ಕಡೆಯಿಂದ ಚಂದ್ರಾಪೀಡನನ್ನು ಕರೆದುಕೊಂಡು ಗಂಧರ್ವಲೋಕಕ್ಕೆ ಹೊಗುವಪರ್ಯಂತದ ಭಾಗವನ್ನೂ, ಉತ್ತರರಾಮಚರಿತ್ರೆಯಲ್ಲಿ ತಮಸಾತೀರದಲ್ಲಿ ಸೀತಾರಾಮರ ಸಂಶ್ಲೇಷವನ್ನು ವರ್ಣಿಸುವ ಭಾಗವನ್ನೂ ಪಾಠಕರು ನೋಡಬೇಕೆಂದು ಪ್ರಾರ್ಥಿಸುವೆನು.

ಇಷ್ಟರವರೆಗೆ ಒಟ್ಟು ಏನು ಹೇಳಿದುದಾಯಿತು ? ಎಂದರೆ—ಕಾವ್ಯಗಳಲ್ಲಿ ನಿರೂಪಿತವಾದ ವಸ್ತುಗಳ ಸ್ಥಿತಿಗೂ ಲೋಕದಲ್ಲಿರುವ ವಸ್ತುಗಳ ಸಹಜಸ್ಥಿತಿಗೂ ಭೇದವುಸ್ವಲ್ಪಮಟ್ಟಿಗೆ ತಿಳಿಸಲ್ಪಟ್ಟಿತು.

ಆ ತಾರತಮ್ಯವನ್ನು ದಶರೂಪಕಕಾರನು ಸ್ವಲ್ಪ ಮಾತಿನಿಂದ ಸಂಗ್ರಹಿಸಿ ಈ ರೀತಿಯಲ್ಲಿ ಹೇಳಿರುವನು:—

† ರಮ್ಯಂ ಜುಗುಪ್ಸಿತಮುದಾರಮಥಾಪಿ ನೀಚ ।
ಮುಗ್ರಂ ಪ್ರಸಾದಿ ಗಹನಂ ವಿಕೃತಂ ಚ ವಸ್ತು ॥
ಯದ್ವಾಪ್ಯವಸ್ತು ಕವಿಭಾವಕಭಾವ್ಯಮಾನಂ ।
ತನ್ನಾಸ್ತಿ ಯನ್ನರಸಭಾವಮುಪೈತಿ ಲೋಕೇ ॥

ಇಷ್ಟು ವಿಚಾರಮಾಡಿಯೂ ಕೊನೆಗೂ ಕವಿಸಮಯವೆಂಥದೆಂದು ಕೇಳಬಹುದಾಗಿದೆ. ಕವಿಸಮಯವೆಂದರೇನು ? ಅದು ಕಾವ್ಯವನ್ನು ಕಲೆಗಳ ಗುಂಪಿನಲ್ಲಿ ಸೇರಿಸತಕ್ಕಂಥದಾಗಿದೆ. ಅವುದರಿಂದ ಕವಿಹೃದಯಜ್ಞರು ಕಾವ್ಯವನ್ನು ಉತ್ತಮಕಲೆಯೆಂದು ಗಣಿಸುವರೋ ಅದಾಗಿರುವುದು. ಕಲೆಗಳಿಗೆ ಸೌಂದರ್ಯವೇ ಮುಖ್ಯವಾದ ಗುಣವಷ್ಟೆ. ಅವುದು ಮನುಷ್ಯನನ್ನು ಮೋಹಿತನಾಗುವಂತೆ ಮಾಡುತ್ತದೋ ಅಂಥದೇ ಕಲೆಯೆಂದು ಹೇಳಲ್ಪಡುವುದು. ಸಂಗೀತ, ನೃತ್ಯ, ಶಿಲ್ಪ, ವಾದಿತ್ರ, ಚಿತ್ರ, ಇವು ಮೊದಲಾದ ಕಲೆಗಳಲ್ಲಿ ಜನರ ಮನಸ್ಸನ್ನು ಅಪಹರಿಸತಕ್ಕುದು ಆಯಾ ಕಲಾವಿದರ ನೈಪುಣ್ಯದಿಂದಲೇ ಉಂಟಾಗಬೇಕು. ನೈಪುಣ್ಯವೆಂ

---

† ಟೀಕು—ರಮ್ಯಂ—ಮನಸ್ಸಿಗೆ ಪ್ರಿಯವಾದ, ಜುಗುಪ್ಸಿತಂ—ಮನಸ್ಸಿಗೆ ಅಪ್ರಿಯವಾದ, ಉದಾರಂ—ಉತ್ಕೃಷ್ಟವಾದ, ಅಥಾಪಿ—ಅಲ್ಲದೆ, ನೀಚಂ—ಹೇಯವಾದ, ಉಗ್ರಂ—ರೌದ್ರವಾದ, ಪ್ರಸಾದಿ—ಮನೋಹರವಾದ, ಗಹನಂ—ತಿಳಿಯಲು ಕಷ್ಟವಾದ, ವಿಕೃತಂ—ವಿಕಾರವಾದ, ಲೋಕದಲ್ಲಿ ವಸ್ತು—ಇರುವ ಪದಾರ್ಥವೇ ಆಗಲಿ, ಅವಸ್ತು—ಇಲ್ಲದಿರುವ ಪದಾರ್ಥವೇ ಆಗಲಿ, ಕವಿಭಾವಕಭಾವ್ಯಮಾನಂ—ಕವಿಯ ಅಭಿಪ್ರಾಯದಲ್ಲಿ ಬಂದು ವರ್ಣಿಸಲ್ಪಟ್ಟುದಾಗಿ, ರಸಭಾವವನ್ನು ಹೊಂದದೆ ಇರುವಂಥದು ಯಾವುದೂ ಇಲ್ಲ.

ಬಂಥದು ಆಯಾ ಕಲೆಗಳಲ್ಲಿ ಯುಕ್ತವಾದ ಸಂದರ್ಭಗಳನ್ನು ಯೋಜಿಸಿ ಸೌಂದರ್ಯವನ್ನು ಹುಟ್ಟಿಸುವ ಕಾರ್ಯವಾಗಿರುವುದು. ಆ ಕಾರ್ಯದಿಂದಲೇ ಆಯಾ ಕಲೆಗಳು ಜನರ ಮನಸ್ಸನ್ನು ಅಪಹರಿಸುವಂಥವುಗಳಾಗುವುವು. ಕಾವ್ಯಕಲೆಯಲ್ಲಿಯೂ ಸೌಂದರ್ಯೋತ್ಪಾದಕವಾದ ನೈಪುಣ್ಯವುಂಟು. ಅದೇ ಕವಿಸಮಯವೆನ್ನುವುದು. ಕಾವ್ಯದಲ್ಲಿ ಸೌಂದರ್ಯವನ್ನುಂಟುಮಾಡುವ ಆ ನೈಪುಣ್ಯವಾವುದು ? ಆ ನೈಪುಣ್ಯವು ಜಾತಿದ್ರವ್ಯ ಕ್ರಿಯಾಗುಣಗಳ ವರ್ಣನೆಯೋ ? ಶಬ್ದಚಿತ್ರವೇ ? ಅರ್ಥಚಿತ್ರವೇ ? ಉತ್ಪ್ರೇಕ್ಷಾದಿಗಳೇ? ರಸವೇ ? ಕಥಾಸಂದರ್ಭರಚನೆಯೋ? ಎಂದರೆ ಅವು ಒಂದೂ ಅಲ್ಲ. ಅವುಗಳ ಯುಕ್ತಸಮ್ಮೇಳನವೇ ಇಲ್ಲಿ ನೈಪುಣ್ಯವೆಂಬುದು. ನೈಪುಣ್ಯಾಶ್ರಯವಾದ ಸಂಕೇತವೇ ಕಲೆಗಳಲ್ಲಿ ಸಮಯವೆನ್ನುವುದು. ಇತರ ಕಲೆಗಳಲ್ಲಿಯೂ ನೈಪುಣ್ಯವನ್ನು ಹೊಂದಿದವರು ಕೆಲಕೆಲವು ಕ್ಲಿಪ್ತಸಂಕೇತದ ಮೇಲೆಯೇ ಹೊರಟು ತಮ್ಮ ಸಾಮರ್ಥ್ಯವನ್ನು ಪ್ರಕಾಶಮಾಡಿಕೊಳ್ಳುವ ಹಾಗೆ, ಕವಿಗಳೂ ಕೆಲವು ಕೆಲವು ಕ್ಲಿಪ್ತ ಸಂಕೇತಗಳನ್ನೇ ಇಟ್ಟುಕೊಂಡು ತಮ್ಮ ಸಾಮರ್ಥ್ಯವನ್ನು ನಾನಾವಿಧವಾಗಿ ಪ್ರಕಾಶಪಡಿಸಿಕೊಳ್ಳುವರು. ತಾಳವೂ ರಾಗವೂ ಕೃತಿಯೂ ಒಂದೇಯಾದರೂ ಗಾಯಕರಲ್ಲಿ ಸ್ವರಗಳ ಆಲಾಪನಕ್ರಮದಲ್ಲಿ ಪರಸ್ಪರ ಉತ್ಕರ್ಷಾಪಕರ್ಷಗಳು ಕಂಡುಬರುವುದಷ್ಟೆ. ಆ ಉತ್ಕರ್ಷಾಪಕರ್ಷವು ಏತರಿಂದ ಬಂದಿತು ? ಎಂದು ವಿಚಾರಮಾಡಿದರೆ ಸ್ವರಗಳನ್ನು ಯುಕ್ತವಾದ ರೀತಿಯಲ್ಲಿ ಸೇರಿಸುವುದರಲ್ಲಿಯೇ ಬಂದಿತೆಂದು ಹೇಳಬೇಕು. ಹಾಗಾದರೆ ಆ ಯುಕ್ತಸಮ್ಮೇಳನವೇ ಸುಖವೇ ಎಂದರೆ ಅಲ್ಲ. ಯುಕ್ತಸಮ್ಮೇಳನದಿಂದ ಸುಖವು ಹುಟ್ಟುವುದು. ಹೀಗೆಯೇ ಕಾವ್ಯಕಲೆಯಲ್ಲಿಯೂ ಜಾತಿ ದ್ರವ್ಯ ಕ್ರಿಯೆ ಗುಣ ಅಲಂಕಾರ ರಸ ಕಥೆ ಮೊದಲಾದುವುಗಳನ್ನು ಆಶ್ರಯಿಸಿರುವ ಸಂಕೇತವು ಒಂದೇ ಆಗಿದ್ದರೂ ಅವುಗಳ ಯುಕ್ತಸಮ್ಮೇಳನದಿಂದ ಕವಿಗಳಲ್ಲಿ ಉತ್ಕರ್ಷಾಪಕರ್ಷವು ತಿಳಿದುಬರುವುದು. ಆದರಿಂದ ಸೌಂದರ್ಯದಲ್ಲಿ ತಾರತಮ್ಯವು ಕಂಡುಬರುವುದು. ಆದರಿಂದ ಸುಖದಲ್ಲಿ ತಾರತಮ್ಯವು ಪ್ರಾಪ್ತವಾಗುವುದು. ಅದೇ ಕವಿಗಳಲ್ಲಿ ಉತ್ಕರ್ಷಾಪಕರ್ಷಗಳನ್ನು ತಿಳಿಸುವ ಸಾಧನವು.

ಹಾಗಾದರೆ ಕಾವ್ಯರಸಾಸ್ವಾದನಕ್ಕೆ ಯುಕ್ತಸಮ್ಮೇಳನ ಜ್ಞಾನವೇ ಸಾಲದೇ? ಎಂದರೆ ಸಾಲದು. ಏಕೆ ಸಾಲದು ? ಎಂದರೆ–ಸಮ್ಮೇಳನದಲ್ಲಿ ಔಚಿತ್ಯವು ತಿಳಿಯಬೇಕಾದರೆ ಸಮ್ಮಿಳಿತವಸ್ತುಗಳ ಜ್ಞಾನವೂ ಬೇಕು. ಆ ಜ್ಞಾನವಿಲ್ಲದಿದ್ದರೆ ಆ ಸಮ್ಮೇಳನದ ಸೊಗಸು ತಿಳಿದು ಬರುವುದಿಲ್ಲ. ಸೊಗಸು ತಿಳಿಯದಿದ್ದರೆ ಸುಖಹುಟ್ಟು

ವುದಿಲ್ಲ. ಹಾಗಾದರೆ ಸಮ್ಮಿಳಿತವಸ್ತುಗಳಲ್ಲಿಯೇ ಸೌಂದರ್ಯವಿಲ್ಲವೆ? ಅವುಗಳು ಸ್ವತಏವ ಸುಖ ಕೊಡಲಾರವೆ? ಎಂದರೆ—ಅವುಗಳಲ್ಲಿ ಸ್ವತಃ ಸೌಂದರ್ಯವೂ ಇಲ್ಲ; ಆದುದರಿಂದ ಸುಖವನ್ನು ಕೊಡಲಾರವು ಎಂದೇ ಹೇಳಬೇಕು. ಅದಂತಿರಲಿ.

ಸಮ್ಮಿಳಿತವಾದ ವಸ್ತುಗಳ ಸ್ವರೂಪವು ತಿಳಿಯಬೇಕೆಂದು ಹೇಳಿತಲ್ಲಾ, ಅವುಗಳಾವುವು? ಎಂದರೆ—ಅವೇ ಕವಿಸಂಕೇತಾಶ್ರಯವಾದ ವಸ್ತುಗಳು. ಆ ವಸ್ತುಗಳಾವುವು? ಎಂದರೆ—ಅವು ಜಾತಿ ದ್ರವ್ಯ ಕ್ರಿಯೆ ಗುಣಗಳು, ಉಪಮಾದ್ಯಲಂಕಾರಗಳು, ರಸೋತ್ಪತ್ತಿನಿರೂಪಕಗಳಾದ ವಿಭಾವಾದಿಗಳು, ಕಥಾಸಂವಿಧಾನಗಳು, ಪಾತ್ರಗತಗುಣಸ್ವರೂಪವರ್ಣನೆಗಳು ಇತ್ಯಾದಿ. ಅವುಗಳು ಯಾವಾಗಲೂ ಲೋಕಕ್ಕೆ ವಿರುದ್ಧವಾಗದ ಪರಂಪರಾಪ್ರಾಪ್ತವಾಗಿ ಬಂದ ಕ್ಲಿಪ್ತವರ್ಣನಾಪ್ರಕಾರಗಳಾಗಿರುವುವು. ಅವುಗಳ ಸ್ವರೂಪ ತಿಳಿಯದಿದ್ದರೆ ಅವುಗಳ ಉಚಿತ ಸಮ್ಮೇಳನದಲ್ಲಿ ಸೊಗಸೂ ಆನಂದವೂ ಉಂಟಾಗುವುದಿಲ್ಲ. ತಾಳಜ್ಞಾನವೂ ರಾಗಜ್ಞಾನವೂ ಇಲ್ಲದಿದ್ದರೆ ಕೀರ್ತನೆಯನ್ನು ಕೇಳುವುದರಲ್ಲಿ ಹೆಚ್ಚಾದ ಆನಂದವು ಹೇಗೆ ಉಂಟಾಗುವುದಿಲ್ಲವೋ ಹಾಗೆಯೇ ಇದರಲ್ಲಿಯೂ ಉಂಟಾಗುವುದಿಲ್ಲ. ರಾಗಜ್ಞಾನವಿಲ್ಲದವನಿಗೂ ಸುಖವುಂಟಲ್ಲಾ, ಸುಖವಿಲ್ಲವೆಂದು ಹೇಳುವುದಕ್ಕಿಲ್ಲವಲ್ಲಾ ಎಂದರೆ ಅವನ ಸುಖವು ಒಂದು ಸುಖವಲ್ಲ. ತಾರತಮ್ಯಜ್ಞಾನವಿಲ್ಲದವನ ತಿಳುವಳಿಕೆಯು ಒಂದು ತಿಳುವಳಿಕೆಯಲ್ಲ. ಅಂಥವನು ಕಿವಿಗೆ ಇಂಪಾಗದ ಧ್ವನಿಯನ್ನು ಕೇಳಿಕೇಳಿ ಅದಕ್ಕಿಂತ ಇದು ಇಂಪಾಗಿದೆಯೆಂದು ತಿಳಿಯುತ್ತಾನೆಯೇ ಹೊರತು ಆಕಲೆಯ ಸೊಗಸನ್ನು ಯಥಾವತ್ತಾಗಿ ಅನುಭವಿಸುವವನಲ್ಲ. ಹೀಗೆಯೇ ಕಾವ್ಯಕಲೆಯ ಸುಖವನ್ನು ಅನುಭವಿಸಿ ಆನಂದಪಡಬೇಕಾದರೆ ಕವಿಸಂಕೇತಗಳ ಜ್ಞಾನವೇ ಬೇಕು. ಆದುದರಿಂದ ಕವಿಸಮಯಜ್ಞಾನವಿದ್ದ ಹೊರತು ಕಾವ್ಯಸುಖವನ್ನು ಚೆನ್ನಾಗಿ ಅನುಭವಿಸುವುದಕ್ಕಾಗುವುದಿಲ್ಲ. ಆ ನಿಮಿತ್ತವಾಗಿಯೇ ಕವಿಸಮಯಜ್ಞಾನದ ಅವಶ್ಯಕತೆಯೆಂದು ಹೇಳುವರು. ಇದಕ್ಕೆ ದೃಷ್ಟಾಂತಾಂತರವೇನಾದರೂ ಉಂಟೇ ಎಂದರೆ ಉಂಟು. ಗುಲಾಬಿ ಹೂವನ್ನು ನೋಡಿ ಆನಂದ ಪಡುವಿಕೆ. ಗುಲಾಬಿ ಹೂವಿನಲ್ಲಿ ಆನಂದದಾಯಕವಾದ ಏನೇನು ಸಾಮಗ್ರಿಗಳಿವೆ? ಅದರಲ್ಲಿ ಬಣ್ಣವಿದೆ. ಆ ಬಣ್ಣವು ಸುಖಕೊಡತಕ್ಕುದೇ ಎಂದರೆ ಅಲ್ಲ. ಆ ಬಣ್ಣವನ್ನು ಬಳಿದ ಗೋಡೆಯನ್ನು ನೋಡಿದರೆ ಅಂಥ ಸುಖವುಂಟೆ? ಇಲ್ಲ. ಆ ಹೂವಿನಲ್ಲಿ ಆಕಾರವಿದೆ. ಆ ಆಕಾರವು ಸುಖದಾಯಕವೇ?ಎಂದರೆ ಅದೂ ಅಲ್ಲ. ಸೀಸದ ಕಡ್ಡಿಯಲ್ಲಿ ಬರೆದ ಗುಲಾಬಿ

ಹೂವಿನ ಆಕಾರವನ್ನು ನೋಡಿದರೆ ಆ ಆನಂದವುಂಟೆ? ಇಲ್ಲ. ಆ ಗುಲಾಬಿ ಹೂವಿನಲ್ಲಿ ವಾಸನೆಯುಂಟು. ಆ ವಾಸನೆ ಸುಖದಾಯಕವಾದ ವಸ್ತುವೆ ? ಅದೂ ಅಲ್ಲ. ಗುಲಾಬಿಯ ಅತ್ತರಿನಲ್ಲಿ ಅಂಥ ಆನಂದವಿಲ್ಲ. ಹಾಗಾದರೆ ಆ ಸುಖಕ್ಕೆ ಕಾರಣ ವೇನಿರಬಹುದು? ಬಣ್ಣ, ಆಕಾರ, ವಾಸನೆ ಇವುಗಳು ಪದಾರ್ಥಗಳಲ್ಲಿ ಬೇರ ಬೇರೆ ಇರಬಹುದಾದರೂ ಅವು ಅಂಥ ಸುಖವನ್ನು ಕೊಡುವುದರಲ್ಲಿ ಕಾರಣವಾಗಲಿಲ್ಲ. ಅವುಗಳ ಯುಕ್ತಸಮ್ಮೇಳನಪ್ರಕಾರವಾದ ಗುಲಾಬಿಹೂವಿನಲ್ಲಿ ಸೌಂದರ್ಯವು ಸಿದ್ಧ ವಾಯಿತು. ಎಂದರೆ, ಯುಕ್ತಸಮ್ಮೇಳನಜ್ಞಾನ ಹುಟ್ಟಿದಾಗ ಗುಲಾಬಿಯ ಹೂವು ಸೊಗಸಾಯಿತು. ಹೀಗಿರುವುದರಿಂದ ಔಚಿತ್ಯಜ್ಞಾನವು ವಸ್ತುನಿಷ್ಠವಾದ ಗುಣಗಳ ಜ್ಞಾನಪೂರ್ವಕವಾಗಿಯೇ ಉಂಟಾಗಬೇಕು. ಹಾಗೆ ಉಂಟಾಗದೆ ಹೋದರೆ ಹತ್ತು ಹೂವುಗಳ ಹಾಗೆ ಇದೂ ಒಂದು ಹೂವು ಎನ್ನುವುದರಲ್ಲೇಬುದ್ಧಿ ನಿಂತು ಬಿ ಡುವುದು; ಸಂದೇಹವಿಲ್ಲ, ಸಿದ್ಧ.

ಹೀಗಿರುವುದರಿಂದ ಕಾವ್ಯರಸಾಸ್ವಾದನಕ್ಕೆ ಕಾರಣವಾದ ಯುಕ್ತಸಮ್ಮೇಳ ನದಲ್ಲಿ ಔಚಿತ್ಯಜ್ಞಾನ ಬರುವುದಕ್ಕೆ ತದಾಶ್ರಯವಾದ ಕವಿಸಂಕೇತಜ್ಞಾನವು ಅತ್ಯವ ಶ್ಯಕವೆಂದು ಹೇಳಬೇಕಾದುದೇ ಇಲ್ಲ. ಅವುಗಳನ್ನು ತಿಳಿದೇ ಕಾವ್ಯಕಲೆಯ ಸುಖ ವನ್ನು ಅನುಭವಿಸಬೇಕು.

---

ಈ ಪ್ರಥಮ ಸಂಪುಟದಲ್ಲಿ ಕವಿಸಮಯಸ್ವರೂಪವನ್ನು ಸಾಮಾನ್ಯವಾಗಿ ಯಥಾಮತಿ ವಿವರಿಸಿದೆನು. ಈ ನನ್ನ ಪ್ರಯತ್ನವು ಗುಣೈಕಪಕ್ಷಪಾತಿಗಳಿಗೆ ರುಚಿ ಸಿದಲ್ಲಿ ಸೂತ್ರರೂಪವಾಗಿಯೇ ಆಗಲಿ ವಿಭಾಗಾರ್ಹವಾಗಿಯೇ ಆಗಲಿ ಆಗುವ ಕವಿ ಸಂಕೇತಗಳನ್ನು ಕುರಿತು ವಿಚಾರಮಾಡಲುದ್ದೇಶಿಸಿರುವೆನು. ಈ ನನ್ನ ಉದ್ದೇಶವು ಸಾಂಗವಾಗಿ ನೆರವೇರುವುದಕ್ಕೆ ಸಕಲ ಶ್ರೇಯಸ್ಸಿಗೂ ಕಾರಣನಾದ ಭಗವಂತನ ಅನುಗ್ರಹವನ್ನು ಹಾರೈಸುತ್ತಿರುವೆನು.

ಭದ್ರಂ ಶುಭಂ ಮಂಗಳಂ.